ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಿಡಿದ ಸಂಜು: ಚೆನ್ನೈಗೆ ಗೆಲುವು

ದೆಹಲಿಯಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ತಂಡದ ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಬ್ಯಾಟಿಂಗ್ (87 ರನ್, 52 ಬಾಲ್) ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ ಪ್ಲೇಆಫ್ ಹಂತಕ್ಕೇರುವ ಅವಕಾಶವನ್ನು ಜೀವಂತವಾಗಿರಿಸಿಕೊಂಡಿದೆ.

ಸೊಂಪಾದ ಪುಟಗಳು

ಟಿಎಂಸಿ ಮತ್ತು ದೀದಿಯ ಸೊಕ್ಕಡಗಿಸಿದ ಮತದಾರ
ಜನಪಥ
ರಾಘವಶರ್ಮ ನಿಡ್ಲೆ 6

ಗಳಿಸಿದ್ದನ್ನು ಉಳಿಸಿಕೊಳ್ಳುವುದು ಇನ್ನೂ ದೊಡ್ಡ ಸವಾಲು !
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಜನರು ಏನು ಯೋಚಿಸುತ್ತಾರೆ ಎಂಬುದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದು. ನಿಮಗೆ ತಿಳಿದಿರುವುದರ ಬಗ್ಗೆ ನಂಬಲು ಆರಂಭಿಸಿ, ಆಗ ಜೀವನ ಹೆಚ್ಚು ಶಾಂತಿಯುತವಾಗಿರುತ್ತದೆ.

ವಕ್ರತುಂಡೋಕ್ತಿ

ಆಫೀಸ್‌ಗೆ ತಡವಾಗಿ ಹೋದಾಗ ಬಾಸ್ ಕೇಳುವ ಪ್ರಶ್ನೆಗಿಂತ, ನಾವು ಕೊಡುವ ಉತ್ತರಗಳು ಹೆಚ್ಚು ಕ್ರಿಯೇಟಿವ್ ಆಗಿರುತ್ತವೆ.

ಬಯೋಕಾನ್ ಸಾಮ್ರಾಜ್ಯಕ್ಕೆ ಹೊಸ ಬಾಸ್

ಬೆಂಗಳೂರು: ದೇಶದ ಅತಿದೊಡ್ಡ ಬಯೋ ಫಾರ್ಮಾಸ್ಯುಟಿಕಲ್ ಸಂಸ್ಥೆ ಬಯೋಕಾನ್ ಈಗ ಹೊಸ ಪೀಳಿಗೆಯ ನಾಯಕತ್ವಕ್ಕೆ ಸಾಕ್ಷಿಯಾಗುತ್ತಿದೆ. ಸುಮಾರು ನಾಲ್ಕು ದಶಕಗಳ ಕಾಲ ಸಂಸ್ಥೆಯನ್ನು ಜಾಗತಿಕ ಮಟ್ಟದಲ್ಲಿ ಕಟ್ಟಿ ಬೆಳೆಸಿದ ಕಿರಣ್ ಮಜುಂದಾರ್ ಶಾ ಅವರು ತಮ್ಮ ಉತ್ತರಾಧಿಕಾರ ಯೋಜನೆಯನ್ನು ಅಧಿಕೃತವಾಗಿ ಪ್ರಕಟಿಸಿದ್ದಾರೆ.

ತಮ್ಮ ಸೋದರ ಎರಿಕ್ ಮಜುಂದಾರ್ ಮಗಳಾದ 37 ವರ್ಷದ ಕ್ಲೇರ್ ಮಜುಂದಾರ್ ಅವರನ್ನು ಬಯೋಕಾನ್ ಮುನ್ನಡೆಸುವ ನಾಯಕಿಯಾಗಿ ಕಿರಣ್ ಆಯ್ಕೆ ಮಾಡಿದ್ದಾರೆ. ಕಿರಣ್ ಮಜುಂದಾರ್ ಅವರಿಗೆ ಮಕ್ಕಳಿಲ್ಲದ ಕಾರಣ, ತಾವು ಪ್ರೀತಿಯಿಂದ ಬೆಳೆಸಿದ ಸಂಸ್ಥೆಯನ್ನು ಸುರಕ್ಷಿತ ಮತ್ತು ಸಮರ್ಥ ಕೈಗಳಿಗೆ ಒಪ್ಪಿಸುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕಬ್ಬಿಗೆ ಬೆಂಬಲ ಬೆಲೆ ಹೆಚ್ಚಳ

ದೆಹಲಿ: ಕರ್ನಾಟಕದ ಸೂರ್ಯಕಾಂತಿ ಬೆಳೆಗಾರರ ಬೆಂಬಲಕ್ಕೆ ನಿಂತ ಬೆನ್ನಲ್ಲೇ ಕೇಂದ್ರ ಸರಕಾರ ಇದೀಗ ಕಬ್ಬು ಬೆಳೆಗಾರರಿಗೂ ಬೆಂಬಲ ಬೆಲೆ ಹೆಚ್ಚಿಸಿ ನೆರವಿಗೆ ಬಂದಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸಚಿವ ಸಂಪುಟ 2026-27ನೇ ಹಂಗಾಮಿಗೆ ಕಬ್ಬಿಗೆ ಶೇ.10.25 ಮೂಲ ರಿಕವರಿ ದರದ ಮೇಲೆ ಪ್ರತಿ ಕ್ವಿಂಟಲ್‌ಗೆ 365 ರು. ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆಯನ್ನು ಅನುಮೋದಿಸಿದೆ. ಇದರಿಂದ ಕರ್ನಾಟಕದ ಸುಮಾರು 8 ರಿಂದ 10 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ ಎಂದಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಮದುವೆಯಾಗುವ ಯುವತಿಯರಿಗೆ 8ಗ್ರಾಂ ಚಿನ್ನ, ರೇಷ್ಮೆ ಸೀರೆ ಉಚಿತ – ಟಿವಿಕೆ ಪಕ್ಷ
ಸುದ್ದಿ



10 ಶಾಸಕರ ಬೆಂಬಲ ಪಡೆಯಲು ಕಾಂಗ್ರೆಸ್, ಇತರೆ ಪಕ್ಷಗಳ ಜತೆ ವಿಜಯ್ ಚೌಕಾಶಿ, ಮೇ 7ಕ್ಕೆ ಅಸ್ಸಾಂ, ಮೇ 9ಕ್ಕೆ ಪಶ್ಚಿಮ ಬಂಗಾಳ ಸಿಎಂಗಳ ಪ್ರಮಾಣವಚನ ಸ್ವೀಕಾರ

ಸರಕಾರ ರಚನೆ ಕಸರತ್ತು

ದೆಹಲಿ: ತೀವ್ರ ಕುತೂಹಲ ಕೆರಳಿಸಿದ್ದ ಪಂಚ ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟಗೊಂಡ ಬೆನ್ನಲ್ಲೆ ಸರಕಾರ ರಚನೆಗೆ ಕಸರತ್ತು ಆರಂಭವಾಗಿದ್ದು, ಜನಾದೇಶ ಪಡೆದಿರುವ ರಾಜಕೀಯ ಪಕ್ಷಗಳು ಹೊಸ ಸರಕಾರ ಸ್ಥಾಪನೆ ಮಾಡಲು, ಹಕ್ಕು ಮಂಡಿಸಲು ಮುಂದಾಗಿವೆ.

ಅದರಲ್ಲೂ ರಾಜಕೀಯ ಪಂಡಿತರ ಲೆಕ್ಕಾಚಾರವನ್ನು ಬುಡಮೇಲು ಮಾಡಿರುವ ದ್ರಾವಿಡರ ನಾಡು ತಮಿಳುನಾಡಿನಲ್ಲಿ ಟಿವಿಕೆ ಪಕ್ಷದ ಮುಖಂಡ ವಿಜಯ್ ಅವರು ಸರಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ತಮಿಳುನಾಡಿನ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೆಕರ್ ಅವರಿಗೆ ಪತ್ರ ಬರೆದಿರುವ ಅವರು ಸರಕಾರ ರಚನೆ ಮಾಡಲು ಅವಕಾಶ ಮಾಡಿಕೊಡಬೇಕು. ತಮನ್ನು ಭೇಟಿಯಾಗಲು ಸಮಯ ನಿಗದಿಪಡಿಸಬೇಕೆಂದು ಮನವಿ ಮಾಡಿದ್ದಾರೆ. ರಾಜ್ಯಪಾಲರು ಯಾವುದೇ ಸಂದರ್ಭದಲ್ಲೂ ಸರಕಾರ ರಚನೆಗೆ ವಿಜಯ್ ಅವರನ್ನು ಆಹ್ವಾನಿಸುವ ಸಾಧ್ಯತೆ ಇದೆ.

ವಿಜಯ್ ಶಾಸಕಾಂಗ ಪಕ್ಷದ ನಾಯಕ: ಚೆನ್ನೈನಲ್ಲಿರುವ ಪಕ್ಷದ ಕಚೇರಿಯಲ್ಲಿ ನೂತನವಾಗಿ ಆಯ್ಕೆಗೊಂಡ ಶಾಸಕರು, ಪದಾಧಿಕಾರಿಗಳು ಸೇರಿ ಪ್ರಮುಖರ ಜತೆ ವಿಜಯ್ ಮಂಗಳವಾರ ಸಭೆ ನಡೆಸಿದ್ದು, ಸರ್ವಾನುಮತದಿಂದ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಆಗಿದ್ದಾರೆ.

ಸಣ್ಣಪುಟ್ಟ ಪಕ್ಷಗಳ ಬೆಂಬಲ ಪಡೆಯಲು ಸಿದ್ಧತೆ: ರಾಜ್ಯದ ಒಟ್ಟು 234 ವಿಧಾನಸಭಾ ಕ್ಷೇತ್ರಗಳಲ್ಲಿ ವಿಜಯ್ ನೇತೃತ್ವದ ಟಿವಿಕೆ 108 ಸ್ಥಾನಗಳನ್ನು ಪಡೆದು ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, ಸರಕಾರ ರಚನೆ ಮಾಡಲು ಇನ್ನೂ ಹತ್ತು ಶಾಸಕರ ಬೆಂಬಲದ ಅಗತ್ಯವಿದೆ. ಇದೇ ವೇಳೆ ಐವರು ಶಾಸಕರನ್ನು ಹೊಂದಿರುವ ಕಾಂಗ್ರೆಸ್ ವಿಜಯ್ ಅವರಿಗೆ ಬೆಂಬಲ ನೀಡಲು ನಿರ್ಧರಿಸಿದೆ. ಅಲ್ಲದೆ, ಕೆಲವು ಸಣ್ಣಪುಟ್ಟ ಪ್ರಾದೇಶಿಕ ಪಕ್ಷಗಳು ಮತ್ತು ಇತರರ ಬೆಂಬಲ ಪಡೆದು ಸರಕಾರ ರಚನೆ ಮಾಡಲು ವಿಜಯ್ ಮುಂದಾಗಿದ್ದಾರೆ.

ಕೇರಳದಲ್ಲಿ ಸರಕಾರ ರಚಿಸಲು ಯುಡಿಎಫ್ ಸಜ್ಜು: ಒಂದು ದಶಕದ ನಂತರ ಅಧಿಕಾರಕ್ಕೆ ಬಂದಿರುವ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರ ರಚನೆಗೆ ಕಸರತ್ತು ಆರಂಭಿಸಿದೆ. ರಾಜ್ಯದ ಒಟ್ಟು 140 ಕ್ಷೇತ್ರಗಳ ಪೈಕಿ ಯುಡಿಎಫ್ 89 ಸ್ಥಾನ ಪಡೆದು ಸ್ಪಷ್ಟ ಬಹುಮತ ಪಡೆದಿದೆ. ಫಲಿತಾಂಶ ಹೊರಬಿದ್ದು 48 ಗಂಟೆ ಕಳೆದರೂ ಮುಂದಿನ ಮುಖ್ಯಮಂತ್ರಿ ಯಾರು ಎಂಬುದು ಈಗಲೂ ನಿಗೂಢವಾಗಿದೆ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಹುದ್ದೆಗೆ ಹಲ ವಾರು ಹೆಸರುಗಳು ಕೇಳಿಬರುತ್ತಿವೆ. ಅದರಲ್ಲಿ ಮುಖ್ಯವಾಗಿ ಗಾಂಧಿ ಕುಟುಂಬಕ್ಕೆ ಅತ್ಯಂತ ನಿಷ್ಠರಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ವಿಧಾನ ಸಭೆಯ ಪ್ರತಿಪಕ್ಷದ ನಾಯಕರಾಗಿದ್ದ ಸತೀಶನ್ ಹಾಗೂ ಮಾಜಿ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಚೆನ್ನಿತ್ತಲ ಸೇರಿದಂತೆ ಕೆಲವರ ಹೆಸರುಗಳು ಮುಂಚೂಣಿಯಲ್ಲಿವೆ. ತಿರುವಂತನಪುರ ದಲ್ಲಿರುವ ಪಕ್ಷದ ಕೇಂದ್ರ ಕಚೇರಿಯಲ್ಲಿ ಒಂದು ಕಡೆ ವೇಣುಗೋಪಾಲ್, ಮತ್ತೊಂದು ಕಡೆ ಸತೀಶನ್ ಅವರುಗಳ ಫ್ಲೆಕ್ಸ್ ಗಳನ್ನು ಹಾಕಿ ಮುಂದಿನ ಮುಖ್ಯಮಂತ್ರಿ ಎಂದು ಬರೆಯಲಾಗಿದೆ. ಬುಧವಾರ ಶಾಸಕಾಂಗ ಪಕ್ಷದ ಸಭೆ ನಡೆಯುವ ಸಂಭವವಿದ್ದು, ನೂತನ ನಾಯಕರನ್ನು ಶಾಸಕರು ಆಯ್ಕೆ ಮಾಡಿದ ಬಳಿಕ ಸರಕಾರ ರಚನೆಗೆ ರಾಜ್ಯಪಾಲರ ಬಳಿ ಹಕ್ಕು ಮಂಡಿಸಲಿದ್ದಾರೆ.

ಬಂಗಾಳಕ್ಕೆ ಯಾರು?: ದೀದಿ ನಾಡಿನಲ್ಲಿ ಇತಿಹಾಸ ಸೃಷ್ಟಿಸಿರುವ ಬಿಜೆಪಿ ಪ.ಬಂಗಾಳದಲ್ಲಿ ಸರಕಾರ ರಚನೆಗೆ ಸಿದ್ಧತೆ ಆರಂಭಿಸಿದೆ. ರಾಜ್ಯದ ಒಟ್ಟು 294 ವಿಧಾನಸಭಾ ಕ್ಷೇತ್ರಗಳ ಪೈಕಿ 206 ಕ್ಷೇತ್ರಗಳನ್ನು ಗೆದ್ದಿರುವ ಬಿಜೆಪಿಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಆಕಾಂಕ್ಷಿಗಳ ಪಟ್ಟಿ ಹನುಮಂತನ ಬಾಲದಂತೆ ಬೆಳೆಯುತ್ತಿದೆ. ಪ್ರಮುಖವಾಗಿ ವಿಧಾನಸಭೆಯ ಪ್ರತಿಪಕ್ಷದ ನಾಯಕ ಹಾಗೂ ಮಮತಾ ಬ್ಯಾನರ್ಜಿಯನ್ನು ಮಣಿಸಿರುವ ಸುವೇಂದು ಅಧಿಕಾರಿ ಸಿಎಂ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಜತೆಗೆ ರಾಜ್ಯ ಬಿಜೆಪಿ ಅಧ್ಯಕ್ಷ ಸಮೀಕ್ ಭಟ್ಟಾಚಾರ್ಯ, ಉಪಾಧ್ಯಕ್ಷ ಅಗ್ನಿಮಿತ್ರ ಪೌಲ್, ಸ್ವಪನ್‌ದಾಸ್ ಗುಪ್ತ, ರೂಪಾ ಗಂಗೂಲಿ ಸೇರಿದಂತೆ ಹಲವರ ಹೆಸರುಗಳು ಕೇಳಿಬರುತ್ತಿವೆ.

→ 4



ಚೆನ್ನೈನಲ್ಲಿರುವ ಪಕ್ಷದ ಪ್ರಧಾನ ಕಚೇರಿಯಲ್ಲಿ ಪಕ್ಷದ ಸಭೆಗೂ ಮುನ್ನ ಟಿವಿಕೆ ಮುಖ್ಯಸ್ಥ ವಿಜಯ್ ಪಕ್ಷದ ಸೈದ್ಧಾಂತಿಕ ನಾಯಕರಿಗೆ ಗೌರವ ಸಲ್ಲಿಸಿದರು.

ವಿಜಯ್‌ಗೆ ಕಾಂಗ್ರೆಸ್ ಬೆಂಬಲ

ತಮಿಳುನಾಡಿನಲ್ಲಿ ಸರಕಾರ ರಚಿಸಲು ಟಿವಿಕೆ ಮುಖ್ಯಸ್ಥ ವಿಜಯ್ ಅವರು ಕಾಂಗ್ರೆಸ್‌ನ ಬೆಂಬಲ ಕೋರಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ. ತಮಿಳುನಾಡಿನ ಜನಾದೇಶವು ಜಾತ್ಯತೀತ ಸರಕಾರದ ಪರವಾಗಿದ್ದು, ಸಂವಿಧಾನವನ್ನು ರಕ್ಷಿಸಲು ಬದ್ಧವಾಗಿದೆ ಎಂಬುದು ಕಾಂಗ್ರೆಸ್‌ಗೆ ಸ್ಪಷ್ಟವಾಗಿದೆ. ಬಿಜೆಪಿ ಮತ್ತು ಅದರ ಬೆಂಬಲಿಗರು ಸರಕಾರ ರಚಿಸದಂತೆ ಮಾಡಲು ಕಾಂಗ್ರೆಸ್ ದೃಢನಿಶ್ಚಯ ಮಾಡಿದೆ. ರಾಜ್ಯದ ಜನರ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ವಿಜಯ್ ಅವರ ವಿನಂತಿಯ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳುವಂತೆ ಕಾಂಗ್ರೆಸ್ ನಾಯಕತ್ವವು ತಮಿಳುನಾಡು ಕಾಂಗ್ರೆಸ್ ಸಮಿತಿಗೆ ನಿರ್ದೇಶಿಸಿದೆ ಎಂದು ಹೇಳಿದ್ದಾರೆ.

ರಾಜೀನಾಮೆ ನೀಡಲ್ಲ: ದೀದಿ ಹೊಸ ಕ್ಯಾತೆ

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಪರಾಭವಗೊಂಡಿರುವ ಮಮತಾ ಬ್ಯಾನರ್ಜಿ ಇದೀಗ ತಾನು ಸಿಎಂ ಹುದ್ದೆಗೆ ರಾಜೀನಾಮೆ ಸಲ್ಲಿಸುವುದಿಲ್ಲ ಎಂದು ಘೋಷಿಸಿದ್ದಾರೆ. ಮಾತ್ರವಲ್ಲದೆ ಭಬಾನಿಪುರ ಮತ ಎಣಿಕೆ ಕೇಂದ್ರಕ್ಕೆ ತೆರಳಿದ್ದ ತಮ್ಮ ಮೇಲೆ ಹಲ್ಲೆ ನಡೆಸಿ ಹೊರಹಾಕಲಾಗಿದೆ. ಮತದಾನ ಕೇಂದ್ರದಲ್ಲಿ ಅಕ್ರಮ ನಡೆದಿದ್ದು ಸಿಆರ್‌ಪಿಎಫ್ ಸಿಬ್ಬಂದಿ ಗೂಂಡಾಗಿರಿ ಮಾಡಿದ್ದಾರೆ, ಬಿಜೆಪಿ ಅಭ್ಯರ್ಥಿ ಸಹ ತಮ್ಮ ಬೆಂಬಲಿಗರೊಂದಿಗೆ ಮತ ಎಣಿಕೆ ಕೇಂದ್ರಕ್ಕೆ ನುಗ್ಗಿದ್ದಾರೆ ಎಂದು ಎಂದು ಗಂಭೀರ ಆರೋಪ ಮಾಡಿದ್ದಾರೆ. ಒಟ್ಟಾರೆ ತಮ್ಮ ಪಕ್ಷಕ್ಕೆ ಬರಬೇಕಿದ್ದ 100 ಸ್ಥಾನಗಳನ್ನು ಬಲವಂತವಾಗಿ ಕಸಿದುಕೊಳ್ಳಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡಿ.ಎನ್.ಜೀವರಾಜ್‌ಗೆ ಪ್ರಮಾಣವಚನ ಬೋಧಿಸಲು ವಿಳಂಬ | ರಾಜ್ಯಪಾಲರ ಮೊರೆ ಹೋದ ರಾಜ್ಯ ಬಿಜೆಪಿ ನಾಯಕರು

ಗೊಂದಲದ ಗೂಡಾದ ಶೃಂಗೇರಿಯ ಶಾಸಕತ್ವ

ಡಿ.ಎನ್.ಜೀವರಾಜ್ ಅವರಿಗೆ ನೇರವಾಗಿ ಪ್ರಮಾಣವಚನ ಬೋಧಿಸುವಂತೆ ರಾಜ್ಯಪಾಲರಿಗೆ ಆರ್.ಅಶೋಕ ಅವರು ಮನವಿ ಸಲ್ಲಿಸಿದರು.

ವಿಶ್ವವಾಣಿ ವಿಶೇಷ ಬೆಂಗಳೂರು

ಚುನಾವಣಾ ಆಯೋಗದ ಎಡವಟ್ಟೋ, ಸ್ಥಳೀಯವಾಗಿ ಎಣಿಕೆಯಲ್ಲಿನ ಮಸಲತ್ತಿನಿಂದಾಗಿಯೋ ಶೃಂಗೇರಿ ಕ್ಷೇತ್ರದ ಶಾಸಕತ್ವ ಗೊಂದಲದ ಗೂಡಾಗಿದೆ.

ಡಿ.ಎನ್.ಜೀವರಾಜ್ ಅವರಿಗೆ ಸ್ಪೀಕರ್ ಯು.ಟಿ.ಖಾದರ್ ಪ್ರಮಾಣವಚನ ಬೋಧಿಸಲು ತಡ ಮಾಡುತ್ತಿರುವುದರಿಂದ ನೇರವಾಗಿ ಪ್ರಮಾಣವಚನ ಬೋಧಿಸಲು ರಾಜ್ಯಪಾಲರಿಗೆ ಬಿಜೆಪಿ ಒತ್ತಾಯಿಸಿದೆ. ಇನ್ನೊಂದೆಡೆ 'ಮತಗಳೇ ಡಕಾಯಿತಿಗೆ ಒಳಗಾಗಿವೆ' ಎಂದು ಮುಖ್ಯಮಂತ್ರಿ ಸೇರಿದಂತೆ ಕಾಂಗ್ರೆಸ್ ನಾಯಕರು ಆರೋಪಿಸುತ್ತಿದ್ದಾರೆ. ಹೀಗಾಗಿ ಇಲ್ಲಿನ ಶಾಸಕರು ಯಾರು ಎಂಬುದು ಇನ್ನೂ ಕಾನೂನು ತೊಡಕಿನಲ್ಲಿದೆ. ಅಂಚೆ ಮತಗಳ ಮರುಎಣಿಕೆ ವೇಳೆ ಮತಪತ್ರಗಳಲ್ಲಿ ತಿದ್ದುಪಡಿ ನಡೆದಿದೆ ಎಂಬ ಆರೋಪವೂ ಕೇಳಿಬಂದಿರುವ ಹಿನ್ನೆಲೆ ಬಿಜೆಪಿ ಅಭ್ಯರ್ಥಿ ವಿರುದ್ಧ ದಾಖಲಾದ ಪ್ರಕರಣದ ತನಿಖೆಗೆ ಹೈಕೋರ್ಟ್ ಮಂಗಳವಾರ ತಾತ್ಕಾಲಿಕ ತಡೆ ನೀಡಿದೆ.

ರಾಜ್ಯಪಾಲರನ್ನು ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ, ಮತ ಮರುಎಣಿಕೆ ಯಲ್ಲಿ ಬಿಜೆಪಿಯ ಡಿ.ಎನ್.ಜೀವರಾಜ್ ಶಾಸಕರು ಎಂಬ ಫಲಿತಾಂಶ ಬಂದಿದೆ. ಚುನಾವಣಾ ಆಯೋಗದಿಂದ ಎಲ್ಲ ಶಾಸಕರಿಗೆ ಪ್ರಮಾಣ ಪತ್ರ ನೀಡುವಂತೆ ಇವರಿಗೂ ಪ್ರಮಾಣಪತ್ರ ಸಿಕ್ಕಿದೆ. ರಾಜ್ಯ ಸರಕಾರದ ರಾಜ್ಯಪತ್ರದ ಆದೇಶವೂ ಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಲ್ಲ ಶಾಸಕರು ಇದೇ ರೀತಿ ಶಾಸಕರು ಎನಿಸಿಕೊಳ್ಳುತ್ತಾರೆ. ಈ ಕುರಿತು ಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಫೋನ್ ಕರೆ ಮಾಡಿ ಮಾತಾಡಲು ಯತ್ನಿಸಿದರೆ ಬೇಕೆಂದೇ ಕರೆ ಸ್ವೀಕರಿಸುತ್ತಿಲ್ಲ.

→ 4

ಶೃಂಗೇರಿ ಕ್ಷೇತ್ರದ ಅಂಚೆ ಮತ ಮರುಎಣಿಕೆಯಲ್ಲಿ ವೋಟ್ ಚೋರಿ ಅಲ್ಲ. ಇದು ವೋಟ್ ಡಕಾಯಿತಿ ಆಗಿದೆ. ಅಂಚೆ ಮತ ಪತ್ರವನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. 2023ರ ಮತ ಎಣಿಕೆ ವೇಳೆ ಸಿಂಧುವಾಗಿದ್ದ ಮತಗಳು ಏಕಾಏಕಿ ಅಸಿಂಧುವಾಗಲು ಹೇಗೆ ಸಾಧ್ಯ?
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಹರಿಹರ ಪೀಠದಲ್ಲಿ ಸಭೆಗೆ ತಡೆ

ದಾವಣಗೆರೆ: ಹರಿಹರ ಪಂಚಮಸಾಲಿ ಪೀಠದಲ್ಲಿ ದಿನ ಕಳೆದಂತೆ ಸ್ವಾಮೀಜಿ ಬೆಂಬಲಿಗರು ಹಾಗೂ ಟ್ರಸ್ಟಿಗಳ ನಡುವಿನ ಗಲಾಟೆ ಜೋರಾಗುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ಒಂದು ತಿಂಗಳು ಮಠದಲ್ಲಿ ಯಾವುದೇ ಸಭೆ, ಸಮಾರಂಭ ಮಾಡದಂತೆ ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿ ಮಾಡಿದೆ.

ಮಠದಲ್ಲಿ ಕಳೆದ ಮಾ.10 ರಿಂದ ಎರಡು ಕಡೆ ಬೆಂಬಲಿಗರಿಂದ ಸಭೆ, ಸಮಾರಂಭ, ಸುದ್ದಿಗೋಷ್ಠಿಗಳು ನಡೆಯುತ್ತಿವೆ. ಇವುಗಳು ವಿಕೋಪಕ್ಕೆ ತಿರುಗಿ ಗಲಾಟೆಗಳು, ಪ್ರಚೋದನಕಾರಿ ಹೇಳಿಕೆಗಳು ಬರುತ್ತಿವೆ. ಇದರಿಂದಾಗಿ ಸಾರ್ವಜನಿಕರ ಆಸ್ತಿಪಾಸ್ತಿ ನಷ್ಟ, ಕಾನೂನು ಸುವ್ಯವಸ್ಥೆ ಹಾಳಾಗುತ್ತಿದೆ. ಪೊಲೀಸ್ ಇಲಾಖೆ ಪದೇ ಪದೆ ಭದ್ರತೆ ನೀಡಲು ಆಗುವುದಿಲ್ಲ, ಆದ್ದರಿಂದ ಮೇ 1 ರಿಂದ 30 ರವರೆಗೆ ಪಂಚಮಸಾಲಿ ಪೀಠದಲ್ಲಿ ಯಾವುದೇ ಸಭೆ, ಸಮಾರಂಭ, ಪತ್ರಿಕಾಗೋಷ್ಠಿ ನಡೆಸುವಂತಿಲ್ಲ ಎಂದು ಸ್ವಾಮೀಜಿಗೆ, ಟ್ರಸ್ಟಿಗಳಿಗೆ, ಬೆಂಬಲಿಗರಿಗೆ ಜಿಲ್ಲಾಡಳಿತ ನೋಟಿಸ್ ಜಾರಿಗೊಳಿಸಿದೆ.

- ಸ್ವಾಮೀಜಿ ಬೆಂಬಲಿಗರು ಹಾಗೂ ಟ್ರಸ್ಟಿಗಳ ನಡುವಿನ ಗಲಾಟೆ ಜೋರಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಕ್ರಮ
- ಮೇ 1-30 ರವರೆಗೆ ಪಂಚಮಸಾಲಿ ಪೀಠದಲ್ಲಿ ಯಾವುದೇ ಸಭೆ, ಸಮಾರಂಭ, ಪತ್ರಿಕಾಗೋಷ್ಠಿ ನಡೆಸಲು ಅವಕಾಶವಿಲ್ಲ

ಸಿಎಂ ಸದ್ಯವೇ ದಿಲ್ಲಿಗೆ, ಈ ಬಾರಿ ವರಿಷ್ಠರ ಅನುಮತಿ ನಿರೀಕ್ಷೆ

ಸಂಪುಟ ಪುನಾರಚನೆ ಕನಸಿಗೆ ಮತ್ತೆ ರೆಕ್ಕೆ ಪುಕ್ಕ

ಬೆಂಗಳೂರು: ಪಂಚರಾಜ್ಯ ಚುನಾವಣೆಯ ಬೆನ್ನಲ್ಲೇ ಕರ್ನಾಟಕದಲ್ಲಿ ಸಚಿವ ಸಂಪುಟ ಪುನಾರಚನೆಯ ಕೂಗಿಗೆ ಮತ್ತೆ ಧ್ವನಿ ಬಂದಿದೆ. ಕೇರಳ ಮುಖ್ಯಮಂತ್ರಿ ಆಯ್ಕೆಯ ಬಳಿಕ ಕರ್ನಾಟಕದ ಗೊಂದಲಕ್ಕೆ ಪಕ್ಷದ ಹೈಕಮಾಂಡ್ ಕೈಹಾಕಲಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಈಗಾಗಲೇ ಅಶೋಕ್ ಪಟ್ಟಣ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಶಾಸಕರು ದೆಹಲಿಗೆ ಭೇಟಿ ನೀಡಿ ಪಕ್ಷದ ಹೈಕಮಾಂಡ್ ಬಳಿ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಚರ್ಚಿಸಿದ್ದರು. ಪಂಚರಾಜ್ಯ ಚುನಾವಣೆಯ ಬಳಿಕ ಕರ್ನಾಟಕದ ಬಗ್ಗೆ ಚರ್ಚಿಸುವುದಾಗಿ ಭರವಸೆ ನೀಡಿದ್ದರಿಂದ ಇದೀಗ ಪುನಾರಚನೆಗೆ ಸಂಬಂಧಿಸಿದಂತೆ ಒತ್ತಡ ಹೇರಲು ಸಚಿವಾಕಾಂಕ್ಷಿಗಳು ಸಿದ್ಧತೆ ಆರಂಭಿಸಿದ್ದಾರೆ.

ಫಲಿತಾಂಶದ ಮರುದಿನವೇ 45ಕ್ಕೂ ಹೆಚ್ಚು ಶಾಸಕರು ದೆಹಲಿಗೆ ತೆರಳುವ ಸಾಧ್ಯತೆಯಿದೆ ಎಂದು ಹೇಳಲಾಗಿತ್ತು. ಆದರೆ ಸದ್ಯ ಪಕ್ಷದ ನಾಯಕರು ಕೇರಳ ಸರಕಾರ ರಚನೆಯ ವಿಷಯದಲ್ಲಿ, ಮುಖ್ಯಮಂತ್ರಿ ಆಯ್ಕೆಯ ವಿಷಯದಲ್ಲಿ ತೊಡಗಿರುವುದರಿಂದ ಆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ದೆಹಲಿಗೆ ತೆರಳಲು ಶಾಸಕರು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೇ 10ರ ವೇಳೆಗೆ ಕೇರಳ ಮುಖ್ಯಮಂತ್ರಿ ಅಭ್ಯರ್ಥಿಯ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಅದಾದ ಬಳಿಕ ಕರ್ನಾಟಕದ ಸಚಿವ ಸಂಪುಟ ಪುನಾರಚನೆಯೊಂದಿಗೆ ಇತರ ಗೊಂದಲಗಳಿಗೆ ಸಂಬಂಧಿಸಿದಂತೆಯೂ ನಾಯಕರು ಚರ್ಚಿಸಲಿದ್ದಾರೆ. ಆದ್ದರಿಂದ ಆ ಸಮಯಕ್ಕೆ ದೆಹಲಿಗೆ ತೆರಳುವ ಲೆಕ್ಕಾಚಾರದಲ್ಲಿ ಶಾಸಕರಿದ್ದಾರೆ. ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ ಮೂರನೇ ವಾರದಲ್ಲಿ ದೆಹಲಿಗೆ ತೆರಳಿ ಸಂಪುಟ ಪುನಾರಚನೆ ಬಗ್ಗೆ ಪಕ್ಷದ ಹೈಕಮಾಂಡ್ ಜತೆ ಚರ್ಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇನ್ನೆರಡು ದಿನಗಳಲ್ಲಿ ಮುಖ್ಯಮಂತ್ರಿಗಳು ದೆಹಲಿಗೆ ತೆರಳಲಿದ್ದಾರೆ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿಕೆ ನೀಡಿದ್ದರೂ, ಮೂಲಗಳ ಪ್ರಕಾರ ಸಿದ್ದರಾಮಯ್ಯ ಅವರು ಮೈಸೂರಿಗೆ ತೆರಳುವ ಸಾಧ್ಯತೆಯಿದೆ. ಕೇರಳ ಸರಕಾರ ರಚನೆಯ ಪ್ರಕ್ರಿಯೆ ನಡೆಯುತ್ತಿರುವಾಗ ದೆಹಲಿಗೆ ಹೋಗುವುದು ಸರಿಯಲ್ಲ. ಆದ್ದರಿಂದ ಕೇರಳದಲ್ಲಿ ಸರಕಾರ ರಚನೆಯಾದ ಬಳಿಕವೇ, ದೆಹಲಿಗೆ ತೆರಳಲು ಸಿದ್ದರಾಮಯ್ಯ ತೀರ್ಮಾನಿಸಿದ್ದಾರೆ. ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿದಾಗಲೇ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ ದೆಹಲಿಗೆ ಪ್ರಯಾಣಿಸಲಿದ್ದಾರೆ ಎಂದು ಹೇಳಲಾಗಿದೆ.

ಸಂಪುಟ ಪುನಾರಚನೆ ಸಂಬಂಧ ಪಕ್ಷದ ಹೈಕಮಾಂಡ್‌ನಿಂದ ಅಧಿಕೃತ ಸೂಚನೆ ಬಂದಿಲ್ಲ. ಹೈಕಮಾಂಡ್ ಈ ಸಂಬಂಧ ಚರ್ಚಿಸಲು ದೆಹಲಿ ಕರೆದ ತಕ್ಷಣ ಹೋಗುವೆ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಬ್ದುಲ್ ಜಬ್ಬಾರ್ ಅಮಾನತು ವಾಪಸ್‌ಗೆ ಒತ್ತಡ

ಈ ನಡುವೆ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಗೆಲುವು ಸಾಧಿಸಿದ ಬೆನ್ನಲ್ಲೇ ಪಕ್ಷದಿಂದ ಅಮಾನತಾಗಿರುವ ಅಬ್ದುಲ್ ಜಬ್ಬಾರ್ ಅವರನ್ನು ಪಕ್ಷಕ್ಕೆ ವಾಪಸ್ ಸೇರಿಸಿಕೊಳ್ಳಬೇಕು ಹಾಗೂ ನಸೀರ್ ಅಹ್ಮದ್ ಅವರಿಗೆ ಪುನಃ ಸಿಎಂ ರಾಜಕೀಯ ಕಾರ್ಯದರ್ಶಿ ಸ್ಥಾನ ನೀಡಬೇಕು ಎನ್ನುವ ಒತ್ತಡಗಳು ಶುರುವಾಗಿವೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಚಿವ ಸತೀಶ್ ಜಾರಕಿಹೊಳಿ ಅವರು ಮಾತನಾಡಿದ್ದು, ಪಕ್ಷ ಗೆಲುವು ಸಾಧಿಸಿದೆ. ಆದ್ದರಿಂದ ಕ್ರಮ ಹಿಂಪಡೆಯಬೇಕು. ಇದೇ ತಪ್ಪು ಮಾಡಿರುವ ಅನೇಕರು ಪಕ್ಷದಲ್ಲಿಯೇ ಇರುವಾಗ, ಇವರ ಮೇಲೇ ಮಾತ್ರ ಏಕೆ ಕ್ರಮವಹಿಸಬೇಕು? ಈ ಸಂಬಂಧ ಸಿಎಂ, ಡಿಸಿಎಂ ಚರ್ಚಿಸಿ ತೀರ್ಮಾನಿಸಬೇಕು ಎಂದಿದ್ದಾರೆ.

ಪಲ್ಲಕ್ಕಿ ಬಸ್ ಧಗ ಧಗ

ಬೆಂಗಳೂರಿನಿಂದ ಗದಗ ನಗರಕ್ಕೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಪಲ್ಲಕ್ಕಿ ಬಸ್‌ಗೆ ಬೆಂಕಿ ತಗುಲಿ ಬಸ್ ಸಂಪೂರ್ಣವಾಗಿ ಸುಟ್ಟು ಕರಕಲಾದ ಘಟನೆ ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲೂಕಿನ ದೇವರಗುಡ್ಡ ಗ್ರಾಮದ ರಾಜ್ಯ ಹೆದ್ದಾರಿಯಲ್ಲಿ ನಡೆದಿದೆ. 17 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಯುಎಇ ಮೇಲೆ ಎರಗಿದ ಇರಾನ್, ಭಾರತೀಯರಿಗೆ ಗಾಯ
ಇರಾನ್ ಮೇಲೆ ಅಮೆರಿಕ ದಾಳಿ, ಆರು ನೌಕೆಗಳು ಧ್ವಂಸ

ಮತ್ತೆ ಯುದ್ಧ ಕಾರ್ಮೋಡ

ವಾಷಿಂಗ್ಟನ್: ಅಮೆರಿಕ ಮತ್ತು ಇರಾನ್ ನಡುವೆ ಮತ್ತೆ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಕೊಲ್ಲಿಯಲ್ಲಿ ಮತ್ತೆ ಯುದ್ಧದ ಕಾರ್ಮೋಡ ಆವರಿಸಿದೆ.

ಫೆಬ್ರವರಿ 28 ರಂದು ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ಆರಂಭಿಸಿದ ನಂತರ ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದ್ದರಿಂದ ಜಾಗತಿಕ ತೈಲ ಮತ್ತು ಸರಕು ಸಾಗಣೆಯ ನಿರ್ಣಾಯಕ ಜಲಮಾರ್ಗದ ನಿಯಂತ್ರಣವನ್ನು ಇರಾನ್‌ನಿಂದ ವಶಪಡಿಸಿಕೊಳ್ಳಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಪ್ರಾಜೆಕ್ಟ್ ಫ್ರೀಡಂ ಎಂಬ ಕಾರ್ಯಾಚರಣೆ ಆರಂಭಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಹೊರ್ಮುಜ್ ಜಲಸಂಧಿ ಬಳಿ ಇರಾನ್‌ನ 6 ಚಿಕ್ಕ ನೌಕೆಗಳನ್ನು ನಾಶ ಮಾಡಿರುವುದಾಗಿ ಅಮೆರಿಕ ಮಿಲಿಟರಿ ಹೇಳಿದೆ. ಅಲ್ಲದೇ, ಇರಾನ್‌ನ ಕ್ರೂಸ್ ಕ್ಷಿಪಣಿಗಳು ಹಾಗೂ ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ತಿಳಿಸಿದೆ.

ಸೋಮವಾರ ಯುಎಇ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ಸೇರಿದಂತೆ ಈ ಪ್ರದೇಶದಲ್ಲಿ ಇರಾನ್ ದಾಳಿ ಮುಂದುವರಿಸಿದೆ. ಸರಿಸುಮಾರು 15 ಕ್ಷಿಪಣಿಗಳು ಮತ್ತು 4 ಡ್ರೋನ್‌ಗಳನ್ನು ಯುಎಇ ತನ್ನ ವಾಯು ರಕ್ಷಣಾ ವ್ಯವಸ್ಥೆಯ ಮೂಲಕ ಹೊಡೆದುರುಳಿಸಿದೆ. ಆದರೂ ಫುಜೈರಾಹ್‌ನಲ್ಲಿ ಇರಾನ್ ನಡೆಸಿದ ಡ್ರೋನ್ ದಾಳಿಯಲ್ಲಿ ಇಂಧನ ಸ್ಥಾವರದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಈ ಘಟನೆಯಲ್ಲಿ ಮೂವರು ಭಾರತೀಯರು ಗಾಯಗೊಂಡಿದ್ದಾರೆ. ಹೀಗಾಗಿ, ಎರಡೂ ಕಡೆಯಿಂದ ದಾಳಿ ನಡೆಯುತ್ತಿದೆ.

ತೈಲ ತುಟ್ಟಿ?

ಹೊರ್ಮುಜ್ ಜಲಸಂಧಿಯ ಬಿಕ್ಕಟ್ಟಿನಿಂದಾಗಿ ಜಾಗತಿಕವಾಗಿ ತೈಲ ಬೆಲೆ ಏರಿಕೆಯಾಗುವ ಭೀತಿ ಎದುರಾಗಿದೆ. ಭಾರತಕ್ಕೆ ಬರಬೇಕಿದ್ದ ತೈಲ ಹಡಗುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗುತ್ತಿದೆ. ಕೊಲ್ಲಿ ರಾಷ್ಟ್ರಗಳಿಂದ ತೈಲ ಪೂರೈಕೆ ವಿಳಂಬವಾಗುತ್ತಿರುವುದರಿಂದ ಭಾರತವು ರಷ್ಯಾದಿಂದ ಹೆಚ್ಚಿನ ತೈಲ ಆಮದು ಮಾಡಿಕೊಳ್ಳಲು ಮುಂದಾಗಿದೆ.

- ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಇರಾನ್ ತಡೆ
- ಜಲಸಂಧಿಯ ದಿಗ್ಬಂಧನ ಮುರಿಯಲು ಯುದ್ಧನೌಕೆ ಕಳುಹಿಸಿದ ಟ್ರಂಪ್
- ಉದ್ವಿಗ್ನತೆಯ ಬೆನ್ನಲ್ಲೇ ತನ್ನ ವಾಯುಪಡೆ ಸನ್ನದ್ಧಗೊಳಿಸಿರುವ ಇಸ್ರೇಲ್

95 ಗಂಟೆಗಳಲ್ಲಿ 4,750 ಕಿ.ಮೀ ನಿರಂತರ ಹಾರಾಟ ನಡೆಸಿದ ಅಪಾಪಂಗ್

ವಿಶ್ವಯಾನದಲ್ಲಿ ದಾಖಲೆ ಬರೆದ ಪುಟ್ಟ ಹಕ್ಕಿ

ಡೆಹ್ರಾಡೂನ್: ವಿಶ್ವದ ಅತಿ ಉದ್ದದ ವಲಸೆ ಹಕ್ಕಿಗಳಲ್ಲಿ ಒಂದಾದ ಗಿಡುಗ ಜಾತಿಯ ಅಮೂರ್ ಫಾಲ್ಕನ್ ಮತ್ತೊಮ್ಮೆ ತನ್ನ ಅಪ್ರತಿಮ ಹಾರಾಟ ಸಾಮರ್ಥ್ಯ ದಿಂದ ವಿಜ್ಞಾನಿಗಳನ್ನು ಬೆರಗುಗೊಳಿಸಿದೆ. ಮಣಿಪುರದಿಂದ ರೇಡಿಯೋ ಟ್ಯಾಗ್ ಮಾಡಲ್ಪಟ್ಟ ಅಪಾಪಂಗ್ ಎಂಬ ಗಂಡು ಪಕ್ಷಿಯು ಸೊಮಾಲಿಯಾದಿಂದ ಮಧ್ಯ ಭಾರತದವರೆಗೆ 95 ಗಂಟೆಗಳಲ್ಲಿ 4,750 ಕಿಲೋಮೀಟರ್ ದೂರವನ್ನು ಎಲ್ಲಿಯೂ ನಿಲ್ಲದೆ ಕ್ರಮಿಸಿ ಹೊಸ ದಾಖಲೆ ಬರೆದಿದೆ.

ಅರಬ್ಬಿ ಸಮುದ್ರದ ಮೇಲೆ ಪಯಣ: ಸೊಮಾಲಿಯಾದಿಂದ ಹೊರಟ ಈ ಪಕ್ಷಿ, ವಿಶಾಲವಾದ ಅರಬ್ಬಿ ಸಮುದ್ರದ ಮೇಲೆ ಯಾವುದೇ ಅಡೆತಡೆಯಿಲ್ಲದೆ ಹಾರುತ್ತಾ ಸೋಮವಾರ ರಾತ್ರಿ ವಾರಾಣಸಿಯಿಂದ 120 ಕಿ.ಮೀ ದೂರದಲ್ಲಿರುವ ಸೋನ್ ನದಿಯ ದಡಕ್ಕೆ ಬಂದು ತಲುಪಿದೆ ಎಂದು ಡೆಹ್ರಾಡೂನ್‌ನ ವನ್ಯಜೀವಿ ಸಂಸ್ಥೆಯ ವಿಜ್ಞಾನಿ ಡಾ.ಸುರೇಶ್ ಕುಮಾರ್ ತಿಳಿಸಿದ್ದಾರೆ. ಅಪಾಪಂಗ್ ಸೋಮವಾರ ರಾತ್ರಿ 9.30ಕ್ಕೆ ತನ್ನ ನಿರಂತರ ಹಾರಾಟವನ್ನು ಕೊನೆಗೊಳಿಸಿತು. ಕೇವಲ ಒಂದು ಗಂಟೆಯ ವಿಶ್ರಾಂತಿಯ ನಂತರ ಮತ್ತೆ 200 ಕಿ.ಮೀ ಕ್ರಮಿಸಿ ಬಿಹಾರದ ಗಯಾ ಜಿಲ್ಲೆಯ ಗುಡ್ಡಗಾಡು ಪ್ರದೇಶದಲ್ಲಿ ತಂಗಿದೆ. ಕಳೆದ ನವೆಂಬರ್‌ನಲ್ಲಿ ಇದೇ ಪಕ್ಷಿ ಭಾರತದಿಂದ ಕೀನ್ಯಾಕ್ಕೆ 6,100 ಕಿ.ಮೀ ನಿರಂತರ ಹಾರಾಟ ನಡೆಸಿತ್ತು ಎಂದು ತಿಳಿಸಿದ್ದಾರೆ.

ನವೆಂಬರ್ 11, 2025 ರಂದು ಮಣಿಪುರದ ತಮೆಂಗ್ಲಾಂಗ್ ಜಿಲ್ಲೆಯ ಚಿಯುಲುನ್ ಗ್ರಾಮದಲ್ಲಿ ಅಪಪಾಂಗ್ ಎಂಬ ಗಂಡು ಹಕ್ಕಿ ಮತ್ತು ಅಹು ಮತ್ತು ಅಲಾಂಗ್ ಎಂಬ ಎರಡು ಹೆಣ್ಣು ಹಕ್ಕಿ ಸೇರಿ ಒಟ್ಟು ಮೂರು ಅಮೂರ್ ಫಾಲ್ಕನ್‌ಗಳಿಗೆ ಸ್ಯಾಟಲೈಟ್ ಟ್ರಾನ್ಸ್‌ಮೀಟರ್ ಅಳವಡಿಸಲಾಗಿತ್ತು. ಅಪಾಪಂಗ್ ಜತೆಗೆ ಟ್ಯಾಗ್ ಮಾಡಲ್ಪಟ್ಟಿದ್ದ 'ಅಹು' ಮತ್ತು ಅಲಾಂಗ್' ಎಂಬ ಇತರ ಎರಡು ಹೆಣ್ಣು ಪಕ್ಷಿಗಳು ಸದ್ಯಕ್ಕೆ ಸೋಮಾಲಿಯಾದಲ್ಲೇ ಇವೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಅಮೂರ್ ಫಾಲ್ಕನ್‌ಗೆ ಕಟ್ಟುನಿಟ್ಟಿನ ರಕ್ಷಣೆ: ಪಾರಿವಾಳದ ಗಾತ್ರದ ಈ ಪುಟ್ಟ ಹಕ್ಕಿಗಳು ಆಗ್ನೇಯ ರಷ್ಯಾ ಮತ್ತು ಈಶಾನ್ಯ ಚೀನಾದಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ವರ್ಷಕ್ಕೆ ಒಟ್ಟು 20,000 ಕಿ.ಮೀ ಪ್ರಯಾಣ ಬೆಳೆಸುವ ಇವು, ಅಕ್ಟೋಬರ್‌ನಲ್ಲಿ ಮಣಿಪುರ ಮತ್ತು ನಾಗಾಲ್ಯಾಂಡ್‌ಗೆ ಆಗಮಿಸುತ್ತವೆ. ಇಲ್ಲಿ ದಷ್ಟಪುಷ್ಟವಾಗಿ ಬೆಳೆದ ನಂತರ ಆಫ್ರಿಕಾದತ್ತ ಸಾಗುತ್ತವೆ. ಸ್ಥಳೀಯವಾಗಿ ಇವುಗಳನ್ನು 'ಅಖುವೈಪುಯಿನಾ' ಎಂದು ಕರೆಯಲಾಗುತ್ತದೆ. ಭಾರತದ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿಯಲ್ಲಿ ಇವುಗಳಿಗೆ ಕಟ್ಟುನಿಟ್ಟಿನ ರಕ್ಷಣೆ ನೀಡಲಾಗಿದೆ.

ರೇಡಿಯೋ ಟ್ಯಾಗ್ ಅಳವಡಿಸಿದ್ದ ಅಪಾಪಂಗ್.

- ಸೋಮಾಲಿಯಾದಿಂದ ಭಾರತಕ್ಕೆ ಕೇವಲ ನಾಲ್ಕು ದಿನಗಳಲ್ಲಿ ಆಗಮಿಸಿದ ಅಮೂರ್ ಫಾಲ್ಕನ್
- ಪಕ್ಷಿ ಪ್ರಪಂಚದಲ್ಲಿ ಗಮನಾರ್ಹ ಸಾಧನೆ ಮಾಡಿರುವ ಕೇವಲ 150 ಗ್ರಾಂ ತೂಕದ ಪುಟ್ಟ ಹಕ್ಕಿ

ಕಾರವಾರದ ಸುತ್ತಲೂ ಆವಾಸ

100ರಿಂದ 150 ಗ್ರಾಂ ತೂಕದ ಪುಟ್ಟ ಹಕ್ಕಿ ಅಮೂರ್ ಫಾಲ್ಕನ್. ಆದರೆ, ಇದಕ್ಕಿರುವ ಹಾರುವ ಸಾಮರ್ಥ್ಯ ಅದ್ಭುತ. ಗಿಡುಗನ ಜಾತಿಗೆ ಸೇರಿದ ಈ ಬೇಟೆಗಾರ ಪಕ್ಷಿಗಳು ಭಾರತದ ಪೂರ್ವ ಭಾಗದಲ್ಲಿರುವ ಮಂಗೋಲಿಯಾ, ಚೀನಾ ಮತ್ತು ರಷ್ಯಾ ದೇಶದ ಹುಲ್ಲುಗಾವಲುಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಅಲ್ಲಿ ಚಳಿಗಾಲ ಆರಂಭವಾಗುತ್ತಿದ್ದಂತೆ ಮಹಾ ವಲಸೆಗೆ ತಂಡದ ಸಮೇತ ಸಿದ್ಧವಾಗುತ್ತದೆ. ಆಫ್ರಿಕಾ ಖಂಡದ ವಿವಿಧ ದೇಶಗಳಿಗೆ ಹಾರಿ ಹೋಗಿ ಒಂದಷ್ಟು ದಿನ ಕಳೆದು, ಚಳಿಗಾಲ ಮುಗಿದ ಬಳಿಕ ಪುನಃ ತಮ್ಮ ವಾಸ ಸ್ಥಳಗಳಿಗೆ ಮರಳುತ್ತವೆ. ಹಾಗೆ ಅವು ಸಾಗುತ್ತ ಭಾರತದ ಮೂಲಕ ಹಾದುಹೋಗುತ್ತವೆ. ನಾಗಾಲ್ಯಾಂಡ್‌ನಲ್ಲಿ ಒಂದಷ್ಟು ದಿನ ವಿಶ್ರಾಂತಿ ಪಡೆದು ದಕ್ಷಿಣದತ್ತ ಪ್ರಯಾಣಿಸುತ್ತವೆ. ಇತ್ತೀಚಿನ ವರ್ಷಗಳಲ್ಲಿ ಕಾರವಾರದ ಸುತ್ತಮುತ್ತ ಕೂಡ ಕಾಣಿಸಿಕೊಳ್ಳುವುದನ್ನು ಪಕ್ಷಿ ವೀಕ್ಷಕರು ಗುರುತಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಗೋಡೆ ಕುಸಿತ: ಲೋಕಾ ವಿಶೇಷ ತಂಡ ರಚನೆ

ಬೆಂಗಳೂರು: ಬೌರಿಂಗ್ ಆಸ್ಪತ್ರೆ ಗೋಡೆ ಕುಸಿದು 7 ಮಂದಿ ಸಾವನ್ನಪ್ಪಿದ ಪ್ರಕರಣದ ತನಿಖೆಗೆ ಲೋಕಾಯುಕ್ತದಿಂದ ವಿಶೇಷ ತಂಡ ರಚನೆ ಮಾಡಲಾಗಿದೆ. ಘಟನೆ ನಂತರ ಸ್ಥಳಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್ ಪಾಟೀಲ್ ಭೇಟಿ ಕೊಟ್ಟು ವಾರ್ನಿಂಗ್ ಕೊಟ್ಟಿದ್ದರು. ಬಳಿಕ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿತ್ತು. ಇದೀಗ ಪ್ರಕರಣದ ತನಿಖೆಗೆ ವಿಶೇಷ ತಂಡ ರಚನೆ ಮಾಡಲಾಗಿದೆ.ತನಿಖಾ ತಂಡದಲ್ಲಿ ಪೊಲೀಸ್ ಅಧೀಕ್ಷಕ ದರ್ಜೆಯ ಅಧಿಕಾರಿಯನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಇನ್ನುಳಿದಂತೆ ತಂಡದಲ್ಲಿ ಓರ್ವ ಜಿಲ್ಲಾ ನ್ಯಾಯಾಧೀಶರು, ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಎಂಜಿನಿಯರ್ ಇರಲಿದ್ದಾರೆ. ತನಿಖೆ ನಡೆಸಿ ಇದೇ ತಿಂಗಳ 16ರ ಒಳಗೆ ವರದಿ ನೀಡಲು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್ ಪಾಟೀಲ್ ಆದೇಶಿಸಿದ್ದಾರೆ.

ಇಸ್ರೋ ಮೇಲೆ ಡ್ರೋನ್ ಹಾರಾಟ

ಬೆಂಗಳೂರು: ಇಸ್ರೋ ಕ್ಯಾಂಪಸ್ ಮೇಲೆ ಡ್ರೋನ್ ಹಾರಾಟ ನಡೆಸಿರುವ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.ಮೇ 2ರಂದು ಬೆಳಿಗ್ಗೆ 8:16ರ ಸುಮಾರಿಗೆ ಕಾರ್ತಿಕ್ ನಗರದ ಇಸ್ರೋದ ಉಪಗ್ರಹ ಏಕೀಕರಣ ಮತ್ತು ಪರೀಕ್ಷಾ ಕೇಂದ್ರದ ಮೇಲೆ ಸುಮಾರು 80ರಿಂದ 100 ಅಡಿಗಳ ಮೇಲೆ 10-12 ಸೆಕೆಂಡ್‌ಗಳ ಕಾಲ ಅಪರಿಚಿತರು ಡ್ರೋನ್ ಹಾರಿಸಿರುವುದು ವರದಿಯಾಗಿದೆ. ಸಿಐಎಸ್‌ಎಫ್ ಸಬ್ ಇನ್‌ಸ್ಪೆಕ್ಟರ್ ನೀಡಿರುವ ದೂರಿನನ್ವಯ ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಇಸ್ರೋದ ಕ್ಯಾಂಪಸ್ ಸೂಕ್ಷ್ಮ ಪ್ರದೇಶವಾಗಿದ್ದು, ನೋ ಡ್ರೋನ್ ವಲಯವಾಗಿ ಗುರುತಿಸಲ್ಪಟ್ಟಿದೆ. ಅನುಮತಿಯಿಲ್ಲದೆ ವಾಯು ಚಟುವಟಿಕೆಗಳು ಭದ್ರತೆ ಮತ್ತು ಸುರಕ್ಷತೆಗೆ ಗಂಭೀರ ಅಪಾಯವನ್ನುಂಟು ಮಾಡುತ್ತವೆ. ಆದ್ದರಿಂದ ನೋ-ಡ್ರೋನ್ ವಲಯದಲ್ಲಿ ಡ್ರೋನ್ ಹಾರಾಟ ಮಾಡಿರುವ ಅಪರಿಚಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಉಲ್ಲೇಖಿಸಲಾಗಿದೆ. ದೂರಿನನ್ವಯ ಭಾರತೀಯ ನ್ಯಾಯಸಂಹಿತೆ ಕಾಯಿದೆ 329(3) - ಅಪರಾಧಿಕ ಅತಿಕ್ರಮಣ ಹಾಗೂ ಏರ್ ಕ್ರಾಫ್ಟ್ ಕಾಯಿದೆ 11ಎ ಅಧಿಕೃತ ಸುರಕ್ಷತಾ ನಿರ್ದೇಶನಗಳ ಉಲ್ಲಂಘನೆ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

10ಕ್ಕೆ ವಾದ್ಯ ಗಾನ

ಬೆಂಗಳೂರು: ಸಂಭ್ರಮ ಹವ್ಯಾಸಿ ಕಲಾ ಬಳಗದ ವತಿಯಿಂದ ಮೇ10ರಂದು ಭಾನುವಾರ ವಿವಿ ಪುರದ ಮಾನಂದಿ ಸಭಾಂಗಣದಲ್ಲಿ 'ವಾದ್ಯ ಗಾನ ಸಂಭ್ರಮ' ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಡಾ. ಸತೀಶ ಹಂಪಿಹೊಳಿ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಖ್ಯಾತ ಕಲಾವಿದರಾದ ಬಾಲಾಜಿ, ಸಂಜೀವ್ ಕೊರ್ತಿ, ಸತ್ಯಾ ನಾರಾಯಣ, ಶ್ರೀನಿವಾಸ ಅನಂತರಾಮಯ್ಯ, ಶಿವಕುಮಾರ್ ಮಹಾಂತ, ಗುರುರಾಜ ಹೊಳೆ ನರಸೀಪುರ, ಸ್ರೋತಸ್ವಿನಿ ಡಬೀರ, ದೀಪಿಕಾ ಎಂ., ಸುತೇಜ್. ಹರಿತ್ಸ, ರೋಹನ್ ಕುಮಾರ್, ಸುಹಾಸ್ ಪಾಲ್ಗೊಳ್ಳಲಿದ್ದಾರೆ.

2 ಪ್ರತ್ಯೇಕ ಪ್ರಕರಣಗಳಲ್ಲಿ 14 ಕೋಟಿ 75 ಲಕ್ಷ ಮೌಲ್ಯದ ಡ್ರಗ್ಸ್ ವಶ

13 ಕೆಜಿ ಮಾದಕ ವಸ್ತುಗಳ ಜಪ್ತಿ

ಬೆಂಗಳೂರು: ಬೆಂಗಳೂರಿನಲ್ಲಿ ಡ್ರಗ್ಸ್ ದಂಧೆ ನಡೆಯುವ, ಪೆಡ್ಲರ್‌ಗಳು ಸಿಕ್ಕಿ ಬೀಳುವ ಘಟನೆಗಳು ಇತ್ತೀಚೆಗೆ ಹೆಚ್ಚಾಗಿವೆ. ಮತ್ತೊಮ್ಮೆ ಮಾದಕ ವಸ್ತುಗಳ ವಿರುದ್ಧ ಪೊಲೀಸರು ಬೃಹತ್ ಕಾರ್ಯಾಚರಣೆ ನಡೆಸಿದ್ದು, ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಒಟ್ಟು 14 ಕೋಟಿ 75 ಲಕ್ಷ ರು. ಮೌಲ್ಯದ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ.

ನಂದಿನಿ ಲೇಔಟ್ ಮತ್ತು ಯಶವಂತಪುರ ಪೊಲೀಸರು ಒಟ್ಟು 13 ಕೆ.ಜಿ 700 ಗ್ರಾಂ ತೂಕದ ಹೈಡ್ರೋ ಗಾಂಜಾ ಹಾಗೂ ಎಂಡಿಎಂಎ ಕ್ರಿಸ್ಟಲ್ ಅನ್ನು ಜಪ್ತಿ ಮಾಡಿದ್ದಾರೆ. ನಂದಿನಿ ಲೇಔಟ್ ಪೊಲೀಸರು ಖಚಿತ ಮಾಹಿತಿ ಮೇರೆಗೆ ಕೇರಳ ಮೂಲದ ಇಬ್ಬರು ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ. ಸೌಗೇಶ್ ಮತ್ತು ಅಲ್ತಾಫ್ ಬಂಧಿತ ಆರೋಪಿಗಳಾಗಿದ್ದು, ಇವರಿಂದ 5.75 ಕೋಟಿ ರು. ಮೌಲ್ಯದ 5 ಕೆ.ಜಿ 700 ಗ್ರಾಂ ಹೈಡ್ರೋ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ.

ಆರೋಪಿಗಳು ವಿದೇಶದಿಂದ ಈ ಹೈಡ್ರೋ ಗಾಂಜಾವನ್ನು ತರಿಸಿ ಸ್ಥಳೀಯರಿಗೆ ಮಾರಾಟ ಮಾಡಲು ಯತ್ನಿಸುತ್ತಿದ್ದರು ಎಂದು ಹೇಳಲಾಗಿದೆ. ಕೇರಳದಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದ ಇವರ ಮೇಲೆ ಈ ಹಿಂದೆಯೇ ಅಲ್ಲಿನ ಎನ್‌ಡಿಪಿಎಸ್ ಕಾಯಿದೆಯಡಿ ಪ್ರಕರಣಗಳು ದಾಖಲಾಗಿವೆ ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಸದ್ಯ ನಂದಿನಿ ಲೇಔಟ್ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

9 ಕೋಟಿ ಮೌಲ್ಯದ ಎಂಡಿಎಂಎ ಜಪ್ತಿ: ನಾಲ್ವರ ಸೆರೆ

ಮತ್ತೊಂದು ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಯಶವಂತಪುರ ಪೊಲೀಸರು ಅಂತರರಾಷ್ಟ್ರೀಯ ಮಟ್ಟದ ಡ್ರಗ್ ಜಾಲವನ್ನು ಬೇಧಿಸಿದ್ದಾರೆ. ಮಾದಕ ವಸ್ತುಗಳ ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಗಳಾದ ಸೈಯದ್ ಸುಹೇಲ್, ಮೊಹಮ್ಮದ್ ಸಮೀರ್, ಸಾದಿಕ್ ಪಾಷಾ ಮತ್ತು ಮೊಹಮ್ಮದ್ ಹಕ್ರನ್ನು ಬಂಧಿಸಲಾಗಿದ್ದು, ಈ ನಾಲ್ವರಿಂದ 9 ಕೋಟಿ ರೂಪಾಯಿ ಮೌಲ್ಯದ 8 ಕೆಜಿ ಎಂಡಿಎಂಎ ಸೀಜ್ ಮಾಡಲಾಗಿದೆ. ಆರೋಪಿಗಳು ನೈಜೀರಿಯಾ ಪ್ರಜೆಗಳಿಂದ ಡ್ರಗ್ಸ್ ಖರೀದಿಸಿ ನಗರದಲ್ಲಿ ಸ್ಥಳೀಯರಿಗೆ ಪೂರೈಸುತ್ತಿದ್ದರು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಬಂಧಿತರಿಂದ ಒಂದು ಕಾರು ಹಾಗೂ 5 ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳಲ್ಲಿ ಸೈಯದ್ ಸುಹೇಲ್ ಹೊಸಕೋಟೆ ಠಾಣೆಯ ರೌಡಿಶೀಟರ್ ಆಗಿದ್ದು, ಈ ಹಿಂದೆ ಪ್ರಕರಣವೊಂದರಲ್ಲಿ ಪೊಲೀಸರು ಈತನ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದರು. ಈ ಜಾಲಕ್ಕೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ನೈಜೀರಿಯಾ ಪ್ರಜೆಗಳಿಗೆ ಪೊಲೀಸರು ಬಲೆ ಬೀಸಿದ್ದಾರೆ.

1.30 ಕೋಟಿ ರು. ಮೌಲ್ಯದ ಚಿನ್ನ ಜಪ್ತಿ

ಬೆಂಗಳೂರು: ಬೀಗ ಹಾಕಿದ ಮನೆಗಳನ್ನೇ ಗುರಿಯಾಗಿಸಿ ಕಳ್ಳತನ ಮಾಡುತ್ತಿದ್ದ ಕಳ್ಳನನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪ್ರಕಾಶ್ ಅಲಿಯಾಸ್ ಜಂಗ್ಲಿ ಬಂಧಿತ ಆರೋಪಿ. ಆತನಿಂದ 1 ಕೋಟಿ 30 ಲಕ್ಷ ರು. ಮೌಲ್ಯದ 885 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದ್ದು, ಬರೋಬ್ಬರಿ 18 ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಗಲು ಕಾರಿನಲ್ಲಿ ನಗರದಾದ್ಯಂತ ಸುತ್ತಾಡುತ್ತಿದ್ದ ಆರೋಪಿ, ಬೀಗ ಹಾಕಿರುವ ಮನೆಗಳನ್ನು ಗುರುತಿಸುತ್ತಿದ್ದ. ನಂತರ ರಾತ್ರಿ ವೇಳೆ ಆ ಮನೆಗಳ ಕಿಟಕಿಗಳನ್ನು ಕತ್ತರಿಸಿ, ಒಳನುಗ್ಗಿ ಕಳ್ಳತನ ಮಾಡುತ್ತಿದ್ದ. ಆರೋಪಿಯ ವಿರುದ್ಧ ಬೆಂಗಳೂರಿನ ವಿವಿಧ ಠಾಣೆಗಳಲ್ಲಿ ಒಟ್ಟು 64 ಪ್ರಕರಣಗಳು ದಾಖಲಾಗಿದ್ದವು. ಇಂದಿರಾನಗರ ಠಾಣೆ ಪೊಲೀಸರು ಕಳ್ಳತನ ಪ್ರಕರಣವೊಂದರ ತನಿಖೆ ನಡೆಸಿದಾಗ ಪ್ರಕಾಶ್‌ನ ಬಂಧಿಸಿದ್ದು, ಆತನಿಂದ 8 ಪ್ರಕರಣಗಳಿಗೆ ಸಂಬಂಧಿಸಿದ ಆಭರಣಗಳನ್ನು ವಶಪಡಿಸಿ ಕೊಂಡಿರುವ ಬಗ್ಗೆ ಮಾಹಿತಿ ನೀಡಿದ್ದಾರೆ.

ಕೆಲಸದ ಮನೆಗೆ ಕನ್ನ: ದಂಪತಿ ಸೆರೆ

ಬೆಂಗಳೂರು: ಕೆಲಸ ಕೊಟ್ಟು, ಆಶ್ರಯ ನೀಡಿದ್ದ ಮಾಲಿಕನ ಮನೆಯಲ್ಲೇ ಕಳ್ಳತನ ಮಾಡಿದ್ದ ದಂಪತಿಯನ್ನ ಸಿ.ಕೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ. ಉದ್ಯಮಿ ಹಾಗೂ ಗುತ್ತಿಗೆದಾರ ಮಲ್ಲಿಕಾರ್ಜುನ್ ನಾಯ್ಡು ಎಂಬುವರ ಮನೆಯಲ್ಲಿ ಕೃತ್ಯ ಎಸಗಿದ್ದ ಐಶ್ವರ್ಯಾ (21) ಹಾಗೂ ಮಣಿಕಂಠ (26) ಬಂಧಿತರು. ಆರೋಪಿಗಳಿಂದ 14 ಲಕ್ಷ ರು.ನಗದು, 199 ಗ್ರಾಂ ಚಿನ್ನದ ಆಭರಣಗಳು, 730 ಗ್ರಾಂ ಬೆಳ್ಳಿಯ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಒಂದೂವರೆ ವರ್ಷದ ಪುಟ್ಟ ಮಗುವಿದ್ದ ದಂಪತಿಗೆ ಮಲ್ಲಿಕಾರ್ಜುನ್ ನಾಯ್ಡು ಅವರು 4 ತಿಂಗಳುಗಳ ಹಿಂದೆ ಮನೆಯಲ್ಲಿ ಕೆಲಸ ನೀಡಿ ಆಶ್ರಯ ನೀಡಿದ್ದರು.

ಮಾಲೀಕರ ನಂಬಿಕೆ ಗಳಿಸಿದ್ದ ಆರೋಪಿಗಳು ಹಂತ ಹಂತವಾಗಿ ಮನೆಯಲ್ಲಿದ್ದ ಹಣ ಮತ್ತು ಒಡವೆಗಳನ್ನು ದೋಚುತ್ತಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆ ಹಂತ ಹಂತವಾಗಿ ನಗದು, ಚಿನ್ನಾಭರಣ ದೋಚಿದ್ದರು. ಏ.25ರಂದು ಮನೆಯಲ್ಲಿದ್ದ ಚಿನ್ನದ ಒಡವೆಗಳು ನಾಪತ್ತೆಯಾದಾಗ ಅನುಮಾನಗೊಂಡ ಮಾಲೀಕ ಮಲ್ಲಿಕಾರ್ಜುನ್ ನಾಯ್ಡು ಈ ಬಗ್ಗೆ ಸಿ.ಕೆ ಅಚ್ಚುಕಟ್ಟು ಠಾಣೆಗೆ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ತನಿಖೆ ಕೈಗೊಂಡ ಪೊಲೀಸರು, ಮನೆಗೆಲಸದ ದಂಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸತ್ಯಾಂಶ ಹೊರಬಂದಿತ್ತು. ಪ್ರಸ್ತುತ ಆರೋಪಿಗಳನ್ನು ಬಂಧಿಸಿರುವ ಪೊಲೀಸರು, ಅವರನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

ಕಿಮ್ಸ್ ನರ ವಿಜ್ಞಾನ ಘಟಕಕ್ಕೆ ಚಾಲನೆ

ನ್ಯೂರೋ ಸೈನ್ಸ್ ಘಟಕವನ್ನು ಕುಲಪತಿ ಪ್ರೊ.ಜವಾಹರ್ ದೊರೆಸ್ವಾಮಿ ಉದ್ಘಾಟಿಸಿದರು.

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿಯ ಕಿಮ್ಸ್ ಆಸ್ಪತ್ರೆಯಲ್ಲಿ (ಕೃಷ್ಣ ಇನ್ಸಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್)ಸೆಂಟರ್ ಆಫ್ ಎಕ್ಸಲೆನ್ಸ್ ಇನ್ಸಿಟ್ಯೂಟ್ ಆಫ್ ಅಡ್ವಾನ್ಸ್ಡ ನ್ಯೂರೋಸೈನ್ಸ್ ಘಟಕ ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜವಾಹರ್ ದೊರೆಸ್ವಾಮಿ, ಕಿಮ್ಸ್ ಗ್ರೂಪ್ ಆಫ್ ಹಾಸ್ಪಿಟಲ್ಸ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ಬಿ.ಭಾಸ್ಕರ್ ರಾವ್, ಬೆಂಗಳೂರಿನ ಕಿಮ್ಸ್ ಆಸ್ಪತ್ರೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ನಿತೀಶ್ ಶೆಟ್ಟಿ, ಪ್ರಾದೇಶಿಕ ವೈದ್ಯಕೀಯ ನಿರ್ದೇಶಕ ಡಾ.ಆರ್.ಚಿನ್ನದುರೈ, ಡಾ.ಬಿ.ರವಿ ಮೋಹನ್ ರಾವ್, ಡಾ.ಸುಜಿತ್ ಕುಮಾರ್, ಡಾ.ಎಸ್.ದಿನೇಶ್ ನಾಯಕ್ ಭಾಗವಹಿಸಿದ್ದರು.

ಹೊಸದಾಗಿ ಪ್ರಾರಂಭಿಸಲಾದ ಕೇಂದ್ರವು ಸುಧಾರಿತ ಮೂಲಸೌಕರ್ಯ ಮತ್ತು ಬಹುಶಿಸ್ತೀಯ ಪರಿಣತಿಯನ್ನು ಒಟ್ಟುಗೂಡಿಸುತ್ತದೆ, ಇದರಲ್ಲಿ ನರ ಪುನರ್ವಸತಿ, ನರ ಕ್ಯಾಥ್ ಲ್ಯಾಬ್, ವರ್ಚುವಲ್ ರಿಯಾಲಿಟಿ ನರಶಸ್ತ್ರಚಿಕಿತ್ಸಾ ಪ್ರಯೋಗಾಲಯ ಮತ್ತು ಅತ್ಯಾಧುನಿಕ ನರಶಸ್ತ್ರಚಿಕಿತ್ಸಾ ಆಪರೇಟಿಂಗ್ ಥಿಯೇಟರ್‌ಗಳಂತಹ ಸೌಲಭ್ಯಗಳಿವೆ. ಇನ್ಸಿಟ್ಯೂಟ್ ಆಫ್ ಅಡ್ವಾನ್ಸ್ಡ ನ್ಯೂರೋಸೈನ್ಸಸ್ ಪ್ರಾರಂಭದೊಂದಿಗೆ, ಆಸ್ಪತ್ರೆಗಳು ನಾವೀನ್ಯತೆ, ಪರಿಣತಿ ಮತ್ತು ಸಹಾನುಭೂತಿಯ ಆರೈಕೆಯ ಮೂಲಕ ಹೆಚ್ಚುತ್ತಿರುವ ನರವೈಜ್ಞಾನಿಕ ಕಾಯಿಲೆಗಳನ್ನು ನಿಭಾಯಿಸುವಾಗ ವಿಶ್ವ ದರ್ಜೆಯ ಆರೋಗ್ಯ ಸೌಲಭ್ಯ ನೀಡಲಾಗುತ್ತಿದೆ.

ನಿವೃತ್ತಿ ದಿನಾಂಕದ ಆಧಾರದ ಮೇಲೆ ಪಿಂಚಣಿ ಬದಲಾವಣೆಯೂ ಸಂವಿಧಾನಬಾಹಿರ: ಹೈ

ಬೆಂಗಳೂರು: ಪಿಂಚಣಿದಾರರು ಒಂದು ಸಮಾನ ಗುಂಪಿಗೆ ಸೇರಿದವರಾಗಿದ್ದು, ನಿವೃತ್ತಿಯ ದಿನಾಂಕದ ಆಧಾರದ ಮೇಲೆ ಅವರನ್ನು ಎರಡು ವರ್ಗಗಳಾಗಿ ವಿಂಗಡಿಸುವುದು ಸಂವಿಧಾನದ 14ನೇ ವಿಧಿಯ (ಸಮಾನತೆಯ ಹಕ್ಕು) ಉಲ್ಲಂಘನೆ ಆಗುತ್ತದೆ ಎಂದು ಹೈಕೋರ್ಟ್ ತಿಳಿಸಿದೆ.

2005ರ ಜುಲೈ ಒಂದಕ್ಕಿಂತಲೂ ಮುನ್ನ ನಿವೃತ್ತಿ ಹೊಂದಿದ್ದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ನೌಕರರ ಕುಟುಂಬಗಳಿಗೆ ಪರಿಷ್ಕೃತ ಪಿಂಚಣಿ ಸೌಲಭ್ಯ ಒದಗಿಸುವಂತೆ ಆದೇಶಿಸಿದೆ. ಕೆಪಿಸಿಎಲ್ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ಬಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ತಾರಾ ವಿತಸ್ತ ಗಂಜು ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ. ಅಲ್ಲದೆ, ಪರಿಷ್ಕರಣೆಯಿಂದ ಸುಮಾರು 250 ಕೋಟಿ ರು. ಹೊರೆಯಾಗಲಿದೆ ಎಂಬ ಕೆಪಿಸಿಎಲ್ ವಾದ ತಳ್ಳಿಹಾಕಿರುವ ಪೀಠ, ಏಕ ಸದಸ್ಯ ಪೀಠಕ್ಕೆ ಅರ್ಜಿ ಸಲ್ಲಿಸಿರುವವರು, ಬಾಕಿ ಮೊತ್ತದ ಹಕ್ಕು ಬಿಟ್ಟು ಕೊಟ್ಟಿರುವುದರಿಂದ, ಕೇವಲ 4 ಕೋಟಿ ರು. ವೆಚ್ಚದಲ್ಲಿ ಈ ಸೌಲಭ್ಯ ನೀಡಬಹುದಾಗಿದೆ ಎಂದು ಪೀಠ ಹೇಳಿದೆ. ಡಿ.ಎಸ್.ನಕಾರಾ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪನ್ನು ಉಲ್ಲೇಖಿಸಿದ ನ್ಯಾಯಪೀಠ, ಪಿಂಚಣಿ ಪರಿಷ್ಕರಣೆಯ ಪ್ರಯೋಜನವು ಎಲ್ಲಾ ನಿವೃತ್ತರಿಗೆ ಸಮಾನವಾಗಿ ಸಿಗಬೇಕು ಎಂದು ಸ್ಪಷ್ಟಪಡಿಸಿದೆ. ಆದ್ದರಿಂದ 2005 ಜುಲೈ 1 ಕ್ಕಿಂತ ಮೊದಲು ನಿವೃತ್ತರಾದವರ ಕುಟುಂಬಗಳಿಗೂ ಪರಿಷ್ಕೃತ ಪಿಂಚಣಿ ನೀಡಲು ಸೂಚಿಸಿದೆ. ಆದರೆ, ಬಾಕಿ ಮೊತ್ತವನ್ನು ತೀರ್ಪು ಬಂದ ದಿನಾಂಕದಿಂದ ಪಾವತಿಸಬೇಕು ಮತ್ತು ಮುಂದಿನ 3ತಿಂಗಳ ಒಳಗಾಗಿ ಪ್ರಕ್ರಿಯೆ ಪೂರ್ಣಗೊಳಿಸಲು ಆದೇಶಿಸಿದೆ.

ಪ್ರಕರಣದ ಹಿನ್ನೆಲೆ ಏನು?

ಕೆಪಿಸಿಎಲ್ ಹೊರಡಿಸಿದ್ದ ಆದೇಶದ ಪ್ರಕಾರ, 01.07.2005 ರ ನಂತರದ ನಿವೃತ್ತರಿಗೆ ಮಾತ್ರ ಪರಿಷ್ಕೃತ ಪಿಂಚಣಿ ಸೌಲಭ್ಯ ನೀಡಲಾಗುತ್ತದೆ ಎಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಎಂ.ಎಸ್.ರಾಜೇಶ್ವರಿ (ನಿವೃತ್ತರ ಕುಟುಂಬಸ್ಥರು) ಸೇರಿದಂತೆ ಹಲವು ಕುಟುಂಬ ಪಿಂಚಣಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಏಕ ಸದಸ್ಯ ಪೀಠ, ನಿವೃತ್ತಿ ದಿನಾಂಕವನ್ನು ಆಧರಿಸಿ ಪಿಂಚಣಿ ಬದಲಾವಣೆ ಮಾಡಲು ಅವಕಾಶ ನೀಡಲಾಗುವುದಿಲ್ಲ. ಇದರಿಂದ ತಾರತಮ್ಯ ಮಾಡಿದಂತಾಗಲಿದೆ ಎಂದು ತಿಳಿಸಿ, ಸರಕಾರದ ಸುತ್ತೋಲೆ ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ಕೆಪಿಸಿಎಲ್ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು.

ನಿಂದನೆ ಆರೋಪದಲ್ಲಿ ನೀಡಿದ್ದ ವಿಚ್ಛೇದನ ರದ್ದು ಮಾಡಿದ ಹೈಕೋರ್ಟ್

ಏಡ್ಸ್ ಆರೋಪ ಸಾಬೀತಾಗಲಿ: ವಿಚ್ಛೇದನ ರದ್ದು

ಬೆಂಗಳೂರು: ಪತ್ನಿ ಮತ್ತು ಆಕೆಯ ಕುಟುಂಬದವರು ಎಚ್‌ಐವಿ/ಏಡ್ಸ್‌ನಿಂದ ಬಳಲುತ್ತಿದ್ದೇನೆ ಎಂದು ನಿಂದಿಸಿದ್ದಾರೆ ಎಂಬ ಆಧಾರದಲ್ಲಿ ಪತಿಗೆ ಕೌಟುಂಬಿಕ ನ್ಯಾಯಾಲಯ ಮಂಜೂರು ಮಾಡಿದ್ದ ವಿಚ್ಛೇದನ ಆದೇಶವನ್ನು ಹೈಕೋರ್ಟ್ ಬದಿಗೆ ಸರಿಸಿದ್ದು, ದಾಖಲೆಯಿಲ್ಲದೇ ಅಂಥ ಗಂಭೀರ ಆರೋಪವನ್ನು ಒಪ್ಪಲಾಗದು ಎಂದಿದೆ.

ಪತಿ ಪರವಾಗಿರುವ ವಿಚ್ಛೇದನ ಆದೇಶ ಬದಿಗೆ ಸರಿಸುವಂತೆ ಕೋರಿ ಪತ್ನಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಸೂರಜ್ ಗೋವಿಂ ದರಾಜ್ ಮತ್ತು ಡಾ. ಚಿಲ್ಲಕೂರ್ ಸುಮಲತಾ ಅವರ ವಿಭಾಗೀಯ ಪೀಠ ಪುರಸ್ಕರಿಸಿದ್ದು, ಹೊಸದಾಗಿ ಪ್ರಕರಣವನ್ನು ಪರಿಗಣಿಸುವಂತೆ ವಿಚಾರಣಾಧೀನ ನ್ಯಾಯಾಲಯಕ್ಕೆ ಮರಳಿಸಿದೆ.

ಪತ್ನಿ ಮತ್ತು ಆಕೆಯ ಕುಟುಂಬದವರು ವಿನಾಕಾರಣ ತಾನು ಎಚ್‌ಐವಿ/ಏಡ್ಸ್‌ನಿಂದ ಬಳಲುತ್ತಿದ್ದೇನೆ ಎಂದು ಕೆಟ್ಟದಾಗಿ ನಿಂದಿಸಿದ್ದಾರೆ. ಹೀಗಾಗಿ, ಹಿಂದೂ ವಿವಾಹ ಕಾಯಿದೆ 1955ರ ಅಡಿ ವಿಚ್ಛೇದನ ನೀಡುವಂತೆ ಪತಿ ಕೋರಿದ್ದರು. ಇದನ್ನು ಬೀದರ್‌ನ ಕೌಟುಂಬಿಕ ನ್ಯಾಯಾಲಯವು ಪುರಸ್ಕರಿಸಿತ್ತು. ಈ ಆದೇಶವನ್ನು ಆತನ ಪತ್ನಿ ಪ್ರಶ್ನಿಸಿದ್ದರು. ಎಚ್‌ಐವಿ/ಏಡ್ಸ್ ಆರೋಪವು ಸಾಬೀತಾದಾರೆ ನಿಸ್ಸಂಶಯವಾಗಿ ಅದು ಮಾನಸಿಕ ಕ್ರೌರ್ಯವಾಗುತ್ತದೆ. ಆದರೆ, ಈ ಆರೋಪಕ್ಕೆ ಪೂರಕವಾಗಿ ಯಾವುದೇ ದಾಖಲೆಗಳು ಇಲ್ಲ. ಕೌಟುಂಬಿಕ ನ್ಯಾಯಾಲಯವು, ಪತಿಯ ಹೇಳಿಕೆಗಳನ್ನು ಸ್ವೀಕರಿಸುವ ಮೂಲಕ, ಸಾಕ್ಷ್ಯದ ಮಿತಿಯನ್ನು ಪುರಾವೆಯಿಂದ ಕೇವಲ ಆರೋಪಕ್ಕೆ ಪರಿಣಾಮಕಾರಿಯಾಗಿ ಬದಲಾಯಿಸಿದೆ. ಇದಕ್ಕೆ ಅವಕಾಶವಿಲ್ಲ. ಕ್ರೌರ್ಯ ಸಾಬೀತುಪಡಿಸಲು ಸೂಕ್ತ ಮತ್ತು ಆಸಕ್ತಿದಾಯಕ ದಾಖಲೆಗಳನ್ನು ಪತಿ ಒದಗಿಸಿಲ್ಲ ಎಂದು ಆದೇಶದಲ್ಲಿ ಹೇಳಿದೆ. ಪತಿಯು ಮತ್ತೊಬ್ಬ ಮಹಿಳೆಯ ಜತೆ ಜೀವನ ನಡೆಸುತ್ತಿದ್ದಾಗ ಆತನ ಜತೆ ತಾನು ಬದುಕುವುದಿಲ್ಲ ಎಂದು ಪತ್ನಿ ನಿರ್ಧರಿಸುವುದು ತೊರೆಯುವಿಕೆ ಆಗುವುದಿಲ್ಲ. ಏಕಕಾಲಕ್ಕೆ ಮತ್ತೊಬ್ಬ ಮಹಿಳೆಯ ಜೊತೆ ಸಂಬಂಧ ಹೊಂದಿರುವ ವ್ಯಕ್ತಿಯ ಜೊತೆ ಬದುಕುವಂತೆ ಕಾನೂನು ಅಥವಾ ನ್ಯಾಯಯುತವಾಗಿ ಹೇಳಲಾಗದು ಎಂದು ಹೈಕೋರ್ಟ್ ಹೇಳಿದೆ.

ಮೇ 9ರಂದು ನಡೆಯಬೇಕಿದ್ದ ಪರೀಕ್ಷೆ ರದ್ದು

ಬೆಂಗಳೂರು: ಆರ್‌ಜಿಯುಎಚ್‌ಎಸ್, ಬೆಂಗಳೂರು ಜಲ ಮಂಡಳಿ, ಕೃಷಿ ಮಾರಾಟ ಇಲಾಖೆ ಹಾಗೂ ಕೆಎಸ್‌ಎಸ್‌ಐಡಿಸಿಯ ವಿವಿಧ ಹುದ್ದೆಗಳ ನೇಮಕಾತಿಗೆ ಮೇ9 ಮತ್ತು 10ರಂದು ನಡೆಸಬೇಕಿದ್ದ ಲಿಖಿತ ಪರೀಕ್ಷೆ ರದ್ದುಪಡಿಸಲಾಗಿದೆ. ಪರೀಕ್ಷೆ ನಡೆಸದಿರುವ ಹುದ್ದೆಗಳಿಗೆ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಅಳವಡಿಸಿಕೊಂಡು ಹೊಸದಾಗಿ ಅಧಿಸೂಚನೆ ಹೊರಡಿಸಲು ಏ.4ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿರುವ ಕಾರಣ ಈ ಪರೀಕ್ಷೆ ರದ್ದುಪಡಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದರು. ಆದರೆ ವ್ಯವಸ್ಥಾಪಕರು, ಸಹಾಯಕ ವ್ಯವಸ್ಥಾಪಕರು ಮತ್ತು ಸಹಾಯಕ ಎಂಜಿನಿಯರ್ (ವಿದ್ಯುತ್) ಹುದ್ದೆಗಳಿಗೆ ಏ.26 ಮತ್ತು 27ರಂದು ಪತ್ರಿಕೆ-2ರ (ನಿರ್ದಿಷ್ಟ ಪತ್ರಿಕೆ) ಪರೀಕ್ಷೆ ನಡೆಸಿದ್ದು, ಅಂತಹವರಿಗೆ ಮೇ 9 ಮತ್ತು 10 ರಂದು ಸಾಮಾನ್ಯ ಜ್ಞಾನ ಪತ್ರಿಕೆಯ (ಪತ್ರಿಕೆ-1) ಪರೀಕ್ಷೆ ನಡೆಸಲಾಗುವುದು ಇದಕ್ಕೆ ಪ್ರವೇಶ ಪತ್ರವನ್ನು ಕೆಇಎ ವೆಬ್‌ಸೈಟ್ ನಿಂದ ಡೌನ್ ಲೋಡ್ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಕಿರಿಯ ವಕೀಲೆಗೆ ತರಾಟೆ

ಬೆಂಗಳೂರು: ಗೌನ್ ಧರಿಸದೇ ನ್ಯಾಯಾಲಯದ ಮುಂದೆ ಕಿರಿಯ ವಕೀಲೆಯೊಬ್ಬರನ್ನು ಹೈಕೋರ್ಟ್‌ನ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರು ಮಂಗಳವಾರ ತರಾಟೆಗೆ ತೆಗೆದುಕೊಂಡರು.ತಮ್ಮ ಕಕ್ಷಿದಾರರೊಬ್ಬರಿಗೆ ನಿರೀಕ್ಷಣಾ ಜಾಮೀನು ಕೋರಿರುವ ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸುವಂತೆ ನ್ಯಾ.ಶ್ರೀಶಾನಂದ ಅವರ ಪೀಠದ ಮುಂದೆ ಮೆಮೊ ಸಲ್ಲಿಸಲು ಕಿರಿಯ ವಕೀಲೆ ಮುಂದಾದರು. ಈ ಹಂತದಲ್ಲಿ ಪೀಠವು ಗೌನ್ ಧರಿಸದಿರುವುದನ್ನು ಉಲ್ಲೇಖಿಸಿ ನಿಮ್ಮ ಗೌನ್ ಎಲ್ಲಿ? ಅದೇ ಇಲ್ಲ? ಗೌನ್ ಇಲ್ಲದೇ ನ್ಯಾಯಾಲಯದ ಮುಂದೆ ಬರಲು ನಿಮಗೆ ಎಷ್ಟು ಧೈರ್ಯ? ಎಂದು ಕಿಡಿಕಾರಿತು.

ಮುಂದುವರಿದು ಪೀಠವು ನಿಮ್ಮ ಹಿರಿಯ ವಕೀಲರು ಯಾರು? (ಮೆಮೊ) ಈಸ್ಕೊಂಡು ರಿಜೆಕ್ಟ್ ಮಾಡಿ ಅದನ್ನು. ಏನು ನಿಮ್ಮ ಕತೆ? ಗೌನ್ ಇಲ್ಲದೇ ನ್ಯಾಯಾಲಯದ ಮುಂದೆ ಬರಲು ಎಷ್ಟು ಧೈರ್ಯ ನಿಮಗೆ? ಕೋರ್ಟ್ ಅಂದರೆ ತಮಾಷೆ ಎಂದು ಕೊಂಡಿದ್ದೀರಾ? ಏನು ಕ್ಷಮೆ, ನಿಮ್ಮ ಗೌನ್ ಎಲ್ಲಿ? ಆಫೀಸಿನಲ್ಲೇ ಬಿಟ್ಟು ಬಂದ್ರಾ? ಎಂದು ಕಿಡಿಕಾರಿತು. ಕೊನೆಗೆ ಯಾವ ನೋಂದಣಿಯಾಗಿದ್ದೀರಿ. ಮೂರು-ನಾಲ್ಕು ವರ್ಷವಾಗಿದೆ. ಆದರೂ ಇದೇ ಚೇಷ್ಟೆ. ಅವರ ಹೆಸರು ತೆಗೆದುಕೊಂಡು, ಅವರ ನೋಂದಣಿ ರದ್ದು ಮಾಡಲು ವಕೀಲರ ಪರಿಷತ್‌ಗೆ ಹೇಳಿ ಎಂದು ಕೋರ್ಟ್ ಅಧಿಕಾರಿಯನ್ನು ಕುರಿತು ಹೇಳಿತು. ಕೊನೆಗೆ ವಕೀಲೆಯು ಬೇಷರತ್ ಕ್ಷಮೆ ಕೋರಿದ್ದನ್ನು ಪರಿಗಣಿಸಿ ಪೀಠವು ಅವರ ತುರ್ತು ವಿಚಾರಣೆಗೆ ಕೋರಿದ್ದ ಮೆಮೊವನ್ನು ಆಧರಿಸಿ ಅರ್ಜಿಯ ವಿಚಾರಣೆಯನ್ನು ಮೇ7ಕ್ಕೆ ನಿಗದಿಪಡಿಸಲು ನಿರ್ದೇಶಿಸಿತು.

ಮಳೆ ನೀರು ಕಾಲುವೆ ಕಾಮಗಾರಿ ಆಗಲಿ

ಬೆಂಗಳೂರು: ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ನಡೆಯುತ್ತಿರುವ ಮಳೆ ನೀರು ಕಾಲುವೆಗಳ ಅಭಿವೃದ್ಧಿ ಮತ್ತು ನವೀಕರಣ ಕಾಮಗಾರಿಗಳಿಗೆ ವೇಗ ನೀಡಲು ಆಯುಕ್ತ ಡಿ.ಎಸ್. ರಮೇಶ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ನಗರದಲ್ಲಿ ಮುಂಗಾರು ಮಳೆಯ ಸಂದರ್ಭದಲ್ಲಿ ನೀರು ನಿಲ್ಲುವ ಸಮಸ್ಯೆಗಳನ್ನು ತಡೆಗಟ್ಟುವ ಉದ್ದೇಶದಿಂದ ಅಧಿಕಾರಿಗಳೊಂದಿಗೆ ಸಮನ್ವಯ ಸಭೆ ನಡೆಸಿದ ನಂತರ ಆಯುಕ್ತ ಡಿ.ಎಸ್. ರಮೇಶ್ ಮಾತನಾಡಿ, ಕಾಲುವೆಗಳ ಗಡಿ ಗುರುತಿಸುವಿಕೆ, ಒತ್ತುವರಿ ತೆರವು ಹಾಗೂ ಮುಂಗಾರು ಪೂರ್ವ ಸಿದ್ಧತೆ ಕ್ರಮಗಳನ್ನು ಸಮನ್ವಯದಿಂದ ಜಾರಿಗೊಳಿಸಲು ಸೂಚಿಸಲಾಗಿದೆ. ಕಾಮಗಾರಿಗಳ ಅನುಷ್ಠಾನ, ನಿರ್ವಹಣೆ ಜವಾಬ್ದಾರಿ ಅಧಿಕಾರಿಗಳದ್ದಾಗಿರುತ್ತದೆ. ಕಂದಾಯ ಇಲಾಖೆ ಜತೆ ಸಮನ್ವಯ ಸಾಧಿಸಿ ಕಾಲುವೆಗಳ ಒತ್ತುವರಿ ತೆರವಿಗೆ ಆದ್ಯತೆ ನೀಡಲು ಸೂಚಿಸಲಾಗಿದೆ.

ಪ್ರಕಟಣೆ

14.04.2026 ರಂದು ಲೋನ್ ಖಾತೆ ಸಂಖ್ಯೆ **HLAPMAL00202408** ಕುರಿತು, ಸುರಕ್ಷಿತ ಸಾಲದಾರರಾದ ಅಸೆಟ್ಸ್‌ಕೇರ್ ಮತ್ತು **ರೀಕನ್‌ಸ್ಟ್ರಕ್ಷನ್** ಎಂಟರ್‌ಪ್ರೈಸ್ ಲಿಮಿಟೆಡ್ ಪರವಾಗಿ ಕೆಳಗೆ ಸಹಿ ಹಾಕಿದವರು, **ಚೆಂಬಿಲಿ ವೇಣುಗೋಪಾಲ್ ನಾಯ್ಡು ಅಲಿಯಾಸ್ ಸಿ. ವೇಣುಗೋಪಾಲ್ ನಾಯ್ಡು (ಸಹ-ಸಾಲಗಾರ, ಪತಿ ಹಾಗು ನಿಧನರಾದ ಚೆಂಬಿಲಿ ರಾಜೇಶ್ವರಿ ಅಲಿಯಾಸ್ ಸಿ. ರಾಜೇಶ್ವರಿ ಅವರ ಕಾನೂನು ವಾರಸುದಾರ), ಶ್ರೀನಿವಾಸ ಕ್ಲೀನಿಂಗ್ ಸರ್ವಿಸಸ್ನ ಪ್ರೊಪ್ರೈಟರ್ ಹಾಗೂ ಸಿ. ವಿ. ಭರತ್ (ಸಹ-ಸಾಲಗಾರ, ಪುತ್ರ ಹಾಗು ನಿಧನರಾದ ಚೆಂಬಿಲಿ ರಾಜೇಶ್ವರಿ ಅಲಿಯಾಸ್ ಸಿ. ರಾಜೇಶ್ವರಿ ಅವರ ಕಾನೂನು ವಾರಸುದಾರ)**, (ಸಾಲಗಾರ(ರು)/ಸಹ-ಸಾಲಗಾರ(ರು)) ನೋಟೀಸ್ ನನ್ನು ಅವರಿಗೆ ಜಾರಿ ಮಾಡಿರುತ್ತಾರೆ. **ನಿಧನರಾದ ಚೆಂಬಿಲಿ ರಾಜೇಶ್ವರಿ ಅಲಿಯಾಸ್ ಸಿ. ರಾಜೇಶ್ವರಿ** ಅವರ ಇತರೆ ಕಾನೂನು ವಾರಸುದಾರರ ವಿವರಗಳನ್ನು ಈ ಅಧಿಸೂಚನೆ ಸ್ವೀಕರಿಸಿದ ದಿನಾಂಕದಿಂದ 7 (ಏಳು) ದಿನಗಳೊಳಗೆ ಕೆಳಗೆ ಸಹಿ ಹಾಕಿದವರಿಗೆ ಸಲ್ಲಿಸಲು ಸೂಚಿಸಲಾಗಿತ್ತು. ನೀವು ಸಾಲಗಾರ(ರು) / ಸಹ-ಸಾಲಗಾರ(ರು) ಈವರೆಗೆ ಕಾನೂನು ವಾರಸುದಾರರ ವಿವರಗಳನ್ನು ಸಲ್ಲಿಸದಿರುವುದರಿಂದ, ಮೇಲ್ಕಂಡ ಸಾಲಗಾರ(ರು)/ಸಹ-ಸಾಲಗಾರ(ರು) ಹೊರತುಪಡಿಸಿ **ನಿಧನರಾದ ಚೆಂಬಿಲಿ ರಾಜೇಶ್ವರಿ ಅಲಿಯಾಸ್ ಸಿ. ರಾಜೇಶ್ವರಿ** ಅವರಿಗೆ ಇತರೆ ಕಾನೂನು ವಾರಸುದಾರರು ಇಲ್ಲವೆಂದು ಕೆಳಗೆ ಸಹಿ ಹಾಕಿದವರು ಊಹಿಸುತ್ತಾರೆ.

ಅಸೆಟ್ಸ್‌ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿಮಿಟೆಡ್ ಪರವಾಗಿ
ಎ.ಸಿ.ಆರ್.ಇ 102 ಟ್ರಸ್ಟ್‌ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುವುದು
ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ**

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLAPBAN00145995 1. ಬೂಚಪ್ಪ ಸದಾನಂದ ಅಲಿಯಾಸ್ ಬಿ ಸದಾನಂದ ನಿರ್ದೇಶಕರು, ಶ್ರೀ ರಾಮ್ ಆಸ್ಪತ್ರೆ 2. ಅಭಿಷೇಕ್ ಸದಾನಂದ್ ನಿರ್ದೇಶಕರು, ಶ್ರೀ ರಾಮ್ ಆಸ್ಪತ್ರೆ 3. ಮಂಜುಳಾ ಸದಾನಂದ್ ನಿರ್ದೇಶಕರು, ಶ್ರೀ ರಾಮ್ ಆಸ್ಪತ್ರೆ	ಆಸ್ತಿ ಹೊಂದಿರುವ ಸೈಟ್ ಸಂಖ್ಯೆ. 32, 33 ಮತ್ತು 34 ಮತ್ತು ಖಾತಾ ಸಂಖ್ಯೆ. 34/1ಎ, ಸೈಟ್ ಸಂಖ್ಯೆ. 32, 33, 34, 35, 36, 37 ಮತ್ತು 38 ರಿಂದ ವಿಭಜಿಸಲ್ಪಟ್ಟಿದ್ದು, ಬೂಚಪ್ಪ ಲೇಔಟ್, ಈಜಿಪುರ, ಈಜಿಪುರಂ ಮತ್ತು ವಿವೇಕ್ ನಗರ ಪೋಸ್ಟ್, ಬೆಂಗಳೂರು-560047, ಕರ್ನಾಟಕದಲ್ಲಿ ಸ್ಥಿತವಾಗಿದೆ ಮತ್ತು ಈ ಭೂಮಿಯ ಎಲ್ಲಾ ಭಾಗಗಳು.	30.12.2019	ದಿನಾಂಕ 16.04.2026 ರಂತೆ ರೂ. 5,10,95,901.37/- (ರೂಪಾಯಿ ಐದು ಕೋಟಿ ಹತ್ತು ಲಕ್ಷ ತೊಂಬತ್ತ ಐದು ಸಾವಿರದ ಒಂಬೈನೂರ ಒಂದು ಮತ್ತು ಪೈಸೆ ಮೂವತ್ತ ಏಳು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್‌ಗಾಗಿ
(ಆರ್ಸಿಲ್ ಸಿಪಿಎಸ್-IV-ಟ್ರಸ್ಟಿನ ಟ್ರಸ್ಟಿ)
ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ**

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ ಕನಕಪುರ
ಸಿ.ಮಿಸ್. ಸಂಖ್ಯೆ : 275/2026

ಅರ್ಜಿದಾರರು: 1. ಶ್ರೀಮತಿ.ಮಾದಮ್ಮ ಕೋಂ. ಲೇಟ್. ಮಾದೇಗೌಡ ಉ॥ ಮಾದಯ್ಯ ವಯಸ್ಸು 77 ವರ್ಷ. 2. ಶ್ರೀಮತಿ. ಮಹದೇವಮ್ಮ ಬಿನ್ ಲೇಟ್. ಮಾದೇಗೌಡ ಉ॥ ಮಾದಯ್ಯ ವಯಸ್ಸು 56 ವರ್ಷ, 3. ಶ್ರೀ. ಬಸವಮಾದಯ್ಯ ಬಿನ್ ಲೇಟ್. ಮಾದೇಗೌಡ ಉ॥ ಮಾದಯ್ಯ ವಯಸ್ಸು 52 ವರ್ಷ, 4. ಶ್ರೀಮತಿ. ಉಮಾ ಕೋಂ ಬಸವಮಾದಯ್ಯ ವಯಸ್ಸು 45 ವರ್ಷ, 5. ಶ್ರೀಮತಿ, ವಾಣಿಶ್ರೀ, ಎಸ್.ಬಿ. ಬಿನ್ ಬಸವಮಾದಯ್ಯ ವಯಸ್ಸು 27 ವರ್ಷ, 6. ಶ್ರೀ. ಹೇಮಂತ್ ಕುಮಾರ್ ಎಸ್.ಬಿ. ಬಿನ್ ಬಸವಮಾದಯ್ಯ ವಯಸ್ಸು 26 ವರ್ಷ, 7. ಸಶ್ರೀ. ಕೆಂಚಪ್ಪ ಬಿನ್ ಲೇಟ್. ಮಾದೇಗೌಡ ಉ॥ ಮಾದಯ್ಯ ವಯಸ್ಸು 52 ವರ್ಷ, 8. ಶ್ರೀಮತಿ, ಚಂದ್ರಮ್ಮ ಬಿನ್ ಲೇಟ್. ಮಾದೇಗೌಡ ಉ॥ ಮಾದಯ್ಯ ವಯಸ್ಸು 50 ವರ್ಷ, 1 ರಿಂದ 8ನೇ ಅರ್ಜಿದಾರರ ವಾಸ:- ಸಿದ್ದೇನಹಳ್ಳಿ ಗ್ರಾಮ, ಕೊಟ್ಟಗಾಳು ಅಂಚೆ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ವಿರುದ್ಧ

ಪ್ರತಿ ಅರ್ಜಿದಾರರು: 1. ಮಾನ್ಯ ತಹಸೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣಿ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಪಿಚ್ಚನಕೆರೆ ಸಾವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು,

ಪತ್ರಿಕಾ ಪ್ರಕಟಣೆ

ಈ ಪ್ರಕರಣದ ಮೇಲ್ಕಂಡ ಅರ್ಜಿದಾರರು ತಿಳಿಯಪಡಿಸುವುದೇನೆಂದರೆ, ಮೃತ ಮಾದೇಗೌಡ ಉರುಫ್ ಮಾದಯ್ಯ ಬಿನ್ ಲೇಟ್. ಚನ್ನೇಗೌಡ ರವರು 1ನೇ ಅರ್ಜಿದಾರರ ಗಂಡನಾದ, 2ನೇ, 3ನೇ 7ನೇ, 8ನೇ ಅರ್ಜಿದಾರರ ತಂದೆಯಾದ ಮತ್ತು 4ನೇ ಅರ್ಜಿದಾರರ ಮಾವನಾದ ಹಾಗೂ 5ನೇ ಮತ್ತು 6ನೇ ಅರ್ಜಿದಾರರ ತಾತನಾಗಿರುತ್ತಾರೆ. ಸದರಿ ಮೃತ ಮಾದೇಗೌಡ ಉರುಫ್ ಮಾದಯ್ಯ ಬಿನ್ ಲೇಟ್. ಚನ್ನೇಗೌಡ ರವರು ದಿನಾಂಕ:04-10-1996 ರಂದು ಅರ್ಜಿದಾರರ ವಿಳಾಸವಾದ ಸಿದ್ದೇನಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಈ ವಿಳಾಸದಲ್ಲಿ ಮೃತಪಟ್ಟಿದ್ದು, ಸದರಿ ಮಾದೇಗೌಡ ಉರುಫ್ ಮಾದಯ್ಯ ರವರ ಅಂತ್ಯಸಂಸ್ಕಾರ ಹಾಗೂ ಉತ್ತರಕ್ರಿಯಾದಿಗಳನ್ನು ಅರ್ಜಿದಾರರು ಮತ್ತು ಅವರ ಕುಟುಂಬ ವರ್ಗದವರು, ಸಂಬಂಧಿಕರು, ಹಿತೈಷಿಗಳು ಸ್ನೇಹಿತರ ಸಮ್ಮುಖದಲ್ಲಿ ನೆರವೇರಿಸಿರುತ್ತಾರೆ. ಅರ್ಜಿದಾರರು ಸದರಿ ಮೃತ ಮಾದೇಗೌಡ ಉರುಫ್ ಮಾದಯ್ಯ ರವರ ಮರಣ ಪ್ರಮಾಣ ಪತ್ರವನ್ನು ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತಾರೆ. ಆದ ಕಾರಣ ಈ ಬಗ್ಗೆ ಹಿತಾಸಕ್ತಿ ಉಳ್ಳವರು ಯಾರಾದರೂ ಇದ್ದಲ್ಲಿ ದಿನಾಂಕ 25/06/2026 ರಂದು ಬೆಳಿಗ್ಗೆ ಸರಿಯಾಗಿ 11.00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ಖುದ್ದಾಗಿಯಾಗಲೀ, ಅಥ-'ವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು ತಪ್ಪಿದ್ದಲೀ, ಏಕಪಕ್ಷೀಯವೆಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

ದಿನಾಂಕ: 30/04/2026 ರಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮತ್ತು ಅಪ್ಪಣೆ ಮೇರೆಗೆ
ಶಿರಸ್ತೇದಾರರು, ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ ಕನಕಪುರ
ಅರ್ಜಿದಾರರ ಪರ ವಕೀಲರು
ಗಂಗಮ್ಮ & ಜ್ಯೋತಿ ಹೆಚ್.ಡಿ., ವಕೀಲರು, ರಾಮನಗರ ಟೌನ್.
ಸ್ಥಳ : ಕನಕಪುರ, ದಿನಾಂಕ: 30/04/2026

ರಾಜ್ಯದ ನಾವೀನ್ಯತಾ ಪರಿಸರ ವ್ಯವಸ್ಥೆ ಬಲಪಡಿಸಲು ಬಿಬಿಸಿ-ಎನ್‌ಎಬಿಎಲ್ ಮಹತ್ವದ ಹೆಜ್ಜೆ

ಸ್ಟಾರ್ಟ್‌ಅಪ್ ಸಂಶೋಧನೆಗಳಿಗೆ ಒಪ್ಪಂದ



ಬೆಂಗಳೂರು ಬಯೋ-ಇನ್ನೋವೇಷನ್ ಸೆಂಟರ್, ರಾಷ್ಟ್ರೀಯ ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ಮಾನ್ಯತಾ ಮಂಡಳಿ ಜತೆಗೆ ರಾಜ್ಯ ಸರಕಾರದ ಕಾರ್ಯದರ್ಶಿ ಡಾ.ಎನ್.ಮಂಜುಳಾ, ವ್ಯವಸ್ಥಾಪಕ ನಿರ್ದೇಶಕ ಡಾ. ಮೊಹಮ್ಮದ್ ಆದಿಲ್ ಎ.ಎ., ಸಿಇಒ ಡಾ. ರಮಾನಂದ್ ಶುಕ್ಲಾ ಒಪ್ಪಂದಕ್ಕೆ ಸಹಿ ಹಾಕಿದರು.

ಬೆಂಗಳೂರು: ಕರ್ನಾಟಕದ ನಾವೀನ್ಯತಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿ ಹಾಗೂ ಸ್ಟಾರ್ಟ್‌ಅಪ್‌ಗಳ ಸಂಶೋಧನೆಗಳಿಗೆ ಜಾಗತಿಕ ಮಾನ್ಯತೆ ಒದಗಿಸುವ ಉದ್ದೇಶದಿಂದ ಬೆಂಗಳೂರು ಬಯೋ-ಇನ್ನೋವೇಷನ್ ಸೆಂಟರ್ ಮತ್ತು ರಾಷ್ಟ್ರೀಯ ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ಮಾನ್ಯತಾ ಮಂಡಳಿ ಜತೆಗೆ ಒಪ್ಪಂದ ಮಾಡಿಕೊಳ್ಳಲಾಯಿತು.

ಈ ಕುರಿತು ಕಾರ್ಯದರ್ಶಿ ಡಾ.ಎನ್.ಮಂಜುಳಾ ಮಾತನಾಡಿ, ಜೀವ ವಿಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವನ್ನು ಜಾಗತಿಕ ಹಬ್ ಆಗಿ ಗುರುತಿಸಿಕೊಳ್ಳುವುದಕ್ಕೆ ಈ ಒಪ್ಪಂದ ಬಹಳ ಸಹಕಾರಿಯಾಗಲಿದೆ. ನಾವು ಈಗಾಗಲೇ 512 ಕ್ಕೂ ಹೆಚ್ಚಿನ ನಾವೀನ್ಯತಾ ಪ್ರಾಜೆಕ್ಟ್‌ಗಳಿಗೆ ಬೆಂಬಲ ನೀಡಿದ್ದೇವೆ. ಇದರಲ್ಲಿ 24 ಜಾಗತಿಕ ಸ್ಟಾರ್ಟ್‌ಅಪ್‌ಗಳು ಮತ್ತು 74 ಪೇಟೆಂಟ್‌ಗಳು ಸೇರಿವೆ. ಜೈವಿಕ ತಂತ್ರಜ್ಞಾನದಲ್ಲಿ ಬೆಂಗಳೂರು ಬಯೋ-ಇನ್ನೋವೇಷನ್ ಸೆಂಟರ್ ಅನ್ನು ಜಾಗತಿಕ ನಾವೀನ್ಯತಾ ಕೇಂದ್ರವಾಗಿ ಬಲಪಡಿಸಲು ಈ ಒಪ್ಪಂದ ಹೆಚ್ಚು ಅನುಕೂಲಕರವಾಗಿದೆ ಎಂದರು.ಈ ಒಪ್ಪಂದದ ಅನ್ವಯ, ಬಿಬಿಸಿಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ಟಾರ್ಟ್‌ಅಪ್‌ಗಳು ಎನ್‌ಎಬಿಎಲ್‌ನ ಕಟ್ಟುನಿಟ್ಟಿನ ಮಾನ್ಯತಾ ಪ್ರಕ್ರಿಯೆಗಳನ್ನು ಅತ್ಯಂತ ಸರಳವಾಗಿ ಮತ್ತು ತ್ವರಿತವಾಗಿ ಪಡೆಯಲು ಸಾಧ್ಯವಾಗುತ್ತದೆ. ಇದರಿಂದಾಗಿ ಹೊಸ ಸಂಶೋಧನೆಗಳು ಹಾಗೂ ಉತ್ಪನ್ನಗಳ ದೃಢೀಕರಣಕ್ಕೆ ತಗಲುವ ಸಮಯ ಹಾಗೂ ಸಂಕೀರ್ಣತೆ ಗಣನೀಯವಾಗಿ ಕಡಿಮೆಯಾಗಲಿದೆ. ಜತೆಗೆ, ನಮ್ಮ ಜೈವಿಕ ನಾವೀನ್ಯತೆಗಳನ್ನು ಜಾಗತಿಕ ಮಾರುಕಟ್ಟೆಗೆ ಕೊಂಡೊಯ್ಯಲು ಮತ್ತು ಕ್ಲಿನಿಕಲ್ ಪ್ರಯೋಗಗಳನ್ನು ಬೆಂಬಲಿಸಲು ಆಸ್ಟ್ರೇಲಿಯಾದ ಮೆಲ್ಬರ್ನ್‌ನಲ್ಲಿರುವ ಲಾ ಟ್ರೋಬೆ ವಿ.ವಿ ಯಲ್ಲಿ ಬಿಬಿಸಿ ಕಚೇರಿಯನ್ನು ತೆರೆಯುವ ಕಾರ್ಯ ಶ್ಲಾಘನೀಯ ಸಾಧನೆ ಎಂದರು.

ಜಾಗತಿಕ ಮಾರುಕಟ್ಟೆ ಮತ್ತು ಹೂಡಿಕೆಗೆ ಮುಕ್ತ ಅವಕಾಶ ಕಲ್ಪಿಸುವುದಕ್ಕೆ ಈ ರೀತಿಯ ಒಪ್ಪಂದದ ಅವಶ್ಯಕತೆ ಇತ್ತು. ಇದು ಜಾಗತಿಕ ಮಾರುಕಟ್ಟೆ ಪ್ರವೇಶಿಸಲು ಮತ್ತು ಗ್ರಾಹಕರಲ್ಲಿ ನಂಬಿಕೆ ಸೃಷ್ಟಿಸಲು ಸಹಕಾರಿಯಾಗಲಿದೆ.

-**ಡಾ.ರಮಾನಂದ್ ಎನ್.** ಶುಕ್ಲಾ, ಎನ್‌ಎಬಿಎಲ್ ಸಿಇಒ

ಸಮಾಚಾರ ಸಣ್ಣದಲ್ಲ

ಹಿರಿಯರಿಗೆ ಗೌರವಿಸಿ

ಬೆಂಗಳೂರು: ಭಾರತದಲ್ಲಿ ಹಿರಿಯ ನಾಗರಿಕರು ಒಂದು ಬದಲಾವಣೆಯ ಹಂತದಲ್ಲಿದ್ದಾರೆ, ಮೂಲ ಸೌಕರ್ಯವನ್ನು ಮೀರಿ ಸಮಗ್ರ ಜೀವನಶೈಲಿಯ ಅನುಭವವನ್ನು ನೀಡುವ ಸಮುದಾಯಗಳಿಗೆ ಬೇಡಿಕೆ ಹೆಚ್ಚುತ್ತಿದೆ ಎಂದು ಲೈಫ್ ಬ್ರಿಡ್ಜ್ ಗ್ರೂಪ್‌ನ ಸಹ-ಸಂಸ್ಥಾಪಕ, ನಿರ್ದೇಶಕ ಜಿ. ರಾಜ ಗೋಪಾಲ್ ತಿಳಿಸಿದರು. ಕೊಲಂಬಿಯಾ ಪೆಸಿಫಿಕ್ ನ ಸೆರೇನ್ ಕಮ್ಯುನಿಟೀಸ್, ಎಂಬಸ್ಸಿ ಗ್ರೂಪ್‌ನ ಸಹಯೋಗದಲ್ಲಿ ನಡೆದ ಹಿರಿಯ ನಾಗರಿಕರ ಸಮುದಾಯವಾದ ಸೆರೇನ್ ಅಮರ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸೆರೇನ್ ಅಮರ'ವು ಹಿರಿಯ ನಾಗರಿಕರಿಗೆ ಬೆಂಬಲ ವಾಗಿ ನಿಲ್ಲಲಿದೆ. ಜೀವನವನ್ನು ಸಕ್ರಿಯಗೊಳಿಸಲು ಸೇವೆಗಳು ಮತ್ತು ಸಮುದಾಯವನ್ನು ಒಟ್ಟುಗೂಡಿಸುತ್ತದೆ. ಈ ವರ್ಗವು ಬೆಳೆದಂತೆ, ದೀರ್ಘಕಾಲೀನ ಯೋಗಕ್ಷೇಮ ಮತ್ತು ಸಾಮಾಜಿಕ ಸಂಪರ್ಕವನ್ನು ಬೆಂಬಲಿಸುವ ಪರಿಸರ ವ್ಯವಸ್ಥೆ ಗಳನ್ನು ರಚಿಸುವತ್ತ ಗಮನ ಹೆಚ್ಚುತ್ತದೆ ಎಂದರು. ಲೈಫ್ ಬ್ರಿಡ್ಜ್ ಗ್ರೂಪ್‌ನ ಸಹ-ಸಂಸ್ಥಾಪಕಿ ಮತ್ತು ಮುಖ್ಯ ಕಾರ್ಯಾಚರಣಾ ಅಧಿಕಾರಿ ಡಾ. ರೀಮಾ ನಾಡಿಗ್ ಮಾತನಾಡಿದರು.

ಬಿದ್ದ ಮರ ತೆರವುಗೊಳಿಸಿ

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಧರೆಗೆ ಉರುಳಿರುವ ಮರಗಳನ್ನು ಸಿಬ್ಬಂದಿಗಳು ತೆರವುಗೊಳಿಸಿದರು.

ಬೆಂಗಳೂರು: ಬೆಂಗಳೂರು ನಗರದಲ್ಲಿ ಕಳೆದ ವಾರ ಏ.29 ರಂದು ಆಲಿಕಲ್ಲು ಸಹಿತ ಸುರಿದ ಭಾರಿ ಮಳೆಗೆ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮರಗಳು, ರೆಂಬೆ-ಕೊಂಬೆಗಳು ಬಿದ್ದು ಸಾರ್ವಜನಿಕ ಸಂಚಾರಕ್ಕೆ ಸಾಕಷ್ಟು ಅಡಚಣೆಯಾಗಿದ್ದು, ಕೇಂದ್ರ ನಗರ ಪಾಲಿಕೆಯ ಅರಣ್ಯ ಘಟಕದ ವತಿಯಿಂದ ಮಳೆ-ಗಾಳಿಗೆ ಬಿದ್ದ ಮರ ಹಾಗೂ ರೆಂಬೆ ತೆರವುಗೊಳಿಸುವ ಕಾರ್ಯ ಅತ್ಯಂತ ಚುರುಕಿನಿಂತ ನಡೆಸಲಾಗುತ್ತಿದೆ ಎಂದು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದರು. ಈ ಕುರಿತು ಮಾತನಾಡಿದ ಅವರು, ಮಳೆ-ಗಾಳಿಗೆ ಸಾಕಷ್ಟು ಮರಗಳು ಹಾಗೂ ರೆಂಬೆ ಕೊಂಬೆಗಳು ಧರೆಗೆ ಉರುಳಿರುವುದರಿಂದ ಸಾರ್ವಜನಿಕ ಸಂಚಾರಕ್ಕೆ ಅಡಚಣೆಯಾಗಿದ್ದು, ಪ್ರತಿದಿನ ತೆರವು ಕಾರ್ಯ ನಡೆಸುತ್ತಿದ್ದು, ತೆರವುಗೊಳಿಸುವ ಕಾರ್ಯ ಬಹುತೇಕ ಮುಕ್ತಾಯದ ಹಂತಕ್ಕೆ ಬಂದಿದ್ದು, ತೆರವುಗೊಳಿಸಲು ಬಾಕಿ ಇರುವ ರಸ್ತೆಗಳ ಮೇಲಿನ ಹಾಗೂ ಪಾದಚಾರಿ ಮಾರ್ಗದಲ್ಲಿರುವ ಮರ ಹಾಗೂ ರೆಂಬೆಕೊಂಬೆಗಳನ್ನು ಕೂಡಲೇ ತೆರವುಗೊಳಿಸಿ ಎಂದು ಅರಣ್ಯ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತುರ್ತು ಕ್ರಮಕ್ಕೆ ಸೂಚನೆ

ಬೆಂಗಳೂರು: ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆಗಾಲದ ಮುನ್ನೆಚ್ಚರಿಕಾ ಕ್ರಮಗಳನ್ನು ವೇಗಗೊಳಿಸುವ ನಿಟ್ಟಿನಲ್ಲಿ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ವಿವಿಧ ಪ್ರದೇಶಗಳಲ್ಲಿ ಸ್ಥಳ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ತುರ್ತು ಕ್ರಮಗಳ ಸೂಚನೆ ನೀಡಿದರು. ನಗರದ ಪುಟ್ಟೇನಹಳ್ಳಿ ಕೆರೆ ರಸ್ತೆ, ಕೋಗಿಲು ಸರ್ಕಲ್, ಬ್ಯಾಟರಾಯನಪುರ, ಟಾಟಾ ನಗರ, ಹೆಬ್ಬಾಳ, ನಾಗವಾರ ಸೇರಿದಂತೆ ಹಲವೆಡೆ ಭೇಟಿ ನೀಡಿ ಮಳೆ ನೀರು ನಿಲುವು, ಚರಂಡಿ ಅಡಚಣೆ ಹಾಗೂ ರಸ್ತೆ ಕಾಮಗಾರಿಗಳ ಪ್ರಗತಿಯನ್ನು ಆಯುಕ್ತರು ಮಂಗಳವಾರ ಪರಿಶೀಲಿಸಿದರು. ಸಮಸ್ಯೆ ಕಂಡುಬಂದ ಸ್ಥಳಗಳಲ್ಲಿ ತಕ್ಷಣ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದರು. ಪುಟ್ಟೇನಹಳ್ಳಿ ಕೆರೆ ರಸ್ತೆಯಲ್ಲಿ ನೀರು ನಿಲುವು ಮತ್ತು ಟ್ರಾಫಿಕ್ ಸಮಸ್ಯೆ ಗಂಭೀರವಾಗಿದೆ ಜತೆಗೆ ಚರಂಡಿ ವ್ಯವಸ್ಥೆ ಬಲಪಡಿಸಲು ಸೂಚಿಸಿದರು. ಕೋಗಿಲು ಸರ್ಕಲ್‌ನಲ್ಲಿ ಚರಂಡಿ ಡಿಸಿಲ್ಟಿಂಗ್ ಕಾರ್ಯ ತುರ್ತಾಗಿ ಕೈಗೊಳ್ಳುವಂತೆ ಹಾಗೂ ಅತಿಕ್ರಮಣ ತೆರವುಗೊಳಿಸಲು ಆದೇಶಿಸಿದರು. ಬ್ಯಾಟರಾಯನಪುರದ ಮದರ್ ಹುಡ್ ಆಸ್ಪತ್ರೆ ಸಮೀಪ ಮೆಟ್ರೋ ಕಾಮಗಾರಿಯಿಂದ ಉಂಟಾಗಿರುವ ಚರಂಡಿ ಅಡಚಣೆ ತೆರವುಗೊಳಿಸಲು ಬಿಎಂಆರ್‌ಸಿಎಲ್ ಸೂಚನೆ ನೀಡಿದರೆ, ಹೆಬ್ಬಾಳದಲ್ಲಿ ನೀರು ಸರಾಗ ಹರಿವಿಗೆ 600 ಮಿಮೀ ಪೈಪ್ ಅಳವಡಿಸಲು ನಿರ್ದೇಶನ ನೀಡಿದರು. ಟಾಟಾ ನಗರದಲ್ಲಿ ಚರಂಡಿ ಅಗಲಿಕೆ ಹೆಚ್ಚಿಸುವುದು, ಪಾರ್ಸೆಲ್ ಬೇ ಅಂಡರ್‌ಪಾಸ್‌ನಲ್ಲಿ ವಾರದೊಳಗೆ ಡಿಸಿಲ್ಟಿಂಗ್ ಪೂರ್ಣಗೊಳಿಸುವುದು ಹಾಗೂ ವೀರಣ್ಣಪಾಳ್ಯ, ನಾಗವಾರ ಜಂಕ್ಷನ್‌ಗಳಲ್ಲಿ ಚರಂಡಿ ಮತ್ತು ರಸ್ತೆ ಕಾಮಗಾರಿಗಳನ್ನು ವೇಗಗೊಳಿಸುವಂತೆ ಸೂಚಿಸಿದರು.

ಕಬ್ಬನ್ ಪಾರ್ಕ್‌ನಲ್ಲಿ 8ರಿಂದ ಮಾವು ಮೇಳ

ಮೇ 17ರವರೆಗೆ ಮಾವು, ಹಲಸು ಪ್ರದರ್ಶನ | 60ಕ್ಕೂ ಹೆಚ್ಚು ಮಳಿಗೆಗಳು ಸ್ಥಾಪನೆ: ಡಾ.ಸಿ.ಬಿ.ಮುದ್ದುಗಂಗಾಧರ

ಬೆಂಗಳೂರು: ತೋಟಗಾರಿಕೆ ಇಲಾಖೆ ಮತ್ತು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ವತಿಯಿಂದ ಮೇ8 ರಿಂದ 17ವರೆಗೆ ನಗರದ ಕಬ್ಬನ್ ಉದ್ಯಾನವನದಲ್ಲಿ 2026 ನೇ ಸಾಲಿನ ಮಾವು ಮತ್ತು ಹಲಸು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ.ಬಿ.ಸಿ. ಮುದ್ದುಗಂಗಾಧರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೇಸಿಗೆ ಹಂಗಾಮಿನ ವಿಶೇಷವಾಗಿರುವ ಈ ಮೇಳದಲ್ಲಿ ಗ್ರಾಹಕರಿಗೆ ಕಾರ್ಬೈಡ್ ಮುಕ್ತ, ಸಹಜವಾಗಿ ಮಾಗಿದ ಮಾವು ಹಾಗೂ ಹಲಸು ಹಣ್ಣುಗಳನ್ನು ರೈತರಿಂದ ನೇರವಾಗಿ ಖರೀದಿಸುವ ಅವಕಾಶ ಕಲ್ಪಿಸಲಾಗಿದೆ. ರೈತರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಬೆಳೆಸುವ ಮೂಲಕ ಬೆಳೆಗಾರರಿಗೆ ಯೋಗ್ಯ ಬೆಲೆ ಮತ್ತು ಗ್ರಾಹಕರಿಗೆ ತಾಜಾ, ರುಚಿಕರ ಹಣ್ಣುಗಳು ಸಮರ್ಪಕ ದರದಲ್ಲಿ ದೊರೆಯುವಂತೆ ವ್ಯವಸ್ಥೆ ಮಾಡುವುದು ಈ ಮೇಳದ ಉದ್ದೇಶವಾಗಿದೆ ಎಂದರು.

ಮೇಳದಲ್ಲಿ ಬಾದಾಮಿ, ಮಲ್ಲಿಕಾ, ಸೆಂದೂರಾ, ರಸಪೂರಿ, ಸೇರಿದಂತೆ ಹಲವು ಮಾವಿನ ತಳಿಗಳು ಹಾಗೂ ರುದ್ರಾಕ್ಷಿ, ಶಿವರಾತ್ರಿ, ಏಕಾದಶಿ, ತೂಬಗೆರೆ ಸೇರಿದಂತೆ ಹಲಸಿನ ತಳಿಗಳು ಲಭ್ಯವಿರಲಿವೆ. ಜಿಐ ಮಾನ್ಯತೆ ಪಡೆದ ಕರಿ ಇಶಾಡ್ ಮಾವು ಕೂಡ ಮಾರಾಟಕ್ಕೆ ಇರಲಿದೆ. ರಾಮನಗರ, ಮಂಡ್ಯ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ ಬೆಳೆಗಾರರು ಮೇಳದಲ್ಲಿ ಭಾಗವಹಿಸುತ್ತಿದ್ದು, ಒಟ್ಟು 50 ಮಾವು ಮಳಿಗೆಗಳು ಮತ್ತು 7 ಹಲಸು ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ. ಮೇಳದಲ್ಲಿ ವಿವಿಧ ತಳಿಗಳ ಹಣ್ಣುಗಳನ್ನು ವೀಕ್ಷಿಸುವ ಹಾಗೂ ಸವಿಯುವ ಅವಕಾಶವೂ ಕಲ್ಪಿಸಲಾಗಿದೆ.

ಮಾವು ಹಂಗಾಮಿಗೆ ಪೂರಕವಾಗಿ ನಿಗಮವು ಹಲವು ಕ್ರಮಗಳನ್ನು ಕೈಗೊಂಡಿದೆ. ಮಾಡಿಕೆರೆ ಮಾವು ಅಭಿವೃದ್ಧಿ ಕೇಂದ್ರದ ಪ್ಯಾಕ್‌ಹೌಸ್ ಮೂಲಕ ಈ ವರ್ಷ 11 ಟನ್ ಮಾವು ಹಣ್ಣನ್ನು ಸಂಸ್ಕರಿಸಿ ಅಮೆರಿಕಾ, ಜರ್ಮನಿ ಮತ್ತು ಯುಕೆಗೆ ರಫ್ತು ಮಾಡಲಾಗಿದೆ. ಜತೆಗೆ ಮಾವು ಸಂಸ್ಕರಣೆ ಕುರಿತು ಮ್ಯಾಂಗೋ ಪಲ್ಪ್, ಮ್ಯಾಂಗೋ ಬಾರ್, ಪಿಕಲ್ ತಯಾರಿಕೆ ತರಬೇತಿಗಳು ನಡೆಯುತ್ತಿದ್ದು, ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಬೈರಾಪಟ್ಟಣದಲ್ಲಿ ಹೊಸ ಪ್ಯಾಕ್‌ಹೌಸ್ ಘಟಕವನ್ನು ಪ್ರಾರಂಭಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ.ಬಿ.ಸಿ. ಮುದ್ದುಗಂಗಾಧರ ಮತ್ತು ಎಂ.ಡಿ. ವೇದ ಮೂರ್ತಿ ಉಪಸ್ಥಿತರಿದ್ದರು.

4 ದಿಕ್ಕುಗಳಲ್ಲಿ ಮಾವು ಮೇಳ ಆಯೋಜನಗೆ ತಯಾರಿ

ರಾಜ್ಯದ ಮಾವು ಬೆಳೆಗಾರರಿಗೆ ಹೆಚ್ಚಿನ ಮಾರುಕಟ್ಟೆ ಅವಕಾಶ ಕಲ್ಪಿಸುವ ಉದ್ದೇಶದಿಂದ ನಗರವನ್ನು ಉತ್ತರ, ದಕ್ಷಿಣ, ಪೂರ್ವ ಹಾಗೂ ಪಶ್ಚಿಮ ಭಾಗಗಳಾಗಿ ವಿಭಜಿಸಿ ಮಾವಿನ ಮೇಳಗಳನ್ನು ಆಯೋಜಿಸಲು ಪ್ಲಾನ್ ರೂಪಿಸಲಾಗಿದೆ. ಉತ್ತರ ಭಾಗದಲ್ಲಿ ಸಹಕಾರನಗರದ ಗಣೇಶ್ ಮೈದಾನದಲ್ಲಿ ಮೇಳ ನಡೆಸಲು ಜಂಟಿ ಆಯುಕ್ತರಿಂದ ಅನುಮತಿ ಪತ್ರ ದೊರೆತಿದ್ದು, ದಿನಾಂಕ ನಿಗದಿ ಪ್ರಕ್ರಿಯೆ ನಡೆಯುತ್ತಿದೆ. ಪೂರ್ವ ಭಾಗದಲ್ಲಿ ವೈಟ್‌ಫೀಲ್ಡ್ ಮೈದಾನದಲ್ಲಿ, ದಕ್ಷಿಣ ಭಾಗದಲ್ಲಿ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ, ಪಶ್ಚಿಮ ಭಾಗದಲ್ಲಿ ರಾಜಾಜಿನಗರದಲ್ಲಿ ಸ್ಥಳದಅಭಾವ ಮತ್ತು ನ್ಯಾಯಾಲಯದ ಮಾರ್ಗಸೂಚಿಗಳ ಹಿನ್ನೆಲೆ ತೊಂದರೆ ಎದುರಾಗಿದ್ದು, ಪರ್ಯಾಯವಾಗಿ ಎಲೆಕ್ಟ್ರಾನಿಕ್ ಸಿಟಿ ಪ್ರದೇಶದಲ್ಲಿ ಖಾಸಗಿ ಶಾಲಾ ಮೈದಾನದಲ್ಲಿ ಆಯೋಜಿಸುವ ಗುರಿ ಹೊಂದಿದೆ ಎಂದು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಮುದ್ದುಗಂಗಾಧರ್ ತಿಳಿಸಿದರು.

> ಈ ಬಾರಿ ಹವಾಮಾನ ವೈಪರೀತ್ಯದಿಂದ ಮಾವಿನ ಇಳುವರಿ ಭಾರೀ ಪ್ರಮಾಣದಲ್ಲಿ ಕುಸಿದಿದೆ. ಅಕಾಲಿಕ ಮಳೆ, ತಾಪಮಾನ ಏರಿಕೆ, ಫಂಗಸ್ ಹಾಗೂ ಕೀಟ ದಾಳಿಯಿಂದ ಶೇ. 60ರಿಂದ 80 ತನಕ ನಷ್ಟ ಉಂಟಾಗಿದೆ. ಈ ಹಿನ್ನೆಲೆ ಅಧಿಕಾರಿಗಳು, ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ಒದಗಿಸಲು ಕ್ರಮ ಕೈಗೊಂಡಿದ್ದಾರೆ. ಶೇ.33ಕ್ಕಿಂತ ಹೆಚ್ಚು ನಷ್ಟವಾದ ಬೆಳೆಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಮೂಲಕ ನೆರವು ನೀಡುವಂತೆ ಸೂಚಿಸಲಾಗಿದೆ.
>
> - ಮುದ್ದುಗಂಗಾಧರ ಅಧ್ಯಕ್ಷ, ರಾಜ್ಯ ಮಾವು ಅಭಿವೃದ್ಧಿ ಮಂಡಳಿ



ಬಾಗಲಕೋಟ ವಿಧಾನಸಭೆ ಕ್ಷೇತ್ರದ ಉಪಚುನಾವಣೆಯಲ್ಲಿ ಆಯ್ಕೆಯಾದ ಉಮೇಶ್ ಮೇಟಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಬೆಂಗಳೂರಿನಲ್ಲಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಮಲ್ಲಿಕಾರ್ಜುನ ಮೇಟಿ ಹಾಗೂ ಬಾಗಲಕೋಟೆಯ ಯುವ ಮುಖಂಡ ಹೊಳಬಸು ಶೆಟ್ಟರ್ ಹಾಜರಿದ್ದರು.

ಗೊಂದಲಕ್ಕೆ ಬ್ರೇಕ್ ಹಾಕಬೇಕಿದೆ: ಸತೀಶ್

ಬೆಂಗಳೂರು: ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರನ್ನು ದೆಹಲಿಗೆ ಕರೆಯಲೇಬೇಕು. ಗೊಂದಲಕ್ಕೆ ಬ್ರೇಕ್ ಹಾಕಲೇಬೇಕು ಎಂದು ಸಚಿವ ಸತೀಶ್ ಜಾರಕಿಹೊಳಿ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಹೇಳಿದ್ದಾರೆ. ಎಷ್ಟು ದಿವಸ ಅಂತ ಹೀಗೆ ಬಿಡ್ತೀರ. ಬೇಗ ಆಗಬೇಕು ಅಂತ ಮಾಡಬೇಕಲ್ಲ. ಹೈಕಮಾಂಡ್ ನಾಯಕರು ಕರೆಯಬಹುದು. ಎಲ್ಲರ ಅಭಿಪ್ರಾಯವೂ ಅದೇ ಇದೆ. ಏನಾದರೂ ತೀರ್ಮಾನ ಮಾಡಲಿ ಅನ್ನೋದು. ಮೊದಲು ಗೊಂದಲಗಳನ್ನು ಸರಿಪಡಿಸಬೇಕು ಎಂದರು.

ನಾವು ಅಹಿಂದ ವೋಟು ವಾಪಸ್ ತಂದಿದ್ದೇವೆ. ನಮ್ಮ ಟೀಂ ಕೂಡ ಸಾಕಷ್ಟು ವರ್ಕ್ ಮಾಡಿದೆ. ಶಿಗ್ಗಾಂವಿಯಲ್ಲೂ ನಾವು ಅದೇ ತಂತ್ರ ಮಾಡಿದ್ದೆವು. ಅಲ್ಲಿಯೂ ಅಹಿಂದ ಮತಗಳೇ ಕೈಹಿಡಿದಿವೆ. ಕಾಂಗ್ರೆಸ್ ಗೆಲ್ಲೋಕೆ ಆ ಮತಗಳೇ ಮುಖ್ಯ. ಅವನ್ನು ನಾವು ಕಾಪಾಡಿಕೊಂಡು ಹೋಗಬೇಕು. 2028ರಲ್ಲಿ ಅಹಿಂದ ಒಗ್ಗೂಡಿಸುವ ಸವಾಲಿದೆ. ಎರಡು ವರ್ಷ ನಮಗೆ ಇದೆ. ಅಲ್ಲಿಯವರೆಗೆ ನಾವು ಒಟ್ಟುಗೂಡಿಸ್ತೇವೆ. ಜಿ.ಪಂ, ತಾ.ಪಂ ಚುನಾವಣೆಗಳು ಬರುತ್ತವೆ. ಅಲ್ಲಿ ಬೇರೆ ರೀತಿ ಮಾಡಬೇಕು. ನಾವೂ ಅಹಿಂದ ತಾನೇ. ಲೋಕಲ್‌ನಲ್ಲಿ ಇದು ವರ್ಕೌಟ್ ಆಗಲ್ಲ ಎಂದರು.

ದಾವಣಗೆರೆಯಲ್ಲಿ ಅಲ್ಪಸಂಖ್ಯಾತ ವೋಟು ಮೈನಸ್ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಕೈವಾಡದಿಂದ ಆಗಿದ್ಯೋ, ಲೋಕಲ್ ಕ್ಯಾಂಡಿಡೇಟ್ ಇರಲಿಲ್ವೋ? ಅದರ ಬಗ್ಗೆ ಹೇಳೋಕೆ ಆಗಲ್ಲ. ಲೋಕಲ್, ಒಳ ಹೊರಗು ಅಂತ ಪ್ರಶ್ನೆ ಬರಲ್ಲ. ಅಲ್ಲಿ ಸರಿಪಡಿಸುವ ಕೆಲಸ ಆಗಬೇಕು. ಚುನಾವಣೆಗೆ ಎರಡು ವರ್ಷ ಇದೆ, ಅಷ್ಟರಲ್ಲಿ ಸರಿಪಡಿಸಬೇಕು. ದಾವಣಗೆರೆ ಸೀಮಿತವಾಗಿ ನೋಡೋದು ಬೇಡ. ಇಡೀ ರಾಜ್ಯವನ್ನು ನೋಡಬೇಕಿದೆ. ಇನ್ನೂ ಸಮಯವಿದೆ. ಸಿಎಂ, ಡಿಸಿಎಂ ಎಲ್ಲರನ್ನೂ ಕರೆಸಿ ಮಾತನಾಡ್ತಾರೆ ಎಂದರು.

ಗ್ರೇಟಿಂಗ್‌ಗಳ ಸ್ವಚ್ಛತೆ ಖಚಿತಪಡಿಸಿಕೊಳ್ಳಿ: ಮಹೇಶ್ವರ ರಾವ್

ಬೆಂಗಳೂರು: ಮಾನ್ಸೂನ್ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿನ ಮಳೆ ನೀರು ನಿರ್ವಹಣೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದರು.

ಈ ಕುರಿತು ಮಾತನಾಡಿದ ಅವರು, ಎಲ್ಲಾ ನಗರ ಪಾಲಿಕೆ ಅಧಿಕಾರಿಗಳಿಗೆ ಆರ್ಟೀರಿಯಲ್ ಹಾಗೂ ಸಬ್-ಆರ್ಟೀರಿಯಲ್ ರಸ್ತೆಗಳಲ್ಲಿ ಚರಂಡಿ, ಶೋಲ್ಡರ್ ಡ್ರೈನ್ ಮತ್ತು ಗ್ರೇಟಿಂಗ್‌ಗಳ ಸ್ವಚ್ಛತೆ ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇತ್ತೀಚೆಗೆ ಪೂರ್ವ ಮಾನ್ಸೂನ್ ಮಳೆಯಿಂದ ನಗರದ ಹಲವೆಡೆ ನೀರು ನಿಂತು ರಸ್ತೆ ಸಂಚಾರಕ್ಕೆ ಅಡಚಣೆ ಉಂಟಾದ ಘಟನೆಗಳು ವರದಿಯಾಗಿವೆ. ಕೆಲವು ಪ್ರದೇಶಗಳಲ್ಲಿ ಮನೆಗಳ ಬೇಸ್‌ಮೆಂಟ್‌ಗಳಿಗೆ ನೀರು ನುಗ್ಗಿದ ಹಿನ್ನೆಲೆಯಲ್ಲಿ ಸಾರ್ವಜನಿಕರಿಂದ ಕಂಟ್ರೋಲ್ ರೂಂಗಳಿಗೆ ದೂರುಗಳು ಹೆಚ್ಚಾಗಿವೆ. ಈ ಹಿನ್ನೆಲೆ ಮುನ್ನೆಚ್ಚರಿಕಾ ಕ್ರಮವಾಗಿ ಚರಂಡಿಗಳಲ್ಲಿ ಹೂಳು ತೆರವುಗೊಳಿಸುವುದು ಅತ್ಯಗತ್ಯವಾಗಿದೆ. ಪ್ರಾಧಿಕಾರ ನೀಡಿರುವ ಸೂಚನೆ ಪ್ರಕಾರ, ಪ್ರತಿ ಒಂದು ಕಿ.ಮೀ ರಸ್ತೆಯಲ್ಲಿ ಕನಿಷ್ಠ 10 ಕಡೆ ಡ್ರೈನ್ ಸ್ಲಾಬ್ ಅಥವಾ ಗ್ರೇಟಿಂಗ್ ತೆರೆಯಿಸಿ ನೀರು ಸರಾಗವಾಗಿ ಹರಿಯುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು. ಚರಂಡಿಗಳು ರಾಜಕಾಲುವೆಗಳಿಗೆ ಸರಿಯಾಗಿ ಸಂಪರ್ಕ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ ಯಾವುದೇ ಅಡೆತಡೆಗಳಿದ್ದರೆ ತಕ್ಷಣ ತೆರವುಗೊಳಿಸಬೇಕು. ಜತೆಗೆ ಕೆಲವು ಕಡೆ ಮಳೆ ನೀರು ಚರಂಡಿಗಳಿಗೆ ಅಡ್ಡವಾಗಿ ಒಳಚರಂಡಿ ಅಥವಾ ಕುಡಿಯುವ ನೀರಿನ ಕೊಳವೆಗಳು ಹಾದು ಹೋಗಿರುವುದರಿಂದ ಜಲಮಂಡಳಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ದೊಡ್ಡ ಕಾಲುವೆಗಳಲ್ಲಿ ನಿಯಮಿತವಾಗಿ ಹೂಳು ತೆಗೆಯುವ ಕಾರ್ಯ ನಡೆಯುತ್ತಿದೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸಬೇಕು ಎಂದರು.

ಪೀಣ್ಯ ಮೇಲ್ಸೇತುವೆ ಬಂದ್: ವಾಹನ ಸವಾರರ ಪರದಾಟ

ಕೆಳರಸ್ತೆಯಲ್ಲಿ ವಾಹನ ದಟ್ಟಣೆ, ಪರ್ಯಾಯ ಮಾರ್ಗದಲ್ಲೂ ವಾಹನಗಳ ಸಾಲು

ಬೆಂಗಳೂರು: ಪೀಣ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ4ರ ಪೀಣ್ಯ ಮೇಲ್ಸೇತುವೆಯಲ್ಲಿ (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಕೇಬಲ್ ಬದಲಾವಣೆ ಕಾರ್ಯ ಪೂರ್ಣಗೊಂಡಿದ್ದು, ಸಾಮರ್ಥ್ಯ ಪರೀಕ್ಷೆಗೆಂದು ವಾಹನ ಸಂಚಾರ ಬಂದ್ ಮಾಡಲಾಗಿದ್ದು, ಮಂಗಳವಾರ ದಿನವಿಡೀ ವಾಹನ ಚಾಲಕರು ಪರದಾಡಿದರು.

ಮೇಲ್ಸೇತುವೆಯ ಕೆಳರಸ್ತೆಯಲ್ಲಷ್ಟೇ ಎಲ್ಲ ಮಾದರಿಯ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ.

ಮಂಗಳವಾರದಿಂದ ಮೇ 8ರ ಬೆಳಿಗ್ಗೆ 11ರ ತನಕ ಕೆನ್ನಮೆಟಲ್ ವಿಡಿಯಾದ ಅಪ್ಪರ್ ರ್‍ಯಾಂಪ್‌ನಿಂದ ಎಸ್‌ಎಸ್‌ಆರ್ ಡಂಪ್‌ಯಾರ್ಡ್‌ವರೆಗೆ ಎರಡೂ ಕಡೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದೆ. ಇದರಿಂದ ಕೆಳರಸ್ತೆಯಲ್ಲಿ ನಗರದ ಒಳಕ್ಕೆ ಬರುವ ಹಾಗೂ ಹೊರಹೋಗುವ ಮಾರ್ಗದ ಉದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಬೆಳಗ್ಗೆಸಂಜೆ ವೇಳೆ ವಿಪರೀತ ದಟ್ಟಣೆ ಉಂಟಾಗಿ, ಸಾಕಷ್ಟು ಸಮಸ್ಯೆ ಎದುರಾಗುತ್ತಿದೆ ಎಂದು ಚಾಲಕರು ಅಳಲು ತೋಡಿಕೊಂಡಿದ್ದಾರೆ.

ನಾಗಸಂದ್ರ, 8ನೇ ಮೈಲಿ, ಜಾಲಹಳ್ಳಿ ಕ್ರಾಸ್, ಪೀಣ್ಯ ಜಂಕ್ಷನ್ ಮೂಲಕ ಗೊರಗುಂಟೆಪಾಳ್ಯ ತಲುಪುವುದಕ್ಕೆ ವಾಹನ ಸವಾರರು ಪರದಾಡುವಂತಾಗಿದೆ. ನಗರ ಪ್ರವೇಶಿಸುವ ಮೊದಲ ಸಿಗುವ ಟೋಲ್‌ಗೇಟ್ (ವಿಡಿಯಾ ಸಮೀಪ)ನಿಂದಲೇ ವಾಹನ ದಟ್ಟಣೆ ಆರಂಭವಾಗಿದೆ. ಕೆಲವು ವಾಹನಗಳು ದಾಸರಹಳ್ಳಿ ಒಳಭಾಗದ ರಸ್ತೆಯಿಂದ ಪೈಪ್‌ಲೈನ್ ರಸ್ತೆಯ ಮೂಲಕ ನಗರದ ಒಳಕ್ಕೆ ಬರುತ್ತಿವೆ. ಇದರಿಂದ ಸಣ್ಣಪುಟ್ಟ ರಸ್ತೆಗಳಲ್ಲಿ ದಟ್ಟಣೆಯಿದ್ದು, ಅಲ್ಲಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ.

20ಕ್ಕೂ ಹೆಚ್ಚು ಜಿಲ್ಲೆ, ಹೊರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಇದಾಗಿದ್ದು, ಸಾವಿರಾರು ವಾಹನಗಳು ಮೇಲ್ಸೇತುವೆ ಪಕ್ಕದ ಎನ್‌ಎಚ್4 ರಸ್ತೆ, ಸರ್ವೀಸ್ ರಸ್ತೆಯಲ್ಲೇ ನಗರಕ್ಕೆ ಬರಬೇಕಾಗಿದೆ. ಆಂಬುಲೆನ್ಸ್‌ಗಳು ದಟ್ಟಣೆಯಲ್ಲಿ ಸಿಲುಕಿ ರೋಗಿಗಳು ಪರದಾಡುತ್ತಿದ್ದಾರೆ. ನಗರದಿಂದ ನೆಲಮಂಗಲ, ಹಾಸನ, ಮಂಗಳೂರು, ಚಿಕ್ಕಮಗಳೂರು, ಹುಬ್ಬಳ್ಳಿ, ದಾವಣಗೆರೆ, ತುಮಕೂರು ಕಡೆಗೆ ತೆರಳುವ ವಾಹನ ಸವಾರರು ಮಂಗಳವಾರ ತೊಂದರೆಗೆ ಸಿಲುಕಿದ್ದರು.

4 ದಿನಗಳ ಕಾಲ ಭಾರ ಪರೀಕ್ಷೆ

ಮೇಲ್ಸೇತುವೆಯ 1,422 ಪ್ರಿಸ್ಟ್ರೆಸ್ಸಿಂಗ್ ಕೇಬಲ್ ಬದಲಿಸಲಾಗಿದೆ. ಮೇಲ್ಸೇತುವೆಯಲ್ಲಿ 32 ಕೋಟಿ ವೆಚ್ಚದಲ್ಲಿ ಹೊಸ ಕೇಬಲ್‌ಗಳನ್ನು ಅಳವಡಿಸಿದ ಬಳಿಕ ಸೇತುವೆಯ ಸಾಮರ್ಥ್ಯ ಮತ್ತು ಸುರಕ್ಷತೆ ಖಚಿತಪಡಿಸಿಕೊಳ್ಳಲು ಭಾರ ಪರೀಕ್ಷೆ ಅಗತ್ಯವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ತಲಾ 32 ಟನ್ ಭಾರ ಹೊತ್ತ ಎಂಟು ಟ್ರಕ್‌ಗಳನ್ನು ಆಯ್ಕೆ ಮಾಡಲಾದ ನಾಲ್ಕು ನಿರ್ದಿಷ್ಟ ಸ್ಪ್ಯಾನ್‌ಗಳ ಮೇಲೆ ನಿಲ್ಲಿಸಿ ಪರೀಕ್ಷೆ ಮಾಡಲಾಗುತ್ತಿದೆ. ಈ ವೇಳೆ ಸೇತುವೆಯ ರಚನಾತ್ಮಕ ಬದಲಾವಣೆಗಳನ್ನು ಗೇಜ್‌ಗಳ ಮೂಲಕ ಅಳೆಯಲಾಗುತ್ತಿದೆ. ಈ ರೀತಿ ನಾಲ್ಕು ದಿನ ಪರೀಕ್ಷೆ ನಡೆಸಲಾಗುವುದು. ಬಳಿಕ ಮೇಲ್ಸೇತುವೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೀವನಶೈಲಿಯ ಕಾಯಿಲೆಗಳಿಗೆ ಹೋಮಿಯೋಪತಿಯೇ ಪರಿಹಾರ

ಬೆಂಗಳೂರು: ಭಾರತದಲ್ಲಿ ಹೋಮಿಯೋಪತಿ ಒಂದು ಶಕ್ತಿಶಾಲಿ ಮತ್ತು ಜನಪ್ರಿಯ ವೈದ್ಯಕೀಯ ಪದ್ಧತಿಯಾಗಿ ಬೇರೂರಿದೆ. ದೇಶಾದ್ಯಂತ ಲಕ್ಷಾಂತರ ಜನರು ಈ ಪದ್ಧತಿಯಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಇದರಿಂದ ಆಯುಷ್ ಇಲಾಖೆ ಗಮನಾರ್ಹ ಪ್ರಗತಿ ಸಾಧಿಸುತ್ತಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ತಿಳಿಸಿದರು.

ವಿಶ್ವ ಹೋಮಿಯೋಪತಿ ದಿನಾಚರಣೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ, ಉತ್ತಮ ಗುಣಮಟ್ಟದ ವೈದ್ಯಕೀಯ ಶಿಕ್ಷಣ, ಸಮರ್ಪಿತ ವೈದ್ಯರು ಮತ್ತು ಸಂಶೋಧನಾ-ಆಧಾರಿತ ವಿಧಾನವು ಹೋಮಿಯೋಪತಿಯ ಬೆಳವಣಿಗೆಗೆ ಕಾರಣವಾಗಿದೆ ಎಂದರು.

ವಿಶ್ವವಿದ್ಯಾಲಯ ಕುಲಪತಿ ಡಾ.ಭಗವಾನ ಬಿ.ಸಿ ಮಾತನಾಡಿ, ರೋಗಕ್ಕೆ ಚಿಕಿತ್ಸೆ ನೀಡುವುದು ಮಾತ್ರವಲ್ಲ, ಅದರ ಮೂಲ ಹುಡುಕುವ ಕೆಲಸವನ್ನು ಹೋಮಿಯೋಪತಿ ಮಾಡುತ್ತದೆ. ಇದು ಈ ಆಧುನಿಕ ಯುಗದ ಅಗತ್ಯಗಳಲ್ಲಿ ಒಂದು. ಹೀಗಾಗಿ ಹೋಮಿಯೋಪತಿ ಶಿಕ್ಷಣವನ್ನು ಬಲಪಡಿಸುವುದು ಹಾಗೂ ಅದನ್ನು ಮುಖ್ಯ ಆರೋಗ್ಯ ವ್ಯವಸ್ಥೆಯೊಂದಿಗೆ ಜೋಡಿಸುವುದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಬದ್ಧತೆಯಾಗಿದೆ ಎಂದರು.

ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ, ರಾಜ್ಯ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್ ಮಾತನಾಡಿದರು. ಕುಲಸಚಿವರಾದ ಅರ್ಜುನ್ ಒಡೆಯರ್, ಮೌಲ್ಯಮಾಪನ ಕುಲಸಚಿವರಾದ ಡಾ. ರಿಯಾಜ್ ಭಾಷ ಎಸ್. ಹಣಕಾಸು ಅಧಿಕಾರಿ ಬಿ.ಕೆ. ಗಂಗಾಧರ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರಿಗೆ ವಿಶ್ವವಿದ್ಯಾಲಯ ಕುಲಪತಿ ಡಾ.ಭಗವಾನ ಬಿ.ಸಿ ನೆನಪಿನ ಕಾಣಿಕೆ ನೀಡಿದರು. ಈ ವೇಳೆ ಕರ್ನಾಟಕ ಹೋಮಿಯೋಪತಿ ಮಂಡಳಿಯ ಅಧ್ಯಕ್ಷ ಡಾ. ಬಿ.ಟಿ. ರುದ್ರೇಶ್, ಶಾಸಕ ಸಿ.ಕೆ. ರಾಮಮೂರ್ತಿ, ರಾಜ್ಯ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್ ಇದ್ದರು.

ವಿಶ್ವ ಹೋಮಿಯೋಪತಿ ದಿನಾಚರಣೆಗೆ ಆಗಮಿಸಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್‌ರನ್ನು ಆಯುಷ್ ಇಲಾಖೆಯಿಂದ ಗೌರವಿಸಲಾಯಿತು.

> ಇಂದು ನಾವು ಕಾಣುವ ಶೇ 50ರಷ್ಟು ರೋಗಗಳಿಗೆ ಔಷಧಿಗಳು ಬೇಕಾಗಿಲ್ಲ, ಬದಲಾಗಿ ಪ್ರೀತಿ, ಕಾಳಜಿ, ಸ್ನೇಹ ಕರುಣೆಯ ಅಗತ್ಯವಿದೆ.
>
> -ಡಾ.ಬಿ.ಟಿ.ರುದ್ರೇಶ್
> ಕರ್ನಾಟಕ ಹೋಮಿಯೋಪತಿ ಮಂಡಳಿ ಅಧ್ಯಕ್ಷ

ನಗರ ವಿವಿಯಲ್ಲಿ ಎಐ ಲ್ಯಾಬ್ ಪ್ರಾರಂಭದ ಗುರಿ

ಬೆಂಗಳೂರು: ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಸದ್ಯದಲ್ಲೇ ಕೃತಕ ಬುದ್ಧಿಮತ್ತೆ ಪ್ರಯೋಗಾಲಯ ಪ್ರಾರಂಭಿಸುವ ಗುರಿ ಇದೆ ಎಂದು ಕುಲಪತಿ ಪ್ರೊ.ರಮೇಶ್.ಬಿ.ತಿಳಿಸಿದರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಇನ್ನೋವೆಕ್ಸ್ 2.0 ತಂತ್ರಜ್ಞಾನ ಕೌಶಲ್ಯ ಮೇಳದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೈಬರ್ ಭದ್ರತೆ ಮತ್ತು ಬಯೋ ಇನ್ಫಾರ್ಮೆಟಿಕ್ಸ್ ವಿಷಯಗಳಲ್ಲಿ ಡಿಪ್ಲೊಮ ಕೋರ್ಸ್ ಆರಂಭಿಸಲಾಗುವುದು. ಶಿಕ್ಷಣವನ್ನು ಕೇವಲ ಪದವಿ ಗಳಿಕೆಗೆ ಸೀಮಿತಗೊಳಿಸದೆ ತರಗತಿ ಕೋಣೆಗಳನ್ನು ತಾಂತ್ರಿಕ ಕೌಶಲ್ಯ ತರಬೇತಿಯ ಪ್ರಯೋಗಾಲಯವಾಗಿ ಪರಿವರ್ತಿಸಿಕೊಳ್ಳಬೇಕಾಗಿದೆ ಇದರಿಂದ ಸ್ಟಾರ್ಟ್‌ಅಪ್ ಉದ್ಯಮಗಳ ಆರಂಭಕ್ಕೆ ಅಗತ್ಯವಾದ ಅನುಭವ ಪಡೆದುಕೊಳ್ಳುವಂತೆ ಉತ್ತೇಜಿಸಿಲಾಗುತ್ತಿದೆ ಎಂದರು.

ಎರಡು ದಿನಗಳ ಕಾಲ ನಡೆಯುವ ಇನ್ನೋವೆಕ್ಸ್ 2.0 ಕೌಶಲ್ಯ ಮೇಳದಲ್ಲಿ ವೆಬ್ ವಿನ್ಯಾಸ, ರಸಪ್ರಶ್ನೆ, ಚರ್ಚಾಸ್ಪರ್ಧೆ, ಭಾಷಣ ಸ್ಪರ್ಧೆ, ಕಿರುಚಿತ್ರ ನಿರ್ಮಾಣ, ಸ್ಟಾರ್ಟ್ ಅಪ್ ಪಿಚ್, ಗೇಮಿಂಗ್, ಇತ್ಯಾದಿ ಅನೇಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಮೇಧಾ ಇಟಗಿ ಹುಯಿಲಗೋಳ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇನ್ನೋವೆಕ್ಸ್ 2.0 ತಂತ್ರಜ್ಞಾನ ಕೌಶಲ್ಯ ಮೇಳ ಕಾರ್ಯಕ್ರಮವನ್ನು ಡಾ.ಮನಮೋಹನ್ ಸಿಂಗ್ ನಗರ ವಿ.ವಿ ಕುಲಪತಿ ಪ್ರೊ. ರಮೇಶ್.ಬಿ.ಉದ್ಘಾಟಿಸಿದರು. ಈ ವೇಳೆ ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಮೇಧಾ ಇಟಗಿ ಹುಯಿಲಗೋಳ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ಯಾಲಿಯೇಟಿವ್ ಕೇರ್ ಯೂನಿಟ್ ಉದ್ಘಾಟನೆ

ಬೆಂಗಳೂರು: ಸರನಂ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಪ್ಯಾಲಿಯೇಟಿವ್ ಕೇರ್ ಘಟಕವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.

ಪ್ಯಾಲಿಯೇಟಿವ್ ಕೇರ್ ಕೇಂದ್ರದಲ್ಲಿ ಚಿಕಿತ್ಸೆ ನೀಡುವುದಿಲ್ಲ. ರೋಗಿಗಳು ಚಿಕಿತ್ಸೆಗೆ ಸ್ಪಂದಿಸದೇ ಇರುವ ಹಂತದಲ್ಲಿ, ಅಸಾಧಾರಣ ನೋವು, ಮಾನಸಿಕ ಒತ್ತಡದಿಂದ ಬಳಲುವ ರೋಗಿಗಳ ಮತ್ತು ಅಂತಹ ರೋಗಿಗಳ ಆರೈಕೆ ಮಾಡುತ್ತಿರುವ ಕುಟುಂಬ ವರ್ಗದವರಿಗೆ ಇದು ವರದಾನವಾಗಲಿದೆ.

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಪ್ರಾಥಮಿಕವಾಗಿ ಐದು ಬೆಡ್ ಗಳ ಒಂದು ವಾರ್ಡ್ ನಿರ್ಮಿಸಲಾಗಿದೆ. ಮಾರಣಾಂತಿಕ ಅಥವಾ ತೀವ್ರವಾದ ಕಾಯಿಲೆಗಳಿಂದ ಬಳಲುತ್ತ, ಅಂತಿಮ ಹಂತದಲ್ಲಿರುವ ರೋಗಿಗಳಿಗೆ ಇದು ವಿಶೇಷ ಯೂನಿಟ್ ಆಗಿದೆ. ಕ್ಯಾನ್ಸರ್, ಕಿಡ್ನಿ ವೈಫಲ್ಯ ಸೇರಿದಂತೆ ಇತರ ರೋಗಿಗಳ ಆರೈಕೆಗೆ ಈ ವಾರ್ಡ್ ಸಹಾಯಕ. ತೀವ್ರವಾದ ನೋವು, ಉಸಿರಾಟ ತೊಂದರೆ, ನರ ಸಂಬಂಧಿ ಕಾಯಿಲೆಯಿಂದ ಬಳಲುವವರು, ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವವರಿಗೆ ಈ ಕೇಂದ್ರ ಅನುಕೂಲ. ರೋಗವನ್ನು ಗುಣಪಡಿಸುವುದಕ್ಕೆ ಸಾಧ್ಯವಿಲ್ಲದ ಹಂತದಲ್ಲಿ ರೋಗಿಯ ದೈಹಿಕ ನೋವು ಮಾನಸಿಕ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದೊಂದಿಗೆ ಇದನ್ನು ಮಾಡಿದ್ದೇವೆ. ರೋಗಿಗಳ ಕುಟುಂಬದವರಿಗೂ ಸೂಕ್ತ ತರಬೇತಿ ನೀಡಲಾಗುತ್ತದೆ.

ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಪ್ಯಾಲಿಯೇಟಿವ್ ಕೇರ್ ಘಟಕವನ್ನು ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.

ಲೋಕಾಯುಕ್ತ ಬಲೆಗೆ ಬಿದ್ದ ಸೆಸ್ಕಾಂ ಅಧಿಕಾರಿ

ಹಾಸನ: ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ನುರನಕ್ಕಿ ಗ್ರಾಮದಲ್ಲಿ ಲಂಚ ಪಡೆಯುವ ವೇಳೆ ಸೆಸ್ಕಾಂ ಕಿರಿಯ ಎಂಜಿನಿಯರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ನುರನಕ್ಕಿ ಸೆಸ್ಕಾಂ ಬ್ರ್ಯಾಂಚ್‌ನ ಜ್ಯೂನಿಯರ್ ಎಂಜಿನಿಯರ್ (ಜೆಇ) ದೇವರಾಜು ಲೋಕಾಯುಕ್ತಗೆ ಸಿಕ್ಕಿಬಿದ್ದಿದ್ದಾರೆ. ಶಶಾಂಕ್ ಎಂಬವರ ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ನೀಡಲು ದೇವರಾಜು 5000 ರು.ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಲಂಚದ ಹಣ ಪಡೆಯುವಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ಹಣದ ಸಮೇತ ಅಧಿಕಾರಿಯನ್ನು ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಇನ್‌ಸ್ಪೆಕ್ಟರ್ ಶಿಲ್ಪಾ ಹಾಗೂ ಸಿಬ್ಬಂದಿ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/27/2024–25 ದಿನಾಂಕ: 05–05–2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದಿಸಲಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿರುತ್ತಾರೆ. ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಕಟ್ಟಿಗೇನಹಳ್ಳಿ ಗ್ರಾಮದ ಸ.ನಂ.ಗಳ ವಿವರ

ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
1	ಶ್ರೀ ಶೇಕ್ ಅಲ್ತಾಫ್ ಬಿನ್ ಶೇಖ್ ದಾವುದ್, ಶ್ರೀ ಶೇಖ್ ಫಿರ್ದೋಸ್ ಬಿನ್ ಶೇಖ್ ದಾವುದ್ ಮತ್ತು ಇತರರು	191	02-00
2	ಶ್ರೀ ಝಾಕಿವುಲ್ಲಾ ಶರೀಫ್ ಬಿನ್ ಸುಬಾನ್ ಶರೀಫ್ ಮತ್ತು ಇತರರು	192	03-28 1/2

ಷರಾ:– ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, "ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/522/ಅಡ್ವರ್ಟೋರ್/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ. ನಂ.1 ತುಂಗಭದ್ರಾ ಜಲಾಶಯ ವಿಭಾಗ ಮುನಿರಾಬಾದ್. E-Mail-trdmrb@gmail.com

EE/KNNL/No.1 T R Dvn/Mrb/4701/2026-27/225 Date:30.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(Only through kppp-procurement portal) (Two Cover)

ಈ ವಿಭಾಗದ ವ್ಯಾಪ್ತಿಗೆ ಒಳಪಡುವ ಮುಖ್ಯ ಕಾಮಗಾರಿ ಉಪ ವಿಭಾಗ, ಮುನಿರಾಬಾದ್ ಅಡಿಯಲ್ಲಿ ಬರುವ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿನ ಈ ಕೆಳಗಿನ ಕಾಮಗಾರಿಗೆ ಟೆಂಡರ್‌ನ್ನು ಲೋಕೋಪಯೋಗಿ ಇಲಾಖೆ ಹಾಗೂ ಕೆ.ಪಿ.ಪಿ ಪೋರ್ಟಾಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕನೀನಿನಿ, ನಂ.1 ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್ ಇವರಿಂದ ಕರೆಯಲಾಗಿದೆ.

ಕ್ರ. ಸಂ	ಕಾಮಗಾರಿ ಹೆಸರು	TENDER DOCUM -ENT	ಟೆಂಡರ್‌ಗಿಟ್ಟ ಮೊತ್ತ.ರೂ. ಲಕ್ಷಗಳಲ್ಲಿ	ಗುತ್ತಿಗೆದಾರರ ಶ್ರೇಣಿ	ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Construction of 3 Aqueduct's and adjoining bridges inbetween Ch 3.00km to 7.00km of Left Bank Canal of Narihalla dam in sandurtaluk	KW-4	421.98	KPWD CLASS-II Or ABOVE	15.05.2026 @ 4:00 pm	16.05.2026 @ 4:30 pm

ಸದರಿ ಕಾಮಗಾರಿಗಳ ಪ್ರೀಬಿಡ್ ಸಭೆಯನ್ನು ದಿನಾಂಕ: **11.05.2026** ರಂದು ಬೆಳಿಗ್ಗೆ 11.30 ಗಂಟೆಗೆ ಮುಖ್ಯ ಇಂಜಿನೀಯರ್ ಕನೀನಿನಿ, ನೀರಾವರಿ ಕೇಂದ್ರ ವಲಯ ಮುನಿರಾಬಾದ್ ಕಛೇರಿಯಲ್ಲಿ ನಿಗಧಿಪಡಿಸಲಾಗಿದೆ. ಸದರಿ ಕಾಮಗಾರಿಯ ವಿವರಗಳನ್ನು https://kppp.karnataka.gov.in/ ಜಾಲದಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳು ಬೇಕಾದಲ್ಲಿ trdmrb@gmail.com ಜಾಲದಲ್ಲಿ ಮತ್ತು ಈ ಕಛೇರಿಯ ವೇಳೆಯ ಕೆಲಸದ ದಿನಗಳಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕನೀನಿನಿ,ನಂ.1 ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್.
ಡಿಐಪಿಆರ್/ಕೊಪ್ಪಳ/62/ ಕೆಎಸ್‌ಎಂಸಿಎ/2026–27

ಕರ್ನಾಟಕ ಸರಕಾರ
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ,ಕನಕದಾಸ ಬಡಾವಣೆ, ವಿಜಯಪುರ.

ದೂರವಾಣಿ ಸಂಖ್ಯೆ: 08352–276932, ಇ–ಮೇಲ್: dobcmbijapura@gmail.com
ಸಂ: ಹಿಂವಕಇ/ಹೊ.ಸಂ.ಟೆ/ಸಿಆರ್–01/2025–26 ದಿನಾಂಕ:30.04.2026

ಕೆಪಿಪಿಪಿ ಟೆಂಡರ್ ಪ್ರಕಟಣೆ (Inviting Tender through KPPP)

2026–27 ನೇ ಸಾಲಿಗೆ ವಿಜಯಪುರ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯ/ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು ಮತ್ತು ಕಾವಲುಗಾರರು ಸ್ವಚ್ಛತ ಸಿಬ್ಬಂದಿ, ಜವಾನರು ಹಾಗೂ ಜಿಲ್ಲಾ ಕಛೇರಿ ಮತ್ತು ತಾಲ್ಲೂಕು ಕಛೇರಿಯಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್‌ಗಳ/ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿ ಮುಖಾಂತರ ಪಡೆಯುವ ಬಗ್ಗೆ ಒಂದು ವರ್ಷದ ಟೆಂಡರ್ ಪ್ರಕಟಣೆ.

1	ಕೆಪಿಪಿಪಿ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	BCWD/2025-26/SE0122 Date:30.04.2026
2	ಟೆಂಡರ್ ಪ್ರಕಟಣೆ ದಿನಾಂಕ	ಸಂಖ್ಯೆ: ಹಿಂವಕಇ/ಹೊ.ಸಂ.ಟೆ/ಸಿ.ಆರ್–01/2026–27 ದಿನಾಂಕ : 30.04.2026
3	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ಮತ್ತು ಇ.ಎಂ.ಡಿ.	ರೂ. 631.64 ಲಕ್ಷಗಳು ಇ.ಎಂ.ಡಿ 6.32 ಲಕ್ಷಗಳು
4	ಸಂಭಾವ್ಯ ಬಿಡ್‌ದಾರರೊಂದಿಗೆ ಪೂರ್ವಭಾವಿ ಸಭೆ (ಪ್ರಿ ಬಿಡ್ ಮೀಟಿಂಗ್) ದಿನಾಂಕ ಮತ್ತು ಸಮಯ	ದಿನಾಂಕ: 13.05.2026, 11.00 ಗಂಟೆಗೆ
5	ಟೆಂಡರ್ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 01.06.2026, 17.00 ಗಂಟೆಗೆ
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 03.06.2026, 11.00 ಗಂಟೆಗೆ
7	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 12.06.2026, 11.30 ಗಂಟೆಗೆ (ಬದಲಾವಣೆಗೆ ಒಳಪಟ್ಟಿರುತ್ತದೆ.)
8	ಫ್ರೀ–ಬಿಡ್ ಸಭೆ ನಡೆಯುವ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ತೆರೆಯುವ ಹಾಗೂ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಸ್ಥಳ	ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನಕದಾಸ ಬಡಾವಣೆ, ಜಿಲ್ಲಾ ಪಂಚಾಯತ ಆವರಣ, ವಿಜಯಪುರ – 586109. ದೂರವಾಣಿ ಸಂಖ್ಯೆ: 08352–276932

ಆಸಕ್ತಿ ಹೊಂದಿರುವ ಬಿಡ್‌ದಾರರು ಮಾಹಿತಿಯನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಅಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಜಯಪುರ
ವಾಸಾಸಂಇ/ವಿಜಯಪುರ/75/ಕೆಎಸ್‌ಎಂಸಿಎ/2025–26

ಮೊದಲು ಸಿಂಧು ಆಗಿದ್ದ ಮತಗಳು ಅಸಿಂಧು ಹೇಗಾಗುತ್ತವೆ? | ಗೆಲುವು ಸಿಕ್ಕಿದೆ, ಎಡವಿದ್ದೆಲ್ಲೆನ್ನುವುದನ್ನು ನೋಡುತ್ತೇವೆ: ಸಿಎಂ

ಶೃಂಗೇರಿಯಲ್ಲಿ ವೋಟ್ ಡಕಾಯಿತಿ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆಯಲ್ಲಿ ವೋಟ್ ಚೋರಿ ಅಲ್ಲ. ಇದು ವೋಟ್ ಡಕಾಯಿತಿಯಾಗಿದೆ. ಅಂಚೆ ಮತ ಪತ್ರವನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋರ್ಟ್ ಆದೇಶದಂತೆ ಪೋಸ್ಟಲ್ ಬ್ಯಾಲೆಟ್ ಮರು ಎಣಿಕೆಯಾಯಿತು. 2023ರ ಚುನಾವಣೆಯಲ್ಲಿ 201 ಮತಗಳ ಅಂತರದಿಂದ ರಾಜೇಗೌಡ ಅವರು ಗೆದ್ದಿದ್ದರು. ಅವರಿಗೆ 59,171 ಮತಗಳು ಬಂದಿದ್ದವು. ಬಿಜೆಪಿಯ ಜೀವರಾಜ್‌ಗೆ 58,970 ಮತಗಳು ಬಂದಿದ್ದವು. ರಾಜೇಗೌಡರಿಗೆ ಇವಿಎಂನಿಂದ ಬಂದ ಮತಗಳು 58,602 ಪೋಸ್ಟಲ್‌ನಿಂದ ಬಂದಿದ್ದು 569. ಜೀವರಾಜ್‌ಗೆ ಇವಿಎಂನಿಂದ 58,278 ಮತಗಳು ಬಂದಿದ್ದವು. ಅವರಿಗೆ ಪೋಸ್ಟಲ್‌ನಿಂದ ಬಂದ ಮತ 692. ಒಟ್ಟಾರೆಯಾಗಿ 201 ಮತಗಳಿಂದ ರಾಜೇಗೌಡ ಅವರು ಗೆದ್ದಿದ್ದರು. ಇವೆಲ್ಲವೂ ಸಿಂಧು ಮತಗಳೆಂದು ರಿಟರ್ನಿಂಗ್ ಅಧಿಕಾರಿಗಳು, ಚುನಾವಣಾ ಏಜೆಂಟ್‌ಗಳು ಸಹಿ ಹಾಕಿ ಘೋಷಿಸಿದ್ದರು ಎಂದು ತಿಳಿಸಿದರು.

2023ರಲ್ಲಿ ಜೀವರಾಜ್‌ಗೆ 692 ಅಂಚೆ ಮತ ಬಿದ್ದಿತ್ತು. ಮರು ಎಣಿಕೆಯಲ್ಲಿ 690 ಮತಗಳು ಲಭಿಸಿವೆ. 2 ಮತಗಳು ಮಾತ್ರ ಕಡಿಮೆಯಾಗಿವೆ. ಇದನ್ನು ನೋಡಿದಾಗ ಬಿಜೆಪಿಯವರು ಕ್ರಿಮಿನಲ್ ಪಿತೂರಿ ಮಾಡಿ ವೋಟ್ ಚೋರಿ ಮಾಡಿರುವುದು ಸ್ಪಷ್ಟವಾಗುತ್ತದೆ. ರಾಜೇಗೌಡರ 255 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಎರಡು ಮಾರ್ಕ್ ಇದ್ದರೆ ಅಸಿಂಧು ಮಾಡುತ್ತಾರೆ. ಹಿಂದಿನ ಚುನಾವಣಾ ಅಧಿಕಾರಿ ಸಿಂಧು ಮಾಡಿರುವುದು, ಈಗ ಹೇಗೆ ಅಸಿಂಧು ಮಾಡಿದ್ದಾರೆ? 52 ಮತಗಳು ಜೀವರಾಜ್‌ಗೆ ಹೆಚ್ಚಿಗೆ ಬಂದಿವೆ. ಎಲ್ಲಾ ಮತ ದಾಖಲಾತಿಗಳನ್ನು ಟ್ರಂಕ್‌ನಲ್ಲಿ ಇಟ್ಟು ಕಳುಹಿಸುತ್ತಾರೆ. ಕೌಂಟಿಂಗ್ ಮಾಡಿದಾಗ ಅವರದೇ ಸರಕಾರ ಇತ್ತು. ಡಬಲ್ ಎಂಜಿನ್ ಸರಕಾರ ಇತ್ತು. ಬಿಜೆಪಿಯವರು ಸಿಬ್ಬಂದಿ ಮೂಲಕ ತಿದ್ದಿರುವುದು ಖಚಿತವಾಗಿದೆ ಎಂದು ಆರೋಪಿಸಿದರು.

ಕ್ರಿಮಿನಲ್ ಪಿತೂರಿ: ಇದು ಕ್ರಿಮಿನಲ್ ಪಿತೂರಿ. ಟ್ಯಾಂಪರಿಂಗ್ ಆಗಿದೆ. ರಾಜೇಗೌಡರಿಗೆ ಮೂರನೇ ಸುತ್ತಿನಲ್ಲಿ ಲಭಿಸಿದ್ದ 170 ಅಂಚೆ ಮತಗಳು ಈಗ ಅಸಿಂಧುವಾಗಿದೆ. ಹಣ್ಣು ತಿಂದವನು ತಪ್ಪಿಸಿಕೊಂಡ, ಸಿಪ್ಪೆ ತಿಂದವನು ಸಿಕ್ಕಿಹಾಕಿಕೊಂಡ ಎಂಬ ಗಾದೆ ಮಾತಿನಂತೆ ಆಗಿದೆ. ಇದನ್ನು ಸಮರ್ಥನೆ ಮಾಡಿದವರು ಕೇಂದ್ರ ಸಚಿವ ಜೋಶಿಯವರು, ಶೋಭಾ ಕರಂದ್ಲಾಜೆ ಅವರು ಮತ್ತು ವಿಪಕ್ಷ ನಾಯಕ ಆರ್.ಅಶೋಕ್. 2023ರಲ್ಲಿ ನಮ್ಮ ಪಕ್ಷದಿಂದ ಏಜೆಂಟ್ ಸುನೀಲ್ ಕುಮಾರ್ ಸಹಿ ಹಾಕಿದ್ದಾರೆ. ಬಿಜೆಪಿ ಏಜೆಂಟ್, ಜೆಡಿಎಸ್ ಏಜೆಂಟ್‌ಗಳು ಸಹಿ ಹಾಕಿದ್ದಾರೆ. 2023ರಲ್ಲೇ ಬಿಜೆಪಿ ಏಜೆಂಟ್‌ಗಳು ಆಕ್ಷೇಪ ವ್ಯಕ್ತಪಡಿಸಬೇಕಾಗಿತ್ತಲ್ಲ. ಆಗ ಏಕೆ ಆಕ್ಷೇಪಿಸಿಲ್ಲ?. ಆಗಲೇ ಬಿಜೆಪಿಯವರು ತಿದ್ದುವ ಕೆಲಸ ಮಾಡಿದ್ದಾರೆ ಎಂದು ದೂರಿದರು.

ಮರು ಎಣಿಕೆ ವೇಳೆ ಕೇಂದ್ರ ವೀಕ್ಷಕರು ಬಂದಿದ್ದರು. ನಮ್ಮ ಮಾಹಿತಿ ಪ್ರಕಾರ ಆ ವೀಕ್ಷಕರು ಕೂಡ ಚುನಾವಣಾಧಿಕಾರಿಗೆ ಗಂಭೀರ ಸ್ವರೂಪದ ಕ್ರಿಮಿನಲ್ ಸಂಚು ನಡೆದಿರುವುದಾಗಿ ಪತ್ರ ಬರೆದಿದ್ದಾರೆ. ರಾಜೇಗೌಡರದ್ದು ಮಾತ್ರ ಅಸಿಂಧುವಾಗಿದೆ. ಜೀವರಾಜ್‌ರದ್ದು ಏಕೆ ಆಗಿಲ್ಲ?. ಬಿಜೆಪಿಯವರು ಈ ಹಿಂದೆ ಚಿಲುಮೆ ಎಂಬ ಸಂಸ್ಥೆಯಿಂದ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲು ಹೊರಟಿದ್ದರು. ಆಳಂದದಲ್ಲಿ ನೈಜ ಮತದಾರರನ್ನೇ ಬಿಟ್ಟು ಬಿಟ್ಟಿದ್ದರು. ಬಿಜೆಪಿಯವರು ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಲ್ಲದವರು. ನಿಷ್ಪಕ್ಷಪಾತ ಚುನಾವಣೆಯಲ್ಲಿ ನಂಬಿಕೆ ಇಲ್ಲದವರು. ಅವರು ಇಂಥ ಅಪರಾಧ ಮಾಡಲು ಹಿಂದೆ ಮುಂದೆ ನೋಡಲ್ಲ. ಮಾರ್ಕ್ ಮಾಡಿದ ಇಂಕ್‌ನಲ್ಲಿ ಬದಲಾವಣೆ ಇದೆ. ಅದಕ್ಕಾಗಿ ಅದನ್ನು ಫಾರೆನ್ಸಿಕ್‌ಗೆ ಕಳುಹಿಸಿಕೊಡಬೇಕಾಗಿತ್ತು. ಇದೆಲ್ಲಾ ಗೊತ್ತಿದ್ದರೂ ಫಲಿತಾಂಶ ಘೋಷಣೆ ಮಾಡಿದ್ದಾರೆ. ಚುನಾವಣಾಧಿಕಾರಿಗಳಿಗೆ ಚುನಾವಣಾ ಆಯೋಗದ ಒತ್ತಡ ಇರಬೇಕು ಅನ್ನಿಸುತ್ತದೆ. ನಾವು ಎಫ್‌ಐಆರ್ ಮಾಡಿದ್ದೇವೆ. ಕೋರ್ಟ್‌ಗೂ ಕೂಡ ಹೋಗಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ಕ್ರಮ ಸರಿಯಿದೆ

ದಾವಣಗೆರೆಯಲ್ಲಿ ಎಸ್‌ಡಿಪಿಐಗೆ ಮತ ಬಿದ್ದಿದೆ. ನಾವು ಎಲ್ಲಿ ಎಡವಿದ್ದೇವೆ ಎಂಬುದನ್ನು ಪರಿಶೀಲನೆ ಮಾಡಲಿದ್ದೇವೆ. ಮುಸ್ಲಿಮರು ದಾವಣಗೆರೆಯಲ್ಲಿ ಕಾಂಗ್ರೆಸ್‌ಗೆ 35,000 ಮತ ಹಾಕಿದ್ದಾರೆ. ಒಟ್ಟು 56,000 ಮುಸ್ಲಿಮರು ಮತ ಚಲಾಯಿಸಿದ್ದಾರೆ. ಎಸ್‌ಡಿಪಿಐಗೆ ಹೆಚ್ಚು ಮತ ಹಾಕಿದ್ದಾರೆ. ನಮಗೆ ಏಕೆ ಕಡಿಮೆ ಮತ ಬಿದ್ದಿವೆ ಎಂಬುದಾಗಿ ತನಿಖೆ ಮಾಡುತ್ತೇವೆ. ಹಾಗಾಗಿ, ಕೆಪಿಸಿಸಿಯವರು ಮುಸ್ಲಿಂ ನಾಯಕರ ವಿರುದ್ಧ ತೆಗೆದುಕೊಂಡಿರುವ ಕ್ರಮ ಸರಿ ಇದೆ ಎಂದು ಸಿಎಂ ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ಪಂಚ ಗ್ಯಾರಂಟಿ ಯೋಜನೆಗಳು ಕೈ ಹಿಡಿದಿವೆ

ಬಾಗಲಕೋಟೆ ಹಾಗೂ ದಾವಣಗೆರೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಇಬ್ಬರು ಅಭ್ಯರ್ಥಿಗಳು ಗೆದ್ದಿದ್ದಾರೆ. ಇದು ಮುಂದಿನ 2028ರ ಚುನಾವಣೆಗೆ ದಿಕ್ಸೂಚಿ ಎಂದು ಬಿಜೆಪಿಯವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳುತ್ತಿದ್ದರು. ಅವರ ಪ್ರಕಾರ 2028ರಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದಾಯಿತು ಎಂದು ಸಿಎಂ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು. ಈ ಹಿಂದೆ ನಡೆದ ಮೂರು ಉಪ ಚುನಾವಣೆಗಳಲ್ಲೂ ಕಾಂಗ್ರೆಸ್ ಜಯಗಳಿಸಿದೆ. ಇದರರ್ಥ ನಮ್ಮ ಕಾರ್ಯಕ್ರಮಗಳನ್ನು ಜನರು ಮೆಚ್ಚಿಕೊಂಡಿದ್ದಾರೆ. ನಮ್ಮ ಕಾರ್ಯಕ್ರಮಗಳು ಮತದಾರರನ್ನು ತಲುಪಿವೆ. ಜನರು ನಮ್ಮ ಮೇಲೆ ವಿಶ್ವಾಸ, ಅಭಿಮಾನ ಇರಿಸಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷ ನುಡಿದಂತೆ ನಡೆಯುವ ಪಕ್ಷ. ಕೊಟ್ಟ ಮಾತಿನಂತೆ ನಡೆಯುವ ಪಕ್ಷ. ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿದ್ದಾವೆ ಎಂದು ತಿಳಿಸಿದರು.

ಚುನಾವಣೆ ಮತ ಎಣಿಕೆ ಸಮಯದಲ್ಲಿ ಪ್ರತಿ ಅಂಚೆ ಮತವನ್ನು ತೆರೆದು ಎರಡೂ ಪಕ್ಷಗಳ ಏಜೆಂಟರು ಹಾಗೂ ಅಧಿಕಾರಿಗಳಿಗೆ ತೋರಿಸಿ ಅದನ್ನು ಮಾನ್ಯ ಮಾಡಿ ಎಣಿಕೆ ಮಾಡಲಾಗಿರುತ್ತದೆ. ಈ ರೀತಿ ಮತ ಎಣಿಕೆ ಮಾಡಿದ ಬಳಿಕ ಬಿಜೆಪಿ ಅಭ್ಯರ್ಥಿ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳನ್ನು ತಿದ್ದಲಾಗಿದೆ. ಇದು ದೇಶದಲ್ಲೇ ಅತಿ ದೊಡ್ಡ ಷಡ್ಯಂತ್ರವಾಗಿದೆ.
–ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

2023ರಲ್ಲಿ ಅಂಚೆ ಮತಪತ್ರದಲ್ಲಿ 569 ಮತಗಳು ರಾಜೇಗೌಡರಿಗೆ ಲಭಿಸಿದ್ದವು. ಮರು ಎಣಿಕೆಯಲ್ಲಿ 314 ಮತಗಳು ಮಾತ್ರ ಸಿಂಧು ಆಗುತ್ತವೆ. ಅದರಲ್ಲಿ 255 ಮತಗಳು ಅಸಿಂಧು ಆಗುತ್ತವೆ. ಅದು ಹೇಗೆ ಅಸಿಂಧು ಆಗುತ್ತವೆ?
–ಸಿದ್ದರಾಮಯ್ಯ, ಮುಖ್ಯಮಂತ್ರಿ

ಗ್ಯಾಸ್ ಪೈಪ್‌ಲೈನ್ ಲೀಕ್: ಬೆಂಕಿ

ಬೀದರ್: ಎಲ್‌ಪಿಜಿ ಗ್ಯಾಸ್ ಪೈಪ್‌ಲೈನ್ ಲೀಕಾಗಿ ಬೆಂಕಿ ಕಾಣಿಸಿಕೊಂಡು, ಭಾರೀ ದುರಂತ ತಪ್ಪಿದ ಘಟನೆ ಬೀದರ್‌ನ ಕಾಮತ್ ಹೋಟೆಲ್ ಬಳಿ ನಡೆದಿದೆ. ಏಕಾಏಕಿ ಎಲ್‌ಪಿಜಿ ಗ್ಯಾಸ್‌ಪೈಪ್ ಲೈನ್ ಲೀಕಾಗಿ ಬೆಂಕಿ ಹೊತ್ತಿಕೊಂಡಿತ್ತು. ಇದರಿಂದ ಕೆಲ ಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಯಾವುದೇ ಅಪಾಯ ಸಂಭವಿಸಿಲ್ಲ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಛೇರಿ, ಜಲಭವನ, ನಂ.ಪಿ–4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು–09.
ದೂರವಾಣಿ ಸಂ: 0821– 2545894,
ಇ–ಮೇಲ್: kwbcemys2014@gmail.com

ಟೆಂಡರ್ ಅಧಿಸೂಚನೆ

ಕೊಲ್ಲೂರು ಪಟ್ಟಣದಲ್ಲಿ ಹಾಲಿ ಇರುವ 1.50 MLD ಸಾಮರ್ಥ್ಯದ MBBR ಮಾದರಿಯ STPಯನ್ನು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ರೇವಣಿ ಕೊಡುಗೆಯಡಿ ಮೇಲ್ದರ್ಜೆಗೇರಿಸುವ ಕಾಮಗಾರಿಯ ಟೆಂಡರ್‌ನ್ನು (including 1 year DLP) (lumpsum tender – no variation) ಇಂಡೆಂಟ್ ಸಂಖ್ಯೆ: KUWSDB/2026-27/WT/WORK_INDENT 508 ರಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳಿಗೆ – https://kppp.karnataka.gov.in

ಸಹಿ/– ಮುಖ್ಯ ಅಭಿಯಂತರರು,
ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು
DIPR/DDMYS/141/KSMCA/116/2026-27

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.

ಕವಶಿಸಸ/ಕಾಅ–2/ಟೆಂಡರ್–02/2026–27 ದಿನಾಂಕ : 04.05.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ಹೆಚ್ಚುವರಿ ಮತ್ತು ಮೂಲಭೂತ ಸೌಕರ್ಯ ನಿರ್ಮಾಣ ಕಾಮಗಾರಿ, ಬೋರ್‌ವೆಲ್ ಅಳವಡಿಸುವ ಕಾಮಗಾರಿ, ಚೈನ್‌ಲಿಂಕ್ ಅಳವಡಿಸುವ ಕಾಮಗಾರಿ ಹಾಗೂ ಸಿವಿಲ್ ದುರಸ್ತಿ ಕಾಮಗಾರಿಗಳಿಗೆ (Tender Indent No. 807, 819, 817, 820, 583 and 816)** ಇ–ಪೋರ್ಟಲ್ ಮುಖಾಂತರ ದಿನಾಂಕ : 04.05.2026 ರಂದು ಟೆಂಡರನ್ನು ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ : **20.05.2026** ರಂದು ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **http://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸೂಚನೆ : ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು–2
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
DIPR/CP/YC/502/2026-27

"KRISHNA BHAGYA JALA NIGAM LIMITED"
(A GOVT.OF KARNATAKA UNDERTAKING)
ಕಾರ್ಯಾಲಯ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ– 587 118.
Telephone NO. 08351-261110 e-mail : eearbcdivn@gmail.com

ಸಂ:ಕೃಭಾಜನಿ(ನಿ)/ಆಬದಂಕಾ/ವಿಹು/ಡಿಬಿ/2026–27/71 ದಿನಾಂಕ:04–05–2026

ಅಲ್ಪಾವಧಿ ಕೋಟೇಶನ್

ಈ ಕಛೇರಿಯ ಅಧೀನದಲ್ಲಿ ಬರುವ ರಾಮಥಾಳ ಮರೋಳ ಏತ ನೀರಾವರಿ ಯೋಜನೆಯ ಮೊದಲನೇ ಮತ್ತು 2ನೇ ಹಂತದ ಪಂಪ್ ಹೌಸ್ ಅಡಿಯಲ್ಲಿ ಬರುವ ಸಬ್ ಸ್ಟೇಶನ್ ಕಾಮಗಾರಿಯ ಕುರಿತು ಅಂದಾಜು ಪತ್ರಿಕೆ ತಯಾರಿಸಬೇಕಾಗಿದ್ದು, ಸ್ಥಳ ಪರಿಶೀಲನೆ ಮಾಡಿ ಈಗಿರುವ ಮಾರುಕಟ್ಟೆ ದರ (ಜಿ.ಎಸ್.ಟಿ. ಸಹಿತ)ಗಳನ್ನು ನೀಡಲು ಅಲ್ಪಾವಧಿ ಕೊಟೇಶನ್ ಅಹ್ವಾನಿಸಲಾಗಿದೆ. ಈ ಕಚೇರಿಗೆ ದಿನಾಂಕ: 13.05.2026 ರ ಸಾಯಂಕಾಲ 05.00 ಘಂಟೆಯೊಳಗೆ ಸಲ್ಲಿಸಬಹುದಾಗಿದೆ.

ಐಟಂಗಳ ಮಾಹಿತಿಗಾಗಿ ಹಾಗೂ ಹೆಚ್ಚಿನ ತಾಂತ್ರಿಕ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿ(ನಿ), ಆ.ಬ.ದಂ.ಕಾ. ವಿಭಾಗ ಹುನಗುಂದ ಇವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಸದರಿ ಕೊಟೇಶನ್‌ಗಳನ್ನು ದಿನಾಂಕ:15.05.2026 ಬೆಳಿಗ್ಗೆ 11.45 ಘಂಟೆಗೆ ಕಾರ್ಯಪಾಲಕ ಅಭಿಯಂತರರು, ಕೃಬಾಜನಿ(ನಿ), ಆ.ಬ.ದಂ. ಕಾಲುವೆ ವಿಭಾಗ, ಹುನಗುಂದ ಕಛೇರಿಯಲ್ಲಿ ತೆರೆಯಲಾಗುವುದು.
ಸಂಪರ್ಕಿಸುವ ಈ–ಮೇಲ್ ವಿಳಾಸ. :eearbcdivn@gmail.com.
ಸಂಪರ್ಕಿಸುವ ದೂರವಾಣಿ ಸಂಖ್ಯೆ:.,M.No. 9741654272

ಸಹಿ/–ಕಾರ್ಯಪಾಲಕ ಅಭಿಯಂತರರು
ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ.
DIPR/BGK/RO-NO-14/KSMCA/2026-27

ಗೊಂದಲದ ಗೂಡಾದ ಶೃಂಗೇರಿಯ ಶಾಸಕತ್ವ

← ಮೊದಲಪುಟದಿಂದ

ಈಗ ಭೇಟಿ ಮಾಡಿದರೆ ನನಗೆ ಕಾನೂನಿನ ಬೋಧನೆ ಮಾಡುತ್ತಿದ್ದಾರೆ. ಸ್ಪೀಕರ್ ಕೂಡ ಇದೇ ರೀತಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಹಾಗೆ ಆಯ್ಕೆಯಾಗುವಾಗ ಅವರೇನೂ ನ್ಯಾಯಾಲಯಕ್ಕೆ ಹೋಗಿರಲಿಲ್ಲ. ಯಾವುದೇ ಶಾಸಕರ ವಿರುದ್ಧ ಕೋರ್ಟ್‌ಗೆ ಹೋಗಲು 45 ದಿನಗಳ ಕಾಲಾವಕಾಶವಿದ್ದರೂ ಪ್ರಮಾಣವಚನಕ್ಕೆ ಅದು ಅಡ್ಡಿಯಾಗುವುದಿಲ್ಲ. ಆದರೆ ಸ್ಪೀಕರ್ ಯು.ಟಿ.ಖಾದರ್ ಮಾತ್ರ ಪ್ರಮಾಣವಚನಕ್ಕೆ ಅವಕಾಶ ಮಾಡಿಕೊಡದೆ ಹೊಸ ಸಂಪ್ರದಾಯ ಆರಂಭಿಸಿದ್ದಾರೆ ಎಂದು ದೂರಿದ್ದಾರೆ.

ಅಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈ ಕೆಳಗಿನ ಅಧಿಕಾರಿಗಳು ಪೇಮೆಂಟ್ ಗಿರಾಕಿಗಳು ಅಂದಮೇಲೆ ಅವರೇ ಟ್ಯಾಂಪರ್ ಮಾಡಲು ಹೇಗೆ ಸಾಧ್ಯ? ಜೀವರಾಜ್ ಸೋತು ಎಂಟು ವರ್ಷವಾಗಿರುವಾಗ ಅವರ ಮಾತನ್ನು ಅಧಿಕಾರಿಗಳು ಕೇಳಲು ಸಾಧ್ಯವೇ? ಅಧಿಕಾರಿಗಳು ಮುಖ್ಯಮಂತ್ರಿಯ ಮಾತನ್ನು ಕೇಳುತ್ತಾರೆ. ಶೃಂಗೇರಿ ಕ್ಷೇತ್ರ ವೋಟ್ ಚೋರಿಗೆ ಉದಾಹರಣೆಯಾಗಿದ್ದು, ಇಡೀ ಸರಕಾರ ವಜಾ ಮಾಡಬೇಕಿದೆ. ಎಲ್ಲ ಕಡೆ ಮತಗಳ್ಳತನ ಆಗುತ್ತಿದೆ ಎಂದರೆ ಸರಕಾರದ ಎಲ್ಲ ಅಧಿಕಾರಿಗಳು ಡಕಾಯಿತರು ಎನ್ನಬೇಕಾಗುತ್ತದೆ. ಎಲ್ಲ ಕಡೆ ಸಿಸಿಟಿವಿ ಕ್ಯಾಮೆರಾ ಇರುವಾಗ ಕಳ್ಳತನವಾಗಲು ಸಾಧ್ಯವಿಲ್ಲ. ಫಲಿತಾಂಶ ಕೋರ್ಟ್‌ಗೆ ಸಲ್ಲಿಸಿ ಎಂದು ಎಲ್ಲೂ ಹೇಳಿಲ್ಲ. ಫಲಿತಾಂಶ ಕೂಡಲೇ ಪ್ರಕಟಿಸಿ ಎಂಬ ಸೂಚನೆ ಇದೆ ಎಂದರು.

ಸಂವಿಧಾನದ ವಿಧಿ 188 ಪ್ರಕಾರ ರಾಜ್ಯಪಾಲರು ಪ್ರಮಾಣವಚನ ಬೋಧಿಸುತ್ತಾರೆ. ಸ್ಪೀಕರ್ ಇಲ್ಲವಾದರೆ ಬೇರೆಯವರ ಹೆಸರು ಸೂಚಿಸುವ ಅಧಿಕಾರ ರಾಜ್ಯಪಾಲರಿಗಿದೆ. ಆದ್ದರಿಂದ ಸ್ಪೀಕರ್ ಬದಲು ನೀವೇ ಪ್ರಮಾಣವಚನ ಬೋಧಿಸಿ ಎಂದು ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಸರಕಾರ ಹೀಗೆ ಮಾಡಿದಾಗ ಇಬ್ಬರು ಬಿಜೆಪಿ ಶಾಸಕರು ರಾಜ್ಯಪಾಲರಿಗೆ ಕೋರಿದ್ದರು. ಅದೇ ರೀತಿ ನಾವು ಕೂಡ ಕೋರಿದ್ದೇವೆ.
–ಆರ್.ಅಶೋಕ, ಪ್ರತಿಪಕ್ಷದ ನಾಯಕ

ಏನಿದು ವಿವಾದ?

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ 59,171 ಮತಗಳನ್ನು ಪಡೆದು ಗೆದ್ದಿದ್ದರು. ಜೀವರಾಜ್ 58,970 ಮತಗಳನ್ನು ಪಡೆದು 201 ಮತಗಳ ಅಂತರದಿಂದ ಸೋತಿದ್ದರು. ಈ ಫಲಿತಾಂಶ ಪ್ರಶ್ನಿಸಿ ಜೀವರಾಜ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಏಪ್ರಿಲ್ 6ರಂದು ಹೈಕೋರ್ಟ್ 279 ತಿರಸ್ಕೃತ ಅಂಚೆ ಮತಪತ್ರಗಳ ಮರುಪರಿಶೀಲನೆ ಹಾಗೂ ಎಲ್ಲ ಅಂಚೆ ಮತಗಳ ಮರುಎಣಿಕೆಗೆ ಆದೇಶಿಸಿತ್ತು. ಅದರಂತೆ ಮೇ 2ರಂದು ಮರುಎಣಿಕೆ ನಡೆದಿತ್ತು. ಮೊದಲ ಎಣಿಕೆಯಲ್ಲಿ 1,822 ಅಂಚೆ ಮತಗಳಲ್ಲಿ ಜೀವರಾಜ್ 692 ಮತಗಳನ್ನು ಪಡೆದರೆ, ರಾಜೇಗೌಡ 569 ಮತಗಳನ್ನು ಪಡೆದಿದ್ದರು. ಮರುಪರಿಶೀಲನೆ ಮತ್ತು ಮರುಎಣಿಕೆಯ ಬಳಿಕ ಜೀವರಾಜ್ ಮತಗಳು 690 ಆಗಿದ್ದು, ರಾಜೇಗೌಡ ಅವರ ಮತಗಳು 314ಕ್ಕೆ ಇಳಿದಿದ್ದು, 255 ಮತಗಳ ಕಡಿತವಾಗಿದೆ. ಇದರಿಂದ ಜೀವರಾಜ್ 52 ಮತಗಳ ಅಂತರದಿಂದ ವಿಜೇತರಾಗಿ ಘೋಷಿಸಲ್ಪಟ್ಟಿದ್ದರು. ಆ ಬಳಿಕ ರಾಜೇಗೌಡ ಪರ ಮತ ಎಣಿಕೆ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ ನೀಡಿದ ದೂರಿನ ಆಧಾರದಲ್ಲಿ ಚಿಕ್ಕಮಗಳೂರು ಪಟ್ಟಣ ಪೊಲೀಸರು ಜೀವರಾಜ್, ಅಧಿಕಾರಿಗಳು ಸೇರಿದಂತೆ ಹಲವರ ವಿರುದ್ಧ ಕೇಸ್ ದಾಖಲಿಸಿದ್ದರು. ಮರುಎಣಿಕೆ ವೇಳೆ ರಾಜೇಗೌಡ ಪರದ 255 ಮತಪತ್ರಗಳಲ್ಲಿ ತಿದ್ದುಪಡಿ ನಡೆದಿದೆ ಎಂದು ಆರೋಪಿಸಲಾಗಿದೆ.

ಪ್ರಕರಣದ ತನಿಖೆಗೆ ಹೈಕೋರ್ಟ್ ತಾತ್ಕಾಲಿಕ ತಡೆ

ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರುಎಣಿಕೆ ವೇಳೆ ಮತಪತ್ರಗಳಲ್ಲಿ ತಿದ್ದುಪಡಿ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ವಿರುದ್ಧ ದಾಖಲಾದ ಪ್ರಕರಣದ ತನಿಖೆಗೆ ಹೈಕೋರ್ಟ್ ಮಂಗಳವಾರ ತಾತ್ಕಾಲಿಕ ತಡೆ ನೀಡಿದೆ. ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ರಜಾ ಪೀಠ, ಪ್ರಾಥಮಿಕವಾಗಿ ಎಫ್‌ಐಆರ್‌ಗೆ ತಡೆ ನೀಡಬೇಕು ಎಂಬ ಅಭಿಪ್ರಾಯದಲ್ಲಿದ್ದೇವೆ. ರಾಜಕೀಯ ಒತ್ತಡದಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಬಾರದು. ಇದು ಕಾನೂನು ಪ್ರಕ್ರಿಯೆಯ ದುರುಪಯೋಗ ಎಂದು ಅಭಿಪ್ರಾಯಪಟ್ಟು ಮುಂದಿನ ವಿಚಾರಣೆ ಮೇ 7ಕ್ಕೆ ಮುಂದೂಡಿದೆ.ಸರಕಾರದ ವಿಶೇಷ ಸಾರ್ವಜನಿಕ ಅಭಿಯೋಜಕ ಬಿ.ಎ.ಬೆಳ್ಳಿಯಪ್ಪ, ಅಂಚೆ ಮತಪತ್ರಗಳಲ್ಲಿ ಡಬಲ್ ಟಿಕ್ ಗುರುತು ಕಂಡುಬಂದಿದೆ ಎಂದು ವಾದಿಸಿದ್ದರು. ಮರುಎಣಿಕೆಗೆ ಮೊದಲು ಈ ಬಗ್ಗೆ ರಿಟರ್ನಿಂಗ್ ಅಧಿಕಾರಿಗೆ ದೂರು ನೀಡಲಾಗಿದ್ದರೂ ಕ್ರಮ ಕೈಗೊಳ್ಳಲಿಲ್ಲ ಎಂದು ಅವರು ಹೇಳಿದ್ದು, ಅಲ್ಲದೆ ಮರುಎಣಿಕೆ ಮಾಡಬಾರದ ಅಂಚೆ ಮತಗಳನ್ನೂ ಎಣಿಸಲಾಗಿದೆ ಎಂದು ವಾದಿಸಿದ್ದರು. ಇದಕ್ಕೆ ಪ್ರತಿಯಾಗಿ ನ್ಯಾಯಪೀಠ, ಹೈಕೋರ್ಟ್ ಆದೇಶದಂತೆ ಮರುಎಣಿಕೆ ನಡೆದಿದೆ. ಏಜೆಂಟ್ ನ್ಯಾಯಾಲಯವನ್ನು ಸಂಪರ್ಕಿಸಿ ಸ್ಪಷ್ಟನೆ ಕೇಳಬಹುದಿತ್ತು ಎಂದು ಸೂಚಿಸಿತು. ಅಲ್ಲದೆ ಮತ ಎಣಿಕೆಯಲ್ಲಿ ವ್ಯತ್ಯಾಸ ಇದ್ದರೆ ಚುನಾವಣಾ ಅರ್ಜಿ ಸಲ್ಲಿಸುವುದೇ ಸೂಕ್ತ ಮಾರ್ಗ ಎಂದು ಅಭಿಪ್ರಾಯಪಟ್ಟಿತು. ಮುಂದಿನ ವಿಚಾರಣೆಯಲ್ಲಿ ಅಗತ್ಯ ದಾಖಲೆಗಳನ್ನು ಸಲ್ಲಿಸಲು ಪ್ರಾಸಿಕ್ಯೂಷನ್‌ಗೆ ಕೋರ್ಟ್ ಅವಕಾಶ ನೀಡಿದ್ದು, ಪ್ರಸ್ತುತ ರಿಟರ್ನಿಂಗ್ ಅಧಿಕಾರಿ ಗೌರವ್ ಕುಮಾರ್ ಶೆಟ್ಟಿ ಅವರನ್ನು ಸಹ ಆರೋಪಿಯಾಗಿಸಲು ಪರಿಗಣಿಸಬಹುದು ಎಂದು ಕೋರ್ಟ್ ಹೇಳಿದೆ. ಇನ್ನೊಂದೆಡೆ ತಮ್ಮ ಅರ್ಜಿಯಲ್ಲಿ ಈ ಎಫ್‌ಐಆರ್ ಈಗಾಗಲೇ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಿದ್ದ ವಿಷಯಗಳನ್ನು ಮರು ತೆರೆಯುವ ಪ್ರಯತ್ನ ಮಾತ್ರ ಎಂದು ಜೀವರಾಜ್ ಪರ ವಾದಿಸಲಾಗಿದೆ.

ಸರಕಾರ ರಚನೆ ಕಸರತ್ತು

← ಮೊದಲಪುಟದಿಂದ

ಬುಧವಾರ ಅಥವಾ ಗುರುವಾರ ಬಿಜೆಪಿ ರಾಷ್ಟ್ರಿಯ ಸಂಸದೀಯ ಮಂಡಳಿ ಸಭೆ ನಡೆಯಲಿದ್ದು, ನಂತರವೇ ಸರಕಾರ ರಚನೆಗೆ ಹಕ್ಕು ಮಂಡಿಸಲಿದ್ದಾರೆ. 'ನೂತನ ಮುಖ್ಯಮಂತ್ರಿಯ ಪ್ರಮಾಣ ವಚನ ಸ್ವೀಕಾರ ಸಮಾರಂಭ ಮೇ 9ರಂದು ನಡೆಯಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಮೀಕ್ ಭಟ್ಟಾಚಾರ್ಯ ತಿಳಿಸಿದ್ದಾರೆ.

ಮುಖ್ಯ ವೀಕ್ಷಕರನ್ನಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಸಹ–ವೀಕ್ಷಕರನ್ನಾಗಿ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಂಝಿ ಅವರನ್ನು ನೇಮಿಸಲಾಗಿದೆ.

ಅಸ್ಸಾಂನಲ್ಲಿ ಯಾವುದೇ ಅಡ್ಡಿ ಇಲ್ಲ: ಈಶಾನ್ಯ ರಾಜ್ಯವಾದ ಅಸ್ಸಾಂನಲ್ಲಿ ಸರಕಾರ ರಚನೆಗೆ ಯಾವುದೇ ಅಡ್ಡಿ ಇಲ್ಲ. ಬಿಜೆಪಿ ನೇತೃತ್ವದ ಎನ್‌ಡಿಎ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿರುವುದರಿಂದ ಹಿಮಂತ್ ಬಿಶ್ವಾಸ್ ಶರ್ಮ ಯಾವು ದೇ ಕ್ಷಣದಲ್ಲಿ ಸರಕಾರ ರಚನೆಗೆ ಹಕ್ಕು ಮಂಡಿಸಲಿದ್ದಾರೆ. ಮೇ 7ರಂದು ಮುಖ್ಯಮಂತ್ರಿ ಪ್ರಮಾಣವಚನ ಕಾರ್ಯಕ್ರಮ ನಡೆಯಲಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಮುಖ್ಯ ವೀಕ್ಷಕರನ್ನಾಗಿ ಮತ್ತು ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರನ್ನು ಸಹ ವೀಕ್ಷಕರನ್ನಾಗಿ ನೇಮಿಸಲಾಗಿದೆ.

ರಂಗಸ್ವಾಮಿ ಹಾದಿ ಸುಗಮ: ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲೂ ಬಿಜೆಪಿ– ಎಐಎನ್‌ಆರ್‌ಸಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬಂದಿರುವುದರಿಂದ ಉಸ್ತುವಾರಿ ಸಿಎಂ ರಂಗಸ್ವಾಮಿ ಅವರು ಸರಕಾರ ರಚನೆಗೆ ಲೆಫ್ಟಿನೆಂಟ್ ಗವರ್ನರ್ ಜನರಲ್ ಅವರನ್ನು ಭೇಟಿ ಮಾಡಿ, ಸರಕಾರ ರಚನೆಗೆ ಹಕ್ಕು ಮಂಡಿಸಲಿದ್ದಾರೆ.

ಸಮಾಚಾರ ಸಣ್ಣದಲ್ಲ

ರಾಮನಗರದಲ್ಲಿ ಒಡೆಯರ್ ನಿಲುಗಡೆ

ರಾಮನಗರ: ಬೆಂಗಳೂರು ಮತ್ತು ಮೈಸೂರು ನಡುವೆ ನಿತ್ಯ ಸಂಚರಿಸುವ ಒಡೆಯರ್ ಎಕ್ಸ್‌ಪ್ರೆಸ್ ರೈಲಿಗೆ ಈಗ ರಾಮನಗರ ರೈಲ್ವೆ ನಿಲ್ದಾಣದಲ್ಲಿ ನಿಲುಗಡೆ ನೀಡಲಾಗಿದೆ. ಬೆಂಗಳೂರು-ಮೈಸೂರು ನಡುವೆ ನಿತ್ಯ ಸಾವಿರಾರು ಜನರು ಸಂಚರಿಸುತ್ತಾರೆ. ಇಷ್ಟು ದಿನ ರಾಮನಗರದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ರೈಲಿನ ನಿಲುಗಡೆ ಇಲ್ಲದ ಕಾರಣ ಪ್ರಯಾಣಿಕರಿಗೆ ತೊಂದರೆಯಾಗುತ್ತಿತ್ತು. ಆದರೆ, ರಾಮನಗರದ ಪ್ರಯಾಣಿಕರ ಬೇಡಿಕೆ ಮೇರೆಗೆ ಒಡೆಯರ್ ಎಕ್ಸ್‌ಪ್ರೆಸ್ ನಿಲುಗಡೆಗೆ ಸಚಿವ ವಿ. ಸೋಮಣ್ಣ ಹಸಿರು ನಿಶಾನೆ ತೋರಿದ್ದಾರೆ. ಕೇಂದ್ರ ಸಚಿವ ವಿ.ಸೋಮಣ್ಣ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ, ಸಂಸದ ಡಾ.ಸಿ.ಎನ್. ಮಂಜುನಾಥ್, ಶಾಸಕ ಇಕ್ಬಾಲ್ ಹುಸೇನ್ ಹಾಗೂ ಸ್ಥಳೀಯ ಮುಖಂಡರು ಸಾಥ್ ನೀಡಿದ್ದಾರೆ.

ಪಶ್ಚಿಮ ಬಂಗಾಳದಂತೆ ರಾಜ್ಯದಲ್ಲೂ ಕಮಲ

ಮಡಿಕೇರಿ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸಾಧಿಸಿದ ಅದ್ಭುತ ಗೆಲುವಿನ ಕಾರ್ಯತಂತ್ರವನ್ನೇ ಕರ್ನಾಟಕದಲ್ಲಿ 2028ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಗೆ ಬಳಸಿಕೊಂಡು ರಾಜ್ಯದಲ್ಲಿಯೂ ಗೆಲುವು ಸಾಧಿಸಲಾಗುತ್ತದೆ ಎಂದು ಕೊಡಗು-ಮೈಸೂರು ಸಂಸದ ಯದುವೀರ್ ಒಡೆಯರ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಶ್ಚಿಮ ಬಂಗಾಳದ ಗೆಲುವು ಬಿಜೆಪಿಯಲ್ಲಿ ಮತ್ತೆ ಹೊಸ ಸಂಭ್ರಮ, ಉತ್ಸಾಹ ಮೂಡಿಸಿದೆ. 2028ರಲ್ಲಿ ಕರ್ನಾಟಕದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿಯೂ ಬಂಗಾಳದ ಮಾದರಿಯನ್ನು ಅನುಸರಿಸಿ ಬಿಜೆಪಿ ಕಾರ್ಯಕರ್ತರ ಪಡೆಯೊಂದಿಗೆ ಮತದಾರರ ಮನೆಮನ ತಲುಪಲಿದೆ. ಈ ಮೂಲಕ ಜನವಿರೋಧಿ ಕಾಂಗ್ರೆಸ್ ಸರಕಾರದ ಆಡಳಿತ ಅಂತ್ಯವಾಗಲಿದೆ ಎಂದರು.

ಹಣ-ಹೆಂಡ ಹಂಚಿ ಗೆದ್ದಿರುವ ಕಾಂಗ್ರೆಸ್

ಮಡಿಕೇರಿ: ಪಂಚ ರಾಜ್ಯ ಚುನಾವಣೆಗಳ ಪೈಕಿ 3 ರಾಜ್ಯಗಳಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ್ದು ಕರ್ನಾಟಕದಲ್ಲಿಯೂ 2028 ರಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲು ಪ್ರೇರಣೆಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೇ9 ರಂದು ಚಿತ್ರದುರ್ಗದಲ್ಲಿ ಆಯೋಜಿಸಿರುವ ಯಡಿಯೂರಪ್ಪ ಅಭಿಮಾನೋತ್ಸವದ ಕರ್ನಾಟಕದಲ್ಲಿ ಬಿಜೆಪಿ ಚುನಾವಣಾ ರಣಕಹಳೆ ಊದಲಿದೆ ಎಂದು ಹೇಳಿದ ಬೊಮ್ಮಾಯಿ, ಆ ವಿಜಯೋತ್ಸವ ಕಾಂಗ್ರೆಸ್ ಸರಕಾರದ ಪತನಕ್ಕೆ ದಿನಗಣನೆ ಪ್ರಾರಂಭಿಸಲಿದೆ ಎಂದರು. 15 ವರ್ಷಗಳ ಕಾಲ ಪಶ್ಚಿಮ ಬಂಗಾಳ ದಲ್ಲಿ ದುರಾಡಳಿತ ನಡೆಸಿದ್ದ ಮಮತಾ ಬ್ಯಾನರ್ಜಿಯ ಸರ್ವಾಧಿಕಾರವನ್ನು ಅಂತ್ಯಗೊಳಿಸಿದ ಮೋದಿ ಮತ್ತು ಅಮಿತ್ ಷಾ ಜೋಡಿಯ ಕಾರ್ಯತಂತ್ರ, ಭಾರತೀಯರ ಮೆಚ್ಚುಗೆ ಗಳಿಸಿದೆ ಎಂದರು. ಕರ್ನಾಟಕದ ಉಪಚುನಾವಣೆ ಸಂದರ್ಭ ಮತದಾನಕ್ಕೆ ಎರಡು ದಿನಗಳಿರುವಾಗ ಕಾಂಗ್ರೆಸ್ ಪಕ್ಷ, ಹಣ, ಹೆಂಡವನ್ನು ಹಂಚುವ ಮೂಲಕ ಕರಾಳರಾತ್ರಿಯ ನೆನಪನ್ನು ತಂದು ಕುಟಿಲ ತಂತ್ರದಿಂದ ಚುನಾವಣೆಯನ್ನು ಗೆದ್ದಿದೆ ಎಂದರು.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ ಕ್ಲಬ್ ಹೌಸ್
06.05.2026
ಸಂಜೆ: 06.55 ರಿಂದ 08.05 ರವರೆಗೆ
ಬುಧವಾರದ ಅತಿಥಿ



ಡಾ. ಡಿ. ಎಸ್. ರಾಘವೇಂದ್ರ
ವಿಷಯ
ರಾಮಕೃಷ್ಣಂ ವಂದೇ ಜಗದ್ಗುರು
vishwavani.news

ದಿನ ವಿಶೇಷ

06 ಮೇ 2026 ಬುಧವಾರ

» ಸೂರ್ಯೋದಯ	: 05-53
» ಸೂರ್ಯಾಸ್ತ	: 06-54
» ತಿಥಿ	: ಚತುರ್ಥಿ
» ನಕ್ಷತ್ರ	: ಮೂಲ
» ಸಂವತ್ಸರ	: ಪರಾಭವ
» ಆಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ವೈಶಾಖ
» ಪಕ್ಷ	: ಕೃಷ್ಣಪಕ್ಷ

ಯಾವುದೇ ಕೊರತೆ ಆಗದಂತೆ ಎಲ್ಲ ಸಿದ್ಧತೆ

ಅಭಿಮಾನೋತ್ಸವ ಕಾರ್ಯಕ್ರಮದ ವೇದಿಕೆ, ಅಡುಗೆ ಮೇಲ್ವಿಚಾರಣೆ

ಚಿತ್ರದುರ್ಗಕ್ಕೆ ಭೇಟಿ ನೀಡಿದ ಶಾಸಕ ವಿಶ್ವನಾಥ್ ಹಾಗೂ ಮುನಿರತ್ನ ಅವರು ಅಭಿಮಾನೋತ್ಸವ ಕಾರ್ಯಕ್ರಮದ ವೇದಿಕೆ ಸಿದ್ಧತೆಯನ್ನು ಪರಿಶೀಲನೆ ನಡೆಸಿದರು.

ಚಿತ್ರದುರ್ಗ: ರಾಜ್ಯದ ವಿವಿಧೆಡೆಗಳಿಂದ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ 10 ಲಕ್ಷ ಜನ ಆಗಮಿಸುವ ನಿರೀಕ್ಷೆಯಿದ್ದು, ಯಾವುದೇ ಕೊರತೆ ಆಗದಂತೆ ನೋಡಿಕೊಳ್ಳಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಯಲಹಂಕ ಶಾಸಕ ವಿಶ್ವನಾಥ್ ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ 50 ವರ್ಷ ರಾಜಕೀಯ ಜೀವನ ಪೂರೈಸಿದ ಹಿನ್ನೆಲೆ ಮೇ9 ರಂದು ಚಿತ್ರದುರ್ಗ ನಗರದ ಹೊರವಲಯದ ಶ್ರೀ ಮಾದರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ನಡೆಸಲು ಉದ್ದೇಶಿಸಿರುವ ಅಭಿಮಾನೋತ್ಸವ ಕಾರ್ಯಕ್ರಮದ ಮುಖ್ಯ ವೇದಿಕೆ, ಆಹಾರ ತಯಾರಿಕಾ ಸ್ಥಳಕ್ಕೆ ಭೇಟಿ ನೀಡಿ ಅವರು ಪರಿಶೀಲನೆ ನಡೆಸಿದರು.

ಈ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಅವರು, ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ರಾಜ್ಯದ ವಿವಿಧೆಡೆಗಳಿಂದ ಸುಮಾರು 10 ಲಕ್ಷ ಜನತೆ ಆಗಮಿಸಲಿದ್ದಾರೆ, ಇಲ್ಲಿಗೆ ಬರುವವರಿಗೆ ಊಟ, ನೀರಿನ ಕೊರತೆಯಾಗದಂತೆ ನೀಡಿಕೊಳ್ಳುವ ಜವಾಬ್ದಾರಿಯನ್ನು ಪಕ್ಷ ಬೆಂಗಳೂರಿನ ಶಾಸಕರಿಗೆ ಮತ್ತು ಪ್ರಮುಖರಿಗೆ ವಹಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೆ ಅಡುಗೆ ಭಟ್ಟರನ್ನು ನೇಮಿಸಲಾಗಿದೆ. ಸುಮಾರು 500 ಜನ ಅಡುಗೆ ಮಾಡುವವರು ಅಡುಗೆ ಸಾಮಾನಿನ ಸಮೇತರಾಗಿ ಚಿತ್ರದುರ್ಗಕ್ಕೆ ಬರಲಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸಕಲ ಸಿದ್ಧತೆ ಮಾಡಲಾಗಿದೆ ಎಂದರು.

ಕಾರ್ಯಕ್ರಮ ನಡೆಯುವ ದಿನದಂದು ಬೆಳಗ್ಗೆ 9ಗಂಟೆಯಿಂದ ಕಾರ್ಯಕ್ರಮ ಮುಗಿಯುವವರೆಗೂ ಊಟದ ವ್ಯವಸ್ಥೆಯನ್ನು ಮಾಡಲಾಗುವುದು. ಬಂದವರಿಗೆ ವಿವಿಧ ರೀತಿಯ ಊಟವನ್ನು ಬಡಿಸಲಾಗುವುದು, ಬೆಳಗ್ಗೆ ಟಮೋಟೋ ಬಾತ್, ಮೊಸರನ್ನ ಮೈಸೂರು ಪಾಕ್, ವಾಟರ್ ಬಾಟಲ್ ನೀಡಲಾಗುವುದು. 12ರ ನಂತರ ವೆಜಿಟೇಬಲ್ ಪಲಾವ್, ಮೊಸರನ್ನ, ಮೈಸೂರು ಪಾಕ್, ಕಾರ್ಯಕ್ರಮಕ್ಕೆ ಬಂದವರನ್ನು ಯಾವುದೇ ಕಾರಣಕ್ಕೂ ಹಸಿದ ಹೊಟ್ಟೆಯಲ್ಲಿ ಕಳುಹಿಸುವುದಿಲ್ಲ. ಎಲ್ಲಾ ಜವಾಬ್ದಾರಿಯನ್ನು ಅಡುಗೆ ಮಾಡುವವರಿಗೆ ನೀಡಲಾಗಿದ್ದು ಒಂದು ಊಟಕ್ಕೆ ಇಂತಿಷ್ಟು ಎಂದು ಮಾತನಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಹಾಲಕ್ಷ್ಮೀ ಪುರಂ ಶಾಸಕ ಗೋಪಾಲಯ್ಯ, ದಾಸರಹಳ್ಳಿ ಶಾಸಕ ಮುನಿರಾಜ್, ಬೆಂಗಳೂರು ದಕ್ಷಿಣದ ಕೃಷ್ಣಪ್ಪ ಮಾಜಿ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು, ರಾಜ್ಯ ಉಪಾಧ್ಯಕ್ಷರಾದ ತಮ್ಮೇಶ್ ಗೌಡ, ಮಲ್ಲಿಕಾರ್ಜುನ ಕಲ್ಲಂ ಸೀತರಾಮರೆಡ್ಡಿ ಸೇರಿದಂತೆ ಇತರರು ಭಾಗವಹಿಸಿದ್ದರು.

ತಾನೂ ಬೆಳೆದು ತನ್ನವರನ್ನು ಬೆಳೆಸಿದ ಧೀಮಂತ

ಯಡಿಯೂರಪ್ಪ ರವರು ಕೊಟ್ಟ ಮಾತಿನಂತೆ ನಡೆದಕೊಂಡ ವ್ಯಕ್ತಿ. ಅಧಿಕಾರದ ಸಮಯದಲ್ಲಿ ತಾನು ಬೆಳೆದು ತನ್ನ ಜತೆಯಲ್ಲಿ ಇರುವವರನ್ನು ಸಹಾ ಬೆಳೆಸುವುದರ ಮೂಲಕ ದೊಡ್ಡ ವ್ಯಕ್ತಿ ಯಾಗಿದ್ದಾರೆ. ನಂಬಿದವರನ್ನು ಕೈಬಿಡುವು ದಿಲ್ಲ ಎಂಬ ಹೆಸರು ಯಾರಿಗಾದರೂ ಇದ್ದರೆ ಅದು ಯಡಿಯೂರಪ್ಪ ಅವರಿಗೆ ಮಾತ್ರ, ಇವರ 50 ವರ್ಷದ ಹೋರಾಟದ ಜೀವನದ ಸಾಧನೆಯ ಕಾರ್ಯಕ್ರಮದ ಯಶಸ್ವಿಗೆ ಎಲ್ಲರು ಸಹಾ ಕಂಕಣ ಬದ್ಧರಾಗಿ ದುಡಿಯಲಾಗುತ್ತಿದೆ. ಪಕ್ಷದ ಕಾರ್ಯಕರ್ತರಿಗೆ ಹಬ್ಬದ ವಾತಾವರಣವನ್ನು ಮೂಡಿಸಿದೆ ಎಂದು ಬೆಂಗಳೂರಿನ ಆರ್‌ಆರ್ ನಗರ ಶಾಸಕ ಮುನಿರತ್ನ ಹೇಳಿದರು.

ಊಟ ನೀಡುವಲ್ಲಿ ಯಾವುದೇ ಸಮಸ್ಯೆಯಾಗಬಾರದೆಂದು ಒಂದೊಂದು ಕೌಂಟರ್ ಬಳಿ ಇಬ್ಬರು ಶಾಸಕರು, 120 ಜನ ಸ್ವಯಂ ಸೇವಕರು ಇರಲಿದ್ದಾರೆ. ಕಾರ್ಯಕ್ರಮಕ್ಕೆ ಬಂದ ಯಾರೊಬ್ಬರು ಹಸಿದ ಹೊಟ್ಟೆಯಲ್ಲಿ ಹಿಂದಿರುಗಬಾರದು ಎಂಬ ಉದ್ದೇವಿದೆ. ಆದಕ್ಕಾಗಿ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

-ವಿಶ್ವನಾಥ್ ಯಲಹಂಕ ಶಾಸಕ

ಅಭಿಮಾನಿಗಳಿಂದಲೇ ಅಭಿಮಾನೋತ್ಸವ ಆಯೋಜನೆ
10 ಲಕ್ಷ ಜನರು ಸೇರುವ ನಿರೀಕ್ಷೆ: ಡಾ.ಪ್ರಭಾಕರ ಕೋರೆ

ಬಿಎಸ್‌ವೈಗೆ ಇರುವ ಶಕ್ತಿ ಬೇರೆ ಯಾರಿಗೂ ಇಲ್ಲ

ಬೆಳಗಾವಿ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ಇರುವ ಶಕ್ತಿ ಕರ್ನಾಟಕದಲ್ಲಿ ಯಾರಿಗೂ ಇಲ್ಲ. ಅವರನ್ನು ಬೇರೆಯವರೊಂದಿಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ. ಅವರು ಕರ್ನಾಟಕಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಅಭಿಮಾನಿಗಳೆಲ್ಲ ಸೇರಿ ಬಿಎಸ್‌ವೈ ಅಭಿಮಾನೋತ್ಸವ ಆಚರಿಸುತ್ತಿದ್ದೇವೆ ಎಂದು ರಾಜ್ಯಸಭೆಯ ಮಾಜಿ ಸದಸ್ಯ, ಕೆಎಲ್‌ಇ ಸಂಸ್ಥೆಯ ಗೌರವಾಧ್ಯಕ್ಷ, ಯಡಿಯೂರಪ್ಪ ಅಭಿಮಾನೋತ್ಸವದ ಅಧ್ಯಕ್ಷ ಡಾ.ಪ್ರಭಾಕರ ಕೋರೆ ತಿಳಿಸಿದ್ದಾರೆ.

ಬೆಳಗಾವಿಯ ಕನ್ನಡಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದುರ್ಗದಲ್ಲಿ ಇದೇ 9ರಂದು ನಡೆಯಲಿರುವ ಸಮಾವೇಶ ಜಾತ್ಯತೀತ, ಪಕ್ಷಾತೀತ. ಸುಮಾರು 10 ಲಕ್ಷ ಜನರ ನಿರೀಕ್ಷೆ ಇದೆ. 5 ಲಕ್ಷ ಆಸನಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸುವರ್ಣ ವಿಧಾನಸೌಧ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಸೇರಿದಂತೆ ಬೆಳಗಾವಿ ಜಿಲ್ಲೆಗೆ ಬಹಳ ದೊಡ್ಡಮಟ್ಟದಲ್ಲಿ ಯಡಿಯೂರಪ್ಪ ಕೊಡುಗೆ ನೀಡಿದ್ದಾರೆ. ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರದಿಂದ ಕನಿಷ್ಟ ಒಂದು ಸಾವಿರ ಜನರು ಪಾಲ್ಗೊಳ್ಳಲಿದ್ದಾರೆ. ಅವರು ರಾಜಕಾರಣಿಗಳಿಗೆಲ್ಲ ಆದರ್ಶರಾಗಿದ್ದಾರೆ ಎಂದು ಕೋರೆ ಹೇಳಿದರು.

ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಮಾತನಾಡಿ, ಸುವರ್ಣ ವಿಧಾನ ಸೌಧ ನಿರ್ಮಾಣ ಸೇರಿದಂತೆ ಬೆಳಗಾವಿಗೆ ಯಡಿಯೂರಪ್ಪ ಕೊಡುಗೆ ದೊಡ್ಡ ಮಟ್ಟದ್ದು. ಕಾಯಕ ಮತ್ತು ದಾಸೋಹ ತತ್ವಗಳ ಮಠಗಳಿಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಹಾಗಾಗಿ ಸಾವಿರಾರು ಮಠಾಧೀಶರೂ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರವಾಹ ಬಂದ ಸಂದರ್ಭದಲ್ಲಿ ನಿಯಮ ಮೀರಿ ದೊಡ್ಡ ಮಟ್ಟದ ನೆರವು ನೀಡಿದ್ದಾರೆ. ಜನಪರ ಕಾಳಜಿಯ ನಾಯಕರಾದ ಅವರು ರಾಜಕಾರಣ ಮತ್ತು ಸಮಾಜಕಾರ್ಯ ಎರಡನ್ನೂ ಆದರ್ಶವಾಗಿ ನಡೆಸಿಕೊಂಡು ಬಂದಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಅನಿಲ ಬೆನಕೆ, ಮಾಜಿ ಸಂಸದೆ ಮಂಗಲ್ ಅಂಗಡಿ, ಮಾಜಿ ಶಾಸಕ ಸಂಜಯ್ ಪಾಟೀಲ್, ಮಾಜಿ ಎಂ.ಎಲ್.ಸಿ ಮಹಾಂತೇಶ್ ಕವಟಗಿಮಠ, ಬಿಜೆಪಿ ನಗರಾಧ್ಯಕ್ಷೆ ಗೀತಾ ಸುತಾರ್, ಸುಭಾಷ್ ಪಾಟೀಲ್, ರಮೇಶ್ ದೇಶಪಾಂಡೆ, ಮುರುಘೇಂದ್ರಗೌಡ ಪಾಟೀಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಹೋರಾಟದ ಮೂಲಕ ನಾಯಕನಾಗಿ ಗುರುತಿಸಿಕೊಂಡವರು ಯಡಿಯೂರಪ್ಪ. ರಾಜಕಾರಣಿ ಹೇಗಿರಬೇಕು ಎಂದು ತೋರಿಸಿಕೊಟ್ಟವರು. ಅವರ ಅಭಿಮಾನೋತ್ಸವ ಯಶಸ್ವಿಗೊಳಿಸಬೇಕಿರುವುದು ನಮ್ಮೆಲ್ಲರ ಕರ್ತವ್ಯ.

-ಎಂ.ಬಿ.ಜಿರಲಿ ಬಿಜೆಪಿ ವಕ್ತಾರ

ಬೆಳಗಾವಿಯ ಕನ್ನಡಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕೆಎಲ್‌ಇ ಸಂಸ್ಥೆಯ ಗೌರವಾಧ್ಯಕ್ಷ, ಯಡಿಯೂರಪ್ಪ ಅಭಿಮಾನೋತ್ಸವದ ಅಧ್ಯಕ್ಷ ಡಾ.ಪ್ರಭಾಕರ ಕೋರೆ ಮಾತನಾಡಿದರು.

ಹಾಸನ: ವೃದ್ಧನ ಮೇಲೆ ಹಲ್ಲೆ ಮಾಡಿ ವಿಕೃತಿ

ಹಾಸನ: ಪುಡಿ ರೌಡಿಯೊಬ್ಬ ಕುಡಿದು ಬಂದು ವೃದ್ಧನ ಮೇಲೆ ಮಚ್ಚಿನಿಂದ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ಹಾಸನದ ಚಿಕ್ಕಬಸವನಹಳ್ಳಿ ಗ್ರಾಮದಲ್ಲಿ ನಡೆದಿದೆ. ಹಲ್ಲೆಗೊಳಗಾದವರನ್ನು ತಮ್ಮೇಗೌಡ (68) ಎಂದು ಗುರುತಿಸಲಾಗಿದೆ.

ಬೋರೇಗೌಡ ಅಲಿಯಾಸ್ ಲೋಕೇಶ್ (49) ಮಚ್ಚಿನಿಂದ ಮನ ಬಂದಂತೆ ಹಲ್ಲೆ ನಡೆಸಿದ ಪುಡಿ ರೌಡಿ ಎಂದು ಗೊತ್ತಾಗಿದೆ. ತಮ್ಮೇಗೌಡ ವ್ಯಾಪಾರ ಮಾಡಲು ತಮ್ಮ ತೋಟದಲ್ಲಿ ಎಳನೀರು ಕೆಡವಿಕೊಂಡು ಪತ್ನಿಯೊಂದಿಗೆ ಬರುತ್ತಿದ್ದರು. ಈ ವೇಳೆ ಎದುರಾದ ಬೋರೇಗೌಡ ಏಕಾಏಕಿ ಮಚ್ಚನ್ನು ಉಲ್ಟಾ ಮಾಡಿಕೊಂಡು ಥಳಿಸಿದ್ದಾನೆ. ಮಚ್ಚಿನಿಂದ ಹಲ್ಲೆ ನಡೆಸುವ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದೆ. ನೆಲಕ್ಕೆ ಬಿದ್ದು ಬೇಡಿಕೊಂಡರು ಬಿಡದೆ ಹಲ್ಲೆ ನಡೆಸಿದ್ದಾನೆ. ಪತಿ ಮೇಲೆ ಹಲ್ಲೆ ಮಾಡುವುದನ್ನು ಕಂಡು ತಮ್ಮೇಗೌಡರ ಪತ್ನಿ ಹೆದರಿ ಓಡಿ ಹೋಗಿದ್ದಾರೆ. ಹಲ್ಲೆ ನಡೆಸಿದ ನಂತರ ಡ್ಯಾನ್ಸ್ ಮಾಡುತ್ತಾ ವಿಕೃತಿ ಮೆರೆಯಲಾಗಿದೆ.

ರಾಜ್ಯದಲ್ಲಿ ಜನಪರ ಮೈತ್ರಿ ಸರಕಾರ ಅಧಿಕಾರಕ್ಕೆ ತನ್ನಿ

ತುಮಕೂರು: ಕಾಂಗ್ರೆಸ್ ಸರಕಾರದ ದುರಾಳಿತಕ್ಕೆ ಜನ ಬೇಸತ್ತಿದ್ದಾರೆ. ಆಗಾಗಿ ಮುಂದಿನ ದಿನಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಕೂಟಕ್ಕೆ ಆಶೀರ್ವಾದ ಮಾಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಮನವಿ ಮಾಡಿದರು. ಇಲ್ಲಿನ ಮುಳಕುಂಟೆ ಗ್ರಾಮದಲ್ಲಿ ಮಂಗಳವಾರ ನಡೆದ ವಿಜಯ ಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡರು.

ಈ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಮೈತ್ರಿ ಕೂಟ ಈ ಬಾರಿಯ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದೆ. ಈ ಗೆಲುವು ದೇಶದ ಮುಂದಿನ ಚುನಾವಣೆಗಳಿಗೆ ದಿಕ್ಸೂಚಿಯಾಗಿದೆ. ಈ ಸಂಬಂಧ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಲು ತುರ್ತಾಗಿ ದೆಹಲಿಗೆ ಹೋಗಬೇಕಾಗಿದೆ ಎಂದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಿಂದ ಜೆಡಿಎಸ್-ಬಿಜೆಪಿಯ ಮೈತ್ರಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ನೀವೆಲ್ಲಾ ದಾಖಲೆ ಮತಗಳ ಅಂತರದಿಂದ ಗೆಲ್ಲಿಸಿದ ಪರಿಣಾಮ ಅವರು ಹಾಗೂ ತಾವು ಕೇಂದ್ರ ಮಂತ್ರಿಯಾಗಲು ಅವಕಾಶವಾಯಿತು. ಮುಂಬರುವ ಚುನಾವಣೆಗಳಲ್ಲೂ ಇದೇ ರೀತಿಯಲ್ಲಿ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

ರಾಜ್ಯ ಕಾಂಗ್ರೆಸ್ ಸರಕಾರದ ದುರಾಡಳಿತದಿಂದ ಜನ ಬೇಸತ್ತಿದ್ದಾರೆ. ಬದಲಾವಣೆ ಬಯಸಿದ್ದಾರೆ. ಜನಪರವಾದ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಸರಕಾರ ಅಸ್ತಿತ್ವಕ್ಕೆ ಬರಬೇಕು. ಮುಂದಿನ ಚುನಾವಣೆಯಲ್ಲಿ ಜನರಿಗೆ ಗೌರವ ತರುವಂತಹ ಜೆಡಿಎಸ್-ಬಿಜೆಪಿ ಮೈತ್ರಿ ಸರಕಾರವನ್ನು ಅಧಿಕಾರಕ್ಕೆ ತರಬೇಕು.

-ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ಎಲ್ಲರು ಒಟ್ಟಾಗಿ ಪಕ್ಷ ಸಂಘಟಿಸೋಣ

ದಾವಣಗೆರೆ: ದಕ್ಷಿಣ ಕ್ಷೇತ್ರದಲ್ಲಿ ಶ್ರೀನಿವಾಸ ದಾಸಕರಿಯಪ್ಪಗೆ ಹಿನ್ನಡೆಯಾಗಿದೆ ಎಂದು ತಲೆಯಲ್ಲಿಟ್ಟುಕೊಳ್ಳದೆ ಜಿಲ್ಲೆ, ಕ್ಷೇತ್ರಾದ್ಯಂತ ಪಕ್ಷ ಸಂಘಟನೆಗೆ ಒತ್ತು ನೀಡೋಣ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಕಾಂಗ್ರೆಸ್ಸಿಗೆ ತೀವ್ರ ಪೈಪೋಟಿಯೊಡ್ಡಿ ಕೆಲವೇ ಸಾವಿರ ಮತಗಳ ಅಂತರದಲ್ಲಿ ಸೋಲನುಭವಿಸಿದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ಟಿ.ದಾಸಕರಿಯಪ್ಪ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿ ಧೈರ್ಯ ತುಂಬಿದರು.

ಈ ವೇಳೆ ಮಾತನಾಡಿದ ಅವರು, ಚುನಾವಣೆಯಲ್ಲಿ ಸೋಲು-ಗೆಲುವು ಸಾಮಾನ್ಯವಾಗಿರುತ್ತದೆ. ಕಡಿಮೆ ಅಂತರದಲ್ಲಿ ಸೋಲನುಭವಿಸಿದ್ದು, ನಾವು 70 ಸಾವಿರ ಮತಗಳ ನಿರೀಕ್ಷೆ ಮಾಡಿದ್ದೆವು. ಆದರೆ, ಸುಮಾರು 63870 ಮತ ಪಡೆದಿದ್ದಾರೆ. ಈ ಸೋಲಿನಿಂದ ಎದೆಗುಂದಬೇಡಿ. ಪಕ್ಷ ಹಾಗೂ ನಾವೆಲ್ಲರೂ ನಿಮ್ಮ ಜತೆಗಿದ್ದೇವೆ. ಎಲ್ಲವನ್ನೂ ಮರೆತು, ಮತ್ತೆ ಪಕ್ಷ ಸಂಘಟನೆಯಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ತೊಡಗಿಕೊಳ್ಳಿ ಎಂದು ಅವರು ಕಿವಿಮಾತು ಹೇಳಿದರು.

ಪಕ್ಷದ ಜಿಲ್ಲಾಧ್ಯಕ್ಷ ಎನ್.ರಾಜಶೇಖರ ನಾಗಪ್ಪ, ಪರಾಜಿತ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಮಾಜಿ ಮೇಯರ್ ಬಿ.ಜಿ.ಅಜಯಕುಮಾರ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ, ಪಿ.ಸಿ. ಶ್ರೀನಿವಾಸ ಭಟ್, ದೊಗ್ಗಳ್ಳಿ ವೀರೇಶ, ಧನಂಜಯ ಕಡ್ಲೇಬಾಳು, ದಾಸಕರಿಯಪ್ಪ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬ ವರ್ಗ, ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

ಎದೆಗುಂದದೆ ಉತ್ಸಾಹದಿಂದ ಕೆಲಸ ಮಾಡೋಣ

ನಮ್ಮೆಲ್ಲಾ ಮುಖಂಡರು, ಕಾರ್ಯಕರ್ತರ ಸತತ ಪರಿಶ್ರಮದಿಂದ ಸುಮಾರು 64 ಸಾವಿರ ಮತಗಳ ಸಮೀಪ ಮತ ಪಡೆದಿದ್ದೇವೆ. ಈ ಸೋಲಿಗೆ ಎದೆಗುಂದದೆ ಮತ್ತಷ್ಟು ಉತ್ಸಾಹದಿಂದ ಕೆಲಸ ಮಾಡೋಣ. ಎಲ್ಲಾ ಸಮಸ್ಯೆ, ವ್ಯತ್ಯಾಸಗಳನ್ನು ಬದಿಗಿಟ್ಟು, ಜಿ.ಎಂ. ಸಿದ್ದೇಶ್ವರ, ಎಸ್.ಎ. ರವೀಂದ್ರನಾಥ, ಎಂ.ಪಿ. ರೇಣುಕಾಚಾರ್ಯ, ಯಶವಂತರಾವ್ ಜಾಧವ್, ರಾಜಶೇಖರ ನಾಗಪ್ಪ ಎಲ್ಲರನ್ನೂ ಒಳಗೊಂಡಂತೆ ಪಕ್ಷ ಸಂಘಟನೆ ಮಾಡುವ ಮೂಲಕ ಮುಂದಿನ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಂತೆ ಮಾಡೋಣ ಎಂದು ಬಿ.ವೈ.ವಿಜಯೇಂದ್ರ ತಿಳಿಸಿದರು.

ಗಂಗಾವತಿ: 2,500 ವರ್ಷಗಳ ಶವಗುಣಿ ನಿಲುಸುಗಲ್ಲು ಪತ್ತೆ

ಗಂಗಾವತಿ: ತಾಲೂಕಿನ ಆಗೋಲಿ ಸಮೀಪದ ಬೆಟ್ಟ ಪರಿಸರದಲ್ಲಿ ಸುಮಾರು 2,500 ವರ್ಷಗಳ ಹಿಂದಿನ ಬೃಹತ್ ಶಿಲಾಯುಗದ ಶವಗುಣಿ ನಿಲುಸುಗಲ್ಲು (ಸಮಾಧಿ ಮೇಲೆ ನಿಲ್ಲಿಸುವ ನಿಲುವುಗಲ್ಲು-ಮೆನ್ಹಿರ್) ಪತ್ತೆಯಾಗಿದ್ದು, ಹಿರಿಯ ಇತಿಹಾಸ ಸಂಶೋಧಕ ಡಾ.ಶರಣಬಸಪ್ಪ ಕೊಲ್ಕಾರ್ ಅವರ ನೇತೃತ್ವದ ತಂಡ ಸಂಶೋಧನೆ ಮಾಡಿದೆ.

ಅಪರೂಪದ ಪುರಾತನ ಸ್ಮಾರಕದ ಪತ್ತೆಯಿಂದಾಗಿ ಈ ಪ್ರದೇಶದಲ್ಲಿ ಸಾವಿರಾರು ವರ್ಷಗಳ ಹಿಂದೆ ನಡೆಯುತ್ತಿದ್ದ ಆದಿಮ ಬುಡಕಟ್ಟುಗಳ ಶವಸಂಸ್ಕಾರ ಪದ್ಧತಿಗೆ ಮಹತ್ವದ ಕೊಂಡಿ ಒದಗಿಸಿದೆ. ಗಡ್ಡಿ-ಆಗೋಲಿ ರಸ್ತೆಯ ಬಲಬದಿಗೆ ಬೂದಿಗುಡ್ಡದ ಬುಡದಲ್ಲಿ 4 ಅಡಿ ಎತ್ತರ, 1 ಅಡಿ ಅಗಲದ ನಿಲುಸುಗಲ್ಲು ಕಂಡು ಬಂದಿದೆ.

ಏನಿದು ನಿಲುಸುಗಲ್ಲು?: ಇದು ನೈಸರ್ಗಿಕ ಶಿಲಾ ಚಪ್ಪಡಿಯಾಗಿದ್ದು ಸಮಪ್ರಮಾಣದಲ್ಲಿಲ್ಲದೆ ಅಂಕುಡೊಂಕಾಗಿದೆ. ಮೂಲತಃ ಈ ನಿಲುಸುಗಲ್ಲಿನ ಸುತ್ತಲೂ ಶಿಲಾವೃತ್ತ ಇತ್ತು. ಆದರೆ, ಈಗ ಕಾಲಗರ್ಭದಲ್ಲಿ ಹಾಳಾಗಿದೆ. ಪುರಾತತ್ವ ಶಾಸ್ತ್ರಜ್ಞರು ಇದನ್ನು ಶಿಲಾವೃತ್ತದೊಳಗಿನ ನಿಲುಸುಗಲ್ಲು (ಮೆನ್ಹಿರ್ ವಿತ್ ಸ್ಟೋನ್ ಸರ್ಕಲ್) ಎಂದು ಕರೆಯುತ್ತಾರೆ. ಶವವನ್ನು ಹೂಳಿದ ಬಳಿಕ ನಿರ್ಮಾಣ ಮಾಡುವ ಸಮಾಧಿ ಮೇಲೆ ಈ ನಿಲುವುಗಲ್ಲನ್ನು ನಿಲ್ಲಿಸುತ್ತಿದ್ದರು. ಪ್ರತಿ ವರ್ಷದಲ್ಲಿ ಬರುವ ಅಮಾವಾಸ್ಯೆ, ಹಬ್ಬ-ಹರಿದಿನಗಳಂತಹ ವಿಶೇಷ ದಿನಗಳಲ್ಲಿ ಇಂತಹ ಕಲ್ಲುಗಳಿಗೆ ಜನ ಪೂಜೆ ಸಲ್ಲಿಸಿ ಆಹಾರ ನೀಡುವ ಸಂಪ್ರದಾಯವನ್ನು ರೂಢಿಸಿಕೊಂಡು ಬಂದಿದ್ದಾರೆ. ಇಂದಿಗೂ ಸಾವಿರಾರು ವರ್ಷದ ಬುಡಕಟ್ಟು ಸಂಪ್ರದಾಯ ಅಸ್ತಿತ್ವದಲ್ಲಿದೆ.

ಕಾಂಗ್ರೆಸ್ ಜತೆ ಸೇರಿ ಮಹಿಳಾ ಮೀಸಲಾತಿ ವಿರೋಧಿಸಿದ ಟಿಎಂಸಿ, ಡಿಎಂಕೆ, ಎಡಪಕ್ಷಗಳಿಗೆ ಜನ ತಕ್ಕ ಉತ್ತರ

ಹೆಣ್ಣು ಮಕ್ಕಳ ಜ್ವಾಲಾಗ್ನಿಯಿಂದ ವಿರೋಧ ಪಕ್ಷ ಭಸ್ಮ: ಸೋಮಣ್ಣ

ಬೆಂಗಳೂರು: ಮಹಿಳಾ ಮೀಸಲಾತಿ ಕಾಯಿದೆ ವಿರೋಧಿಸಿದ ಪಕ್ಷಗಳು ಹೆಣ್ಣು ಮಕ್ಕಳ ಜ್ವಾಲಾಗ್ನಿಗೆ ಭಸ್ಮವಾಗಿವೆ ಎಂದು ಕೇಂದ್ರ ಜಲ ಶಕ್ತಿ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೋದಿ ಅವರು ಮಹಿಳಾ ನಾರಿ ಶಕ್ತಿಗೆ ಅಧಿಕಾರ ಕೊಡಲು ಸಂಸತ್ ಮಹಿಳಾ ಮೀಸಲಾತಿ ಕಾಯಿದೆ ತಂದಿದ್ದರು. ಅದನ್ನು ಕಾಂಗ್ರೆಸ್ ಜತೆ ಸೇರಿ ವಿರೋಧಿಸಿದ ಟಿಎಂಸಿ, ಡಿಎಂಕೆ, ಎಡಪಕ್ಷ ಸೇರಿ ವಿರೋಧ ಪಕ್ಷಗಳಿಗೆ ಜನ ತಕ್ಕ ಪಾಠ ಕಲಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿಸಲು ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಅವರು ಪಟ್ಟ ಶ್ರಮ ಯಶಸ್ವಿಯಾಗಿದೆ. 206 ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಜನ ಸಂಘ ಸ್ಥಾಪನೆ ಮಾಡಿದ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಕನಸು ನನಸಾಗಿದೆ ಎಂದರು.

ಮಮತಾ ಬ್ಯಾನರ್ಜಿ ಅವರ ದುರಾಡಳಿತದ ಪಾಪದ ಕೊಡ ತುಂಬಿತ್ತು. ಬಾಂಗ್ಲಾ ನುಸುಳಿಕೋರರಿಗೆ ಜಾಗ ಕೊಟ್ಟು ದೇಶ ವಿರೋಧಿ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಟ್ಟಿದ್ದರು. ಬಂಗಾಳದಲ್ಲಿ ನಿರುದ್ಯೋಗ, ಮಹಿಳೆಯರಿಗೆ ಸುರಕ್ಷತೆ ಇಲ್ಲದೆ, ದೌರ್ಜನ್ಯ, ಅತ್ಯಾಚಾರಗಳು ನಡೆಯುತ್ತಿದ್ದವು. ಕೇಂದ್ರದ ಯೋಜನೆಗಳಾದ ಪಿಎಂ ಕಿಸಾನ್ ಯೋಜನೆ, ಜಲ್ ಜೀವನ್ ಮಿಷನ್ ಸಮಗ್ರ ಶಿಕ್ಷಣ ನೀತಿ, ಸೇರಿದಂತೆ ಹಲವು ಯೋಜನೆಗಳನ್ನು ಅನುಷ್ಠಾನ ಮಾಡದೇ ಕೇಂದ್ರದ ಅನುದಾನಗಳನ್ನೂ ದುರುಪಯೋಗಪಡಿಸಿಕೊಂಡು ಹಣ ಲೂಟಿ ಮಾಡಿದ್ದಾರೆ.

ಪುಣ್ಯ ಪುರುಷರಾದ ಸ್ವಾಮಿ ವಿವೇಕಾನಂದ, ಬಂಕಿಮ ಚಂದ್ರ ಚಟರ್ಜಿ, ಶ್ಯಾಮಾ ಪ್ರಸಾದ್ ಮುಖರ್ಜಿ, ರವೀಂದ್ರನಾಥ ಠಾಕೂರರುರವರ ಭೂಮಿಯಲ್ಲಿ ಈಗ ಬಿಜೆಪಿ ಆಡಳಿತ ಪ್ರಾರಂಭವಾಗಿದೆ. ಶೇಕಡ 92ರಷ್ಟು ಮತದಾನ ಮಾಡುವ ಮೂಲಕ ಮೋದಿ ಕನಸಿನ ವಿಕಸಿತ ಭಾರತಕ್ಕೆ ಅಲ್ಲಿನ ಜನ ಬೆಂಬಲ ನೀಡಿದ್ದಾರೆ ಎಂದು ಆರೋಪಿಸಿದರು.

ತಮಿನಾಡಿನಲ್ಲಿ ಕಾಂಗ್ರೆಸ್ ಜೊತೆ ಸೇರಿಕೊಂಡು ಡಿಎಂಕೆ ಮಾಡುತ್ತಿದ್ದ ವಂಶ ಪಾರಂಪರ್ಯ ರಾಜಕಾರಣಕ್ಕೆ ಮತದಾರರು ಬುದ್ಧಿ ಕಲಿಸಿದ್ದಾರೆ. ಹಿಂದೂ ವಿರೋಧಿ ಡಿಎಂಕೆಗೆ ತಕ್ಕ ಶಾಸ್ತಿ ಆಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರದ ಅಧಿಕಾರ ಮತ್ತು ಹಣದಿಂದ ಗೆಲವು ಸಾಧಿಸಿದೆ. ನಮಲ್ಲಿನ ಅತಿಯಾದ ಆತ ವಿಶ್ವಾಸ ಮತ್ತು ಸರಕಾರದ ವೈಫಲ್ಯಗಳನ್ನು ಜನರಿಗೆ ಮುಟ್ಟಿಸುವಲ್ಲಿ ವಿಫಲರಾಗಿದ್ದೇವೆ. ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸಿಕೊಳ್ಳುತ್ತೇವೆ. ಕಾಂಗ್ರೆಸ್‌ನಲ್ಲಿ ಒಳ ಜಗಳವಿಲ್ಲ, ಹೊರ ಜಗಳ, ಅವರು ಬೀದಿ ಬೀದಿಗಳಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ ಎಂದರು.

ಶೃಂಗೇರಿಯಲ್ಲಿ ಮತ ಡಕಾಯಿತಿ ಆಗಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಇವಿಎಂ ಬದಲು ಬ್ಯಾಲೆಟ್ ಪೇಪರ್ ಬೇಕು ಎನ್ನುವ ಕಾಂಗ್ರೆಸ್‌ನವರಿಗೆ ದಾವಣಗೆರೆ ಮತ್ತು ಬಾಗಲಕೋಟೆ ಉಪ ಚುನಾವಣೆಯಲ್ಲಿ ಇವಿಎಂ ಬೇಕಾಯ್ತಾ? ಮುಖ್ಯಮಂತ್ರಿಗೆ ಸಮಯಕ್ಕೆ ತಕ್ಕಂತೆ ಸುಳ್ಳು ಹೇಳಿ ಅಭ್ಯಾಸ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ 2014ರಲ್ಲಿ ಎಷ್ಟು ರಾಜ್ಯದಲ್ಲಿ ಅಧಿಕಾರದಲ್ಲಿತ್ತು? ಈಗ ಎಷ್ಟು ಕಡೆ ಇದೆ? ಪ್ರಧಾನಿ ಮೋದಿ ಅವರ ಅಭಿವೃದ್ಧಿ ಚಿಂತನೆ ದೇಶದ ಜನರ ಗಮನ ಸೆಳೆದಿದೆ. ರಾಜ್ಯ ಸರಕಾರದ ಸಚಿವರು ಅರ್ಥವಿಲ್ಲದ ಮಾತುಗಳನ್ನಾಡುವುದನ್ನು ಬಿಟ್ಟು ಜನರ ಪರವಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಖರ್ಗೆ ವಿರುದ್ಧ ಕಿಡಿ

ಸಚಿವ ಪ್ರಿಯಾಂಕ್ ಖರ್ಗೆ ಅವರು ಕೈಲಾಗದವನು ಮೈ ಪರಚಿಕೊಂಡ ಎಂಬಂತೆ ಮಾತನಾಡುತ್ತಾರೆ. ಕೇರಳದಲ್ಲಿ ಅವರ ಪಕ್ಷ ಗೆದ್ದು ಬೀಗುತ್ತಿದೆಯಲ್ಲಾ, ಅಲ್ಲಿ ಎಲ್ಲವೂ ಸರಿ ಇದೆಯೇ? ಅವರು ಗೆದ್ದಾಗ ಮಾತ್ರ ಸರಿ. ಇಲ್ಲದಿದ್ದರೆ, ನಮ್ಮ ಮೇಲೆ ಗೂಬೆ ಕೂರಿಸುತ್ತಾರೆ ಎಂದು ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಗೆಲುವು ಚುನಾವಣಾ ಆಯೋಗದ ಗೆಲುವು ಎಂಬ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಕೇಂದ್ರ ಸಚಿವ ವಿ.ಸೋಮಣ್ಣ ಕಿಡಿಕಾರಿದರು.

ಸುಳ್ಳು ಹೇಳುವುದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಡಾಕ್ಟರೇಟ್ ಕೊಡಬೇಕು. ಎರಡು ಬಾರಿ ಸಿಎಂ ಆದರೂ ಬುದ್ಧಿ ಕಲಿಯದ ಅವರು, ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಶೃಂಗೇರಿ ಕ್ಷೇತ್ರದಲ್ಲಿ ಕೋರ್ಟ್ ಆದೇಶದಂತೆ ಮರು ಎಣಿಕೆಯಾಗಿದೆ. ಹೀಗಿರುವಾಗ ಕ್ಷೇತ್ರದಲ್ಲಿ ಮತ ಡಕಾಯಿತಿ ಎಂದು ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ.

-ವಿ.ಸೋಮಣ್ಣ ಕೇಂದ್ರ ಜಲಶಕ್ತಿ ಸಚಿವ

ಸಂಪಾದಕೀಯ

ಭರವಸೆಗಳ ಕಾಮನಬಿಲ್ಲಿನ ಡೊಂಕು

ಕರ್ನಾಟಕದ ವಿಧಾನಸಭೆ ಗೆಲುವಿಗೆ ಕಾಂಗ್ರೆಸ್ ಅನುಸರಿಸಿದ ಮಾದರಿ ಎಲ್ಲ ಕಡೆ ಜನಪ್ರಿಯವಾಗಿರುವುದನ್ನು ನಾವು ಈಗ ಮುಗಿದ ಪಂಚರಾಜ್ಯ ಚುನಾವಣೆಯ ಫಲಿತಾಂಶದಲ್ಲೂ ಕಾಣಬಹುದಾಗಿದೆ. ಕಾಂಗ್ರೆಸ್ ಪಂಚಗ್ಯಾರಂಟಿಗಳನ್ನು ನೀಡಿದ್ದರೆ, ತಮಿಳುನಾಡಿನಲ್ಲಿ ನಟ ವಿಜಯ್ ದಶ ಗ್ಯಾರಂಟಿಗಳನ್ನು ನೀಡಿ ಗೆದ್ದು ಬಂದಿದ್ದಾರೆ. ಅದರಲ್ಲೂ ಮಹಿಳೆಯರನ್ನೇ ಪ್ರಮುಖ ಗುರಿಯಾಗಿ ಇಟ್ಟುಕೊಂಡಿದ್ದಾರೆ. ಮನೆ ಯಜಮಾನಿಗೆ ಮಾಸಿಕ 2500 ರೂ., ವಾರ್ಷಿಕ 6 ಗ್ಯಾಸ್ ಸಿಲಿಂಡರ್ ಉಚಿತ, ಬಡ ಮನೆತನದ ಹೆಣ್ಣುಮಕ್ಕಳ ಮದುವೆಗೆ ಒಂದು ಸವರಿನ್ ಚಿನ್ನ ಹಾಗೂ ಸೀರೆ; ನವಜಾತ ಹೆಣ್ಣುಮಕ್ಕಳಿಗೆ ಚಿನ್ನದುಂಗುರ ಹಾಗೂ ಕಿಟ್. ನಿರುದ್ಯೋಗಿ ಪದವಿಧರರಿಗೆ ಮಾಸಿಕ 4000 ರೂ., ಕೃಷಿ ಸಾಲ ಮನ್ನಾ, ಮಹಿಳೆಯರಿಗೆ ಉಚಿತ ಪ್ರಯಾಣ, 200 ಯುನಿಟ್ ವಿದ್ಯುತ್ ಉಚಿತ ಇತ್ಯಾದಿ ಇತ್ಯಾದಿ ಕಾಮನಬಿಲ್ಲನ್ನು ತೋರಿಸಿದ್ದಾರೆ. ಕಾಂಗ್ರೆಸ್‌ನ್ನು ಈ ವಿಚಾರದಲ್ಲಿ ಟೀಕಿಸುತ್ತಿದ್ದ ಬಿಜೆಪಿ, ತಾನೇನೂ ಕಡಿಮೆ ಇಲ್ಲ ಎಂಬಂತೆ ಪಶ್ಚಿಮ ಬಂಗಾಳದಲ್ಲಿ ಮನೆ ಯಜಮಾನಿಯರಿಗೆ ಮಾಸಿಕ 3000 ರೂ. ನೀಡುವ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ 33 ಶೇಕಡ ಮೀಸಲು ನೀಡುವ ಭರವಸೆ ಬಿತ್ತಿದೆ. ಈಗ ಇವುಗಳನ್ನು ಈಡೇರಿಸಬೇಕಾದ ಕಾಲ. ಬರಬರುತ್ತಾ ಚುನಾವಣೆ ಗೆಲ್ಲಲು ಇದೊಂದು ಸುಲಭ ಮಾರ್ಗವಾಗುತ್ತಿದೆಯೋ ಎಂದು ಯೋಚಿಸಬೇಕಾದ ಸನ್ನಿವೇಶ ಬರುತ್ತಿದೆ. ಎಲ್ಲ ಕಡೆಯೂ ಇದು ಸಾಮಾನ್ಯವಾಗುತ್ತಿದೆ. ಆದರೆ, ಯಾರೂ ಈ ಭರವಸೆಗಳನ್ನು ಈಡೇರಿಸುವುದು ಹೇಗೆ ಎಂದು ದೂರದೃಷ್ಟಿಯಿಂದ ಯೋಚಿಸಿದಂತಿಲ್ಲ. ತೆರಿಗೆ ಸಂಗ್ರಹದಲ್ಲಿ ಸಂಪನ್ನ ರಾಜ್ಯವಾಗಿರುವ ಕರ್ನಾಟಕವೇ ಈ ಗ್ಯಾರಂಟಿಗಳನ್ನು ಈಡೇರಿಸುವಲ್ಲಿ ಏದುಸಿರು ಬಿಡುತ್ತಿದೆ. ಹೀಗಿರುವಾಗ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಮುಂಬರಲಿರುವ ಸರ್ಕಾರಗಳು ಏನು ಮಾಡಲಿವೆ ಎಂಬುದು ಕುತೂಹಲಕಾರಿ. ಇದನ್ನೆಲ್ಲ ಈಡೇರಿಸಲು ಮತ್ತಷ್ಟು ಸಾಲ ಮಾಡಬೇಕಾಗಲಿದೆ. ನಟ ವಿಜಯ್ ಅವರಂತೂ ಸರಕಾರ ರಚಿಸಿದರೆ ಈ ಗ್ಯಾರಂಟಿಗಳ ಭಾರದಲ್ಲಿ ನಲುಗಿಹೋದರೆ ಆಶ್ಚರ್ಯವಿಲ್ಲ. ಭರವಸೆಗಳನ್ನು ಕೊಡುವುದು ದೊಡ್ಡದಲ್ಲ, ಅದನ್ನು ಈಡೇರಿಸುವುದೇ ಬಹು ಮುಖ್ಯ. ಚುನಾವಣೆಗಳ ಮುನ್ನ ಇದೊಂದು ಅಲಿಖಿತ ರೂಢಿಯೇ ಆಗಿಹೋದಾಗ, ಪ್ರತಿ ಪಕ್ಷಕ್ಕೂ ಇದೊಂದು ಹೊರೆಯೇ ಆಗಲಿದೆ. ಹಿಮಾಚಲ ಪ್ರದೇಶ ಸರಕಾರ, ನಮ್ಮಲ್ಲಿ ನೌಕರರ ತಿಂಗಳ ಸಂಬಳ ಕೊಡಲೂ ದುಡ್ಡಿಲ್ಲ ಎಂದು ಅಲವತ್ತುಕೊಂಡಿದ್ದಲ್ಲದೆ, ಬಜೆಟ್ ಗಾತ್ರ ಕಡಿಮೆ ಮಾಡಿತ್ತು. ಇಂಥ ಗತಿ, ಕೇಂದ್ರದ ಮುಂದೆ ಕೈಯೊಡ್ಡುವ ಸ್ಥಿತಿ ಯಾವುದೇ ರಾಜ್ಯ ಸರಕಾರಕ್ಕೆ ಬರಬಾರದು. ಕೊನೆಗೂ ಇದರ ಭಾರ ಹೊರುವವರು ಜನಸಾಮಾನ್ಯರೇ ಆಗಿರುತ್ತಾರೆ ಎಂಬುದನ್ನು ಮರೆಯಬಾರದು.

ಸೊಂಪಾದಕೀಯ

ಕೋಟಾ ಫ್ಯಾನ್‌ಗೆ ಕಾಟ

ಆಂಧ್ರಪ್ರದೇಶದ ಕೋಟಾ, ನೀಟ್-ಜೆಇಇ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್‌ಗೆ ಹೆಸರುವಾಸಿ. ದೇಶದ ಎಲ್ಲೆಡೆಗಳಿಂದ ಬಂದ ವಿದ್ಯಾರ್ಥಿಗಳು ಇಲ್ಲಿ ಹಾಸ್ಟೆಲ್‌ಗಳಲ್ಲಿ ಇದ್ದು ಕಲಿಯುತ್ತಾರೆ. ಆತಂಕದ ಸಂಗತಿ ಅಂದರೆ ಇಲ್ಲಿನ ಹಾಸ್ಟೆಲ್‌ಗಳಲ್ಲಿ, ಈ ಕಲಿಕೆಯ ಒತ್ತಡದಿಂದ ಆತ್ಮಹತ್ಯೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯೂ ಅಧಿಕ. ಇದನ್ನು ತಡೆಗಟ್ಟಲು ಅಲ್ಲಿನ ಆಡಳಿತ ಒಂದು ವಿಲಕ್ಷಣ ಸುರಕ್ಷತಾ ಕ್ರಮ ತೆಗೆದುಕೊಂಡಿದೆ. ಅದೇನೆಂದರೆ, ಹಾಸ್ಟೆಲ್ ರೂಂಗಳ ಸೀಲಿಂಗ್ ಫ್ಯಾನ್‌ಗಳಿಗೆ ಗ್ರಿಲ್ ಅಳವಡಿಸುವುದು! ಇದರಿಂದ, ಫ್ಯಾನ್‌ಗೆ ನೇಣು ಹಾಕಿಕೊಳ್ಳುವುದು ತಪ್ಪುತ್ತದೆ ಎಂಬ ಲಾಜಿಕ್. ತರ್ಕವೇನೋ ಸರಿ; ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದವನಿಗೆ ನೇಣೇ ಆಗಬೇಕೆ? ಅದರಲ್ಲೂ ಹಾಸ್ಟೆಲ್‌ನ ಫ್ಯಾನೇ ಯಾಕೆ ಆಗಬೇಕು? ಹೋಗಲಿ, ಈ ಗ್ರಿಲ್‌ಗೆ ನೇಣು ಹಾಕಿಕೊಳ್ಳಲು ಸಾಧ್ಯವಿಲ್ಲವೇ ಎಂಬ ಪ್ರಶ್ನೆಗಳು ಕಿಡಿಗೇಡಿಗಳಲ್ಲಿ ಹುಟ್ಟಿದರೆ ಆಶ್ಚರ್ಯವಿಲ್ಲ. ಹಾಗೇ ಈ ಫ್ಯಾನ್‌ನ ಖರ್ಚು 2000 ರೂ. ಇದ್ದರೆ, ಗ್ರಿಲ್ ಹಾಕಿಸುವ ವೆಚ್ಚ 5000 ರೂ. ಅಂತೆ. ಇದು ಕೊಂಚ ದುಬಾರಿಯೇ ಆಯಿತು. ಇದು, ವಂದೇ ಭಾರತ್ ಟ್ರೇನಿನಲ್ಲಿ ಫ್ಯಾನ್ ಕದ್ದೊಯ್ಯುತ್ತಾರೆ ಎಂದು ಗ್ರಿಲ್ ಅಳವಡಿಸಿದ ರೀತಿಯನ್ನೇ ಹೋಲುತ್ತದೆ. ವಿನೋದ ಹಾಗಿರಲಿ, ಇಲ್ಲಿ ಫಿಕ್ಸ್ ಮಾಡಬೇಕಾಗಿರೋದು ಸೀಲಿಂಗ್ ಫ್ಯಾನನ್ನು ಅಲ್ಲ, ಬದಲಾಗಿ ವಿದ್ಯಾರ್ಥಿಗಳ ಮೇಲೆ ಹೇರಲಾಗುತ್ತಿರುವ ಒತ್ತಡವನ್ನು- ಎಂಬುದು ಇವರಿಗೆಲ್ಲ ಎಂದು ಅರ್ಥವಾಗುತ್ತದೋ ಕಾಣೆವು.

ಸಂಪಾದಕರ ಸದ್ಯಶೋಧನೆ

ಶ್ಯಾಡೋಬ್ಯಾನಿಂಗ್ ಎಂದರೇನು?

ನೀವು ಫೇಸ್ ಬುಕ್‌ನಲ್ಲಿ ಒಂದು ಪೋಸ್ಟ್ ಮಾಡುತ್ತೀರಿ. ಆದರೆ ನಿಮಗೆ ನಿರೀಕ್ಷಿತ ಮಟ್ಟದಲ್ಲಿ ಲೈಕ್ಸ್, ಕಾಮೆಂಟ್ಸ್ ಬರುವುದಿಲ್ಲ. ಯಾರೂ ಅದನ್ನು ಶೇರ್ ಮಾಡುವುದಿಲ್ಲ. ಕಾರಣ ಏನಿರಬಹುದು. ಹಾಗಾದರೆ ನೀವು ಶ್ಯಾಡೋಬ್ಯಾನಿಂಗ್ (Shadowbanning) ಬಗ್ಗೆ ತಿಳಿದುಕೊಳ್ಳಲೇಬೇಕು. ಇದು ಇಂದಿನ ಡಿಜಿಟಲ್ ಯುಗದ ಮತ್ತು ಸಾಮಾಜಿಕ ಮಾಧ್ಯಮಗಳ (Social Media) ಅತ್ಯಂತ ಚರ್ಚಿತ ಹಾಗೂ ಅಷ್ಟೇ ನಿಗೂಢವಾದ ವಿಷಯ. ಇದನ್ನು ಸರಳವಾಗಿ ಹೇಳಬೇಕೆಂದರೆ, ಒಬ್ಬ ಬಳಕೆದಾರನನ್ನು ಅವನಿಗೆ ತಿಳಿಯದಂತೆ 'ಅದೃಶ್ಯ'ವಾಗಿಸುವ ಪ್ರಕ್ರಿಯೆ. ಅಷ್ಟಕ್ಕೂ ಶ್ಯಾಡೋಬ್ಯಾನಿಂಗ್ ಎಂದರೇನು? ಸಾಮಾನ್ಯವಾಗಿ ಫೇಸ್ಬುಕ್, ಇನ್ಸ್ಟಾಗ್ರಾಮ್, ಎಕ್ಸ್ (ಟ್ವಿಟ್ಟರ್) ಅಥವಾ ಯೂಟ್ಯೂಬ್‌ನಂಥ ವೇದಿಕೆಗಳು ತಮ್ಮ ನಿಯಮಗಳನ್ನು ಉಲ್ಲಂಘಿಸುವ ಬಳಕೆದಾರರ ಖಾತೆಯನ್ನು ಸಂಪೂರ್ಣವಾಗಿ ನಿರ್ಬಂಧಿಸುತ್ತವೆ. ಆದರೆ ಶ್ಯಾಡೋಬ್ಯಾನಿಂಗ್‌ನಲ್ಲಿ ನಿಮ್ಮ ಖಾತೆ ಚಾಲನೆಯಲ್ಲಿರುತ್ತದೆ, ನೀವು ಪೋಸ್ಟ್‌ಗಳನ್ನು ಹಾಕಬಹುದು, ಕಾಮೆಂಟ್ ಮಾಡಬಹುದು. ಆದರೆ, ನಿಮ್ಮ ಪೋಸ್ಟ್‌ಗಳು ಇತರರಿಗೆ, ವಿಶೇಷವಾಗಿ ನಿಮ್ಮನ್ನು ಫಾಲೋ ಮಾಡದವರಿಗೆ ಕಾಣಿಸುವುದೇ ಇಲ್ಲ. ಇದು 'ನೆರಳಿನಲ್ಲೇ ನಿಷೇಧಿಸುವುದು' ಎಂದರ್ಥ. ಬಳಕೆದಾರನಿಗೆ ತಾನು ನಿಷೇಧಕ್ಕೊಳಗಾಗಿದ್ದೇನೆ ಎಂದು ತಿಳಿಯುವುದೇ ಇಲ್ಲ, ಆದರೆ ಅವನ ಕಂಟೆಂಟ್‌ನ ತಲುಪುವಿಕೆ (Reach) ಹಠಾತ್ತಾಗಿ ಕುಸಿದುಹೋಗುತ್ತದೆ. ಇದು ಹೇಗೆ ಕೆಲಸ ಮಾಡುತ್ತದೆ? ಸಾಮಾಜಿಕ ಮಾಧ್ಯಮಗಳ ಅಲ್ಗಾರಿದಮ್‌ಗಳು ಕೆಲವು ನಿರ್ದಿಷ್ಟ ಹ್ಯಾಶ್‌ಟ್ಯಾಗ್‌ಗಳನ್ನು ಅಥವಾ ಖಾತೆಗಳನ್ನು ಗುರುತಿಸಿ ಅವುಗಳನ್ನು 'ಸೈಡ್‌ಲೈನ್' ಮಾಡುತ್ತವೆ. ನಿಮ್ಮ ಹೆಸರನ್ನು ಸರ್ಚ್ ಮಾಡಿದರೂ ನಿಮ್ಮ ಪ್ರೊಫೈಲ್ ಕಾಣಿಸದೇ ಇರಬಹುದು. ನೀವು ಬಳಸಿದ ಹ್ಯಾಶ್‌ಟ್ಯಾಗ್‌ಗಳ ಪಟ್ಟಿಯಲ್ಲಿ ನಿಮ್ಮ ಪೋಸ್ಟ್ ಕಾಣಿಸುವುದಿಲ್ಲ. ನಿಮ್ಮ ಫಾಲೋವರ್‌ಗಳ ಟೈಮ್‌ಲೈನ್‌ನಲ್ಲಿ ನಿಮ್ಮ ಪೋಸ್ಟ್‌ಗಳು ಬರುವುದು ನಿಂತುಹೋಗುತ್ತದೆ ಅಥವಾ ತೀರ ಕಡಿಮೆ ಆಗುತ್ತದೆ. ಶ್ಯಾಡೋಬ್ಯಾನಿಂಗ್ ಮಾಡಲು ಕಾರಣಗಳೇನು? ಸೋಷಿಯಲ್ ಮೀಡಿಯಾ ಸಂಸ್ಥೆಗಳು ಕೆಲವು ನಿರ್ದಿಷ್ಟ ಕಾರಣಗಳಿಗೆ ಇಂಥ ಕ್ರಮಗಳನ್ನು ಕೈಗೊಳ್ಳುತ್ತವೆ. ವೇದಿಕೆಯ ಸಮುದಾಯ ಮಾರ್ಗಸೂಚಿಗಳನ್ನು (Community Guidelines) ಅಲ್ಪಮಟ್ಟಿಗೆ ಉಲ್ಲಂಘಿಸಿದಾಗ, ಅತಿಯಾಗಿ ಲೈಕ್ ಮಾಡುವುದು, ಸತತವಾಗಿ ಒಂದೇ ರೀತಿಯ ಕಾಮೆಂಟ್ ಮಾಡುವುದು ಅಥವಾ ಒಂದೇ ಬಾರಿಗೆ ನೂರಾರು ಜನರನ್ನು ಫಾಲೋ ಮಾಡಿದಾಗ, ಕೆಲವು ವಿವಾದಾತ್ಮಕ ಅಥವಾ ಅಶ್ಲೀಲ ಹ್ಯಾಶ್‌ಟ್ಯಾಗ್‌ಗಳನ್ನು ಬಳಸಿದಾಗ ಆ ಇಡೀ ಪೋಸ್ಟ್ ಅನ್ನು ಅಲ್ಗಾರಿದಮ್ ಮರೆಮಾಡುತ್ತದೆ. ಲೈಕ್ ಅಥವಾ ಫಾಲೋವರ್ಸ್ ಹೆಚ್ಚಿಸಿಕೊಳ್ಳಲು ಯಾವುದೇ ತೃತೀಯ ತಂತ್ರಾಂಶಗಳನ್ನು (Third party apps) ಬಳಸಿದಾಗಲೂ ಶ್ಯಾಡೋಬ್ಯಾನಿಂಗ್ ಮಾಡಬಹುದು. ನೀವು ಶ್ಯಾಡೋಬ್ಯಾನಿಂಗ್ ಆಗಿದ್ದೀರಿ ಎಂದು ತಿಳಿಯುವುದು ಹೇಗೆ? ಇದನ್ನು ಪತ್ತೆ ಹಚ್ಚುವುದು ಕಷ್ಟ, ಆದರೆ ಕೆಲವು ಲಕ್ಷಣಗಳ ಮೂಲಕ ಅಂದಾಜಿಸಬಹುದು. ಉದಾಹರಣೆಗೆ, ಇದ್ದಕ್ಕಿದ್ದಂತೆ ನಿಮ್ಮ ಪೋಸ್ಟ್‌ಗಳಿಗೆ ಬರುವ ಲೈಕ್ ಮತ್ತು ಕಾಮೆಂಟ್‌ಗಳ ಸಂಖ್ಯೆ ಶೇ. 70-80 ರಷ್ಟು ಕಡಿಮೆಯಾದರೆ, ನಿಮ್ಮ ಪೋಸ್ಟ್‌ನಲ್ಲಿ ಬಳಸಿದ ಒಂದು ಅಪರೂಪದ ಹ್ಯಾಶ್‌ಟ್ಯಾಗ್ ಅನ್ನು ನಿಮ್ಮ ಫಾಲೋವರ್ ಅಲ್ಲದ ಬೇರೊಬ್ಬರ ಮೊಬೈಲ್‌ನಿಂದ ಸರ್ಚ್ ಮಾಡಿ ನೋಡಿದಾಗ ಅಲ್ಲಿ ನಿಮ್ಮ ಪೋಸ್ಟ್ ಕಾಣಿಸದಿದ್ದರೆ ನೀವು ಶ್ಯಾಡೋಬ್ಯಾನ್ ಆಗಿದ್ದೀರಿ ಎಂದರ್ಥ. ಇದರಿಂದ ಹೊರಬರುವುದು ಹೇಗೆ? ಒಮ್ಮೆ ಶ್ಯಾಡೋಬ್ಯಾನ್ ಆದರೆ ಗಾಬರಿಯಾಗುವ ಅಗತ್ಯವಿಲ್ಲ, ಇದನ್ನು ಸರಿಪಡಿಸಲು ಕೆಲವು ದಾರಿಗಳಿವೆ. ಸುಮಾರು 48ರಿಂದ 72 ಗಂಟೆಗಳ ಕಾಲ ನಿಮ್ಮ ಖಾತೆಯಲ್ಲಿ ಯಾವುದೇ ಚಟುವಟಿಕೆ ಮಾಡಬೇಡಿ. ಲೈಕ್, ಕಾಮೆಂಟ್ ಅಥವಾ ಪೋಸ್ಟ್ ಮಾಡುವುದನ್ನು ನಿಲ್ಲಿಸಿ. ಇದು ಅಲ್ಗಾರಿದಮ್‌ಗೆ ನೀವು 'ಸ್ಪ್ಯಾಮ್ ಬಾಟ್' ಅಲ್ಲ ಎಂದು ಮನವರಿಕೆ ಮಾಡಿಕೊಡಲು ಸಹಾಯ ಮಾಡುತ್ತದೆ. ನಿಮ್ಮ ಖಾತೆಗೆ ಲಿಂಕ್ ಮಾಡಲಾದ ಅನಗತ್ಯ ಆಪ್‌ಗಳನ್ನು ಡಿಲೀಟ್ ಮಾಡಿ. ನಿಯಮ ಮೀರಿರಬಹುದಾದ ಹಳೆಯ ಪೋಸ್ಟ್‌ಗಳನ್ನು ಅಳಿಸಿ ಹಾಕಿ. ಸೆಟ್ಟಿಂಗ್ಸ್‌ನಲ್ಲಿ 'Report a Problem' ಮೂಲಕ ನಿಮ್ಮ ಸಮಸ್ಯೆಯನ್ನು ವಿವರಿಸಿ. ಆದರೆ 'ನಾನು ಶ್ಯಾಡೋಬ್ಯಾನ್ ಆಗಿದ್ದೇನೆ' ಎಂದು ಹೇಳುವ ಬದಲು 'ನನ್ನ ಪೋಸ್ಟ್‌ಗಳು ಫಾಲೋವರ್‌ಗಳಿಗೆ ಕಾಣಿಸುತ್ತಿಲ್ಲ' ಎಂದು ತಾಂತ್ರಿಕ ಭಾಷೆಯಲ್ಲಿ ತಿಳಿಸಿ. ಶ್ಯಾಡೋಬ್ಯಾನಿಂಗ್ ಎನ್ನುವುದು ಡಿಜಿಟಲ್ ವೇದಿಕೆಗಳು ಸಮಾಜದಲ್ಲಿ ಶಾಂತಿ ಮತ್ತು ನೈತಿಕತೆಯನ್ನು ಕಾಪಾಡಲು ಬಳಸುವ ಒಂದು 'ಮೃದು ಆಯುಧ'.

ಟಿಎಂಸಿ ಮತ್ತು ದೀದಿಯ ಸೊಕ್ಕಡಗಿಸಿದ ಮತದಾರ

ಜನಪಥ
ರಾಘವಶರ್ಮ ನಿಡ್ಲೆ
vveditoped@gmail.com

ಪಶ್ಚಿಮ ಬಂಗಾಳದಲ್ಲಿ 15 ವರ್ಷ ಆಡಳಿತ ನಡೆಸಿದ್ದ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಹೀನಾಯವಾಗಿ ಸೋಲಿಸಿದ ಬಿಜೆಪಿ ಹೊಸ ರಾಜಕೀಯ ಇತಿಹಾಸ ಸೃಷ್ಟಿಸಿದ್ದೇನೋ ನಿಜ. ಆದರೆ, ಜನರಿಗೆ ದೌರ್ಜನ್ಯ, ಹಿಂಸೆ, ಅಪಮಾನ ಮಾಡಿದವರನ್ನು ರಾಜ್ಯದ ಮತದಾರ ತಿರಸ್ಕರಿಸಿದ ಮಾದರಿ ಇದೆಯಲ್ಲಾ, ಅದು ದುರಹಂಕಾರ ಮತ್ತು ಸೊಕ್ಕಿನ ವರ್ತನೆಗಳಿಗೆ ಇಂದಲ್ಲಾ ನಾಳೆ ಸೋಲು ಖಚಿತ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಿದೆ.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರ ಹಾಗೂ ಪಕ್ಷದ ಗೂಂಡಾ ರಾಜಕಾರಣಕ್ಕೆ ಮರೆಯಲಾಗದ ಛಡಿಯೇಟು ನೀಡಿರುವ ಮತದಾರರು, ಮಮತಾ ದೀದಿ ಕಟ್ಟಿದ್ದ ಗೂಂಡಾಗಳ ಸಾಮ್ರಾಜ್ಯವನ್ನು ಛಿದ್ರಗೊಳಿಸಿದ್ದಾರೆ. ಈ ಚುನಾವಣೆಯಲ್ಲಿ ರೇಖಾ ಪಾತ್ರ, ರತ್ನಾ ದೇಬ್ನಾಥ್ ಮತ್ತು ಕಲಿತಾ ಮಾಂಜಿ ಎಂಬ ಮೂವರು ಸಾಮಾನ್ಯ ಮಹಿಳೆಯರ ಗೆಲುವನ್ನು ನಾಗರಿಕ ಸಮಾಜ ಸಂಭ್ರಮಿಸಿದೆ. ಪ್ರಜಾತಂತ್ರ ವ್ಯವಸ್ಥೆಯು ಆಡಳಿತಶಾಹಿಯ ಅಟ್ಟಹಾಸವನ್ನು ಹೇಗೆ ಮಟ್ಟಹಾಕುತ್ತದೆ ಎಂಬುದಕ್ಕೆ ಬಂಗಾಳದ ಈ ಮೂವರು ಮಹಿಳೆಯರು ಸಾಕ್ಷಿಯಾಗಿ ನಿಂತಿದ್ದಾರೆ.

1. ರೇಖಾ ಪಾತ್ರ

ಉತ್ತರ 24 ಪರಗಣ ಜಿಲ್ಲೆಯ ಸುಂದರಬನ್ ಮ್ಯಾಂಗ್ರೂವ್ ಕಾಡುಗಳ ಮಧ್ಯೆ ಇರುವ ಹಲವು ದ್ವೀಪಗಳಲ್ಲಿ ಸಂದೇಶ್‌ಖಲಿ ಕೂಡ ಒಂದು. ಬಂಗಾಳ ಚುನಾವಣೆ ಪ್ರವಾಸದ ನಾನು ವೇಳೆ ಸಂದೇಶ್‌ಖಲಿ ವಿಧಾನಸಭೆ ಕ್ಷೇತ್ರಕ್ಕೆ ಭೇಟಿ ನೀಡಿದ್ದಾಗ 2024ರ ಬಡ ಮಹಿಳೆಯರ ಮೇಲೆ ಎಸಗಲಾದ ಲೈಂಗಿಕ ದೌರ್ಜನ್ಯ, ಜಮೀನು ಅತಿಕ್ರಮದ ಘಟನಾವಳಿಗಳೇ ಕಣ್ಣು ಮುಂದೆ ಬಂದಿದ್ದವು. ನಾನು ಅಲ್ಲಿದ್ದಾಗ ದ್ವೀಪದ ಸುತ್ತ ಸೇನಾನಿಗಳ ಸರ್ಪಗಾವಲಿತ್ತು. ಹಾಗಂತ, ಶೋಷಿತ ಮಹಿಳೆಯರ ನೋವು ಕಡಿಮೆಯಾಗಿರಲಿಲ್ಲ. ಟಿಎಂಸಿಯ ಗೂಂಡಾ, ಈಗ ಜೈಲಲ್ಲಿರುವ ಶೇಖ್ ಷಾಜಹಾನ್ ಹಾಗೂ ಆತನ ಕಾಲಾಳುಗಳ ದೌರ್ಜನ್ಯದಿಂದ ರೋಸಿ ಹೋಗಿದ್ದವರು ಚುನಾವಣೆ ಕುರಿತ ತಮ್ಮ ಅನಿಸಿಕೆ ಹೇಳಲೂ ಹಿಂಜರಿಯುತ್ತಿದ್ದರು. ಸಂದೇಶ್‌ಖಲಿ ತನ್ನದೇ ಸಾಮ್ರಾಜ್ಯ ಎಂದು ದರ್ಪದಿಂದ ವರ್ತಿಸುತ್ತಿದ್ದ ಶೇಖ್ ಷಾಜಹಾನ್, ಬಡವರ ಜಮೀನುಗಳನ್ನು ಅತಿಕ್ರಮಿಸಿ, ಅಲ್ಲಿ ಮೀನುಗಾರಿಕೆ ಮಾಡಿ ಕೋಟಿಗಟ್ಟಲೆ ಹಣ ಸಂಪಾದನೆ ಮಾಡುತ್ತಿದ್ದ. ಬಡ ಕಾರ್ಮಿಕರಿಗೆ ಸರಿಯಾಗಿ ಕೂಲಿಯನ್ನೂ ನೀಡುತ್ತಿರಲಿಲ್ಲ. ಶಾಜಹಾನ್ ಮತ್ತು ಆತನ ಸಹಚರರು ಮಹಿಳೆಯರಿಗೆ ನೀಡಿದ ಹಿಂಸೆ ಅಷ್ಟಿಷ್ಟಲ್ಲ. ನ್ಯಾಯ ಕೊಡಿಸುತ್ತೇವೆ ಎಂದು ಕಚೇರಿಗಳಿಗೆ ಕರೆಯುತ್ತಿದ್ದ ದುಷ್ಟರು ಲೈಂಗಿಕ ದೌರ್ಜನ್ಯ ಮಾಡುತ್ತಿದ್ದರು ಎಂದು ಈ ಮಹಿಳೆಯರೇ ಪೊಲೀಸರಿಗೆ ದೂರು ಕೊಟ್ಟಿದ್ದರು. ಕೊನೆಗೂ ರೇಖಾ ಪಾತ್ರ ಎಂಬ ಮಹಿಳೆ ಮುಂದೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರಿಂದ, ಇತರೆ ಮಹಿಳೆಯರಿಗೂ ಧೈರ್ಯ ಬಂದು ಅವರೂ ಶೇಖ್ ಷಾಜಹಾನ್, ಆತನ ಸಹಚರರಾದ ಶಿವಪ್ರಸಾದ್ ಹಜ್ರ ಮತ್ತು ಉತ್ತಮ್ ಸರ್ದಾರ್ ಎಂಬ ಗೂಂಡಾಗಳ ವಿರುದ್ಧ ಬೀದಿಗಿಳಿದಿದ್ದರು. ಆದರೆ, ಈ ಮಹಿಳೆಯರ ಮನೆಗಳ ಮೇಲೆ ದಾಳಿಗಳಾಗಿ, ಜಮೀನುಗಳನ್ನು ನಾಶ ಮಾಡಲಾಯ್ತು. ಇಷ್ಟೆಲ್ಲ ನಡೆದರೂ ಟಿಎಂಸಿ ಮತ್ತು ಸಿಎಂ ಮಮತಾ ಬ್ಯಾನರ್ಜಿ ಮಾತ್ರ, ಏನೂ ಆಗಿಲ್ಲ ಎಂಬಂತೆ ಸುಮ್ಮನಿದ್ದರು. ಕೊನೆಗೆ ಶೇಖ್ ಶಾಜಹಾನ್ ವಿರುದ್ಧ ಇ.ಡಿ ಕೇಸು ದಾಖಲಿಸುತ್ತದೆ. ನಂತರ, ಆತ ನಾಪತ್ತೆಯಾಗಿ, 55 ದಿನಗಳ ಬಳಿಕ ಪೊಲೀಸರಿಗೆ ಶರಣಾಗುತ್ತಾನೆ. ಸಂದೇಶ್ ಖಲಿಯಲ್ಲಿ ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಬಿಜೆಪಿ ಧ್ವನಿಯಾಗುತ್ತದೆ. ಅವರ ಹೋರಾಟಕ್ಕೆ ಬೆನ್ನೆಲುಬಾಗಿ ನಿಲ್ಲುತ್ತದೆ. 2024ರ ಲೋಕಸಭೆ ಚುನಾವಣೆಯಲ್ಲಿ ರೇಖಾ ಪಾತ್ರಗೆ ಸಂದೇಶ್ ಖಲಿ ಒಳಗೊಂಡ ಬಸೀರ್‌ಹಾಟ್ ಲೋಕಸಭೆ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ನೀಡಲಾಗುತ್ತದೆ. ಆದರೆ ಮುಸ್ಲಿಂ ಅಭ್ಯರ್ಥಿ ವಿರುದ್ಧ ಆಕೆ ಸೋಲುತ್ತಾಳೆ. ಸಂದೇಶ್‌ಖಲಿ ಎಸ್ಟಿ ಮೀಸಲು ಕ್ಷೇತ್ರವಾದ್ದರಿಂದ ಈ ವಿಧಾನಸಭೆ ಚುನಾವಣೆಯಲ್ಲಿ ಆಕೆಗೆ ಪಕ್ಷದ ಹಿಂಗಲ್ ಗಂಜ್ ವಿಧಾನಸಭೆ ಕ್ಷೇತ್ರದಿಂದ ಅಭ್ಯರ್ಥಿಯನ್ನಾಗಿ ಬಿಜೆಪಿ ಕಣಕ್ಕಿಳಿಸುತ್ತದೆ. ನಂತರ ನಡೆದದ್ದೆಲ್ಲವೂ ಈಗ ಇತಿಹಾಸ. 2 ವರ್ಷಗಳ ಹಿಂದೆ ಇದೇ ಮಹಿಳೆಯರ ನೋವನ್ನು ಕಂಡು ಗಹಗಹಿಸಿ ನಕ್ಕಿದ್ದ ಟಿಎಂಸಿ ಗೂಂಡಾಗಳು ಇಂದು ದಿಕ್ಪಾಪಾಲಾಗಿದ್ದಾರೆ. ದೌರ್ಜನ್ಯ ಮಾಡಿದವರ ವಿರುದ್ಧವೇ ಕೆಚ್ಚೆದೆಯಿಂದ ಹೋರಾಡಿದ ರೇಖಾ ಪಾತ್ರ ಬಂಗಾಳ ವಿಧಾನಸಭೆ ಪ್ರವೇಶ ಮಾಡುತ್ತಿದ್ದಾಳೆ.

2. ರತ್ನಾ ದೇಬ್ನಾಥ್

ಕೋಲ್ಕತ್ತಾದಿಂದ ಸುಮಾರು 35 ಕಿಮೀ ದೂರದಲ್ಲಿರುವ ಪಾನಿಹಾಟಿ ಎಂಬಲ್ಲಿ ಸಾಮಾನ್ಯರಂತೆ ಬದುಕುತ್ತಾ ಮಗಳ ಭವಿಷ್ಯದ ಬಗ್ಗೆ ಅಪಾರ ಕನಸನ್ನು ಕಾಣುತ್ತಿದ್ದ ರತ್ನಾ ದೇಬ್ನಾಥ್‌ಗೆ, ಮಗಳ ಅತ್ಯಾಚಾರ-ಹತ್ಯೆ ಘಟನೆ ಕೇಳಿ ಹೃದಯವೇ ಕಿತ್ತು ಬಂದ ಹಾಗೆ ಆಗಿತ್ತು. ಟ್ರೈನಿ ವೈದ್ಯೆಯಾಗಿದ್ದ ಮಗಳ ಅತ್ಯಾಚಾರ-ಕೊಲೆ ಪ್ರಕರಣದ ಬಗ್ಗೆ ಸಿಎಂ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರ ಸಾಮಾನ್ಯ ಘಟನೆಯಂತೆ ಪರಿಗಣಿಸಿ ಏನೂ ಆಗಿಲ್ಲ ಎಂಬಂತೆ ವರ್ತಿಸಿತ್ತು. ಪ್ರತಿಭಟನೆ ಮಾಡುತ್ತಿದ್ದವರನ್ನೇ ಅಪರಾಧಿಗಳಂತೆ ಕಂಡ ಸರ್ಕಾರ, ಅವರ ವಿರುದ್ಧವೇ ಕೇಸು ದಾಖಲು ಮಾಡಿ ಹಿಂಸೆ ನೀಡಿತು. ಮುಖ್ಯವಾಗಿ ಮಹಿಳಾ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಅತ್ಯಾಚಾರ ಘಟನೆ ಬಗ್ಗೆ ತೋರಿದ ನಿರ್ಲಕ್ಷ್ಯ ಜನರನ್ನು ಕೆರಳಿಸಿತು. ರಾಜ್ಯ ಸರ್ಕಾರದ ಸಂವೇದನಾಶೂನ್ಯತೆಗೆ

ಬುದ್ಧಿ ಕಲಿಸಲು ಬಿಜೆಪಿ ನೀಡಿದ ಅವಕಾಶವನ್ನು ಬಳಸಿಕೊಂಡ ರತ್ನಾ ದೇಬ್ನಾಥ್ ಪಾಣಿಹಾಟಿ ವಿಧಾನಸಭೆ ಕ್ಷೇತ್ರದಿಂದ ಅಭ್ಯರ್ಥಿಯಾಗಿ ಸ್ಪರ್ಧೆಗಿಳಿದರು. ಟಿಎಂಸಿ, ಎಡಪಕ್ಷಗಳ ಬೆಂಬಲಿಗರು ಅವರ ಸ್ಪರ್ಧೆ ಒಪ್ಪದಿದ್ದರೂ, ತಟಸ್ಥ ಮತದಾರರು ರತ್ನಾ ದೇಬ್ನಾಥ್‌ರನ್ನು ಗೆಲ್ಲಿಸಿದರು. ರತ್ನಾ ಅವರಿಗೆ ರಾಜಕೀಯದ ಒಳ-ಸುಳಿಗಳು ಗೊತ್ತಿಲ್ಲ, ರಾಜಕೀಯದಲ್ಲಿ ಆಸಕ್ತಿಯೂ ಇರಲಿಲ್ಲ. ಆದರೆ, ತನ್ನ ಮಗಳಂತೆ ಇತರರಿಗೆ ಅನ್ಯಾಯ ಆಗಬಾರದು ಎಂದೇ ವ್ಯವಸ್ಥೆಯ ಭಾಗವಾಗಿ ಕೆಲಸ ಮಾಡಬೇಕೆಂಬ ಅವರ ತೀರ್ಮಾನಕ್ಕೆ ಮತದಾರರೂ ಬೆಂಬಲಿಸಿದರು.

3. ಕಲಿತಾ ಮಾಂಜಿ

ಬಂಗಾಳ ಚುನಾವಣೆ ಫಲಿತಾಂಶದಲ್ಲಿ ಅತ್ಯಂತ ಗಮನಾರ್ಹ ಅಂಶಗಳಲ್ಲಿ ಮುಸುರೆ ತಿಕ್ಕುತ್ತಿದ್ದ ಬಡ ಕುಟುಂಬದ ಕಲಿತಾ ಮಾಂಜಿ ಗೆಲುವು ಕೂಡ ಒಂದು. ಆಸ್ಗ್ರಾಮ್ ವಿಧಾನಸಭೆ ವ್ಯಾಪ್ತಿಯಲ್ಲಿರುವ ಶ್ರೀಮಂತರ ಮನೆಗಳಲ್ಲಿ ಮುಸುರೆ ತಿಕ್ಕುತ್ತಿದ್ದ, ಮನೆ ಕೆಲಸದಾಳಾಗಿ ದುಡಿಯುತ್ತಿದ್ದ ಹಿಂದುಳಿದ ಸಮುದಾಯದ ಕಲಿತಾ ಮಾಂಜಿ, ತಿಂಗಳಿಗೆ ರೂ. 2500 ಹಣ ಸಂಪಾದನೆ ಮಾಡುತ್ತಾ ಕುಟುಂಬ ನಿರ್ವಹಣೆ ಮಾಡುತ್ತಿದ್ದಳು. ಈಗ ಆಕೆಯನ್ನೇ ಶಾಸಕಿಯನ್ನಾಗಿ ಆಯ್ಕೆ ಮಾಡಿರುವ ಮತದಾರರು, ಮುಸುರೆ ತಿಕ್ಕಿದ್ದು ಸಾಕು, ಇನ್ನು ಜನ ಸೇವೆ ಮಾಡಿ ಎಂದು ವಿಧಾನಸಭೆಗೆ ಕಳುಹಿಸಿಕೊಟ್ಟಿದ್ದಾರೆ! 2021ರಲ್ಲಿ ಇದೇ ಕ್ಷೇತ್ರದಿಂದ ಕಲಿತಾಳನ್ನು ಬಿಜೆಪಿ ಅಭ್ಯರ್ಥಿಯಾಗಿ ಮಾಡಲಾಗಿತ್ತು. ಆದರೆ ಟಿಎಂಸಿಯ ಅಭೇದಾನಂದ ಥಾಂಡೇರ್ ಎಂಬವರ ವಿರುದ್ಧ ಆಕೆ ಸೋತಿದ್ದಳು. ಆದರೆ, ಈ ಚುನಾವಣೆಯಲ್ಲಿ ಆಕೆಯ ಅದೃಷ್ಟದ ಬಾಗಿಲು ತೆರೆದಿದ್ದು, ತನ್ನಂತೆಯೇ ದುಡಿಯುತ್ತಿರುವ ಮಹಿಳೆಯರ ಏಳಿಗೆಗಾಗಿ ಕೆಲಸ ಮಾಡಬಹುದು. ನನಗೆ ತುಂಬಾ ಸಂತೋಷವಾಗಿದೆ. ನನ್ನ ಮೇಲೆ ನಂಬಿಕೆ ಇಟ್ಟಿದ್ದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ಕೃತಜ್ಞಳು. ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಕೆಲಸ ಮಾಡುವುದು, ಸರಿಯಾದ ರಸ್ತೆ ಮತ್ತು ಕುಡಿಯುವ ನೀರು ಪ್ರತಿಯೊಬ್ಬರ ಮನೆಗಳಿಗೆ ತಲುಪುವಂತೆ ನೋಡಿಕೊಳ್ಳುವುದು ನನ್ನ ಪ್ರಮುಖ ಆದ್ಯತೆ. ಯುವಕರ ಅಭಿವೃದ್ಧಿ ಮತ್ತು ಮಹಿಳೆಯರ ಸುರಕ್ಷತೆಗೂ ಕೆಲಸ ಮಾಡುತ್ತೇನೆ ಎನ್ನುವುದು ಆಕೆಯ ವಿಶ್ವಾಸದ ಮಾತುಗಳು. ಪ್ರಜಾಪ್ರಭುತ್ವದ ಬ್ಯೂಟಿ ಎಂದರೆ ಇದೇ ಅಲ್ಲವೇ?

2021ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲೂ ನಾನು ಬಂಗಾಳ ಪ್ರವಾಸ ಮಾಡಿದ್ದೆ ಮತ್ತು 24 ಪರಗಣ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಟಿಎಂಸಿ ಗೂಂಡಾಗಳಿಂದ ಲೈಂಗಿಕ ಹಿಂಸೆಗೆ ಒಳಗಾಗಿದ್ದ ಮಹಿಳೆಯರ ನೋವಿನ ಮಾತುಗಳನ್ನು ಕೇಳಿ, ಎಂತಹಾ ಪರಿಸ್ಥಿತಿಯಲ್ಲಿ ಇವರು ಬದುಕುತ್ತಿದ್ದಾರಪ್ಪಾ ಎಂದು ಅನಿಸಿತ್ತು. ಈ ಸಂತ್ರಸ್ತ ಕುಟುಂಬದ ಮೂರ್ನಾಲ್ಕು ಹೆಣ್ಣುಮಕ್ಕಳು ಪ್ರಧಾನಿ ನರೇಂದ್ರ ಮೋದಿಯವರ ರಾಲಿಯಲ್ಲಿ ತೆರಳಿದ್ದರು ಎಂಬ ಕಾರಣಕ್ಕಾಗಿ ಟಿಎಂಸಿ ಕಾರ್ಯಕರ್ತರಿಂದ ಅತ್ಯಾಚಾರಕ್ಕೆ ಒಳಗಾಗಿದ್ದರಂತೆ. ನಮ್ಮ ಮೇಲಾದ ಲೈಂಗಿಕ ಹಿಂಸೆ ಸಮಾಜಕ್ಕೆ ಗೊತ್ತಾದರೆ ಸಮಾಜ ನಮ್ಮನ್ನು ದೂರ ಮಾಡುತ್ತದೆ ಎಂದು ಭಯದಿಂದಿದ್ದ ಮಹಿಳೆಯರು, ದೂರು ನೀಡಲು ಹಿಂದೇಟು ಹಾಕಿದ್ದರು. ದೂರು ನೀಡಿದರೆ ಮತ್ತೆ ನಮ್ಮ ಕುಟುಂಬದ ಮೇಲೆ ದಾಳಿಯಾಗಬಹುದು ಎನ್ನುವುದೂ ಅವರ ಆತಂಕ. ಮಾನಸಿಕವಾಗಿ ಆಘಾತಕ್ಕೀಡಾಗಿದ್ದ ಮಹಿಳೆಯರು, ಬಟ್ಟೆಯಿಂದ ಮುಖ ಕವರ್ ಮಾಡಿ ಮಾತನಾಡಿದರು. ನಿಮ್ಮ ನೋವುಗಳನ್ನು ನಮ್ಮ ವಾಹಿನಿ ಮುಂದೆ ಹೇಳಿಕೊಳ್ಳಬಹುದಲ್ಲಾ ಎಂದು ಹೇಳಿದ್ದಕ್ಕೆ, ನೀವು ಸಂದರ್ಶನ ಮಾಡಿ ಇಲ್ಲಿಂದ ಹೋಗುತ್ತೀರಿ ಸರ್. ನಂತರ ನಮ್ಮ ಮನೆಗಳ ಮೇಲೆ ದಾಳಿ ಮಾಡುತ್ತಾರೆ, ಹಿಂಸೆ ಕೊಡುತ್ತಾರೆ ಎಂದಾಗ ನಾನು ನಿರುತ್ತರನಾಗಿದ್ದೆ.

ಅತ್ಯಾಚಾರ, ದೌರ್ಜನ್ಯ, ರಾಜಕೀಯ ಹಿಂಸಾಚಾರಗಳನ್ನು ಸಣ್ಣ ಘಟನೆ, ಬಿಜೆಪಿಯ ಅಜೆಂಡಾ, ಟಿಎಂಸಿ ವರ್ಚಸ್ಸಿಗೆ ಹಾನಿ ಮಾಡುವ ಪಿತೂರಿ ಎನ್ನುತ್ತಾ ಅವುಗಳನ್ನು ಗಂಭೀರವಾಗಿ ತೆಗೆದುಕೊಳ್ಳದ ಸಿಎಂ ಮಮತಾ ಬ್ಯಾನರ್ಜಿ, ಟಿಎಂಸಿ ಕಾರ್ಯಕರ್ತರ ರಕ್ಷಣೆಗೇ ಕಟಿಬದ್ಧರಾಗಿ ನಿಂತರು. ಹೆಣ್ಣುಮಕ್ಕಳ ಏಳಿಗೆಗಾಗಿ ಲಕ್ಷ್ಮಿ ಭಂಡಾರ್, ರೂಪಶ್ರೀ, ಕನ್ಯಾಶ್ರೀಯಂತಹ ಯೋಜನೆಗಳನ್ನು ಜಾರಿ ಮಾಡಿ, ಮಹಿಳೆಯರ ಮೆಚ್ಚುಗೆಗೆ ಪಾತ್ರರಾದ ಸಿಎಂ ಮಮತಾ, ಹೆಣ್ಮಕ್ಕಳ ಭದ್ರತೆಗೆ ಕಾಳಜಿ ವಹಿಸಲಿಲ್ಲ, ತಮ್ಮ ಪಕ್ಷದವರ ತಪ್ಪುಗಳನ್ನು ಮರೆಮಾಚಿದರು. ಫಲಿತಾಂಶದ ನಂತರ, ನನ್ನಿಂದ ತಪ್ಪುಗಳಾಗಿವೆ ಎಂದು ದೀದಿಯ ಒಳ ಮನಸ್ಸಿಗಾದರೂ ಅನಿಸಿರಬಹುದು ಅಂದುಕೊಂಡಿದ್ದೆ. ಆದರೆ, ಸದ್ಯಕ್ಕೆ ಆ ನಿರೀಕ್ಷೆಗಳು ಸುಳ್ಳಾಗಿವೆ.

ಕೋಟಿಗೊಬ್ಬರಾಗುವ ಆಯ್ಕೆ ನಮ್ಮ ಕೈಲಿದೆ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಒಂದೂರಿನಲ್ಲಿ ಒಬ್ಬ ರಾಜನಿದ್ದನಂತೆ, ಆತ ದಯಾಳು. ಹೀಗಾಗಿ ಪರವೂರಿನಿಂದ ಬರುವವರಿಗೆ ಒಂದು ಅನ್ನ ಛತ್ರ ಕಟ್ಟಿಸಿರುತ್ತಾನೆ. ಎಲ್ಲವೂ ಚೆನ್ನಾಗಿ ನಡೆದುಕೊಂಡು ಹೋಗುತ್ತಿರುತ್ತದೆ. ಎಲ್ಲಿಯವರೆಗೆ ಚೆನ್ನಾಗಿ ನಡೆಯುತ್ತಿರುತ್ತದೆ ಅಲ್ಲಿಯವರೆಗೆ ಸರಿ. ಮೊದಲೆರಡು ದಿನ ಜನ ರಾಜನನ್ನು ಹೊಗಳಿದ್ದೆ ಹೊಗಳಿದ್ದು. ಆಮೇಲೆ ಅದು ನಾರ್ಮಲ್ ಆಗಿ ಹೋಗುತ್ತದೆ. ಇದು ನಮ್ಮ ಹಕ್ಕು ಎನ್ನುವಂತೆ ಜನ ವರ್ತಿಸಲು ಶುರು ಮಾಡುತ್ತಾರೆ. ಹೀಗಿರುವಾಗ ಒಂದು ದಿನ ಹದ್ದೊಂದು ಹಸಿವಿನಿಂದ ಬಳಲುತ್ತಾ ಕಣ್ಣಿಗೆ ಕಂಡ ಹಾವನ್ನು ಹಿಡಿದು ಹಾರುತ್ತ ಹೋಗುವಾಗ ಹಾವಿನ ಬಾಯಿಂದ ಒಂದೆರಡು ಹನಿ ವಿಷ ಅಡುಗೆಗೆ ಬೀಳುತ್ತದೆ. ವಿಷಾಹಾರ ಸೇವಿಸಿ ಒಂದಿಬ್ಬರು ಮೃತರಾಗುತ್ತಾರೆ. ಒಂದಿಬ್ಬರು ಅಸ್ವಸ್ಥರಾಗುತ್ತಾರೆ. ಈ ಸಾವು ನೋವಿನ ಲೆಕ್ಕವನ್ನು ಯಾರ ಖಾತೆಗೆ ಹಾಕುವುದು ಎಂದು ಚಿತ್ರಗುಪ್ತ ಯಮಧರ್ಮನನ್ನು ಕೇಳಲು, ಯಮರಾಜ ಗೊಂದಲಕ್ಕೆ ಒಳಗಾಗಿ, ರಾಜನನ್ನೇ ಕೇಳೋಣ ಎನ್ನುತ್ತಾನೆ. ಚಿತ್ರಗುಪ್ತ ಮಾರುವೇಷದಲ್ಲಿ ಬಂದು ರಾಜನನ್ನು ಈ ಕುರಿತು ಕೇಳಲು, ಒಂದು ದಿನ ಬಿಟ್ಟು ಬರಲು ರಾಜ ಹೇಳುತ್ತಾನೆ.

ರಾಜ ಮಾರುವೇಷದಲ್ಲಿ ಛತ್ರದ ಬಳಿ ಏನಾಯ್ತು ಎಂದು ವಿಚಾರಿಸಲು ಹೋಗುತ್ತಾನೆ. ಹೋಗುವಾಗ ಈ ಸಾವಿನ ಘಟನೆ ನಡೆದು ಆರು ತಿಂಗಳ ಮೇಲಾಯ್ತು. ಇವತ್ತಿಗೆ ಮತ್ತೆಲ್ಲವೂ ಸರಿಯಾಗೆ ನಡೆಯುತ್ತಿದೆ. ಆದರೂ ಈ ಪ್ರಶ್ನೆ ಮತ್ತೇಕೆ ಉದ್ಭವವಾಯ್ತು ಎಂದು ಯೋಚಿಸುತ್ತ ಛತ್ರವಿದ್ದ ಜಾಗವನ್ನು ತಲುಪುತ್ತಾನೆ. ಅಲ್ಲಿ ಅರಳಿಕಟ್ಟೆಯಲ್ಲಿ ಹರಟೆ ಹೊಡೆಯುತ್ತಾ ಕುಳಿತ ಐದಾರು ಜನರಲ್ಲೊಬ್ಬ ರಾಜನನ್ನು ನೋಡಿ 'ಏಯ್ ದಾರಿಹೋಕ ಹುಷಾರು, ಛತ್ರದಲ್ಲಿ ಊಟ ಮಾಡಬೇಡ. ಅಲ್ಲಿ ಊಟ ಮಾಡಿದವರೆಲ್ಲ ಸಾಯುತ್ತಾರೆ. ಇದು ರಾಜನದೇ ಏನೋ ಕಿತಾಪತಿ ಇರಬೇಕು' ಎನ್ನುತ್ತಾನೆ. ಇನ್ನೊಬ್ಬನಂತೂ ರಾಜನನ್ನು ಜಾತಿವಾದಿ, ತನ್ನ ಜಾತಿಯವರಲ್ಲದೆ ಇತರ ಜಾತಿಯವರನ್ನು ಕೊಲ್ಲಲು ಮಾಡಿರುವ ಹುನ್ನಾರವಿದು ಎನ್ನುವ ಮಾತನ್ನು ಆಡುತ್ತಾನೆ. ಮಾರುವೇಷದಲ್ಲಿದ್ದ ರಾಜ ನಕ್ಕು ಘಟನೆ ಹೇಗಾಗಿರಬಹುದು ಎನ್ನುವುದರ ನೈಜ ಚಿತ್ರಣ ಪಡೆದು ಮರಳುತ್ತಾನೆ. ಮರುದಿನ ಮಾರುವೇಷದಲ್ಲಿ ಚಿತ್ರಗುಪ್ತ ಬಂದಾಗ ರಾಜ ಅವನನ್ನು ಕುರಿತು ಅರಳಿಕಟ್ಟೆಯ ಮೇಲೆ ಕುಳಿತು ಊಹಾಪೋಹದ ಮಾತುಗಳನ್ನು ಆಡುತ್ತಿರುವ ಐವರ ಹೆಸರು ಹೇಳಿ ಈ ಸಾವು ನೋವಿನ ಲೆಕ್ಕವನ್ನು ಅವರ ಖಾತೆಗೆ ಹಾಕು ಎನ್ನುತ್ತಾನೆ. ಚಿತ್ರಗುಪ್ತನಿಗೆ ಆಶ್ಚರ್ಯವಾಗಿ, ನೀವು ಹೇಳಿದಂತೆ ಮಾಡುವೆ, ಆದರೆ ಒಂದು ಪ್ರಶ್ನೆ. ಅವರ ತಪ್ಪಾದರೂ ಏನು? ಎನ್ನುತ್ತಾನೆ. ಆಗ ರಾಜ ನೋಡು ನಾನು ಬೇರೆ ಊರಿನಿಂದ ಬರುವ ಯಾತ್ರಿಕರಿಗೆ ಅನುಕೂಲವಾಗಲಿ ಎನ್ನುವ ಕಾರಣದಿಂದ ಛತ್ರ ಕಟ್ಟಿಸಿದೆ, ಹೀಗಾಗಿ ನನ್ನ ತಪ್ಪಿಲ್ಲ. ಪಾಪದ ಹದ್ದು ಹೊಟ್ಟೆ ಹಸಿವಿನ ಕಾರಣ ಹಾವನ್ನು ಹಿಡಿದಿದೆ, ಹೀಗಾಗಿ ಅದರ ತಪ್ಪು ಕೂಡ ಇಲ್ಲ, ಇನ್ನು ಹಾವು ಅದಕ್ಕೆ ಜೀವ ಭಯದ ಕಾರಣದಿಂದ ಅದರ ಬಾಯಿಯಿಂದ ವಿಷ ತೊಟ್ಟಿಕ್ಕಿದೆ. ಹೀಗಾಗಿ ಅದರ ತಪ್ಪು ಕೂಡ ಇಲ್ಲ. ಹೀಗಾಗಿ ನಿಜಕ್ಕೂ ಸಾವು ನೋವಿನ ಲೆಕ್ಕಾಚಾರ ಯಾರ ಖಾತೆಗೆ ಹಾಕುವುದು ಎನ್ನುವುದು ಬಹಳ ಕಷ್ಟದ ವಿಚಾರ. ಆದರೆ ಆ ಅರಳೀಕಟ್ಟೆಯಲ್ಲಿ ಕುಳಿತು ಘಟನೆಯ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳದೆ ನಿಂದಿಸುತ್ತಿರುವ ಆ ಐವರ ಹೆಸರನ್ನು ತಪ್ಪಿನ ಲೆಕ್ಕಕ್ಕೆ ಬರೆದುಕೊಳ್ಳುವುದು ತಪ್ಪಲ್ಲ ಎನ್ನುತ್ತಾನೆ. ಈ ಉತ್ತರದಿಂದ ಸಂಪ್ರೀತನಾದ ಚಿತ್ರಗುಪ್ತ ಯಮಲೋಕಕ್ಕೆ ಮರಳುತ್ತಾನೆ. ಇದು ಕಥೆ ಎನ್ನಿಸುತ್ತದೆ ಅಲ್ಲವೇ? ಹೌದು ಇದು ಕಥೆ. ಆದರೆ ಈ ಕಥೆಯಲ್ಲಿ ಬರುವ ಅರಳೀಕಟ್ಟೆಯಲ್ಲಿ ಕುಳಿತ ಐವರಂತೆ ನಮ್ಮ ಸಮಾಜದಲ್ಲಿ ಕೋಟಿ ಕೋಟಿ ಜನರಿದ್ದಾರೆ ಎಂದು ಹೇಳಲು ಈ ಕಥೆ ಹೇಳಬೇಕಾಯ್ತು. ಸಾಮಾಜಿಕ ಜಾಲತಾಣ ಎನ್ನುವುದು ಹೊಸ ಅರಳೀಕಟ್ಟೆ. ಹಿಂದೆಮುಂದೆ ಗೊತ್ತಿಲ್ಲದೇ ಎಲ್ಲದಕ್ಕೂ ಅಭಿಪ್ರಾಯ ಮಂಡಿಸುವವರು ಆ ಅರಳೀಕಟ್ಟೆಯಲ್ಲಿ ಕುಳಿತವರಂತೆ! ಮಧ್ಯ ರಾತ್ರಿಯಲ್ಲಿ ಸ್ವಲ್ಪ ಸದ್ದಾದರೂ ಸಾಕು ಶ್ವಾನಗಳು ಬೊಗಳಲು ಶುರು ಮಾಡುತ್ತವೆ. ಒಂದು ಬೊಗಳಿತು ಎಂದು ಇನ್ನೊಂದು, ಇನ್ನೊಂದು ಬೊಗಳಿತು ಎಂದು ಮತ್ತೊಂದು! ಏತಕ್ಕೆ ಬೊಗಳುತ್ತಿದ್ದೇವೆ ಎನ್ನುವ ಪರಿಜ್ಞಾನ ಯಾವ ಶ್ವಾನಕ್ಕೂ ಇರುವುದಿಲ್ಲ, ನಾವು ಈ ರೀತಿ ವರ್ತಿಸುವುದು ಬೇಡ ಅಲ್ಲವೇ? ನಾವು ಕೋಟಿಯಲ್ಲಿ ಒಬ್ಬರಾಗುವುದಕ್ಕೂ, ಕೋಟಿಗೊಬ್ಬರಾಗುವುದಕ್ಕೂ ಬಹಳ ವ್ಯತ್ಯಾಸವಿದೆ.

ನಮ್ಮ ಗೀತೆ, ಉಪನಿಷತ್ತು, ಹಠ ಯೋಗ ಇತ್ಯಾದಿ ಎಲ್ಲವೂ ಇದನ್ನೇ ಸಾರುತ್ತದೆ. ಯೋಗ ವಸಿಷ್ಠದ ಒಂದು ಶ್ಲೋಕ:

'ಯೈವ ಸಿದ್ ಭುವನಾ ಭೋಗಭೂಷನೇ ವ್ಯೋಮ್ನಿ ಭಾಸ್ಕರೇ
ಧಾರಾವಿವರಕೋಶಸ್ಥೇ ಸೈವ ಚಿತ್ಕಿಟಕೋದರೇ!'

ಅರ್ಥ, ಸೃಷ್ಟಿಯಲ್ಲಿರುವ ಶಕ್ತಿ ಒಂದೇ ಎಂದು ಹೇಳುತ್ತದೆ. ಅಗಾಧವಾಗಿ ಬೆಳಕುತ್ತಿರುವ ಸೂರ್ಯನಲ್ಲಿ ಮತ್ತು ಅತ್ಯಂತ ಸಣ್ಣ ಕ್ರಿಮಿಯಲ್ಲಿರುವ ಶಕ್ತಿ ಒಂದೇ, ಎರಡರಲ್ಲೂ ಇರುವ ಆ ಶಕ್ತಿ ದೈವ ಸ್ವರೂಪಿಯಾಗಿದೆ. ಹೀಗಾಗಿ ಬುದ್ಧಿ, ಸಂಪತ್ತು, ಸಾಮಾಜಿಕ ಶ್ರೇಣಿಯಿಂದ ಬೇರ್ಪಡಿಸಿ ನೋಡುವುದು ಯುಕ್ತವಲ್ಲ ಎನ್ನುತ್ತದೆ.

ಅಷ್ಟಾವಕ್ರ ಗೀತೆಯಲ್ಲಿ ಒಂದು ಸಾಲು, 'ಏಕೋ ಹಂ ದೇಹವಾನಪಿ' ಎಂದು ಹೇಳುತ್ತದೆ. ಅಂದರೆ ದೇಹದ ರಚನೆಯಿಂದ ನಾವು ಬೇರೆ ಬೇರೆ ಅಷ್ಟೇ. ನಾವು ಹೇಳುವ ಕರಿಯ, ಬಿಳಿಯ, ದಪ್ಪ, ಸಣ್ಣ ಎಲ್ಲವೂ ದೈಹಿಕ ರಚನೆಯಿಂದ ನಮ್ಮಲ್ಲಿರುವ ಭೇದವನ್ನು ತೋರಿಸುತ್ತದೆ. ಆದರೆ ಆತ್ಮದಲ್ಲಿರುವ ಶಕ್ತಿ, ಚೇತನ ಒಂದೇ ಎನ್ನುವುದು ಇದರರ್ಥ. ಆತ್ಮದಲ್ಲಿನ ಚೇತನ ಒಂದೇ ಆಗಿದ್ದರೂ ಕೂಡ ಸಮಾಜದಲ್ಲಿ ಇಷ್ಟೊಂದು ವ್ಯತ್ಯಾಸಗಳು ಏತಕ್ಕಿವೆ? ಬಡವ -ಶ್ರೀಮಂತ, ಬುದ್ಧಿವಂತ -ದಡ್ಡ, ಪಾಪ-ಪುಣ್ಯ ಈ ರೀತಿ ವ್ಯತ್ಯಾಸಗಳ ಪಟ್ಟಿಯೇ ಅದೇಕೆ ಇಷ್ಟು ಲಂಬವಾಗಿದೆ. ನಮ್ಮಲಿರುವ ಚೇತನ ಒಂದೇ ಆಗಿದ್ದು ಕೂಡ ನಾವ್ಯಾಕೆ ಒಂದೇ ಸಮವಾಗಿಲ್ಲ? ನಮ್ಮಲಿರುವ ಆ ಚೇತನವನ್ನು ನಾವೇಗೆ ದುಡಿಸಿಕೊಳ್ಳುವ ಕ್ಷಮತೆ ಹೊಂದಿದ್ದೇವೆ ಎನ್ನುವುದರ ಆಧಾರದ ಮೇಲೆ ನಾವ್ಯಾರು ಎನ್ನುವುದು ಕೂಡ ನಿರ್ಧಾರವಾಗುತ್ತದೆ ಎನ್ನುವ ಸರಳ ಸತ್ಯದ ಸಾಕ್ಷಾತ್ಕಾರ ನಮಗಾಗಿ ಬಿಟ್ಟರೆ ಸಾಕು. ಹಿಂತಿರುಗಿ ನೋಡುವ ಪ್ರಮೇಯ ಬರುವುದಿಲ್ಲ. ಸೃಷ್ಟಿಯಲ್ಲಿನ ಸಣ್ಣ ಕ್ರಿಮಿಯಿಂದ ಪ್ರಜ್ವಲಿಸುವ ಸೂರ್ಯನವರೆಗೆ ಎಲ್ಲರಲ್ಲೂ ಇರುವುದು ಅದೇ ಚೇತನ. ಆದರೂ ಇಷ್ಟೊಂದು ಭೇದ ಉಂಟಾಗಿರುವುದು, ಬಡವ -ಶ್ರೀಮಂತ, ಸೋಲು -ಗೆಲುವು ಇವೆಲ್ಲವೂ ಸೃಷ್ಟಿಯಾಗಿರುವುದು ಕರ್ಮದ ಕಾರಣದಿಂದ, ನಮ್ಮಲ್ಲಿರುವ ಶಕ್ತಿಯನ್ನು ಹೇಗೆ ಬಳಸಿಕೊಂಡೆವು ಎನ್ನುವುದರ ಆಧಾರದ ಮೇಲೆ ಇವು ಸೃಷ್ಟಿಯಾಗಿವೆ.

ನೌಕರ, ಯಜಮಾನ, ಸಿರಿವಂತ, ಬಡವ, ಅಪ್ರಯೋಜಕ ಹೀಗೆ ಸಮಾಜದಲ್ಲಿ ಚಾಲ್ತಿಯಲ್ಲಿರುವ ಸಾವಿರಾರು ಪದಗಳು ನಮ್ಮನ್ನು ವಿಭಜಿಸುತ್ತವೆ. ಹೀಗೇಕೆ? ಅಷ್ಟಾವಕ್ರ ಗೀತೆಯ ಒಂದು ಶ್ಲೋಕ: ತನ್ತುಮಾತ್ರೋ ಭವೇದೇವ ಪಾತೋ ಯದ್ವದ್ವಿಚಾರಿತಃ ಆತ್ಮಾ ತನ್ಮಾತ್ರಂ ಏವೇದಂ ತದ್ವದ್ವಿಶ್ವಂ ವಿಚಾರಿತಮ್. ಒಂದು ಬಟ್ಟೆಯನ್ನು ನೋಡಿ, ಅದರಲ್ಲಿರುವುದು ಎಲ್ಲ ನೂಲಿನ ಎಳೆಗಳೇ. ಆದರೆ, ಕೆಲವು ನೂಲುಗಳ ಮೇಲೆ ಚಿತ್ತಾರವಿದೆ, ಕೆಲವುಗಳು ಹಾಗೆ ಉಳಿದುಕೊಂಡಿವೆ. ಒಟ್ಟಾರೆ ಬಟ್ಟೆ ಉತ್ಪನ್ನವಾದದ್ದು ಈ ನೂಲುಗಳಿಂದ, ಆದರೆ ಕೆಲವು ನೂಲುಗಳು ಬಣ್ಣದ ಚಿತ್ತಾರ ರೂಪಿಸಿಕೊಂಡು ಅಂದವನ್ನು ಹೆಚ್ಚಿಸಿವೆ. ಒಂದೇ ನೂಲು ವಿಭಿನ್ನವಾಗುವುದು ತನ್ನಲ್ಲಿರುವ ಅಂತಃಸತ್ವದಿಂದ! ಎನ್ನುವ ಅರ್ಥವನ್ನು ಈ ಶ್ಲೋಕ ನೀಡುತ್ತದೆ.

ಮೇಲಿನ ಕಥೆಯ ವಿಚಾರಕ್ಕೆ ಮತ್ತೆ ಬರೋಣ. ಅರಳೀಕಟ್ಟೆಯ ಮೇಲೆ ಕುಳಿತವರು ಹೆಚ್ಚಿನದೇನೂ ಮಾಡದೆ ಅಪಪ್ರಚಾರ ಮಾಡದೆ ಸುಮ್ಮನೆ ಕುಳಿತಿದ್ದರೂ ಸಾಕಿತ್ತು. ಸಾವು ನೋವಿನ ಲೆಕ್ಕಾಚಾರ ಅವರ ತಲೆಗೆ ಬರುತ್ತಿರಲಿಲ್ಲ, ನಾವ್ಯಾರು ಎನ್ನುವುದನ್ನು ಬರೆದುಕೊಳ್ಳುವ ಅಮೋಘ ಅವಕಾಶವನ್ನು ಭಗವಂತ ನಮಗೆ ಬಿಟ್ಟಿದ್ದಾನೆ. ಆದರೆ ನಾವೆಂತಹ ಮತಿಹೀನರು ಎಂದರೆ ಹಣೆಬರಹ ಬರೆಯುವುದು ಬೇರೆ ಯಾರೋ ಎನ್ನುವ ಉಪೇಕ್ಷೆಯಲ್ಲಿ ಬದುಕುತ್ತಿದ್ದೇವೆ.

ನಿಮಗೆ ಗೊತ್ತಿರಲಿ ಜಗತ್ತಿನಲ್ಲಿ ಕೇವಲ 3 ಪ್ರತಿಶತ ಜನರಿಗೆ ಮಾತ್ರ ಏನು ಬೇಕು ಎನ್ನುವುದರ ಬಗ್ಗೆ ನಿಖರತೆ ಇರುತ್ತದೆ. ಅಂದರೆ ಈ ಮೂರು ಪ್ರತಿಶತ ಜನ ಮಾತ್ರ ಬದುಕಿನಿಂದ ನನಗೇನು ಬೇಕು ಎನ್ನುವುದರ ಬಗ್ಗೆ ಚಿಂತಿಸಿರುತ್ತಾರೆ. ಉಳಿದ 97 ಪ್ರತಿಶತ ಜನರಿಗೆ ಏನು ಬೇಕು ಎನ್ನುವುದೇ ಗೊತ್ತಿರುವುದಿಲ್ಲ. ಮುಕ್ಕಾಲು ಪಾಲು ಜನ ಈ ಜಗತ್ತಿನಲ್ಲಿ ಸೋಮಾರಿಗಳು. ಅವರಿಗೆ ಮೈ ಬಗ್ಗಿಸಿ ಕೆಲಸ ಮಾಡುವುದು ಬೇಕಿರುವುದಿಲ್ಲ. ಅವರು ಅಧ್ಯಾತ್ಮದ ಹೆಸರಿನಲ್ಲಿ ತಮ್ಮ ಹುಳುಕನ್ನು ಮುಚ್ಚಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತಾರೆ. ನೀವು ಯಾರಿಗೂ ಉತ್ತರಿಸಬೇಕಿಲ್ಲ, ನಿಮ್ಮ ಆತ್ಮಸಾಕ್ಷಿಗೆ ಮೋಸ ಮಾಡಿಕೊಳ್ಳದೆ ಉತ್ತರಿಸಿಕೊಳ್ಳಿ. ಮೇಲಿನ ಸಾಲುಗಳಲ್ಲಿ ನೀವಿಲ್ಲ ಎಂದು ನಿಮ್ಮ ಮನಸ್ಸು ಹೇಳಿದರೆ ಅಷ್ಟು ಸಾಕು. ಜಗತ್ತಿನ ಅನುಮೋದನೆಗೆ ಕಾಯುವ ಅವಶ್ಯಕತೆಯಿಲ್ಲ. ಮೇಲಿನ ಸಾಲುಗಳಲ್ಲಿ ಹೇಳಿದಂತೆ ಊಹೆ ಮಾಡಿಕೊಂಡಾಗ ಎಲ್ಲವೂ ಇದ್ದೂ ಕೂಡ ಬಹು ಜನರು ಏನೂ ಏಕೆ ಮಾಡುವುದಿಲ್ಲ ಎನ್ನುವುದಕ್ಕೆ ಉತ್ತರ ಸಿಕ್ಕಿತು ಅಲ್ಲವೇ? ಮೂಲವಾಗಿ ಬೇಕಾಗಿರುವುದು ಆತ್ಮಬಲ ಎನ್ನುವ ಇಂಧನ.

ನಮಗೆ ಬೇಕಾದ, ನಾವು ಬಯಸಿದ ಎಲ್ಲವೂ ನಮ್ಮ ಕೈಯಳತೆಯ ದೂರದಲ್ಲಿ ಇರುತ್ತದೆ. ಅದು ನಮ್ಮದಾಗುತ್ತದೆ ಎನ್ನುವ ಅರಿವು ಕೆಲವೇ ಕೆಲವು ಜನರಿಗೆ ಮಾತ್ರ ಇರುತ್ತದೆ. ಅಷ್ಟೇ ಅಲ್ಲ ಅವರಿಗೆ ಬಯಸಿದ್ದೆಲ್ಲ ಸಿಗುತ್ತದೆ ಎನ್ನುವ ನಂಬಿಕೆ ಕೂಡ ಪ್ರಬಲವಾಗಿರುತ್ತದೆ. ಇತರರಿಗೆ ಇದು ಜಾಳಾಗಿರುತ್ತದೆ. ನಾವ್ಯಾರಾಗಬೇಕು ಎನ್ನುವ ನಿರ್ಧಾರ, ಈ ಗುಣವನ್ನು ನಮ್ಮದಾಗಿಸಿಕೊಳ್ಳುವ ಆತುರ ಕೂಡ ನಮ್ಮದಾಗಿರಬೇಕು. ಬಯಸಿದ್ದೆಲ್ಲ ಸಿಗುವುದಿಲ್ಲ ಎನ್ನುವುದು ಮೆಜಾರಿಟಿ ಜನರ ಮೆಂಟಾಲಿಟಿ. you always get what you want ಎನ್ನುವುದು ಕೆಲವೇ ಕೆಲವು ಜನರ ನಂಬಿಕೆ. ಬಹುಪಾಲು ಜನರು ಮಾಡಿದ್ದನ್ನು ನೀವು ಮಾಡಿದರೆ ಅಥವಾ ಮಾಡುತ್ತಿದ್ದರೆ, ಬಹುಪಾಲು ಜನರಿಗೆ ಸಿಕ್ಕಿದ ಫಲಿತಾಂಶ ಸಿಗುತ್ತದೆ. ಬಯಸಿದ್ದೆಲ್ಲ ಸಿಗಬೇಕೆಂದರೆ ನಮ್ಮ ಮನಸ್ಥಿತಿ ಬದಲಾಯಿಸಿಕೊಳ್ಳಬೇಕು. ಆ ಗುಣದಲ್ಲಿ ನಂಬಿಕೆಯಿಡಬೇಕು. ಒಂದು ದಿನದಲ್ಲಿ ಅದು ರಕ್ತಗತವಾಗುವುದಿಲ್ಲ, ಆದರೆ ಅಸಾಧ್ಯವಂತೂ ಅಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕರ್ನಾಟಕಕ್ಕೂ ಬೇಕು ಒಂದು ಪ್ರಾದೇಶಿಕ ಪಕ್ಷ

ಪಂಚ ರಾಜ್ಯಗಳ ಚುನಾವಣೆಯನ್ನು ಗ್ರಹಿಸಿದಾಗ ಪ್ರಜಾಪ್ರಭುತ್ವದ ಶಕ್ತಿಯನ್ನು ತೋರ್ಪಡಿಸುತ್ತದೆ. ಪ್ರತಿಯೊಬ್ಬರು ಆಡಳಿತ ಪಕ್ಷದ ವೈಖರಿಗೆ ರೋಸಿ ಹೋಗಿದ್ದರೆನಿಸುತ್ತದೆ. ಹೊಸ ನಾಯಕತ್ವದ ನಿರೀಕ್ಷೆಯಲ್ಲಿ ಪ್ರಜೆಗಳು ಮತ ಚಲಾಯಿಸಿದ್ದಾರೆ. ಮತದಾನ ಪ್ರಜಾಪ್ರಭುತ್ವದ ಪ್ರಬಲ ಅಸ್ತ್ರವೆಂದು ಮತ್ತೊಮ್ಮೆ ಸಾಬೀತಾಗಿದೆ. ಜನರು ಪೂರ್ಣ ಪ್ರಮಾಣದಲ್ಲಿ ಮತದಾನ ಮಾಡಿದರೆ. ಬೇರು ಬಿಟ್ಟಿರುವ ರಾಜಕೀಯ ಪಕ್ಷಗಳಿಗೆ ನಡುಕ ಉಂಟಾದೀತು. ಹೊಸ ಪಕ್ಷಗಳ ಮೇಲೆ ಭರವಸೆ ಇಟ್ಟ ಜನರ ನಂಬಿಕೆಯನ್ನು ಉಳಿಸಿಕೊಂಡರಷ್ಟೇ ಗೆದ್ದವರಿಗೆ ಉಳಿಗಾಲ. ಚುನಾವಣೆ ಪ್ರತಿ ಸಲ ಏಕಮುಖವಾಗದೆ, ವಿವಿಧ ಆಯಾಮಗಳಿಂದ ಹೊಸತನವನ್ನು ಹುಡುಕಿಕೊಳ್ಳಬೇಕೆಂಬುದಕ್ಕೆ ಈ ಚುನಾವಣೆ ಸಾಕ್ಷಿಯಾಗಿದೆ. ತಮಿಳುನಾಡಿನಲ್ಲಿ ಪ್ರಾದೇಶಿಕ ಪಕ್ಷ ಗೆಲುವು ಸಾಧಿಸುವಂತೆ ಕರ್ನಾಟಕಕ್ಕೆ ಪ್ರಾದೇಶಿಕ ಪಕ್ಷದ ಕೊರತೆ ಬಹಳಷ್ಟು ಇದೆ. ಕೇವಲ ಕನ್ನಡಿಗರ ಪ್ರೇಮ ಸಾಹಿತ್ಯ, ಸಂಸ್ಕೃತಿಗೆ ಸೀಮಿತವಾಗದೆ ಕರ್ನಾಟಕದ ಹೊಸ ರಾಜಕೀಯ ಪ್ರಾದೇಶಿಕ ಪಕ್ಷಕ್ಕೂ ಕೂಡ ಜನ ಮನ್ನಣೆ ಕೊಡುವಂತಾಗಲಿ. ಬದಲಾವಣೆ ಪ್ರಜಾಪ್ರಭುತ್ವದ ಉಸಿರಾಗಿ ನಮ್ಮೆಲ್ಲರ ಬದುಕು ಹಸಿರಾಗಲಿ.

- ರಾಜೇಂದ್ರಕುಮಾರ್ ಮುದ್ನಾಳ್, ಯಾದಗಿರಿ.

ಶಿಕ್ಷಣಕ್ಕೆ ಸರಕಾರದ 'ಅಷ್ಟ' ಗ್ಯಾರಂಟಿಯ ಬಲ

ಸರಕಾರಿ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸಲು 2026-27ನೇ ಶೈಕ್ಷಣಿಕ ಸಾಲಿನಿಂದ 'ಎಂಟು' ಪ್ರಮುಖ ಗ್ಯಾರಂಟಿಗಳನ್ನು ಸರಕಾರ ರೂಪಿಸಿರುವುದು ಸ್ವಾಗತಾರ್ಹ. ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಸರಕಾರ ಮಹತ್ವದ ಹಾಗೂ ದೂರದೃಷ್ಟಿಯ ನಿರ್ಧಾರ ಕೈಗೊಂಡಿದ್ದು, ಈ ಯೋಜನೆಯು ಸದೃಢ ಹಾಗೂ

ಸಮರ್ಪಕವಾಗಿ ಜಾರಿಯಾಗಿದ್ದೆಯಾದಲ್ಲಿ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮನ್ವಂತರಕ್ಕೆ ಸಾಕ್ಷಿಯಾಗಲಿದೆ. ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರಕಬೇಕೆಂಬ ದೂರದೃಷ್ಟಿಯಿಂದ ಸರಕಾರ 'ಅಷ್ಟ' ಗ್ಯಾರಂಟಿಗಳನ್ನು ರೂಪಿಸಿದ್ದು, ಇದರಲ್ಲಿ ಶಿಕ್ಷಕರ ಕೊರತೆಗೆ ತ್ವರಿತ ಪರಿಹಾರ, ಸುಧಾರಿತ ಶಾಲಾ ಕಟ್ಟಡಗಳು, ಶುದ್ಧ ನೀರು ಮತ್ತು ಶೌಚಾಲಯ ಸೌಲಭ್ಯ, ಭಾಷಾ ಆಯ್ಕೆಯ ಸ್ವಾತಂತ್ರ್ಯ, ಉಚಿತ ಆರೋಗ್ಯ ವ್ಯವಸ್ಥೆ, ಡಿಜಿಟಲ್ ಶಿಕ್ಷಣ ಮತ್ತು ಸ್ಮಾರ್ಟ್ ಕ್ಲಾಸ್‌ಗೆ ಆದ್ಯತೆ, ಕಲೆ ಮತ್ತು ಕ್ರೀಡೆಗೆ ಸಮಾನ ಮಹತ್ವ ಮತ್ತು ನಿರಂತರ ಮೇಲ್ವಿಚಾರಣೆ ಹಾಗೂ ಗುಣಮಟ್ಟದ ಪರಿಶೀಲನೆ. ಈ ಹೊಸ ಗ್ಯಾರಂಟಿಗಳು ಹೆಚ್ಚಿನ ಪೋಷಕರಲ್ಲಿ ಸರಕಾರಿ ಶಾಲೆಗಳ ಮೇಲಿನ ವಿಶ್ವಾಸ ಹೆಚ್ಚಿಸಿ, ತಮ್ಮ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಸೇರಿಸಲು ಮುಂದಾಗುವ ಸಾಧ್ಯತೆ ಹೆಚ್ಚಿದೆ. ಈ ಎಂಟು ಗ್ಯಾರಂಟಿಗಳು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಿದ್ದು ಉತ್ತಮ ಮೂಲಸೌಕರ್ಯ, ಅರ್ಹ ಶಿಕ್ಷಕರು, ಡಿಜಿಟಲ್ ಕಲಿಕೆ ಮತ್ತು ಕೌಶಲಾಭಿವೃದ್ಧಿ ಸೇರಿ ವಿದ್ಯಾರ್ಥಿಗಳ ಭವಿಷ್ಯವನ್ನು ಹೆಚ್ಚು ಭದ್ರ ಮತ್ತು ಪ್ರಕಾಶಮಾನವಾಗಿಸಲಿದೆ. ಹೀಗಾಗಿ ಪೋಷಕರು ಮತ್ತು ವಿದ್ಯಾರ್ಥಿಗಳು ಈ ಅವಕಾಶವನ್ನು ಬಳಸಿಕೊಂಡು ಸರಕಾರಿ ಶಾಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರವೇಶ ಪಡೆದು ಸರಕಾರಿ ಶಾಲೆಗಳ ಬಲವರ್ಧನೆಗೆ ಮುಂದಾಗಬೇಕಿದೆ.

- ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಗೆದ್ದೆತ್ತಿನ ಬಾಲ...!

ನೆರೆರಾಜ್ಯ ತಮಿಳುನಾಡಿನ ವಿಧಾನಸಭಾ ಚುನಾವಣೆಯ ಪ್ರಚಾರಕ್ಕೆ ಡಿಎಂಕೆ ಪರವಾಗಿ ಕಾಂಗ್ರೆಸ್ ಪಕ್ಷ ನಿಂತಿತ್ತು. ಕರ್ನಾಟಕಕ್ಕೆ ಅನುಕೂಲ ಆಗುತ್ತಿದ್ದ ಮೇಕೆದಾಟು ಯೋಜನೆಯ ವಿರುದ್ಧವಾಗಿದ್ದ ಡಿಎಂಕೆ ಪಕ್ಷದ ಪರ ಕಾಂಗ್ರೆಸ್ ಪ್ರಚಾರ ಮಾಡಿದ್ದು ಗಮನಾರ್ಹ. ಈಗ ತಮಿಳುನಾಡಿನಲ್ಲಿ ನಟ ವಿಜಯ್ ಸಾರಥ್ಯದ ಟಿವಿಕೆ ಪಕ್ಷವು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಈಗ ವಿಜಯ್ ಅವರ ಪಕ್ಷಕ್ಕೆ ಕಾಂಗ್ರೆಸ್ ಬೆಂಬಲ ನೀಡುವ ಹೇಳಿಕೆ ನೀಡಿರುವುದು ಗೆದ್ದೆತ್ತಿನ ಬಾಲ ಹಿಡಿದಂತೆ ಅಲ್ಲವೇ? ಕಾಂಗ್ರೆಸ್‌ಗೆ ಅಧಿಕಾರವೇ ಮುಖ್ಯ ಎಂಬುದಕ್ಕೆ ಇದು ಒಂದು ಅದ್ಭುತ ನಿದರ್ಶನ. ಇದು ಕೇವಲ ಕಾಂಗ್ರೆಸ್ ಅಲ್ಲದೇ ಬಹುತೇಕ ಪಕ್ಷಗಳು ಇದೇ ರೀತಿ ನಡೆದುಕೊಳ್ಳುತ್ತವೆ. ಈ ರೀತಿ ಆದರೆ ರಾಜಕಾರಣಿಗಳನ್ನೇ ಅನುಮಾನದ ದೃಷ್ಟಿಯಿಂದ ನೋಡುವ ಜನರು ಈಗ ಯಾವ ಪಕ್ಷವನ್ನೂ ನಂಬುವ ಸ್ಥಿತಿಯಲ್ಲಿ ಇಲ್ಲ. ಯಾವುದೇ ಪಕ್ಷವಾದರೂ ಸಹ ತನ್ನ ಸಿದ್ಧಾಂತವನ್ನು ಮೀರಿ ನಡೆಯದಿರಲಿ. ಬೆಂಬಲ ನೀಡುವುದಾದರೆ ಚುನಾವಣೆಗೂ ಮುನ್ನ ನೀಡಿ ಅದರಂತೆ ನಡೆಯಲಿ.

- ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಕೈ ಸುಡುತ್ತಿರುವ ಬೆಲೆಗಳು

ರಾಜ್ಯಾದ್ಯಂತ ವಿದ್ಯುತ್ ಮತ್ತು ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಯ ಸುಳಿಯಲ್ಲಿ ಸಿಲುಕಿರುವ ಸಾಮಾನ್ಯನಿಗೆ ಈಗ ತರಕಾರಿ ಬೆಲೆಗಳ ಭೀಕರ ಏರಿಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ತರಕಾರಿ ಮಾರುಕಟ್ಟೆಯಲ್ಲಿ ಬೀನ್ಸ್ ಬೆಲೆ ಕೆಜಿಗೆ 200 ದಾಟಿದೆ. ಕ್ಯಾರೆಟ್ 80, ಬೆಂಡೆಕಾಯಿ 75 ರೂಪಾಯಿಗೆ ಮಾರಾಟವಾಗುತ್ತಿರುವುದು ಕೇವಲ ಪೂರೈಕೆಯ ಕೊರತೆಯಲ್ಲ, ಬದಲಾಗಿ ಸರ್ಕಾರದ ಯೋಜನಾಬದ್ಧ ವೈಫಲ್ಯ. ಕೇವಲ ಬಿಸಿಲು ಮತ್ತು ನೀರಿನ ಅಭಾವದ ನೆಪವೊಡ್ಡಿ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ. ಈ ಬೆಲೆ ಏರಿಕೆ ಜನರ ಕೊಳ್ಳುವ ಶಕ್ತಿಯನ್ನು ಶೇ.50ಕ್ಕಿಂತ ಹೆಚ್ಚು ಕುಂದಿಸಿದೆ. ಸರ್ಕಾರ ತಕ್ಷಣವೇ ದರ ಮಾಫಿಯಾವನ್ನು ಹತ್ತಿಕ್ಕಲು ಕಠಿಣ ಕಾನೂನು ತರಬೇಕು ಮತ್ತು ಶೈತ್ಯಾಗಾರಗಳ ಸಮರ್ಪಕ ಬಳಕೆಯ ಮೂಲಕ ಬೆಲೆ ಸ್ಥಿರೀಕರಣ ಮಾಡಬೇಕು. ಮಧ್ಯವರ್ತಿಗಳ ಹಾವಳಿ ತಡೆದು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವ ವ್ಯವಸ್ಥೆ ಜಾರಿಯಾಗಬೇಕು. ಕೂಡಲೇ ತರಕಾರಿ ಸಂತೆಗಳಲ್ಲಿ ಬೆಲೆ ನಿಯಂತ್ರಣಾ ಕ್ರಮ ಕೈಗೊಳ್ಳದಿದ್ದರೆ ಬಡವ ಬದುಕುವುದೇ ಕಷ್ಟವಾಗಲಿದೆ.

- ಡಾ.ವಿಜಯಕುಮಾರ ಎಚ್.ಕೆ., ರಾಯಚೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಕೃಷ್ಣ ಗೌಡ, ಮಂಡ್ಯ**
ಭಟ್ರೇ, ಇಲ್ಲೊಬ್ಬ 'ನಾನು ಗೌರಿ' ಅಂತಾನಲ್ಲ?
- **ಅವನನ್ನು ನಿನ್ನ ಹಿಂದಕ್ಕೆ ಬಿಟ್ಕೋಬೇಡ!**

- **ರಾಘವೇಂದ್ರಾಚಾರ್, ಮೈಸೂರು**
ಭಟ್ರೇ, ತಮಿಳುನಾಡಿನಲ್ಲಿ ವಿಜಯ್ ಗೆಲುವನ್ನು ಕಂಡು ಪ್ರಕಾಶ ರೈ ಕೈ ಕೈ ಹೊಸಕಿಕೊಂಡನಂತೆ?
- **ಅವನ ಕೈ ಅವನೇ ಹೊಸಕಿಕೊಂಡರೆ ಬೇರೆಯವರಿಗೆ ಸಮಸ್ಯೆ ಇಲ್ಲ ಬಿಡು!**

- **ಕೆ.ಜಿ.ಶೇಷಾದ್ರಿ, ಬೆಂಗಳೂರು**
ಭಟ್ರೇ, ವಿಜಯ್ ಗೆಲುವು ನಮ್ಮ ಕನ್ನಡದ ಸಿನಿಮಾ ನಟರ ತಲೆಗೆ ಏರಬಹುದಾ?
- **ನಿನ್ನೆಯಿಂದ ಉಪೇಂದ್ರಗೆ ಪ್ರಮಾಣ ವಚನ ಸ್ವೀಕರಿಸುತ್ತಿರುವ ಕನಸು ಬೀಳುತ್ತಿದೆಯಂತೆ!**

- **ನಿರಂಜನ ಗೌಡ, ಕನಕಪುರ**
ಭಟ್ರೇ, ನಿಮಗೆ ತೀವ್ರ ಹಿಂಸೆ ಉಂಟು ಮಾಡುತ್ತಿರುವ ಸಂಗತಿ ಯಾವುದು?
- **ಅಹಿಂಸಾ ಎಂದು ಹೆಸರಿಟ್ಟುಕೊಂಡು ಹಿಂಸೆ ಕೊಡುತ್ತಿರುವವನ ಹೇಳಿಕೆ!**

- **ಹೆಸರು ಬೇಡ, (ಇಮೇಲ್ ಮೂಲಕ)**
ಭಟ್ರೇ, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮುಕುಂದರಾಜ್, ಅಹಿಂಸಾ ಚೇತನನ ಹೇಳಿಕೆಯನ್ನು ಸಮರ್ಥಿಸಿದ್ದಾನಲ್ಲ?
- **ನೀನು ತಲೆ ಕೆಡಿಸಿಕೊಳ್ಳುವಷ್ಟು ಮುಕುಂದರಾಜ ದೊಡ್ಡವನೇನಲ್ಲ!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಜೀವನದಲ್ಲಿ ಹಣ ಮಾಡಬೇಕು ಅಂತ ಅಂದುಕೊಂಡಿದ್ದೇನೆ, ನಿಮ್ಮ ಸಲಹೆ?
- **ವೀರಕಪುತ್ರ ಶ್ರೀನಿವಾಸ ಪುಸ್ತಕ ಓದು, ಹಣ ಮಾಡುವ ಆಸೆಯೇ ಹೊರಟುಹೋಗುತ್ತದೆ!**

- **ಮಂಡ್ಯ ಸತೀಶ, ಮಂಡ್ಯ**
ಭಟ್ರೇ, ತಮಿಳುನಾಡಿನಲ್ಲಿ ಕಗ್ಗತ್ತಲಿನ ವಾತಾವರಣವಂತೆ?
- **ಉದಯಿಸುತ್ತಿರುವ ಸೂರ್ಯ ಇನ್ನೂ ಎದ್ದಿಲ್ಲವಂತೆ!**

- **ಬಾಲಕೃಷ್ಣ ಪುತ್ತೂರು, ಬೆಂಗಳೂರು**
ಭಟ್ರೇ, ದೀದಿ ಬಂಗಾಳದಲ್ಲಿ 'ಖೇಲಾ ಹೋಬೆ' (ಆಟ ಶುರು) ಅಂದಿದ್ದರು.. ಈಗ ಏನು ಹೇಳ್ತಾರೆ?
- **ಖೇಲ್ ಖತಂ!**

- **ವಿಶ್ವನಾಥ ಕುಲಕರ್ಣಿ, ಧಾರವಾಡ**
ಭಟ್ರೇ, ಮದುವೆಯ ನಂತರ ಗಂಡನ ಪರಿಸ್ಥಿತಿ ಹೇಗಿರುತ್ತದೆ?
- **ಮೊಬೈಲ್ ಫೋನ್ ತರಹ! ಮನೆಯಲ್ಲಿದ್ದಾಗ ಸೈಲೆಂಟ್ ಮೋಡ್, ಹೆಂಡತಿ ಮುಂದೆ ಇದ್ದಾಗ ವೈಬ್ರೇಷನ್ ಮೋಡ್!**

ಗಳಿಸಿದ್ದನ್ನು ಉಳಿಸಿಕೊಳ್ಳುವುದು ಇನ್ನೂ ದೊಡ್ಡ ಸವಾಲು !

ಲೋಕಮತ

ಲೋಕೇಶ್ ಕಾಯರ್ಗ
vveditoped@gmail.com

ತಮಿಳುನಾಡಿನಲ್ಲಿ ಇತಿಹಾಸ ಮರು ಕಳಿಸಿದೆ. ಎಂ.ಜಿ ರಾಮಚಂದ್ರನ್ ಬಳಿಕ ಸಿನಿಮಾರಂಗದ ವ್ಯಕ್ತಿಯೊಬ್ಬರು ಮುಖ್ಯಮಂತ್ರಿ ಪಟ್ಟಕ್ಕೇರಲು ಸಿದ್ಧತೆ ನಡೆದಿದೆ. ಜೋಸೆಫ್ ವಿಜಯ್ ಸಿಎಂ ಪಟ್ಟಕ್ಕೇರಲು ಸಜ್ಜಾಗಿದ್ದಾರೆ.

ತಮಿಳುನಾಡಿನ ರಾಜಕೀಯ ಇತಿಹಾಸಕ್ಕೂ ಬೆಳ್ಳಿತೆರೆಗೂ ಅವಿನಾಭಾವ ಸಂಬಂಧ. ಕರುಣಾನಿಧಿ, ಎಂ.ಜಿ. ರಾಮಚಂದ್ರನ್, ಜಯಲಲಿತಾ ಅವರಂತಹ ದಿಗ್ಗಜರು ಚಿತ್ರರಂಗದಿಂದ ಬಂದು ಕೋಟ್ಯಂತರ ಜನರ ಮನಗೆದ್ದು ಆಡಳಿತ ನಡೆಸಿದವರು. ಈಗ ಅದೇ ಹಾದಿಯಲ್ಲಿ ದಳಪತಿ ಜೋಸೆಫ್ ವಿಜಯ್ ಹೆಜ್ಜೆ ಇಟ್ಟಿದ್ದಾರೆ. ಎಂಜಿಆರ್ ನಂತರ ತಮಿಳುನಾಡಿನಲ್ಲಿ ಅಷ್ಟೇ ಮಟ್ಟದ ಜನಪ್ರಿಯತೆ ಹೊಂದಿರುವ ನಟರೊಬ್ಬರು ನೇರವಾಗಿ ಮುಖ್ಯಮಂತ್ರಿ ಪಟ್ಟಕ್ಕೇರುತ್ತಿರುವುದು ದ್ರಾವಿಡ ರಾಜಕಾರಣದಲ್ಲಿ ಹೊಸ ಸಂಚಲನ ಮೂಡಿಸಿದೆ. ಆದರೆ, ಸಿನಿಮಾ ಪರದೆಯ ಮೇಲಿನ 'ಏಕಾಂಗಿ ಪ್ರದರ್ಶನ' ರಾಜಕೀಯದ ರಣರಂಗದಲ್ಲಿ ಅಷ್ಟು ಸುಲಭವಲ್ಲ.

ತಮಿಳುನಾಡು ರಾಜಕಾರಣದಲ್ಲಿ ಎಂಜಿಆರ್ ಅವರದ್ದು ಅಳಿಸಲಾಗದ ಹೆಸರು. ಅವರು ರಾಜಕೀಯ ಪ್ರವೇಶಿಸುವ ಮುನ್ನವೇ ಪೆರಿಯಾರ್, ಅಣ್ಣಾದೊರೈ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದರು. ಡಿಎಂಕೆಯಿಂದ ಹೊರಬಂದು ಎಐಎಡಿಎಂಕೆ ಸ್ಥಾಪಿಸಿದಾಗ ಜನರು ಅವರನ್ನು ಕೇವಲ ನಟನಾಗಿ ನೋಡಲಿಲ್ಲ, ಬದಲಾಗಿ ತಮ್ಮ ಮನೆಯ ಮಗನಾಗಿ ಕಂಡರು. ವಿಜಯ್ ಅವರ ಇಂದಿನ ಪರಿಸ್ಥಿತಿಯೂ ಬಹುತೇಕ ಹಾಗೆಯೇ ಇದೆ. ಯುವಜನತೆ ಮತ್ತು ಮಹಿಳಾ ಮತದಾರರಲ್ಲಿ ವಿಜಯ್‌ಗೆ ಇರುವ ಕ್ರೇಜ್ ಅಭೂತಪೂರ್ವವಾದುದು. ಆದರೆ ಎಂಜಿಆರ್ ಕಾಲದ ರಾಜಕೀಯ ಪರಿಸ್ಥಿತಿಗೂ ಇಂದಿಗೂ ಬಹಳ ವ್ಯತ್ಯಾಸವಿದೆ. ಅಂದು ಎಂಜಿಆರ್ ಎದುರಿಸಿದ್ದು ಕೇವಲ ಒಂದು ಪಕ್ಷವನ್ನು, ಆದರೆ ಇಂದು ವಿಜಯ್ ಬಲಿಷ್ಠ ಡಿಎಂಕೆ ಮತ್ತು ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತಿರುವ ಎಐಎಡಿಎಂಕೆ ಎರಡನ್ನೂ ಎದುರಿಸಬೇಕಿದೆ. ಮುಖ್ಯವಾಗಿ ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ ವಾಗ್ದಾನಗಳನ್ನು ಈಡೇರಿಸುವುದು ವಿಜಯ್ ಅವರ ರಾಜಕೀಯ ಬದುಕಿಗೆ ಒರೆಗಲ್ಲಾಗಲಿದೆ.

ಐದು ರಾಜ್ಯಗಳ ಚುನಾವಣೆಯಲ್ಲಿ ಗೆದ್ದಿರುವ ಎಲ್ಲ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಹಲವು ಘೋಷಣೆಗಳನ್ನು ಮುಂದಿಟ್ಟಿವೆ. ಟಿವಿಕೆ ಪಕ್ಷದ ನಾಯಕ ವಿಜಯ್ ಅವರು, ಕರ್ನಾಟಕ ಸರಕಾರದ ಗ್ಯಾರಂಟಿ ಯೋಜನೆಗಳನ್ನೂ ಮೀರಿಸಿ ಹಲವು ಭರವಸೆಗಳನ್ನು ನೀಡಿದ್ದಾರೆ. ಈಗ ಇವೆಲ್ಲವನ್ನೂ ಈಡೇರಿಸುವ ಕಾಲ ಬಂದಿದೆ. ಭಾರತದ ಚುನಾವಣಾ ರಾಜಕಾರಣವು ದಶಕಗಳಿಂದ 'ಸಿದ್ಧಾಂತ' ಮತ್ತು 'ಅಭಿವೃದ್ಧಿ' ಎಂಬ ಎರಡು ಹಳಿಗಳ ಮೇಲೆ ಸಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ 'ನೇರ ನಗದು ವರ್ಗಾವಣೆ' ಮತ್ತು 'ಉಚಿತ ಸೇವೆ'ಗಳೆಂಬ ಮೂರನೇ ಹಳಿಯಲ್ಲಿ ಸಾಗುವ 'ಗ್ಯಾರಂಟಿ ರಾಜಕಾರಣ' ಆರಂಭವಾಗಿದೆ. 2023ರಲ್ಲಿ ಉಚಿತ ಸ್ಕೀಮುಗಳ ಗ್ಯಾರಂಟಿಯೊಂದಿಗೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೇರಿದ ಬಳಿಕ ಬಹುತೇಕ ಎಲ್ಲ ರಾಜ್ಯಗಳು ಈ ಮಾದರಿಯನ್ನು ಅನುಸರಿಸತೊಡಗಿವೆ. 2024ರಲ್ಲಿ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ ನಡೆದ ಚುನಾವಣೆ, ಕಳೆದ ವರ್ಷ ಬಿಹಾರದಲ್ಲಿ ಚುನಾವಣೆಯಲ್ಲಿ ಗ್ಯಾರಂಟಿ ಸ್ಕೀಮುಗಳು ಪ್ರಮುಖ ಪಾತ್ರವಹಿಸಿವೆ. 2026ರ ವಿಧಾನಸಭಾ ಚುನಾವಣೆಗಳಲ್ಲಿ ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ ಮತ್ತು ಅಸ್ಸಾಂನಲ್ಲಿ ಕಂಡುಬಂದ ಪ್ರಣಾಳಿಕೆಗಳ ಸಮರ ಈ ಟ್ರೆಂಡ್ ಅನ್ನು ಮತ್ತೊಂದು ಎತ್ತರಕ್ಕೆ ಕೊಂಡೊಯ್ದಿವೆ. ಪ್ರಣಾಳಿಕೆ ಸಿದ್ಧಪಡಿಸುವ ಸಂದರ್ಭದಲ್ಲಿ ಯಾವುದೇ ಪಕ್ಷಗಳಿಗೆ ಗೆಲುವು ಮುಖ್ಯವಾಗುತ್ತದೆ. ಅದನ್ನು ಈಡೇರಿಸುವ ಸಾಧ್ಯತೆ ಬಗ್ಗೆ ಯಾವ ಪಕ್ಷಗಳೂ ಹೆಚ್ಚೇನೂ ತಲೆ ಕೆಡಿಸಿಕೊಳ್ಳುವುದಿಲ್ಲ. ವಿಜಯ್ ಪಾಲಿಗೆ ಈ ಭರವಸೆಗಳೇ ಉರುಳಾಗುವ ಸಾಧ್ಯತೆಯೂ ಇದೆ.

ವಿಜಯ್ ಅವರ 'ತಮಿಳಗ ವೆಟ್ರಿ ಕಳಗಂ' ಪಕ್ಷ ಚುನಾವಣೆಯ ಸಂದರ್ಭದಲ್ಲಿ ಬಿಡುಗಡೆ ಮಾಡಿದ 95 ಪುಟಗಳ ಪ್ರಣಾಳಿಕೆಯಲ್ಲಿ ಮಹಿಳೆಯರು, ಯುವಜನರು ಮತ್ತು ರೈತರನ್ನು ಗುರಿಯಾಗಿಸಿಕೊಂಡು ಹಲವು ವಾಗ್ದಾನಗಳನ್ನು ನೀಡಲಾಗಿದೆ. ಡಿಎಂಕೆ ಸರಕಾರ ರಾಜ್ಯದಲ್ಲಿ ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ಪ್ರತಿ ತಿಂಗಳು ಸಾವಿರ ರು. ಧನಸಹಾಯ ನೀಡುತ್ತಿತ್ತು. ವಿಜಯ್ ಈ ಮೊತ್ತವನ್ನು 2,500 ರು.ಗಳಿಗೆ ಏರಿಸುವ ಭರವಸೆ ನೀಡಿದ್ದಾರೆ. ಇದಲ್ಲದೆ ಬಡ ಕುಟುಂಬಕ್ಕೆ ವರ್ಷಕ್ಕೆ 6 ಉಚಿತ ಗ್ಯಾಸ್ ಸಿಲಿಂಡರ್‌ಗಳ ವಿತರಣೆ, ಬಡ ಕುಟುಂಬದ ವಧುಗಳಿಗೆ ಒಂದು ಪವನ್ ಚಿನ್ನದ ನಾಣ್ಯ (8 ಗ್ರಾಂ) ಮತ್ತು ರೇಷ್ಮೆ ಸೀರೆಯ ಉಡುಗೊರೆ ಪ್ರಕಟಿಸಿದ್ದಾರೆ. ಇದಲ್ಲದೆ ನವಜಾತ ಹೆಣ್ಣು ಮಗುವಿಗೆ ಚಿನ್ನದ ಉಂಗುರ ಮತ್ತು 'ವೆಲ್ಕಮ್ ಕಿಟ್', ಮಹಿಳಾ ಸ್ವಸಹಾಯ ಸಂಘಗಳಿಗೆ ₹5 ಲಕ್ಷದವರೆಗೆ ಬಡ್ಡಿರಹಿತ ಸಾಲದ ವಾಗ್ದಾನ ಮಾಡಿದ್ದಾರೆ.

ನಿರುದ್ಯೋಗಿ ಪದವೀಧರರಿಗೆ ಪ್ರತಿ ತಿಂಗಳು 4,000 ರು., ಡಿಪ್ಲೊಮಾ ಪದವೀಧರರಿಗೆ 2,500 ರು. ನಿರುದ್ಯೋಗ ಭತ್ಯೆ, ಕೌಶಲ್ಯ ತರಬೇತಿ ಪಡೆಯುತ್ತಿರುವ ಪದವೀಧರರಿಗೆ 10 ಸಾವಿರ ಮತ್ತು ಐಟಿಐ ವಿದ್ಯಾರ್ಥಿಗಳಿಗೆ 8,000 ರು. ಮಾಸಿಕ ಸ್ಟೈಫಂಡ್ ಭರವಸೆಯನ್ನೂ ನೀಡಲಾಗಿದೆ. ಗ್ರಾಮ ಮಟ್ಟದಲ್ಲಿ 5 ಲಕ್ಷ ಯುವಕರನ್ನು ನೇಮಕ ಮಾಡಿಕೊಂಡು ಅವರಿಗೆ ತಿಂಗಳಿಗೆ 18,000 ರು. ವೇತನ ನೀಡುವ ಭರವಸೆ ಟಿವಿಕೆ ಪ್ರಣಾಳಿಕೆಯ ಟ್ರಂಪ್ ಕಾರ್ಡ್ ಆಗಿತ್ತು. ಈ ಭರವಸೆ ನಂಬಿ ಸಾವಿರಾರು ಯುವಕರು ವಿಜಯ್ ಬೆನ್ನಿಗೆ ನಿಂತಿದ್ದಾರೆ. ಇದಲ್ಲದೆ 5 ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ರೈತರ ಸಹಕಾರಿ ಕೃಷಿ ಸಾಲಗಳ ಸಂಪೂರ್ಣ ಮನ್ನಾ ಮತ್ತು ಇತರರಿಗೆ ಶೇ. 50ರಷ್ಟು ರಿಯಾಯಿತಿ, ಗೇಣಿ ರೈತರು ಮತ್ತು ಕೃಷಿ ಕಾರ್ಮಿಕರಿಗೆ 10,000 ರು. ಹಣಕಾಸು ನೆರವು ನೀಡಲು ವಿಶೇಷ ಕಾರ್ಡ್ ವಿತರಣೆ, ಪಿಯುನಿಂದ ಪಿಎಚ್‌ಡಿವರೆಗಿನ ವಿದ್ಯಾರ್ಥಿಗಳಿಗೆ ಶೂನ್ಯ ಭದ್ರತೆಯಲ್ಲಿ 20 ಲಕ್ಷದವರೆಗೆ ಸಾಲ ಸೌಲಭ್ಯ...ಇವೆಲ್ಲವೂ ಟಿವಿಕೆ ಪ್ರಣಾಳಿಕೆಯಲ್ಲಿ ಸೇರಿವೆ. ಭ್ರಷ್ಟಾಚಾರ ಮುಕ್ತ ಆಡಳಿತದ ದಳಪತಿ ವಿಜಯ್ ಭರವಸೆಯನ್ನು ಈ ಹಿಂದೆ ಎಲ್ಲ ಪಕ್ಷಗಳು ನೀಡಿದ್ದವು. ಆದರೆ ಜನತೆ ಇಂತಹ ಭರವಸೆಗಳನ್ನು ಎಂದಿಗೂ ಗಂಭೀರವಾಗಿ ಪರಿಗಣಿಸಿದವರಲ್ಲ. ರಾಜ್ಯದ ಅಭಿವೃದ್ಧಿ ಮಾಡುತ್ತೇವೆ ಎಂಬ ಅಮೂರ್ತ ಮಾತನ್ನು ಕೇಳಲು ಈಗಿನ ಮತದಾರರು ಸಿದ್ಧರಿಲ್ಲ. ಬದಲಾಗಿ, 'ನನ್ನ ಜೇಬಿಗೆ ಅಥವಾ ನನ್ನ ಮನೆಗೆ ಸರಕಾರದಿಂದ ನೇರವಾಗಿ ಏನು ಸಿಗುತ್ತದೆ' ಎಂಬ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಇದೇ ಕಾರಣಕ್ಕೆ ಎಲ್ಲ ಪಕ್ಷಗಳು 'ನೇರ ನಗದು' ಮತ್ತು 'ಉಚಿತ' ಸ್ಕೀಮುಗಳನ್ನು ಘೋಷಿಸುತ್ತಿವೆ. ಆದರೆ ಈ ಕೊಡುಗೆಗಳನ್ನು ಕಾಲಮಿತಿಯೊಳಗೆ ಘೋಷಿಸದೇ ಹೋದರೆ ಜನರು ಬೀದಿಗಿಳಿಯುವ ಸಾಧ್ಯತೆ ಇದೆ.

ತಮಿಳುನಾಡು ಭಾರತದ ಎರಡನೇ ಅತಿದೊಡ್ಡ ಆರ್ಥಿಕತೆಯಾಗಿದ್ದರೂ, ಸಾಲದ ಹೊರೆ ಆತಂಕಕಾರಿ ಪ್ರಮಾಣದಲ್ಲಿದೆ. ಡಿಎಂಕೆ ಸರಕಾರ ಮಂಡಿಸಿದ ಮಧ್ಯಂತರ ಬಜೆಟ್ ಪ್ರಕಾರ 2026-27ರಲ್ಲಿ ರಾಜ್ಯದ ಬಾಹ್ಯ ಸಾಲದ ಪ್ರಮಾಣ 10.71 ಲಕ್ಷ ಕೋಟಿಗಳಿಗೆ ಏರಲಿದೆ. ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗಿರುವುದರಿಂದ ಹಣಕಾಸು ಕೊರತೆ ಪ್ರತಿ ವರ್ಷ ಏರುತ್ತಲೇ ಇದೆ. ರಾಜ್ಯದ ಆದಾಯದ ಗಮನಾರ್ಹ ಭಾಗವು ಕೇವಲ ಹಳೆಯ ಸಾಲಗಳ ಬಡ್ಡಿ ಪಾವತಿಗೆ ವ್ಯಯವಾಗುತ್ತಿದೆ. ವಿಜಯ್ ಅವರ ಪ್ರಮುಖ ಭರವಸೆಗಳನ್ನು ಈಡೇರಿಸಲು ವಾರ್ಷಿಕವಾಗಿ ಕನಿಷ್ಠ 1.5 ಲಕ್ಷ ಕೋಟಿಯಿಂದ 2 ಲಕ್ಷ ಕೋಟಿ ರು. ಹೆಚ್ಚುವರಿ ಹಣದ ಅವಶ್ಯಕತೆ ಇದೆ. ತಮ್ಮ ಜನಪ್ರಿಯ ಯೋಜನೆಗಳನ್ನು ಜಾರಿಗೆ ತರುವಾಗ ಬಜೆಟ್ ಸಮತೋಲನ ಕಾಯ್ದುಕೊಳ್ಳುವುದು ವಿಜಯ್ ಅವರಿಗೆ ಅಗ್ನಿಪರೀಕ್ಷೆಯಾಗಲಿದೆ.

ಬಿಜೆಪಿ ಇಲ್ಲವೇ ಎನ್‌ಡಿಎ ಮೈತ್ರಿಕೂಟದಲ್ಲಿರುವ ಸರಕಾರಗಳಿಗೆ ಕೇಂದ್ರ ಸರಕಾರದ ಅನುದಾನದ ಬೆಂಬಲ ಇರುವುದರಿಂದ ಸಂಪನ್ಮೂಲ ಕ್ರೋಢೀಕರಣ ಕಷ್ಟವಲ್ಲ. ಆದರೆ ವಿಜಯ್ ಸದ್ಯಕ್ಕೆ ಕಾಂಗ್ರೆಸ್ ಮೈತ್ರಿ ಬೆಳೆಸುವ ಸುಳಿವು ನೀಡಿದ್ದಾರೆ. ಇದರಿಂದ ಕೇಂದ್ರಸರಕಾರದಿಂದ ಹೆಚ್ಚುವರಿ ಅನುದಾನವನ್ನು ಪಡೆಯುವುದು ಇನ್ನಷ್ಟು ಕಷ್ಟವಾಗಬಹುದು. ದಕ್ಷಿಣದ ವಿಪಕ್ಷ ಸರಕಾರಗಳತ್ತ ಕೇಂದ್ರದ ತಾರತಮ್ಯ ನೀತಿ ಮುಂದುವರಿದರೆ ಕರ್ನಾಟಕದಂತೆ ತಮಿಳುನಾಡು ಕೂಡ ಆರ್ಥಿಕ ಸಂಕಷ್ಟ ಎದುರಿಸುವುದು ನಿಶ್ಚಿತ.

ಚುನಾವಣೆಯ ಅಗ್ನಿಪರೀಕ್ಷೆ ಗೆದ್ದ ವಿಜಯ್‌ಗೆ ಈ ಸವಾಲುಗಳನ್ನು ಮೆಟ್ಟಿ ನಿಲ್ಲುವುದು ಅಸಾಧ್ಯವೇನಲ್ಲ. ಆದರೆ ಸದ್ಯಕ್ಕೆ ಪಕ್ಷದಲ್ಲಿ ವಿಜಯ್ ಒಬ್ಬರೇ ಮುಂಚೂಣಿಯಲ್ಲಿದ್ದಾರೆ. ಸಂಕೀರ್ಣವಾದ ರಾಜಕೀಯ ತಂತ್ರಗಾರಿಕೆಗಳನ್ನು ಹೆಣೆಯಲು ಅವರಿಗೆ ಅನುಭವಿ ಸಲಹೆಗಾರರು ಮತ್ತು ರಾಜ್ಯಾದ್ಯಂತ ಪ್ರಭಾವ ಹೊಂದಿರುವ ಉಪ ನಾಯಕರ ಅಗತ್ಯವಿದೆ. ವಿರೋಧ ಪಕ್ಷಗಳು ವಿಜಯ್ ಅವರ ಮೇಲೆ ದಾಳಿ ಮಾಡಲು ಬಳಸಬಹುದಾದ ಪ್ರಮುಖ ಅಸ್ತ್ರ 'ಅನುಭವದ ಕೊರತೆ'. ಸಿನಿಮಾ ನಟನೊಬ್ಬನಿಗೆ ಆಡಳಿತದ ಸೂಕ್ಷ್ಮತೆಗಳು ತಿಳಿದಿರುವುದಿಲ್ಲ ಎಂಬ ಟೀಕೆ ಸಾಮಾನ್ಯ. ಇದನ್ನು ಮೆಟ್ಟಿ ನಿಲ್ಲಲು ವಿಜಯ್ ಅವರು ನೀತಿ ನಿರೂಪಣೆಯಲ್ಲಿ ತಜ್ಞರ ತಂಡವನ್ನು ಹೊಂದುವುದು ಅವಶ್ಯ. ವಿಜಯ್ ಅವರ ಮುಂದೆ ಈಗ ಹಲವು ಪೂರ್ವೋದಾಹರಣೆಗಳಿವೆ. ತನ್ನಂತೆ ದಿಢೀರ್ ರಾಜಕೀಯ ಪ್ರವೇಶಿಸಿ, ತಮಿಳುನಾಡಿನ ಜನಮಾನಸದ ಭಾಗವಾದ ಎಂಜಿಆರ್ ಅವರ ಮುಂದಿದ್ದಾರೆ. ರಾಜಕೀಯ ಚಾಣಾಕ್ಷ ಕರುಣಾನಿಧಿ, ಅವರನ್ನೇ ಮೀರಿಸಿ ಗೆದ್ದ ಜಯಲಲಿತಾ ಕೂಡ ಇದ್ದಾರೆ. ಭ್ರಷ್ಟಾಚಾರ ಮುಕ್ತ ಆಡಳಿತದ ಭರವಸೆ ನೀಡಿ, ಕೊನೆಗೆ ಇದೇ ಕಾರಣಕ್ಕಾಗಿ ಜೈಲು ಸೇರಿದ ಅರವಿಂದ ಕೇಜ್ರಿವಾಲ್ ಇತ್ತೀಚಿನ ಉದಾಹರಣೆಯಾಗಿ ಕಣ್ಣ ಮುಂದಿದ್ದಾರೆ. ತಮಿಳುನಾಡಿನಲ್ಲಿ ಹೇಗಾದರೂ ಮಾಡಿ ತಳವೂರಲು ಪ್ರಯತ್ನಿಸುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ವಿಜಯ್ ಅವರ ವೈಯಕ್ತಿಕ ಜೀವನ ಮತ್ತು ತೆರಿಗೆ ವಿಚಾರಗಳ ಮೇಲೆ ಹದ್ದಿನ ಕಣ್ಣು ಇಡುವುದು ನಿಶ್ಚಿತ. ವಿಜಯ್ ಇದೆಲ್ಲವನ್ನೂ ಎದುರಿಸುವ ಧೈರ್ಯ ತೋರಬೇಕಿದೆ.

ತಮಿಳುನಾಡು ರಾಜಕಾರಣವು ದಶಕಗಳಿಂದ 'ದ್ರಾವಿಡ ಸಿದ್ಧಾಂತ'ದ ಮೇಲೆ ನಿಂತಿದೆ. ವಿಜಯ್ ಅವರು ತಮ್ಮನ್ನು ತಾವು ದ್ರಾವಿಡ ಪಥದ ಪಯಣಿಗ ಎಂದು ಕರೆದುಕೊಂಡರೂ, ಅವರ ನಿಲುವುಗಳು ಸಂಪ್ರದಾಯದ ಕಟ್ಟಳೆ ಮೀರಿದಂತೆ ಕಾಣುತ್ತಿಲ್ಲ. ಪೆರಿಯಾರ್ ಮತ್ತು ಅಣ್ಣಾದೊರೈ ಅವರ ಸಿದ್ಧಾಂತಗಳನ್ನು ಒಪ್ಪುತ್ತಲೇ, ಆಧ್ಯಾತ್ಮಿಕ ನಂಬಿಕೆಗಳನ್ನು ಗೌರವಿಸುವ ಮೂಲಕ ಸಮತೋಲನ ಕಾಯ್ದುಕೊಳ್ಳಲು ಅವರು ಪ್ರಯತ್ನಿಸುತ್ತಿದ್ದಾರೆ. ಇದು ಡಿಎಂಕೆಯ 'ನಿರೀಶ್ವರವಾದ'ಕ್ಕೆ ಪರ್ಯಾಯವಾಗಬಹುದು. ಆದರೆ ಸಿದ್ಧಾಂತದ ಸ್ಪಷ್ಟತೆ, ವಿಚಾರಗಳ ಸ್ಪಷ್ಟತೆ ಜತೆಗೆ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಪ್ರಾಮಾಣಿಕ ಸಂಕಲ್ಪ ಮತ್ತು ದೀರ್ಘಕಾಲದ ರಾಜಕೀಯ ಹೋರಾಟಕ್ಕೆ ಬೇಕಾದ ಹೋರಾಟದ ಛಾತಿಯನ್ನು ವಿಜಯ್ ಪ್ರದರ್ಶಿಸಬೇಕಾಗಿದೆ.

ತಮಿಳುನಾಡಿನ ಜನತೆಗೆ ಜನಪ್ರಿಯ ಯೋಜನೆಗಳು ಹೊಸದೇನಲ್ಲ. ಡಿಎಂಕೆ ಮತ್ತು ಎಐಎಡಿಎಂಕೆ ದಶಕಗಳಷ್ಟು ಹಿಂದೆಯೇ ಇಂತಹ ಯೋಜನೆಗಳನ್ನು ಜಾರಿಗೆ ತಂದಿವೆ. ಆದರೆ ಅಭಿವೃದ್ಧಿಪರ ಆಡಳಿತವೆಂದರೆ ಕೇವಲ ಹಣ ಹಂಚುವುದಲ್ಲ, ಬದಲಾಗಿ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು. ವಿಜಯ್ ಅವರ ಟಿವಿಕೆ ಸರಕಾರವು ಉದ್ಯೋಗ ಆಧಾರಿತ ಗ್ಯಾರಂಟಿಗಳಿಗೆ ಹೆಚ್ಚಿನ ಒತ್ತು ನೀಡಬೇಕಾದ ಅವಶ್ಯಕತೆಯಿದೆ. ಪಕ್ಷದ ಪ್ರಣಾಳಿಕೆ ಕೇವಲ ಮತ ಪಡೆಯುವ ಸಾಧನವಾಗದೆ ರಾಜ್ಯದ ಭವಿಷ್ಯದ 'ಮಾರ್ಗಸೂಚಿ'ಯಾಗಬೇಕಿದೆ.

ಕಪ್ಪು ಕೋಟಿನ ಹಿಂದೆ ಅಂಕಗಳಿಲ್ಲ, ನ್ಯಾಯದ ಪ್ರತಿಜ್ಞೆ ಇದೆ!

ನ್ಯಾಯ ನೆಮ್ಮದಿ

ಡಾ. ಜಗದೀಶ ಮಾನೆ
vveditoped@gmail.com

ಇದೀಗ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿವೆ. ಎಲ್‌ಕೆಜಿ ಇಂದ ಹಿಡಿದು ಬಿಎ, ಬಿಎಸ್‌ಸಿ ಪದವಿಗಳ ಪರೀಕ್ಷೆಯ ವರೆಗೂ ಬಹುತೇಕ ವಿದ್ಯಾರ್ಥಿಗಳು ಪ್ರಥಮ ಸ್ಥಾನದಲ್ಲಿ ಉತ್ತೀರ್ಣ ರಾಗುತ್ತಿದ್ದಾರೆ. ಯಾವುದೇ ವಿದ್ಯಾರ್ಥಿಗಳನ್ನು ಕೇಳಿದರೂ, ನಂದು ಶೇ.90-95 ಆಯಿತು ಸಾರ್ ಅಂತಾರೆ. ಹೀಗಿರು ವಾಗಲೂ ಅದೊಂದು ಪದವಿ ಇದೆ, ಅಲ್ಲಿ ಮಾತ್ರ ಅದೆಷ್ಟೇ ಬುದ್ಧಿವಂತರಿದ್ದರೂ ಅವರು ಯಾರು ಕೂಡಾ ಶೇ.60 ದಾಟುವುದಿಲ್ಲ. ಅದುವೇ 'ಕಾನೂನು' ಪದವಿ. ಇದೊಂದು ಪದವಿ ಮಾತ್ರ ಅಂದಿನಿಂದ ಈ ವರೆಗೂ ತನ್ನ ಘನತೆಯನ್ನು ಇನ್ನೂ ಹಾಗೇ ಉಳಿಸಿಕೊಂಡಿದೆ. ಇಲ್ಲಿ ಕೇವಲ ಶೇ.40ರಷ್ಟು ಅಂಕ ಪಡೆದು ಜಸ್ಟ್ ಪಾಸ್ ಆಗುವುದೇ ಒಂದು ದೊಡ್ಡ ಸಾಧನೆ. ಈ ಪರೀಕ್ಷೆಗಳಲ್ಲಿ ಶೇ.100ಕ್ಕೆ 80ರಷ್ಟು ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ. ಕಾರಣ ಈ ಪರೀಕ್ಷೆಗಳ ಮೌಲ್ಯಮಾಪನಗಳು ಅಷ್ಟೊಂದು ಕಠಿಣವಾಗಿ ಮತ್ತು ಅಚ್ಚುಕಟ್ಟಾಗಿ ನಡೆಯುತ್ತದೆ. ಯಾಕೆಂದರೆ ಕಾನೂನು ಶಿಕ್ಷಣದ ಸ್ವಭಾವವೇ ಹಾಗಿದೆ. ಇದು ಕೇವಲ ನೆನಪಿನ ಆಧಾರದ ಮೇಲೆ ಅಂಕ ಪಡೆಯುವ ವಿಷಯವಲ್ಲ ಹಾಗೂ ಉತ್ತರಗಳಲ್ಲಿ 'ಪಾಯಿಂಟ್' ಮಾತ್ರ ಸಾಲದು. ತಾರ್ಕಿಕ ಚಿಂತನೆ, ಪ್ರಕರಣಗಳ ವಿಶ್ಲೇಷಣೆ, ಕಾನೂನು ಭಾಷೆ, ಕೇಸ್-ಲಾ ಆಧಾರಿತ ನ್ಯಾಯಾಲಯದ ತೀರ್ಪುಗಳನ್ನು ಉಲ್ಲೇಖಿಸಬೇಕು. ಜತೆಗೆ ಬರವಣಿಗೆಯಲ್ಲಿ ಲಾಜಿಕ್ ಮತ್ತು ಸ್ಟ್ರಕ್ಚರ್ ಇರಬೇಕಾಗುತ್ತದೆ. ಹಾಗಾಗಿ ಕಾನೂನು ಪದವಿಯಲ್ಲಿ ಜಸ್ಟ್ ಪಾಸ್ ಆಗುವುದೇ ಒಂದು ಮಟ್ಟದ ಅರಿವು ಮತ್ತು ಅನ್ವಯ ಸಾಮರ್ಥ್ಯವನ್ನು ತೋರಿಸುತ್ತದೆ. ಅದಕ್ಕಾಗಿ ಇಲ್ಲಿ ಕಡಿಮೆ ಅಂಕವೂ ಬಹಳಷ್ಟು ಅರ್ಥಪೂರ್ಣವಾಗಿರುತ್ತದೆ.

ಒಬ್ಬ ಸಾಮಾನ್ಯ ಪ್ರಜೆಗೆ ಸಂವಿಧಾನದ ಒಂದು ಸಾಲನ್ನು ಕೊಡಬಲ್ಲದೇ, ನ್ಯಾಯ ಸಿಗದವನ ಕಣ್ಣೀರು ಒರೆಸಬಲ್ಲದೇ ಎಂಬಿತ್ಯಾದಿ ಪ್ರಶ್ನೆಗಳಿಗೆಲ್ಲ 'ಹೌದು' ಎನ್ನುವ ಉತ್ತರವೇ ಕಾನೂನು ಪದವಿ. ಈ ಕಪ್ಪು ಕೋಟು ಕೇವಲ ವೃತ್ತಿಯ ಸಂಕೇತವಲ್ಲ, ಅದು ನ್ಯಾಯದ ಪರವಾದ ಪ್ರತಿಜ್ಞೆಯಾಗಿದೆ. ಶೇ.50ರಷ್ಟು ಅಂಕ ಪಡೆದು ಪಾಸಾದ ವಕೀಲನು, ಶೇ.90ರಷ್ಟು ಅಂಕ ಪಡೆದ ಎಂಜಿನಿಯರ್ ಗಿಂತಲೂ ಈ ಸಮಾಜದಲ್ಲಿ ಹೆಚ್ಚು ಪರಿಣಾಮವನ್ನು ಬೀರುತ್ತಾನೆ. ಯಾಕೆ ಗೊತ್ತೇ? ಇದಕ್ಕೆ ಒಂದು ಸಣ್ಣ ಉದಾಹರಣೆ ಕೋಲಾರದ ನಂಜಮ್ಮ ಎಂಬ ರೈತ ಮಹಿಳೆಯು ತನ್ನ ಎರಡು ಎಕರೆ ಜಮೀನು ಉಳಿಸಿಕೊಳ್ಳಲು ಸುಮಾರು ಹತ್ತಾರು ವರ್ಷಗಳ ಕಾಲ ಕೋರ್ಟ್ ಅಲೆದಿರುತ್ತಾಳೆ. ಕೊನೆಗೆ 2018ರಲ್ಲಿ ಒಬ್ಬ ಯುವ ವಕೀಲ ಆ ತಾಯಿಗೆ ಉಚಿತವಾಗಿ ಆ ಕೇಸ್ ಗೆದ್ದುಕೊಡುತ್ತಾನೆ. ಆ ವಕೀಲ ಓದಿದ್ದು ಎಲ್‌ಎಲ್‌ಬಿ ಮಾತ್ರ. ಹಾಗಾಗಿ ಕಾನೂನು ಎನ್ನುವುದು ಪುಸ್ತಕದ ಬೂಸ್ಟ್ ಅಲ್ಲ, ಅದು ಜನಸಾಮಾನ್ಯನ ಕೈಯಲ್ಲಿರುವ ಅತ್ಯಂತ ಪ್ರಬಲ ಆಯುಧವಾಗಿದೆ. ಆ ಆಯುಧವನ್ನು ಹಿಡಿಯುವ, ಝಳಪಿಸುವ, ಮತ್ತು ಅಗತ್ಯ ಬಿದ್ದಾಗ ಚಲಾಯಿಸುವ ಕಲೆಯೇ ಕಾನೂನು ಪದವಿ. ಬನ್ನಿ! ಈ ಕೋಟು-ಕಪ್ಪು ಗೌನಿನ ಹಿಂದಿನ ಕಥೆ, ವ್ಯಥೆ, ಮತ್ತು ಶಕ್ತಿಯನ್ನು ಅರಿಯೋಣ.

ಅಂಕಗಳ ಹಿಂದೆ ಓಡುವ ಅನೇಕ ಪದವಿಗಳಿರುವ ಈ ಮಧ್ಯ ನ್ಯಾಯದ ಅರಿವಿಗಾಗಿ ನಿಂತು ಸಂವಿಧಾನದ ಜಾಗೃತಿ ಮತ್ತು ಹಕ್ಕುಗಳನ್ನು ಅರಿಯುವ, ಸಮಾಜಕ್ಕೆ ಆ ಅರಿವಿನ ಬೆನ್ನೆಲುಬಾಗಿದೆ ಈ ಕಾನೂನು ಶಿಕ್ಷಣ. ಇದರ ಪರೀಕ್ಷೆಯು ಕೇವಲ 'ಮಾಹಿತಿ ಪರೀಕ್ಷೆ' ಅಲ್ಲ, ಇದೊಂದು 'ನ್ಯಾಯದ ಪರೀಕ್ಷೆ'. ಇಲ್ಲಿ ಒಂದು ಪ್ರಶ್ನೆಗೆ 4 ಕಾನೂನು, 3 ತೀರ್ಪು, 2 ವಾದ ಹಾಕಿದರೂ ಇಲ್ಲಿ ನ್ಯಾಯದ ದೃಷ್ಟಿಕೋನಕ್ಕೆ ಮಾತ್ರ ಅಂಕ. ಇಲ್ಲಿ ಶೇ.100ರಷ್ಟು ಸರಿ ಎಂಬುದೇ ಇಲ್ಲ, ನೂರರಷ್ಟು ನ್ಯಾಯಯುತ ಎಂಬುದಿದೆ. ಉದಾಹರಣೆ ಗಣಿತದಲ್ಲಿ 2+2=4. ಆದರೆ, ಕಾನೂನಿನಲ್ಲಿ 'ಕೊಲೆ' ಎಂದರೆ 302 IPC, ಆದರೆ ಅದು ಆತ್ಮರಕ್ಷಣೆಯಾದರೆ 100 IPC. ವಿಶ್ಲೇಷಣೆ, ನೀತಿ, ನಿರ್ಭೀತಿಗೆ ಹೆಚ್ಚಿನ ಮಾನ್ಯತೆ ಇದೆ. ಇಲ್ಲಿ ಬೇರೆ ಪದವಿಗಳಂತೆ ಪಠ್ಯವನ್ನು ಒಪ್ಪಿಸುವುದಿಲ್ಲ, ಬದಲಿಗರ ಪ್ರಶ್ನಿಸಲಾಗುತ್ತದೆ. ಈ ರೀತಿಯ ವಿವೇಚನೆಗಳಿಗೆ ಪಠ್ಯಪುಸ್ತಕಗಳಿಲ್ಲ. ಆದ್ದರಿಂದಾಗಿ ಅದಕ್ಕೆ ಅಂಕ ಕಡಿಮೆ. ಈ ಕುರಿತು 'The power of the lawyer is in the uncertainty of the law' ಎನ್ನುವ ಜೆರೆಮಿ ಬೆಂಥಮ್ ಅವರ ಈ ಮಾತಿನಲ್ಲಿ ಹುರುಳಿದೆ.

ಸಮಸ್ಯೆಯನ್ನು ಹಲವು ಕೋನಗಳಿಂದ ನೋಡುವ ಕಲೆ ವಕೀಲರಲ್ಲಿರುತ್ತದೆ. ಅಂತಹ ವಕೀಲರಿರುವ ಕಾರಣದಿಂದಲೇ ಇಂದು ಬಡವರು, ಮಹಿಳೆಯರು ಮತ್ತು ದಲಿತರ ಹಕ್ಕುಗಳ ಹೋರಾಟಗಳು ಕೋರ್ಟ್ ಮೆಟ್ಟಿಲೇರುತ್ತಿವೆ. ಪಿಐಎಲ್ ಮೂಲಕ ಪರಿಸರ, ಶಿಕ್ಷಣ ಮತ್ತು ಆರೋಗ್ಯದಂತಹ ಕ್ಷೇತ್ರಗಳಲ್ಲಿ ದೊಡ್ಡ ಬದಲಾವಣೆಗಳನ್ನು ತರಲಾಗಿದೆ. ಉದಾಹರಣೆ 2G, ಕಲ್ಲಿದ್ದಲು ಹಗರಣ, ನಿರ್ಭಯಾ ಕೇಸ್‌ಗಳನ್ನು ನೆನಪಿಸಿಕೊಳ್ಳಬಹುದು. ಸರಕಾರಗಳು ತಪ್ಪು ಮಾಡಿದಾಗ ಮತ್ತು ಸಂವಿಧಾನದ ನಿಯಮಗಳು ಉಲ್ಲಂಘನೆಯಾಗುವ ಸ್ಥಿತಿ ಬಂದಾಗ ಅದನ್ನು ನ್ಯಾಯಾಲಯದ ಮೂಲಕ ಪ್ರಶ್ನಿಸಿ ಪ್ರಜಾಪ್ರಭುತ್ವದ ರಕ್ಷಣೆ ಮಾಡುತ್ತಾರೆ ವಕೀಲರು.

ಯಾವುದೇ ಕೇಸ್ ಒಂದೇ ತರಹ ಇರುವುದಿಲ್ಲ, ಭಿನ್ನವಾಗಿರುತ್ತವೆ. ದಿನ ದಿನವೂ ಹೊಸ ಹೊಸ ಸವಾಲುಗಳಿರುತ್ತವೆ. ಹಾಗಾಗಿ ಮಿದುಳು ನಿರಂತರವಾಗಿ ಯೋಚಿಸುತ್ತಲಿರುತ್ತದೆ. ಒಬ್ಬ ಅಮಾಯಕ ನಿರಪರಾಧಿಯನ್ನು ಜೈಲಿನಿಂದ ಬಿಡಿಸಿದಾಗ ಮತ್ತು ಒಂದು ಹೆಣ್ಣಿಗೆ ಜೀವನಾಂಶ ಕೊಡಿಸಿದಾಗ ಸಿಗುವ ನೆಮ್ಮದಿ ಯಾವುದೇ ಸಂಬಳದಲ್ಲೂ ಸಿಗುವುದಿಲ್ಲ, ನಮ್ಮ ಯುಕ್ತಿಯಲ್ಲಿರುತ್ತದೆ. ವೈದ್ಯರು ಜೀವ ಉಳಿಸಿದರೆ, ಒಂದು ಕೆಟ್ಟ ಯಂತ್ರವನ್ನು ಒಬ್ಬ ಎಂಜಿನಿಯರ್ ಸರಿಪಡಿಸಬಹುದು. ಆದರೆ, ಒಂದು ಕುಟುಂಬ ನಾಶವಾದರೆ ಇಡೀ ತಲೆಮಾರೇ ಹಾಳಾಗುತ್ತದೆ. ಹಾಗಾಗಿ ವಕೀಲರು ಜೀವಕ್ಕೂ ಮತ್ತು ದೇಶಕ್ಕೂ 'ಘನತೆ' ಸಿಗುವಂತೆ ಮಾಡುತ್ತಾರೆ. ಆದ್ದರಿಂದ ಅದಕ್ಕೆ ಜವಾಬ್ದಾರಿ ಹೆಚ್ಚು, ಅಂಕ ಕಡಿಮೆ. ಇಲ್ಲಿ ಕೇವಲ ಶೇ.50ರಷ್ಟು ಸಾಕು, ಇನ್ನುಳಿದ ಶೇ.50ರಷ್ಟು ಅಂಕಗಳನ್ನು ನಿಮಗೆ ಸಮಾಜವೇ ಕೊಡುತ್ತದೆ, ಮತ್ತು ಕೊಟ್ಟಿದೆ. ಉದಾಹರಣೆ ಗಾಂಧೀಜಿ, ನೆಹರು, ಅಂಬೇಡ್ಕರ್, ರಾಮ್ ಜೇಠ್ಮಲಾನಿ, ನೆಲ್ಸನ್ ಮಂಡೇಲಾ ಇವರೆಲ್ಲರೂ ವಕೀಲರು. ಪೆನ್ನು ಮತ್ತು ತರ್ಕದಿಂದಲೇ ಇವರು ದೇಶದ ದಿಕ್ಕನ್ನೇ ಬದಲಿಸಿ ಜನರ ಕಣ್ಣೀರು ಒರೆಸುವ ಮೂಲಕ ದೇಶವನ್ನು ಕಟ್ಟಿದರು.

ಕಾನೂನು ಪದವಿ ಅಧ್ಯಯನ ಮಾಡಿದ ಅಂಬೇಡ್ಕರ್ ಕಾನೂನು ಪದವಿಯು 'ಸಂವಿಧಾನವನ್ನು ರಕ್ಷಿಸುವ ಪ್ರತಿಜ್ಞೆ' ಎಂದು ಕರೆದಿದ್ದರು. ಅದರ ಹಿಂದೆ ಬಲವಾದ ಕಾರಣಗಳೂ ಇವೆ. ಅವರ ದೃಷ್ಟಿಯಲ್ಲಿ, ಕಾನೂನಿನ ಆಳ್ವಿಕೆ ಇಲ್ಲದ ಸಮಾಜವೆಂದರೆ ಅದು 'ಕಾಡಿನ ನ್ಯಾಯ'ದಂತೆ. ಸಂವಿಧಾನ ಮತ್ತು ಕಾನೂನುಗಳು ಮನುಷ್ಯನನ್ನು ಪಶುತ್ವದಿಂದ ಮೇಲಕ್ಕೆತ್ತಿ ನಾಗರಿಕನನ್ನಾಗಿ ಮಾಡುತ್ತವೆ. ಹೀಗಾಗಿ ಕಾನೂನು ಕುಸಿದರೆ ನಾಗರಿಕತೆಯೂ ಕುಸಿಯುತ್ತದೆ ಎಂದಿದ್ದರು. ಅಂಬೇಡ್ಕರ್‌ರವರು ಬ್ರಿಟಿಷರ ಕಾಲದ ದಬ್ಬಾಳಿಕೆ, ಜಾತೀಯತೆ ಈ ಎರಡನ್ನೂ ನೋಡಿದ್ದರು. ಆದ್ದರಿಂದ ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬ ತತ್ವವನ್ನು ಕಾಗದದಿಂದ ನೆಲಕ್ಕೆ ತರುವ ಕೆಲಸವನ್ನು ಒಬ್ಬ ವಕೀಲರಾಗಿ ಅವರು ಮಾಡಿದರು. ಒಬ್ಬ ನ್ಯಾಯಾಧೀಶ, ಒಬ್ಬ ಪೊಲೀಸ್, ಒಬ್ಬ ಮಂತ್ರಿ ತಪ್ಪು ಮಾಡಿದಾಗ ಪ್ರಶ್ನಿಸುವ ಹಕ್ಕು ಮತ್ತು ಧೈರ್ಯವನ್ನು ಸಂವಿಧಾನದ ಮೂಲಕ ಕೊಟ್ಟರು. ಆ ಸಂವಿಧಾನವನ್ನು ಅರ್ಥೈಸಿ ಉಳಿಸುವ ಪ್ರತಿಜ್ಞೆಯನ್ನು ಪ್ರತಿಯೊಬ್ಬ ಕಾನೂನು ಪದವೀಧರ ತೆಗೆದುಕೊಂಡು ಸಂವಿಧಾನ ಸೋಲದಂತೆ ನೋಡಿಕೊಳ್ಳುತ್ತಾನೆ. ಏಕೆಂದರೆ ಸಂವಿಧಾನ ಸತ್ತರೆ, ನ್ಯಾಯ ಸಾಯುತ್ತದೆ. ನ್ಯಾಯ ಸತ್ತರೆ, ನಾಗರಿಕತೆಯೂ ಉಳಿಯುವುದಿಲ್ಲ.

ಸಾಮಾನ್ಯವಾಗಿ ವಕೀಲರು ನ್ಯಾಯಾಲಯದಲ್ಲಿ ಕೇಸ್ ಗೆಲ್ಲುವುದಿಲ್ಲ, ಸಮಾಜದಲ್ಲಿ ನ್ಯಾಯವನ್ನು ಗೆಲ್ಲಿಸುತ್ತಾರೆ ಎನ್ನುವ ಈ ಅಂಶ ವಕೀಲ ವೃತ್ತಿಯ ನಿಜವಾದ ಧ್ಯೇಯವನ್ನು ತೋರಿಸುತ್ತದೆ. ಕೋರ್ಟಿನಲ್ಲಿ ಒಂದು ತೀರ್ಪು ಸಿಕ್ಕರೆ ಅದು ಕೇವಲ ಒಬ್ಬ ವ್ಯಕ್ತಿಗೆ ಸಿಗುವ ಗೆಲುವು. ಆದರೆ ಆ ತೀರ್ಪಿನಿಂದ ಸಮಾಜದ ಮೌಲ್ಯ, ಕಾನೂನಿನ ವ್ಯಾಖ್ಯಾನ ಬದಲಾದರೆ ಅದು ಇಡೀ ಸಮಾಜಕ್ಕೆ ಸಿಗುವ ನ್ಯಾಯ. ವಕೀಲರು ಕೆಲವೊಂದು ಕೇಸ್ ಗೆದ್ದಾಗ ಅದು ಪೂರ್ವನಿದರ್ಶನವಾಗುತ್ತದೆ. ಮುಂದೆ ಲಕ್ಷಾಂತರ ಜನರಿಗೆ ಅದೇ ಕಾನೂನು ಅನ್ವಯವಾಗುತ್ತದೆ. ಉದಾಹರಣೆ ಮೇನಕಾ ಗಾಂಧಿ ವರ್ಸಸ್ ಭಾರತ ಸರಕಾರ 1978ರ ಕೇಸ್. ಮೇನಕಾ ಗಾಂಧಿ ಅವರ ಪಾಸ್ಪೋರ್ಟ್ ವಶಪಡಿಸಿಕೊಂಡಾಗ, ವಕೀಲರು ಕೇವಲ ಅವರ ಪಾಸ್ಪೋರ್ಟ್ ವಾಪಸ್ ಕೊಡಿಸಲಿಲ್ಲ. 'ವೈಯಕ್ತಿಕ ಸ್ವಾತಂತ್ರ್ಯ' ಎಂಬ ಸಂವಿಧಾನದ 21ನೇ ವಿಧಿಯನ್ನು ವಿಸ್ತರಿಸಿದರು. ಈ ಒಂದು ಕೇಸ್‌ನಿಂದ ಇವತ್ತು 'ಜೀವಿಸುವ ಹಕ್ಕು' ಎಂದರೆ ಅದು ಕೇವಲ ಉಸಿರಾಡುವುದಲ್ಲ, ಗೌರವದಿಂದ ಬದುಕುವ ಹಕ್ಕು ಎಂಬ ಅರ್ಥ ಬಂದಿದೆ. ಹಾಗಾಗಿ ವಕೀಲರು ಗೆದ್ದಿದ್ದು ಕೇವಲ ಮೇನಕಾ ಗಾಂಧಿ ಕೇಸಲ್ಲ, ಪ್ರತಿ ನಾಗರಿಕನ ಘನತೆಯನ್ನು. ಅದೇರೀತಿ ವಿಶಾಖಾ ವರ್ಸಸ್ ರಾಜಸ್ಥಾನ ಸರಕಾರ 1997ರ ಕೇಸ್; ಕೆಲಸದ ಸ್ಥಳದಲ್ಲಿ ನಡೆಯುತ್ತಿದ್ದ ಲೈಂಗಿಕ ಕಿರುಕುಳಕ್ಕೆ ಕಾನೂನೇ ಇರಲಿಲ್ಲ. ಭನ್ವಾರಿ ದೇವಿ ಮೇಲಿನ ದೌರ್ಜನ್ಯದ ನಂತರ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ಹೋರಾಡಿದರು. ಪರಿಣಾಮವಾಗಿ, 'ವಿಶಾಖಾ ಮಾರ್ಗಸೂಚಿಗಳು' ಬಂದವು. ಇವತ್ತು ಪ್ರತಿಯೊಂದು ಕಂಪನಿಯಲ್ಲಿ ICC ಸಮಿತಿ ಇರುವುದಕ್ಕೆ ಕಾರಣ ಆ ಒಂದು ಕೇಸ್ ಕಾರಣ. ಹಾಗಾಗಿ ಅಂದು ವಕೀಲರು ಗೆದ್ದಿದ್ದು ಕೇವಲ ಒಬ್ಬ ಮಹಿಳೆ ಪರವಾದ ನ್ಯಾಯವನ್ನಲ್ಲ, ಬದಲಿಗೆ ಕೋಟ್ಯಂತರ ಮಹಿಳೆಯರಿಗೆ ಸುರಕ್ಷಿತ ಕೆಲಸದ ವಾತಾವರಣ.

ಹೀಗಂತ ಇಲ್ಲಿ ಕೇವಲ ಗೆಲುವಿಗಷ್ಟೇ ಮಹತ್ವವಿರುವುದಲ್ಲ. ಸೋತಂತಹ ಅದೆಷ್ಟೋ ಕೇಸುಗಳು ಕೂಡಾ ಸಾಮಾಜಿಕವಾಗಿ ಜಾಗೃತಿಯನ್ನು ಉಂಟುಮಾಡುತ್ತವೆ. ಕೆಲವೊಮ್ಮೆ ವಕೀಲರು ಕೋರ್ಟಿನಲ್ಲಿ ಸೋತರೂ ಸಮಾಜದ ದೃಷ್ಟಿಕೋನವನ್ನು ಗೆದ್ದಿರುತ್ತಾರೆ. ಉದಾಹರಣೆ ನ್ಯಾಯಮೂರ್ತಿ ಎಚ್.ಆರ್. ಖನ್ನಾ ಅವರ ಭಿನ್ನಾಭಿಪ್ರಾಯದ ತೀರ್ಪು 1976 ತುರ್ತು ಪರಿಸ್ಥಿತಿ ಸಂದರ್ಭ ಎಡಿಎಮ್ ಜಬ್ರಾಲ್ಪುರ್ ಕೇಸ್‌ನಲ್ಲಿ ಸರಕಾರದ ಪರ ತೀರ್ಪು ಬರುತ್ತದೆ. ಆಗ ಮೂಲಭೂತ ಹಕ್ಕುಗಳನ್ನು ಅಮಾನತು ಗೊಳಿಸಬಹುದು ಎಂದಿತ್ತು ಕೋರ್ಟ್. ಆ ಸಂದರ್ಭದಲ್ಲಿ ಖನ್ನಾ ಅವರೊಬ್ಬರೇ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರು. ಆಗ ಅವರು ಆ ಕೇಸ್ ಸೋಲುತ್ತಾರೆ. ಆದರೆ, ಅವರ ತೀರ್ಪು ಇವತ್ತು ಭಾರತೀಯ ನ್ಯಾಯಾಂಗದ ಅತ್ಯಂತ ಶ್ರೇಷ್ಠ ತೀರ್ಪುಗಳಲ್ಲಿ ಒಂದು. ಅವರ ವಾದದ ಪರಿಣಾಮವಾಗಿ 44ನೇ ತಿದ್ದುಪಡಿ ಬಂದು, ತುರ್ತು ಪರಿಸ್ಥಿತಿಯಲ್ಲಿ ಕೂಡಾ 21ನೇ ವಿಧಿ ರದ್ದಾಗಕೂಡದೆಂಬ ಕಾನೂನು ಆಯಿತು. ಪರಿಣಾಮ ಸೋಲಿನಲ್ಲೂ ನ್ಯಾಯ ಗೆದ್ದಿತು! ಇನ್ನು ಅನೇಕ ವಕೀಲರು ಕೇವಲ ವಾದ ಮಾಡುವುದಿಲ್ಲ, ಕಾನೂನು ಸುಧಾರಣೆಗಾಗಿ, ಸಮಾಜ ಜಾಗೃತಿಗಾಗಿಯೂ ಕೆಲಸ ಮಾಡುತ್ತಾರೆ. ಉದಾಹರಣೆ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಎಂ.ಸಿ. ಮೆಹ್ತಾ ಅವರಂತಹ ವಕೀಲರು ಪರಿಸರ ಮತ್ತು ಮಕ್ಕಳ ಹಕ್ಕುಗಳಿಗಾಗಿ ಪಿಐಎಲ್ ಹಾಕಿದರು. ಪಟಾಕಿ ಕಾರ್ಖಾನೆಯಲ್ಲಿ ಮಕ್ಕಳನ್ನು ದುಡಿಸಿಕೊಳ್ಳುತ್ತಿದ್ದ ಪ್ರಕರಣದಲ್ಲಿ ಅವರು ಗೆದ್ದಿದ್ದು ಕೇವಲ 200 ಮಕ್ಕಳ ಬಿಡುಗಡೆ ಮಾತ್ರವಲ್ಲ, ಬದಲಿಗೆ ಆ ತೀರ್ಪಿನಿಂದ ಬಾಲಕಾರ್ಮಿಕ ಕಾಯ್ದೆಯು ಮತ್ತಷ್ಟು ಬಿಗಿಯಾಗಿ ಸಾವಿರಾರು ಮಕ್ಕಳು ಶಾಲೆಗೆ ಹೋಗುವಂತಾಯಿತಲ್ಲ ಅದೇ ಹೆಮ್ಮೆಯ ಸಂಗತಿ.

ಕಾನೂನು ಹಾಗೂ ಇತರೆ ಪದವಿಗಿರುವ ವ್ಯತ್ಯಾಸಗಳು: ಬೇರೆ ಇತರೆ ಯಾವುದೇ ಪದವಿಗಳಲ್ಲಿ ಶೇ.90ರಷ್ಟು ಅಂಕಗಳನ್ನು ಪಡೆದರೆ ವಿಷಯವನ್ನು ಚೆನ್ನಾಗಿ ನೆನಪಿಟ್ಟುಕೊಂಡಿದ್ದಾರೆ ಎಂದರ್ಥ. ಆದರೆ, ಎಲ್‌ಎಲ್‌ಬಿಯಲ್ಲಿ ಕೇವಲ ಶೇ.50ರಷ್ಟು ಅಂಕ ಪಡೆದರೂ, ನೀವು ಒಂದು ಸಮಸ್ಯೆಗೆ 5 ಆಯಾಮಗಳಿಂದ ಉತ್ತರ ಕೊಡಬಲ್ಲಿರಿ ಎಂಬ ಅರ್ಥವಾಗುತ್ತದೆ. ಇಲ್ಲಿ 'ಸರಿ' ಉತ್ತರವಿಲ್ಲ, ಬದಲಿಗೆ ಸಮರ್ಥನೀಯ 'ವಾದ' ಮಾತ್ರ ಬಹಳ ಅಚ್ಚುಕಟ್ಟಾಗಿದೆ. ಹಾಗಾಗಿ 'ಕಾನೂನು ಎನ್ನುವುದು ಪುಸ್ತಕಕ್ಕಿಂತ ಹೆಚ್ಚಾಗಿ ಒಬ್ಬ ವಕೀಲನ ವಿವೇಕದಲ್ಲಿದೆ' ಎನ್ನುವ ಮಾತನ್ನು ನ್ಯಾಯಮೂರ್ತಿ ಲೀಲಾ ಸೇಠ್ ಹೇಳುತ್ತಾರೆ. ಶೇ.50ರಷ್ಟು ಅಂಕದ ಹಿಂದೆ ನೂರಾರು ಕೇಸ್ ಲಾಗಳ ಓದು, ರಾತ್ರಿ ನಿದ್ದೆಗೆಟ್ಟು ತಯಾರಿಸಿದ ವಾದದಲ್ಲಿ ಒಬ್ಬ ನಿರಪರಾಧಿಯನ್ನು ಉಳಿಸುವ ಛಲ ಇರುತ್ತದೆ. ಇಲ್ಲಿ ಕಡಿಮೆ ಅಂಕ ಅಥವಾ ಫೇಲ್ ಮಾಡುವುದೆಂದರೆ ಜನರನ್ನು ಹೊರಗಿಡುವುದಲ್ಲ, ಅರ್ಹರನ್ನು ಮಾತ್ರ ಒಳಗೆ ಬಿಡುವುದು. ವಕೀಲ ವೃತ್ತಿಯು ನೇರವಾಗಿ ನ್ಯಾಯಾಂಗದ ಭಾಗವಾಗಿರುವುದರಿಂದ ನ್ಯಾಯದ ತಕ್ಕಡಿಯನ್ನು ಹಿಡಿಯುವವನ ಕೈ ನಡುಗಬಾರದು. ಅದಕ್ಕಾಗಿ ಮೌಲ್ಯಮಾಪನದಲ್ಲಿ ಕಠಿಣತೆ ಇರಲೇಬೇಕಾಗುತ್ತದೆ. ಒಂದು ವೇಳೆ ಇತರೆ ಪದವಿಗಳಂತೆ ಇಲ್ಲಿಯೂ ಎಲ್ಲರಿಗೂ ಶೇ.90ರಷ್ಟು ಮಾರ್ಕ್ಸ್ ಕೊಟ್ಟು ವಕೀಲರ ಸಂಖ್ಯೆ ಹೆಚ್ಚಿಸಿದರೆ, ಅರ್ಧಂಬರ್ಧ ಜ್ಞಾನ ಇರುವವರೆಲ್ಲ ನ್ಯಾಯಾಲಯದ ಮೇಲೆ ಒತ್ತಡ ಹೆಚ್ಚಿಸಿ ಕಕ್ಷಿದಾರರಿಗೆ ಅನ್ಯಾಯ ಮತ್ತು ನಿರಪರಾಧಿಗಳಿಗೆ ಜೀವಾವಧಿ ಶಿಕ್ಷೆ ಆಗಬಹುದು. ಆದ್ದರಿಂದ ಅಳೆದು ತೂಗಿ ಮೌಲ್ಯಮಾಪನ ಮಾಡಲಾಗುತ್ತದೆ. ಬೇರೆಲ್ಲ ಪದವಿಗಳಲ್ಲಿ ಅಂಕಪಟ್ಟಿಗಳು ನಕ್ಕರೆ ಇಲ್ಲಿ ಅಂಕಪಟ್ಟಿಗಳು ಮಾತ್ರ ಅಳುತ್ತವೆ, ದೇಶದ ಭವಿಷ್ಯ ಉಜ್ವಲ. ಈ ಮೂಲಕ ಇದು ಕಾನೂನು ಮತ್ತು ನ್ಯಾಯವನ್ನು ಕಾಪಾಡುವ ಪದವಿ.

ಕಾನೂನು ಕ್ಷೇತ್ರದಲ್ಲಿ ಪರಿಪೂರ್ಣತೆ ಅಳೆಯಲು ಕಷ್ಟ ಪ್ರತಿಯೊಂದು ಉತ್ತರಕ್ಕೂ ವಿಭಿನ್ನ ದೃಷ್ಟಿಕೋನಗಳು ಇರುತ್ತವೆ. ಕೋರ್ಟ್‌ಗಳಲ್ಲಿಯೂ ಸಾಕಷ್ಟು ಭಿನ್ನಾಭಿಪ್ರಾಯಗಳಿರುತ್ತವೆ. ಕೆಲವೊಮ್ಮೆ ನ್ಯಾಯಾಧೀಶರೇ ವಿಭಿನ್ನ ತೀರ್ಪುಗಳನ್ನು ನೀಡುತ್ತಾರೆ. ಆದರೆ ಇದು ವಿಷಯದ ಸಂಕೀರ್ಣತೆಯನ್ನು ತೋರಿಸುತ್ತದೆ. ಇಂದು ವಕೀಲರಿಗೆ ಪೊಲೀಸ್ ಠಾಣೆಯಿಂದ ಸುಪ್ರೀಂ ಕೋರ್ಟ್ ತನಕ ಅವನ ಮಾತಿಗೆ ಬೆಲೆ ಇದೆ. ಅಮೆರಿಕದಂತಹ ದೇಶದಲ್ಲೂ ಕೂಡಾ 'Law School grading' ಕಠಿಣ ಇರುವುದರಿಂದಲೇ ಅವರ ಲಾಯರ್‌ಗಳಿಗೆ ಜಾಗತಿಕವಾಗಿ ಬಹಳಷ್ಟು ಮಹತ್ವ ಇದೆ.

ಎಲ್‌ಎಲ್‌ಬಿ ಪದವಿ ಎಲ್ಲರನ್ನೂ ಶ್ರೀಮಂತರನ್ನಾಗಿ ಮಾಡದಿದ್ದರೂ ನಿಮ್ಮಿಂದಾಗಿ ಒಬ್ಬ ತಪ್ಪಿತಸ್ಥ ಶ್ರೀಮಂತ, ರಾಜಕಾರಣಿಗಳು ಮಂತ್ರಿಗಳು ಹಾಗೂ ಅಧಿಕಾರಿಗಳು ಅವರೆಲ್ಲರೂ ಎಷ್ಟೇ ಪ್ರಭಾವಿಗಳಾಗಿದ್ದರೂ ಅವರನ್ನು ಕಾನೂನಿನ ಮುಂದೆ ತಲೆಬಾಗುವಂತೆ ಮಾಡುತ್ತದೆ. ಪ್ರಸ್ತುತ ಅಂತಹ ಸಾಕಷ್ಟು ನಿದರ್ಶನಗಳು ನಮ್ಮ ಕಣ್ಮುಂದೇ ಇವೆ, ದರ್ಪದಿಂದ ಮೆರೆದ ಅಧಿಕಾರಿಗಳು, ಚಿತ್ರನಟರು, ರಾಜಕಾರಣಿಗಳು ಇನ್ನೂ ಅನೇಕರು. ಉದಾಹರಣೆ ತಮಿಳುನಾಡಿನ ಒಂಬತ್ತು ಜನ ಪೊಲೀಸ್ ಅಧಿಕಾರಿಗಳಿಗೆ ಗಲ್ಲು ಶಿಕ್ಷೆ, ನಟ ದರ್ಶನ್ ಜೈಲಲ್ಲಿ ಕಂಬಿ ಎಣಿಸುತ್ತಿದ್ದರೆ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಮತ್ತು ಮಾಜಿ ಮಂತ್ರಿ ಹಾಗೂ ಹಾಲಿ ಶಾಸಕ ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆಯಾಗಿದೆ. ಈ ಮೂಲಕ ನ್ಯಾಯಾಂಗ ವ್ಯವಸ್ಥೆಯ ಮೇಲೆ ಶ್ರೀ ಸಾಮಾನ್ಯನ ನಂಬಿಕೆ ಮಗದಷ್ಟು ಹೆಚ್ಚಾಗಿದೆ. ವಕೀಲ ವೃತ್ತಿಗೆ ಇದಕ್ಕಿಂತ ದೊಡ್ಡ ಹೆಮ್ಮೆ ಇನ್ಯಾವುದೂ ಇಲ್ಲ. ಹಾಗಾಗಿ ಜಸ್ಟಿಸ್ ವಿ.ಆರ್. ಕೃಷ್ಣ ಅಯ್ಯರ್ ಅವರು 'Law is not a trade, not briefs, not merchandise. It is a public calling to pursue justice' ಎಂದು ಹೇಳಿದ ಮಾತು ಈ ಸಂದರ್ಭದಲ್ಲಿ ಸ್ಮರಣೀಯ.

ಪ್ರಸ್ತುತ

ಶಿವನಗೌಡ ಪೊಲೀಸ್ ಪಾಟೀಲ್

ಕನ್ನಡಿಗರ ಹೆಮ್ಮೆಯ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್

ಕನ್ನಡಿಗರು ಹೆಮ್ಮೆ ಪಡುವ ಸಾಹಿತ್ಯ ಸಂಸ್ಥೆ, ಭಾಷೆಯ ಬೆಳವಣಿಗೆಗೆ ಶ್ರಮಿಸಲು, ಕನ್ನಡ ಸಾಹಿತ್ಯಾಸಕ್ತರನ್ನು ಒಗ್ಗೂಡಿಸಲು ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಯಿತು. ಕನ್ನಡ ಭಾಷೆ, ಸಾಹಿತ್ಯ, ಕಲೆ, ಜನಪದ, ಸಂಸ್ಕೃತಿಗಳ ಸಂವರ್ಧನೆ ಹಾಗೂ ಸಂರಕ್ಷಣೆಯ ಮಹಾದಾಶಯದೊಂದಿಗೆ ಮೇ 5, 1915ರಲ್ಲಿ ಸ್ಥಾಪನೆಯಾದ ಕನ್ನಡಿಗರ ಸಾಂಸ್ಕೃತಿಕ ಮೇರು ಸಂಸ್ಥೆಯೇ ಕನ್ನಡ ಸಾಹಿತ್ಯ ಪರಿಷತ್. 105 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಸಂಸ್ಥೆ ಭವಿಷ್ಯದಲ್ಲಿ ಪ್ರಸ್ತುತತೆ ಉಳಿಸಿಕೊಳ್ಳಬೇಕಾದ ದೊಡ್ಡ ಹೊಣೆಗಾರಿಕೆ ನಮ್ಮಗಳ ಮೇಲಿದೆ.

ಏಕೆಂದರೆ ಕನ್ನಡ ಸಾಹಿತ್ಯ ಪರಿಷತ್ತು ಆರಂಭವಾದಾಗ ಇದ್ದ ಜನಸಂಖ್ಯೆ, ಕನ್ನಡಿಗರು ಮತ್ತು ಅನ್ಯ ಭಾಷಿಗರ ಸಂಖ್ಯಾಬಲಕ್ಕೂ ಜತೆಗೆ ಈಗಿನ ಸಂದರ್ಭಕ್ಕೂ ಅಜಗಜಾಂತರವಿದೆ. ಸನ್ನಿವೇಶಕ್ಕೆ ತಕ್ಕಂತೆ ಕನ್ನಡ ಕಾಯಕವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ನಿತ್ಯೋತ್ಸವ ಆಗಬೇಕಾದ ಅವಶ್ಯಕತೆ, ಶತಮಾನದ ಹಿಂದಿನ ಪರಿಷತ್ತು ಹುಟ್ಟಿಕೊಂಡ ರೀತಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಬೇಕಾಗಿದೆ.ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಆಗಿರುವ ಕನ್ನಡ ಸಾಹಿತ್ಯ ಪರಿಷತ್ತು ಚಿಗುರೊಡೆದ ರೀತಿ ಮತ್ತು ಸಾಗಿಬಂದ ದಾರಿ ಕುತೂಹಲಕಾರಿ ಆಗಿದೆ. ಬ್ರಿಟಿಷ್ ಆಡಳಿತ ಅವಧಿಯಲ್ಲಿ ಅಲ್ಲಲ್ಲಿ ಚದುರಿ ಹೋಗಿದ್ದ ಕನ್ನಡಿಗರನ್ನು, ಕನ್ನಡ ಭಾಷೆ ಮತ್ತು ಈ ನೆಲದ ಸಂಸ್ಕೃತಿಯನ್ನು ಒಂದುಗೂಡಿಸುವ ಹಿನ್ನೆಲೆಯಲ್ಲಿ ಜನ್ಮತಳೆದ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಇದರ ಜತೆಗೆ ಕನ್ನಡ ಭಾಷೆಯಲ್ಲಿ ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ರೂಪಿತವಾದ ಸಂಸ್ಥೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ಕನ್ನಡ ಭಾಷೆಯನ್ನು ಮಾತನಾಡುವವರು ಒಂದೊಂದು ಪ್ರಾಂತ್ಯಗಳಿಗೆ ಚದುರಿ ಹೋಗಿದ್ದರು. ಜತೆಗೆ ಭಿನ್ನ-ಭಿನ್ನ ಆಡಳಿತ ಘಟಕದ ಹಿಡಿತದಲ್ಲಿದ್ದರು. ಈ ಕಾರಣದಿಂದಾಗಿಯೇ ಕನ್ನಡಿಗರು ಆಡುತ್ತಿದ್ದ ಭಾಷೆಯ ಮೇಲೆ ಅನ್ಯ ಭಾಷೆಯ ಪ್ರಭಾವವಿತ್ತು. ಹೀಗಾಗಿ ಬೇರೆ ಬೇರೆ ಪ್ರಾಂತ್ಯಗಳಿಗೆ ಒಳಪಟ್ಟಿದ್ದ ಕನ್ನಡಿಗರು ಕನ್ನಡ ಭಾಷೆ, ಸಂಸ್ಕೃತಿ ಸಂರಕ್ಷಣೆ ಮತ್ತು ಅಭಿವೃದ್ಧಿಯ ಆವಶ್ಯಕತೆಯನ್ನು ಮನಗಂಡರು. ಆಗಲೇ ಮೈಸೂರು ಒಡೆಯರ್ ಕಲ್ಪನೆಯಲ್ಲಿ ಮೈಸೂರಿನಲ್ಲಿನ ಕನ್ನಡಿಗರನ್ನು ಒಂದಾಗಿಸುವ ಕನಸು ಚಿಗುರೊಡೆಯಿತು. ಮೈಸೂರು ಸಂಸ್ಥಾನದ ಅಂದಿನ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಈ ಬಗ್ಗೆ ಯೋಜನೆ ರೂಪಿಸಿದರು. ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ ಶ್ರೇಯಸ್ಸು ದೂರದೃಷ್ಟಿಯುಳ್ಳ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ. ಅವರ ದೂರದೃಷ್ಟಿಯು ರಾಜ್ಯಕ್ಕಾಗಿ ಆರೋಗ್ಯಕರವಾಗಿತ್ತು. ಒಂದೆಡೆ ರಾಜ್ಯದ ಮೂಲ ಸೌಕರ್ಯ ಅಭಿವೃದ್ಧಿಗೆ ಮತ್ತೊಂದೆಡೆ ಸಾಂಸ್ಕೃತಿಕ ಅಭಿವೃದ್ಧಿಗೆ ಶ್ರಮಿಸುತ್ತಿದ್ದರು. 1913ರ ಮೈಸೂರು ಆರ್ಥಿಕ ಸಮ್ಮೇಳನದಲ್ಲಿ ಅವರು ಶಿಕ್ಷಣದ ಅಭಿವೃದ್ಧಿಯನ್ನು ಪರಿಶೀಲಿಸಲು ಸಮಿತಿ ಸ್ಥಾಪಿಸಿದರು.

ಈ ಕಾರ್ಯದ ಸಲಹೆ ಸೂಚನೆಗಳನ್ನು ನೀಡಲು ಅವರು ಮೈಸೂರು ಸಂಪದಭ್ಯುದಯ ಸಮಾಜ (ಮೈಸೂರು ಎಕನಾ ಮಿಕ್ ಕಾನ್ಫರೆನ್ಸ್) ರಚಿಸಿದ್ದರು. ವಿದ್ಯಾ ವಿಷಯಗಳಿಗಾಗಿ ಯೋಜನೆಗಳನ್ನು ರೂಪಿಸುವ ಕಾರ್ಯವನ್ನು ಎಚ್. ನಂಜುಂಡಯ್ಯ ವಹಿಸಿದರು. ಮುಂದಿನ ದಿನಗಳಲ್ಲಿ 'ವಿದ್ಯಾ ವಿಷಯಕ ಮಂಡಳಿ' ಸ್ಥಾಪನೆಯಾಯಿತು. 1914ರಲ್ಲಿ ಈ ಮಂಡಳಿಯು ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿಯೇ ಸ್ವತಂತ್ರ ಅಧಿಕಾರವುಳ್ಳ ಪರಿಷತ್ತು ಇರಬೇಕು ಮತ್ತು ಸರಕಾರ ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ವಿಶೇಷ ಸಹಾಯ ಮಾಡುವುದು ಉಚಿತ ಎಂಬ ಶಿಫಾರಸನ್ನು ಸರಕಾರಕ್ಕೆ ಮಾಡಿತು.

1915ರ ಮೇ ತಿಂಗಳ 6ರಂದು ಬೆಂಗಳೂರಿನ ಸರಕಾರಿ ಹೈಸ್ಕೂಲ್ ಮೈದಾನದಲ್ಲಿ ಮೊದಲ ಸಮ್ಮೇಳನ ನಡೆಯಿತು. ಧಾರವಾಡ, ಬಿಜಾಪುರ, ಕಾರವಾರ, ಬಾಂಬೆ, ಮದರಾಸು, ಬಳ್ಳಾರಿ, ದಕ್ಷಿಣ ಕನ್ನಡ ಭಾಗದ ಅನೇಕ ಜನಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಜತೆಗೆ ವಿವಿಧ ಪತ್ರಿಕೆಗಳ ಸಂಪಾದಕರು ಕೂಡ ಇದ್ದರು. 1915ರಲ್ಲಿ ಕಸಾಪದ ಮೊದಲ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಎಚ್.ವಿ. ನಂಜುಂಡಯ್ಯ 1960ರವರೆಗೆ ಕಾರ್ಯ ನಿರ್ವಹಿಸಿದರು. ಅಲ್ಲಿಂದ ಈಗಿನ ಅಧ್ಯಕ್ಷ ಮಹೇಶ್ ಜೋಶಿ ಸೇರಿದಂತೆ ಬಹಳಷ್ಟು ಅಧ್ಯಕ್ಷರನ್ನು ಕನ್ನಡ ಸಾಹಿತ್ಯ ಪರಿಷತ್ತು ಕಂಡಿದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳು ಮತ್ತು ಇತರ ಮಹತ್ವದ ಕಾರ್ಯಕ್ರಮಗಳು, ಕನ್ನಡ ಭಾಷೆಯ ಬೆಳವಣಿಗೆ, ಕರ್ನಾಟಕ ಏಕೀಕರಣ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪ್ರಗತಿಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ಒಂದು ಶತಮಾನಕ್ಕೂ ಹೆಚ್ಚು ಅವಧಿಯಲ್ಲಿ ಶ್ರೇಷ್ಠಮಹನೀಯರ ಅಧ್ಯಕ್ಷತೆಗಳ ನಡೆಸಿರುವ ಸಮ್ಮೇಳನಗಳ ಕೊಡುಗೆ ಚಾರಿತ್ರಿಕ ಮಹತ್ವವನ್ನು ಹೊಂದಿದ್ದಾಗಿದೆ. ಈ ಕಾರ್ಯಕ್ರಮಗಳೇ ಅಲ್ಲದೆ ಅನೇಕ ಸಾಹಿತ್ಯಕ, ಸಾಂಸ್ಕೃತಿಕ, ಚಾರಿತ್ರಿಕ ಮತ್ತು ವರ್ತಮಾನದ ಪ್ರಸ್ತುತೆಗಳಿಗೆ ಅನುಗುಣವಾದ ಅನೇಕ ಮಹತ್ವದ ಕಾರ್ಯಕ್ರಮಗಳನ್ನೂ ಸಹಾ ಪರಿಷತ್ತು ನಡೆಸಿಕೊಂಡು ಬಂದಿದೆ. ಪರಿಷತ್ತು 2016ರ ವರ್ಷದ ಅಕ್ಟೋಬರ್‌ನಲ್ಲಿ ಮೊಟ್ಟ ಮೊದಲ ಬಾರಿಗೆ ಅಖಿಲ ಭಾರತ ಹೊರನಾಡ ಕನ್ನಡಿಗರ ರಾಷ್ಟ್ರೀಯ ಸಮಾವೇಶವನ್ನು ದೆಹಲಿಯಲ್ಲಿ ನಡೆಸಿದ್ದು ಈ ಕಾರ್ಯಕ್ರಮಗಳಿಗೆ ಮಹತ್ವದ ವಿಸ್ತೃತೆಯನ್ನು ಪಡೆದುಕೊಂಡದ್ದಾಗಿದೆ. ಈ ವರ್ಷದಿಂದ ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ ಪ್ರಾರಂಭಗೊಂಡಿರುವ ಪ್ರತಿ ತಿಂಗಳೂ ತಪ್ಪದೆ ನಡೆಯುತ್ತಿರುವ ಸಾಧಕರೊಡನೆ ಸಂವಾದ ಈ ನಿಟ್ಟಿನಲ್ಲಿ ಮತ್ತೊಂದು ಮಹತ್ವದ ಬೆಳವಣಿಗೆಯಾಗಿದೆ. 18 ವರ್ಷ ಮೇಲ್ಪಟ್ಟ, ಕನ್ನಡ ಓದು ಬರಹ ಬಲ್ಲ ಯಾರೇ ಆದರೂ ಪರಿಷತ್ ಸದಸ್ಯರಾಗಬಹುದು. ದೇಶ, ವಿದೇಶಗಳಲ್ಲೂ ಸದಸ್ಯರಿದ್ದಾರೆ. ಒಂದು ಸಾಹಿತ್ಯಕ ಸಂಸ್ಥೆಯಾಗಿ ಬೃಹತ್ ಸದಸ್ಯ ಬಲವನ್ನು ಹೊಂದಿರುವ ಸಂಸ್ಥೆಗಳಲ್ಲಿ ಅನನ್ಯವೆನಿಸುವಂತಹ ಗೌರವವನ್ನು ತನ್ನದಾಗಿಸಿಕೊಂಡಿದೆ. ಕನ್ನಡಪರ ಸಂಸ್ಥೆಗಳೂ ಪರಿಷತ್ತಿನ ಸದಸ್ಯ ಸಂಸ್ಥೆಗಳಾಗಬಹುದಾಗಿದೆ. ಪರಿಷತ್ತಿನ ಕಾರ್ಯ ಯೋಜನೆಗಳು, ಕಾರ್ಯಕ್ರಮಗಳು, ಜಿಲ್ಲಾ ಘಟಕಗಳ ಸುದ್ದಿಗಳು, ಗಣ್ಯವರೇಣ್ಯರ ಸಾದರ ಸ್ವೀಕಾರ, ನಾಡು ನುಡಿಗಳ ವಿಶಿಷ್ಟ ಪರಿಚಯ ಮುಂತಾದ ಅನೇಕ ಮಹತ್ವದ ಸಾಹಿತ್ಯ ಸಾಂಸ್ಕೃತಿಕ ಸವಿಯನ್ನು ಕನ್ನಡ ನುಡಿ ಭಿತ್ತರಿಸುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಪರಿಷತ್ತಿನ ತ್ರೈಮಾಸಿಕವಾಗಿದೆ. ಕಾವ್ಯ, ಸಂಸ್ಕೃತಿ ಸಂಶೋಧನೆ ಇತ್ಯಾದಿ ವಿಷಯಗಳಲ್ಲಿ ಅಧ್ಯಯನಪೂರ್ಣ ಮೌಲಿಕ ಲೇಖನಗಳಿದ್ದು, ಚಂದಾದಾರರಿಗೆ ಕಳುಹಿಸಲಾಗುತ್ತಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಗಳು, ತಾಲೂಕು ಘಟಕಗಳು ಹಾಗೂ ಹೋಬಳಿ ಘಟಕಗಳು ಅಧಿಕೃತವಾಗಿ ಅಸ್ತಿತ್ವದಲ್ಲಿವೆ. ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ನಾಡಿನಾದ್ಯಂತ ಚಟುವಟಿಕೆ ನಡೆಸುತ್ತಿವೆ. ಸಮ್ಮೇಳನ, ಗೋಷ್ಠಿ, ಸ್ಪರ್ಧೆ, ಉಪನ್ಯಾಸ, ವಸಂತ ಸಾಹಿತ್ಯೋತ್ಸವ, ಸಾಹಿತ್ಯ ರಚನಾ ತರಬೇತಿ ಶಿಬಿರಗಳು, ಪರಿಷತ್ತಿನ ಸ್ಥಾಪನಾ ದಿನಾಚರಣೆ, ಪ್ರತಿಭಾ ಪುರಸ್ಕಾರ, ರಾಜ್ಯೋತ್ಸವ ಇತ್ಯಾದಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ.

2500 ವರ್ಷದ ಇತಿಹಾಸ ಇರುವ ಭಾಷೆಗೆ ಅವಶ್ಯಕತೆ ಇತ್ತು. ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾಗಿ ಒಂದು ನೂರು ಹತ್ತು ವರ್ಷಗಳ ಕಾಲ ಸಾಹಿತ್ಯದ ಬೆಳವಣಿಗೆ, ಸಾಹಿತ್ಯ ಪ್ರೋತ್ಸಾಹ, ಸಮ್ಮೇಳನಗಳು, ವಿಚಾರ ಸಂಕೀರ್ಣಗಳು, ಸಾಹಿತ್ಯದ ಹೊಸ ಆಯಾಮಗಳ ಪರಿಚಯವನ್ನು ಮಾಡುವ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬಂದಿದೆ. ಇಡೀ ಭಾರತದಲ್ಲಿ ಭಾಷೆಗಾಗಿ ಅತ್ಯಂತ ಹೆಚ್ಚು ಕ್ರಿಯಾಶೀಲವಾಗಿ ಕೆಲಸ ಮಾಡಿರುವ ಸಂಸ್ಥೆ ಎಂದರೆ ಕನ್ನಡ ಸಾಹಿತ್ಯ ಪರಿಷತ್ ಎಂಬುದು ಹೆಮ್ಮೆಯ ವಿಷಯವಾಗಿದೆ.

(ಲೇಖಕರು: ಉಪನ್ಯಾಸಕರು ಕೊಪ್ಪಳ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:110

ಸಮಾಚಾರ ಸಣ್ಣದಲ್ಲ

ಸಿಎಂ ಪಿಣರಾಯಿ ರಾಜೀನಾಮೆ ಸಲ್ಲಿಕೆ

ತಿರುವನಂತಪುರ: ಕೇರಳ ವಿಧಾನಸಭಾ ಚುನಾವಣೆಯಲ್ಲಿ 'ಎಡ ಪ್ರಜಾಸತ್ತಾತ್ಮಕ ರಂಗ' (ಎಲ್‌ಡಿಎಫ್) ಸೋತಿರುವ ಹಿನ್ನೆಲೆ ಸಿಎಂ ಪಿಣರಾಯಿ ವಿಜಯನ್ ರಾಜೀನಾಮೆ ಸಲ್ಲಿಸಿದ್ದಾರೆ. ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಪಿಣರಾಯಿ ರಾಜೀನಾಮೆಯನ್ನು ಅಂಗೀಕರಿಸಿದ್ದು, ಹೊಸ ಸರಕಾರದ ರಚನೆ ಆಗುವವರೆಗೆ ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿಯುವಂತೆ ಸೂಚಿಸಿದ್ದಾರೆ ಎಂದು ಲೋಕಭವನ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ.

ಸಿಎಂ ಹುದ್ದೆಗೆ ಸ್ಟಾಲಿನ್ ರಾಜೀನಾಮೆ ಸಲ್ಲಿಕೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಆಡಳಿತಾರೂಢ ಡಿಎಂಕೆ ಪಕ್ಷಕ್ಕೆ ಹೀನಾಯ ಸೋಲಾಗಿರುವ ಹಿನ್ನೆಲೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮಂಗಳ ವಾರ ರಾಜೀನಾಮೆ ಸಲ್ಲಿಸಿ ದ್ದಾರೆ. ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಸ್ಟಾಲಿನ್ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ. ಹೊಸ ಸರಕಾರ ರಚನೆ ಆಗುವವರೆಗೆ ಉಸ್ತುವಾರಿ ಸಿಎಂ ಆಗಿ ಮುಂದುವರಿಯುವಂತೆ ಸೂಚಿಸಿದ್ದಾರೆ ಎಂದು ವರದಿಯಾಗಿದೆ.

ಮತದಾರರ ನಂಬಿಕೆ ದೊಡ್ಡದು: ಸ್ಟಾಲಿನ್

ಚೆನ್ನೈ: ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಒಕ್ಕೂಟ(ಎಸ್‌ಪಿಎ) ಈ ಬಾರಿಯ ಚುನಾವಣೆಯಲ್ಲಿ 1.54 ಕೋಟಿ ಮತಗಳನ್ನು ಪಡೆದಿದೆ. ಒಕ್ಕೂಟವನ್ನು ಬೆಂಬಲಿಸಿದ ಮತದಾರರಿಗೆ ಧನ್ಯವಾದ ಎಂದಿದ್ದಾರೆ. ಹೆಚ್ಚು ಸ್ಥಾನ ಗೆದ್ದಿರುವ ಪಕ್ಷವು ನಮಗಿಂತ ಕೇವಲ 17.43 ಲಕ್ಷ ಹೆಚ್ಚು ಮತ ಪಡೆದಿದೆ. ಮುಂಚೂಣಿ ಪಕ್ಷ ಮತ್ತು ಡಿಎಂಕೆ ನಡುವಿನ ಮತ ಪ್ರಮಾಣ ಹಂಚಿಕೆ ವ್ಯತ್ಯಾಸ ಕೇವಲ ಶೇ.3.52. ರಾಜ್ಯದ ಮತದಾರರು ಡಿಎಂಕೆ ಮೇಲೆ ಇಟ್ಟಿರುವ ನಂಬಿಕೆಯೇ ನಮ್ಮ ಪಾಲಿಗೆ ದೊಡ್ಡದು. ಆಡಳಿತ ಪಕ್ಷ ಅಥವಾ ಪ್ರತಿಪಕ್ಷ ಎಲ್ಲೇ ಇದ್ದರೂ ಡಿಎಂಕೆ ಜನ ಸೇವೆ ಮುಂದುವರೆಸಲಿದೆ. ಜನರ ಬೇಡಿಕೆಗಳಿಗಾಗಿ ಹೋರಾಡಲಿದೆ ಎಂದು ಸ್ಟಾಲಿನ್ ಹೇಳಿದ್ದಾರೆ.

ಹಿಂದೂಗಳಿಗಾಗಿ ಕೆಲಸ ಮಾಡುವೆ: ಸುವೇಂದು

ಕೋಲ್ಕತ್ತ: ಭವಾನಿಪುರ ಮತ್ತು ನಂದಿಗ್ರಾಮ ಎರಡೂ ಕ್ಷೇತ್ರದಲ್ಲೂ ಗೆಲುವು ಸಾಧ್ಯವಾಗಿದೆ. ನಂದಿಗ್ರಾಮದಲ್ಲಿ 66 ಸಾವಿರ ಮುಸ್ಲಿಮರಿದ್ದರೆ, ಭವಾನಿಪುರದಲ್ಲಿ 35 ಸಾವಿರದಷ್ಟಿದ್ದಾರೆ. ಆದ್ದರಿಂದಲೇ ಭವಾನಿಪುರದಲ್ಲಿ ನನ್ನ ಗೆಲುವಿನ ಅಂತರ ನಂದಿಗ್ರಾಮಕ್ಕಿಂತ ಹೆಚ್ಚಾಗಿದೆ. ಮುಸ್ಲಿಮರೆಲ್ಲರೂ ಮಮತಾಗೆ ಮತ ಹಾಕಿದ್ದಾರೆ. ಹಿಂದೂ, ಬೌದ್ಧ, ಸಿಖ್ಖರು ನನಗೆ ಮತ ಹಾಕಿದ್ದಾರೆ. ಅಲ್ಲದೇ ಎಡಪಕ್ಷದ ಸಾಂಪ್ರದಾಯಿಕ 10 ಸಾವಿರ ಮತಗಳೂ ನನಗೇ ಬಂದಿದೆ. ಆ ಮತಗಳನ್ನು ನನ್ನಪರ ತಿರುಗಿಸಿದ್ದಕ್ಕಾಗಿ ಸಿಪಿಎಂನ ತಳಮಟ್ಟದ ಕಾರ್ಯಕರ್ತರಿಗೆ ಧನ್ಯವಾದ. ಹಾಗಾಗಿ ನಾನು ನಂದಿಗ್ರಾಮ, ಭವಾನಿಪುರದಲ್ಲಿನ ಹಿಂದೂಗಳಿಗಾಗಿ ಕೆಲಸ ಮಾಡುವೆ ಎಂದು ಬಿಜೆಪಿ ನಾಯಕ, ಸಂಭಾವ್ಯ ಮುಖ್ಯಮಂತ್ರಿ ಅಭ್ಯರ್ಥಿ ಸುವೇಂದು ಅಧಿಕಾರಿ ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿದ್ದಾರೆ. ಗೃಹ ಸಚಿವ ಅಮಿತ್ ಶಾ ಅವರು ಪ್ರಣಾಳಿಕೆಯಲ್ಲಿ ಘೋಷಿಸಿರುವ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದ ಮತದಾರರಿಗೆ ನೀಡಿರುವ ಭರವಸೆಗಳನ್ನು ಈಡೇರಿಸುತ್ತವೆ, ಪೂರ್ಣಗೊಳಿಸುತ್ತೇವೆ ಎಂದು ಸುವೇಂದು ಹೇಳಿದ್ದಾರೆ.

ಚೀನಾ ಪಟಾಕಿ ಘಟಕ ಸ್ಫೋಟಕ್ಕೆ 26 ಬಲಿ

ಬೀಜಿಂಗ್: ಚೀನಾದ ಹುನಾನ್ ಪ್ರಾಂತ್ಯದ ಲಿಯುಯಾಂಗ್ ನಗರದಲ್ಲಿರುವ ಪಟಾಕಿ ತಯಾರಿಕಾ ಘಟಕದಲ್ಲಿ ಸೋಮವಾರ ಸಂಜೆ 5ರ ವೇಳೆ ಸ್ಫೋಟವಾಗಿದ್ದು, 26 ಕಾರ್ಮಿಕರು ದುರ್ಮರಣ ಕ್ಕೀಡಾಗಿದ್ದಾರೆ. 61 ಕಾರ್ಮಿಕರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಗೆ ಸಂಬಂಧಿಸಿ ತನಿಖೆಗೆ ಆದೇಶಿಸಲಾಗಿದೆ.

{ **ರಾಹುಲ್ ಗಾಂಧಿ** } ಕಾಂಗ್ರೆಸ್ ನಾಯಕ

ಪಶ್ಚಿಮ ಬಂಗಾಳ, ಅಸ್ಸಾಂ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಗೆಲುವು ಸಹಜವಾದುದಲ್ಲ, ಅದು ಜನಾದೇಶದ ಕಳವು ಕೃತ್ಯವಾಗಿದೆ. ಇದು ಪ್ರಜಾಪ್ರಭುತ್ವ ನಾಶ ಮಾಡುವ ಕೇಸರಿ ಪಕ್ಷದ ಧ್ಯೇಯದ ಪ್ರಮುಖ ಹೆಜ್ಜೆ. ಮಮತಾ ಬ್ಯಾನರ್ಜಿ ಅವರ ಪಕ್ಷದ ಸೋಲು ಕಂಡು ಕೆಲವರು ಬಹಳ ಸಂತೋಷಪಡುತ್ತಿದ್ದಾರೆ. ಇದು ಕ್ಷುಲ್ಲಕ ನಡೆ, ಇಂಥ ರಾಜಕೀಯವನ್ನು ಬಿಡಬೇಕು.



ಬಿಜೆಪಿ ಗೆಲುವಿಂದ ಪ.ಬಂ. ದುರ್ಗಾ ದೇಗುಲಕ್ಕೆ ಮುಕ್ತಿ

ಹಲವು ವರ್ಷಗಳಿಂದ ಮುಚ್ಚಿದ್ದ ದುರ್ಗಾ ಮಾತೆ ದೇಗುಲ ಬಾಗಿಲು ತೆರೆದಿದೆ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಹಲವು ವರ್ಷಗಳಿಂದ ಬಲವಂತವಾಗಿ ಬಾಗಿಲು ಬಂದ್ ಮಾಡಿಸಲಾಗಿದ್ದ ದುರ್ಗಾ ಮಾತೆಯ ದೇವಸ್ಥಾನದ ಬಾಗಿಲು ಕಡೆಗೂ ತೆರೆಯಲು ಸಾಧ್ಯವಾಗಿದೆ. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 207 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ ಬಳಿಕ ದುರ್ಗಾ ಮಾತೆಯ ಭಕ್ತರು ದೇಗುಲದ ಬಾಗಿಲನ್ನು ತೆರೆಯಿಸಿ ಅಲ್ಲಿಂದಲೇ ಗೆಲುವಿನ ಸಂಭ್ರಮಾಚರಣೆ ಮಾಡಿದ್ದಾರೆ.

ಪಶ್ಚಿಮ ವರ್ಧಮಾನ್ ಜಿಲ್ಲೆಯ ಅಸನ್ಸೋಲ್‌ನಲ್ಲಿ ದುರ್ಗಾ ಮಾತೆಯ ದೇವಸ್ಥಾನವಿದೆ. ಪಶ್ಚಿಮ ವರ್ಧಮಾನ್ ಜಿಲ್ಲೆಯಲ್ಲಿನ ಎಲ್ಲಾ 9 ವಿಧಾನಸಭಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಅಭ್ಯರ್ಥಿಗಳೇ ಗೆದ್ದಿದ್ದಾರೆ. ಫಲಿತಾಂಶ ಪ್ರಕಟಗೊಂಡ ನಂತರ ದುರ್ಗಾ ಮಾತೆಯ ಭಕ್ತರು ಹರ್ಷೋದ್ಗಾರಗಳನ್ನು ಹೊರಡಿಸುತ್ತಾ ದೇವಾಲಯದ ಬಾಗಿಲನ್ನು ತೆರೆಯಿಸಿದರು.

ಅಸನ್‌ಸೋಲ್‌ನಲ್ಲಿರುವ ದುರ್ಗಾ ದೇವಾಲಯ ಸ್ಥಳೀಯ ಪ್ರದೇಶದಲ್ಲಿನ ಅನ್ಯಧರ್ಮೀಯರಿಂದ ಉಂಟಾಗುತ್ತಿದ್ದ ಸಂಘರ್ಷ ಮತ್ತು ಉದ್ವಿಗ್ನತೆಯ ಕಾರಣದಿಂದಾಗಿ ಹಲವು ವರ್ಷಗಳಿಂದ ಬಂದ್ ಆಗಿತ್ತು. ವರ್ಷಗಳ ಬಳಿಕ ದುರ್ಗಾ ಮಾತೆಯ ದೇಗುಲದ ಬಾಗಿಲು ತೆರೆದಿರುವ ಸುದ್ದಿ ತಿಳಿದು ಸಾವಿರಾರು ಭಕ್ತರು ಧಾವಿಸಿ ಬಂದು ಸಾಲುಗಟ್ಟಿ ನಿಂತು ದುರ್ಗಾ ದೇವಿಯ ದರ್ಶನ ಪಡೆಯುತ್ತಿದ್ದಾರೆ.

ಶ್ರೀ ದುರ್ಗಾಮಾತಾ ಚಾರಿಟಬಲ್ ಟ್ರಸ್ಟ್ ಈ ದೇವಾಲಯದ ನಿರ್ವಹಣೆ ಮಾಡುತ್ತಿತ್ತು. ದುರ್ಗಾ ಪೂಜೆ ಮತ್ತು ಲಕ್ಷ್ಮಿ ಪೂಜೆಯಂತಹ ಹಬ್ಬಗಳಲ್ಲಿ ಮಾತ್ರ ದೇವಾಲಯ ತೆರೆಯುತ್ತಿತ್ತು. ಆದರೆ, ಸ್ಥಳೀಯ ಗಲಾಟೆ ಮತ್ತು ಆಡಳಿತಾತ್ಮಕ ನಿರ್ಬಂಧಗಳಿಂದಾಗಿ ದೇವಾಲಯದ ಬಾಗಿಲನ್ನು ವರ್ಷಗಳಿಂದ ಮುಚ್ಚಲಾಗಿತ್ತು.

ದೇಗುಲ ತೆರೆಸುವ ಭರವಸೆ

ದೇವಾಲಯದ ಮುಂಬದಿಯ ಬೃಹತ್ ಪ್ರವೇಶ ದ್ವಾರ ತೆರೆದ ಕೂಡಲೇ ಭಕ್ತರು ಮತ್ತು ಬಿಜೆಪಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ ಪ್ರಾರ್ಥನೆ ಸಲ್ಲಿಸಿದರು. ಅಸನ್ಸೋಲ್ ಉತ್ತರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿರುವ ನೂತನ ಶಾಸಕ ಕೃಷ್ಣೇಂದು ಮುಖರ್ಜಿ, ತಾವು ಗೆದ್ದರೆ ವರ್ಷಪೂರ್ತಿ ದೇವಾಲಯವನ್ನು ತೆರೆಯುವುದಾಗಿ ಭರವಸೆ ನೀಡಿದ್ದರು. ಚುನಾವಣೆ ಗೆದ್ದ ಬಳಿಕ ಕೃಷ್ಣೇಂದು ಮುಖರ್ಜಿ ಅವರೇ ಮುಂದೆ ನಿಂತು ದುರ್ಗಾ ಮಾತೆಯ ದೇಗುಲದ ಬಾಗಿಲು ತೆರೆಯಿಸಿ ಪೂಜೆ ನಡೆಯುವಂತೆ ನೋಡಿಕೊಂಡಿದ್ದಾರೆ. ಅಸನ್ಸೋಲ್ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಅಗ್ನಿಮಿತ್ರ ಪಾಲ್ 40,839 ಮತಗಳ ಅಂತರದಿಂದ ಗೆದ್ದಿದ್ದಾರೆ. ಅನ್ಯಧರ್ಮೀಯರ ದಾಳಿಯ ಭಯದಲ್ಲಿ ಬಂದ್ ಆಗಿದ್ದ ದೇಗುಲಗಳ ಬಾಗಿಲುಗಳ ಈಗ ಒಂದೊಂದಾಗಿ ತೆರೆದುಕೊಳ್ಳಲಾರಂಭಿಸಿವೆ. ಆ ಸಾಲಿಗೆ ಅಸನ್ಸೋಲ್‌ನಲ್ಲಿನ ದುರ್ಗಾ ಮಾತೆಯ ದೇಗುಲ ಮೊದಲ ಸೇರ್ಪಡೆಯಾಗಿದೆ.

ಚುನಾವಣೋತ್ತರ ಹಿಂಸೆ: ಮೂವರಿಗೆ ಗಾಯ

ಚುನಾವಣೆಯಲ್ಲಿ ಪಕ್ಷಕ್ಕೆ ಸೋಲಾಗಿ ಅಧಿಕಾರ ಕಳೆದುಕೊಳ್ಳುವ ಸ್ಥಿತಿ ಎದುರಾಗಿರುವುದರಿಂದ ಹತಾಶೆಗೊಂಡಿರುವ ತೃಣಮೂಲ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ರಾಜ್ಯದ ಕೆಲವೆಡೆ ಬಿಜೆಪಿ ಕಾರ್ಯಕರ್ತರು, ಕಚೇರಿಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾರಂಭಿಸಿದ್ದಾರೆ. ಸೋಮವಾರ ಚುನಾವಣಾ ಫಲಿತಾಂಶ ಪ್ರಕಟಣಗೊಂಡ ಬಳಿಕ ನೈಹಟಿ ಪ್ರದೇಶದಲ್ಲಿನ ಮಮದ್‌ಪುರ್ ಎಂಬಲ್ಲಿ ಬಿಜೆಪಿ ಕಾರ್ಯಕರ್ತರ ಮನೆಗಳ ಮೇಲೆ ಟಿಎಂಸಿ ಕಾರ್ಯಕರ್ತರು ದಾಳಿ ಮಾಡಿದ್ದರಿಂದ ಬಿಜೆಪಿ ಕಾರ್ಯಕರ್ತರು ಸೇರಿದಂತೆ ಮೂವರು ಗಾಯಗೊಂಡಿದ್ದಾರೆ. ಇದೇ ಪ್ರದೇಶದಲ್ಲಿನ ಬಿಜೆಪಿ ನಾಯಕರಿಗೆ ಸೇರಿದ ಮನರಂಜನಾ ಕ್ಲಬ್ ಮೇಲೆಯೂ ಟಿಎಂಸಿ ಕಾರ್ಯಕರ್ತರು ಮತ್ತು ದುಷ್ಕರ್ಮಿಗಳ ದಾಳಿ ಮಾಡಿದ್ದಾರೆ. ಪರಿಣಾಮ ಕ್ಲಬ್‌ನ ಆಸ್ತಿಗೆ ಹಾನಿಯಾಗಿದೆ ಎಂದು ವರದಿಯಾಗಿದೆ. ಮತ್ತೊಂದೆಡೆ, ಪೂರ್ವ ಕೋಲ್ಕತ್ತದಲ್ಲಿ ಟಿಎಂಸಿ ಪಕ್ಷದ ವಾರ್ಡ್ ಕೌನ್ಸಿಲರ್ ಸುಶಾಂತ್ ಕುಮಾರ್ ಘೋಷ್ ಎಂಬ ಮೇಲೆ ಸೋಮವಾರ ತಡರಾತ್ರಿ ದಾಳಿಯಾಗಿದೆ. ಬಿಜೆಪಿಯವರೇ ಈ ದಾಳಿ ಮಾಡಿಸಿದ್ದಾರೆ ಎಂದು ಘೋಷ್ ಆರೋಪಿಸಿದ್ದಾರೆ. 2021ರ ಚುನಾವಣೆ ಬಳಿಕ ಭಾರೀ ಪ್ರಮಾಣದಲ್ಲಿ ಹಿಂಸಾಚಾರ ನಡೆದಿದ್ದರಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮುನ್ನೆಚ್ಚರಿಕೆ ಕ್ರಮವಾಗಿ ಪಶ್ಚಿಮ ಬಂಗಾಳದ ಸೂಕ್ಷ್ಮ ಪ್ರದೇಶಗಳಲ್ಲಿ ಕೇಂದ್ರದ ಸಶಸ್ತ್ರ ಪೊಲೀಸ್ ಪಡೆಗಳ 2400 ತುಕಡಿಗಳನ್ನು ನಿಯೋಜನೆಗೊಳಿಸಿದ್ದರಿಂದ ಈ ಬಾರಿ ಚುನಾವಣೋತ್ತರ ಹಿಂಸಾಚಾರ ಘಟನೆಗಳು ಕಡಿಮೆ ಆಗಿದೆ ಎನ್ನಲಾಗಿದೆ.

ಹಿಂಸಾಚಾರಕ್ಕಿಳಿದ ರಾಜಕೀಯ ಪಕ್ಷದ ಕಾರ್ಯಕರ್ತರನ್ನು ಚದುರಿಸಿದ ಭದ್ರತಾ ಪಡೆ ಸಿಬ್ಬಂದಿ.

ಇಂಥ ಜಯದ ನಿರೀಕ್ಷೆ ಇರಲಿಲ್ಲ

ಚೆನ್ನೈ: ಪಕ್ಷ ಸ್ಥಾಪಿಸಿದ 2 ವರ್ಷಕ್ಕೇ, ಮೊದಲ ಯತ್ನದಲ್ಲೇ ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಭರ್ಜರಿ ಜಯ ದಾಖಲಿಸಿರುವ ನಟ ವಿಜಯ್ ಜೋಸೆಫ್ ಅವರ ನಾಯಕತ್ವದ 'ತಮಿಳಗ ವೆಟ್ರಿ ಕಳಗಂ'(ಟಿವಿಕೆ) ಪಕ್ಷಕ್ಕೆ, ಅದರ ನಾಯಕರಿಗೆ ಈ ಮಟ್ಟದ ಗೆಲುವಿನ ನಿರೀಕ್ಷೆಯೇ ಇರಲಿಲ್ಲ. ಮತದಾನೋತ್ತರ ಚುನಾವಣಾ ಸಮೀಕ್ಷೆಗಳ ಪ್ರಕಾರ ಹೆಚ್ಚೆಂದರೆ ತಮ್ಮ ಪಕ್ಷಕ್ಕೆ 2 ಡಿಜಿಟ್ ಸ್ಥಾನಗಳು ಸಿಗಬಹುದು. ಡಿಎಂಕೆ ಅಥವಾ ಎಐಎಡಿಎಂಕೆಗೆ ಸ್ಪಷ್ಟ ಬಹುಮತ ಸಿಗದು. ಅತಂತ್ರ ವಿಧಾನಸಭೆ ಫಲಿತಾಂಶ ಬರಲಿದೆ. ಆಗ ಟಿವಿಕೆ, ಕಿಂಗ್ ಮೇಕರ್ ಆಗಬಹುದು ಅಂದುಕೊಂಡಿದ್ದರು. ಇಲ್ಲವಾದರೆ ಡಿಎಂಕೆ ಅಥವಾ ಎಐಎಡಿಎಂಕೆ ಏನಾರೂ ಕುದುರೆ ವ್ಯಾಪಾರಕ್ಕಿಳಿದು ಟಿವಿಕೆ ಶಾಸಕರನ್ನು ಖರೀದಿಸಲು ಮುಂದಾಗಬಹುದು ಎಂದೇ ಕಳವಳಗೊಂಡಿದ್ದರು. ಹಾಗಾಗಿ ತಮ್ಮ ಶಾಸಕರನ್ನು ರೆಸಾರ್ಟ್‌ಗೆ ಕಳುಹಿಸುವ ಬಗ್ಗೆ ಟಿವಿಕೆ ನಾಯಕರು ಚಿಂತನೆ ನಡೆಸಿದ್ದರು. ಅದೇ ಕಾರಣವಾಗಿ ಪಕ್ಷದ ವಿಜೇತ ಅಭ್ಯರ್ಥಿಗಳನ್ನೆಲ್ಲಾ ಪಣಿಯೂರ್‌ನಲ್ಲಿರುವ ಪಕ್ಷದ ಪ್ರಧಾನ ಕಚೇರಿಗೆ ಬರಲು ಸೂಚನೆ ನೀಡಿದ್ದರು. ಈ ಕುರಿತು ಪಕ್ಷದ ಕೆಲ ನಾಯಕರೇ ಸುದ್ದಿಸಂಸ್ಥೆಗೆ ಸೋಮವಾರ ಬೆಳಗ್ಗೆ ಪ್ರತಿಕ್ರಿಯಿಸಿದ್ದರು. ಏಕೆಂದರೆ, ನಾಮಪತ್ರ ಪರಿಶೀಲನೆ ಹಂತದಲ್ಲಿದ್ದಾಗ ಎಡಪ್ಪಾಡಿ ಕ್ಷೇತ್ರದ ಟಿವಿಕೆ ಅಭ್ಯರ್ಥಿ ಕೆಲಕಾಲ ನಾಪತ್ತೆಯಾಗಿದ್ದ ಘಟನೆ ಟಿವಿಕೆ ನಾಯಕರ ನಿದ್ರೆಗೆಡಿಸಿತ್ತು.

ಋಣ ತೀರಿಸುವರೇ ವಿಜಯ್?

ಚೆನ್ನೈ: 'ನಾನು ಲಕ್ಷುರಿ ಜೀವನ ಶೈಲಿ ಕೈಬಿಟ್ಟು, ನೋವುಗಳನ್ನು ಸಹಿಸಿಕೊಂಡು ನಿಮ್ಮ ಋಣ ತೀರಿಸಲು ಬಂದಿದ್ದೇನೆ, ಒಂದು ಬಾರಿ ಅವಕಾಶ ನೀಡಿ' ಎಂದು ನಟ-ಟಿವಿಕೆ ಪಕ್ಷದ ನಾಯಕ ಜೋಸೆಫ್ ವಿಜಯ್, ಚೆನ್ನೈನ ಪೆರಂಬೂರು ಮತ್ತು ತಿರುಚಿರಾಪಳ್ಳಿ ಪೂರ್ವ ವಿಧಾನಸಭಾ ಕ್ಷೇತ್ರಗಳಿಂದ ನಾಮಪತ್ರ ಸಲ್ಲಿಸಿದಾಗ ರಾಜ್ಯದ ಮತದಾರರಲ್ಲಿ ಮನವಿ ಮಾಡಿದ್ದರು. ಅಷ್ಟೇ ಅಲ್ಲದೇ, 'ಯುವಕರಿಗಾಗಿ ಗ್ಯಾರಂಟಿ' ಎಂಬ ಕಾರ್ಯಯೋಜನೆ ಪ್ರಕಟಿಸಿದ್ದರು. ಟಿವಿಕೆ ಪಕ್ಷ ಅಧಿಕಾರಕ್ಕೆ ಬಂದರೆ, 29 ವರ್ಷ ಮೇಲ್ಪಟ್ಟ ನಿರುದ್ಯೋಗಿ ಪದವೀಧರರಿಗೆ ಮಾಸಿಕ 4,000 ರು. ನೆರವು ನೀಡಲಾಗುವುದು. ಮಾದಕ ವಸ್ತುಗಳಿಲ್ಲದ ತಮಿಳುನಾಡು ನಿರ್ಮಾಣ ಮಾಡಲಾಗುವುದು. 12ನೇ ತರಗತಿಯಿಂದ ಪಿಎಚ್‌ಡಿವರೆಗಿನ ವಿದ್ಯಾಭ್ಯಾಸಕ್ಕಾಗಿ 20 ಲಕ್ಷ ರು.ವರೆಗೆ ಜಾಮೀನು ಬೇಕಿಲ್ಲದ ಸಾಲ ಸೌಲಭ್ಯದ ಭರವಸೆ ನೀಡಿದ್ದರು. ಮಹಿಳೆಯರಿಗೂ ಮಾಸಿಕ 2500 ಆರ್ಥಿಕ ನೆರವು, ಬಡಕುಟುಂಬದ ಯುವತಿಯರ ಮದುವೆಗೆ 8 ಗ್ರಾಂ ಚಿನ್ನ ಮತ್ತು ರೇಷ್ಮೆ ಸೀರೆಯ ಉಡುಗೊರೆ ನೀಡುವ ಆಸೆ ತೋರಿಸಿದ್ದರು. ವಿಜಯ್ ಮೇಲಿನ ಅಭಿಮಾನ, ಜನಪ್ರಿಯತೆ ಆಧರಿಸಿ, ಭರವಸೆಗಳನ್ನು ಪರಿಗಣಿಸಿ ಮತದಾರರು ಗೆಲ್ಲಿಸಿದ್ದಾರೆ. ಸರಕಾರ ರಚನೆ ಬಳಿಕ ನಟ ವಿಜಯ್ ಈ ಭರವಸೆಗಳನ್ನೆಲ್ಲಾ ಹೇಗೆ ಈಡೇರಿಸುವರು? ಜನರ ನಿರೀಕ್ಷೆಗಳನ್ನು ಹೇಗೆ ಮುಟ್ಟುವರು ಎಂಬುದೇ ಈಗಿನ ದೊಡ್ಡ ಪ್ರಶ್ನೆ.

ವಿಜಯಣ್ಣನಿಗಾಗಿ ಟಿವಿಕೆಗೆ ಮತದಾನ

ಚೆನ್ನೈ: ಜನಪ್ರಿಯ ಚಿತ್ರನಟ ವಿಜಯ್ ಸ್ಥಾಪಿಸಿದ 'ತಮಿಳಗ ವೆಟ್ರಿ ಕಳಗಂ'(ಟಿವಿಕೆ) ಪಕ್ಷ ಮೊದಲ ಯತ್ನದಲ್ಲೇ ಸರಕಾರ ರಚಿಸುವಷ್ಟರ ಮಟ್ಟಿಗೆ ದಿಢೀರ್ ಬೆಳವಣಿಗೆ ಕಂಡಿದೆ.

ಆಟೋ ಚಾಲಕ, ಕಾರು ಚಾಲಕನ ಮಗ ಸೇರಿದಂತೆ ಪಕ್ಷ ಕಣಕ್ಕಿಳಿಸಿದ್ದವರಲ್ಲಿ 108 ಅಭ್ಯರ್ಥಿಗಳು ಗೆದ್ದು ಶಾಸಕರಾಗಿದ್ದಾರೆ. ಅವರಲ್ಲಿ ಬಹಳಷ್ಟು ಅಭ್ಯರ್ಥಿಗಳು ರಾಜಕೀಯಕ್ಕೆ ಹೊಸಬರು, ಹಲವರು ಅವರ ಕ್ಷೇತ್ರದ ಮತದಾರರಿಗೆ ಹೆಚ್ಚು ಪರಿಚಿತರಲ್ಲ. ಆದರೂ ಭಾರೀ ಮತಗಳ ಅಂತರದಿಂದ ಚುನಾಯಿತರಾಗಿ ಮೊದಲ ಯತ್ನದಲ್ಲೇ ಶಾಸಕರಾಗಿದ್ದಾರೆ. ಇದಕ್ಕೆ ಕಾರಣವಾಗಿರುವುದು ತಮಿಳುನಾಡಿನ ಮತದಾರರು ನಟ ವಿಜಯ್ ಅವರ ಮೇಲಿಟ್ಟಿರುವ ಅಭಿಮಾನ, ಪ್ರೀತಿ, ಮೆಚ್ಚುಗೆ.

ನಟ ವಿಜಯ್ ಅವರ ಜನಪ್ರಿಯತೆ ಮುಖ್ಯಮಂತ್ರಿ, ಡಿಎಂಕೆಯ ಪ್ರಬಲ ನಾಯಕ ಎಂ.ಕೆ.ಸ್ಟಾಲಿನ್ ಅವರನ್ನೇ ಅವರ ಸಾಂಪ್ರದಾಯಿಕ ಕ್ಷೇತ್ರದಲ್ಲೇ ಸೋಲಿಸಿದೆ. ಟಿವಿಕೆಯ ಅಭ್ಯರ್ಥಿಗಳು ಯಾರು? ಅವರ ಹಿನ್ನೆಲೆ ಏನು? ಅವರ ವಿದ್ಯಾರ್ಹತೆ ಎಷ್ಟಿದೆ, ನಡೆನುಡಿ ಹೇಗಿದೆ, ಕ್ಷೇತ್ರವನ್ನು ಅಭಿವೃದ್ಧಿಪಡಿಸಬಲ್ಲರೇ? ಕ್ಷೇತ್ರದ ಮತದಾರರ ಕಷ್ಟಗಳಿಗೆ ಒದಗುವರೇ? ಎಂಬ ಯಾವುದೇ ಅಂಶಗಳನ್ನೂ ಪರಿಗಣಿಸದ ಮತದಾರರು, ವಿಜಯ್ ಅಣ್ಣನ ಪಕ್ಷದ ಅಭ್ಯರ್ಥಿ ಎಂಬ ಒಂದೇ ಕಾರಣಕ್ಕೆ ಮತ ನೀಡಿ ಗೆಲ್ಲಿಸಿದ್ದಾರೆ. ಟಿವಿಕೆಯ ಹಲವು ಸ್ಪರ್ಧಿಗಳು ಡಿಎಂಕೆ ಮತ್ತು ಎಐಎಡಿಎಂಕೆ ಹಿರಿಯ ನಾಯಕರನ್ನೇ ಸೋಲಿಸಿದ್ದಾರೆ.

ಅಭ್ಯರ್ಥಿ ಹೆಸರೇ ಗೊತ್ತಿಲ್ಲ!

ಕೊರಟ್ಟೂರಿನ ಟಿಎನ್‌ಎಚ್‌ಬಿ ಕಾಲೊನಿ 32 ವರ್ಷದ ಐಟಿ ಉದ್ಯೋಗಿ, 2 ಮಕ್ಕಳ ತಾಯಿ ವಿದ್ಯಾಲಕ್ಷ್ಮಿ ಮತ್ತು ಅಂಬತ್ತೂರು ಕ್ಷೇತ್ರದ ನಿವಾಸಿ ಗೃಹಿಣಿ, ಟಿವಿಕೆ ಪಕ್ಷದ ಸ್ಥಳೀಯ ಅಭ್ಯರ್ಥಿಯ ಹೆಸರು ನೆನಪಿಗೇ ಬರುತ್ತಿಲ್ಲ. ಮತಗಟ್ಟೆಯಲ್ಲಿದ್ದಾಗಷ್ಟೇ ಅವರ ಹೆಸರು ಗುರುತಿಸಿದೆ. ಟಿವಿಕೆ ಅಭ್ಯರ್ಥಿ ಬಗ್ಗೆ ನನಗೇನೂ ತಿಳಿದಿಲ್ಲ. ವಿಜಯ್ ಎಂದರೆ ಮೆಚ್ಚುಗೆ, ಅವರು ರಾಜಕೀಯ ಯಶಸ್ವಿಯಾಗಲಿ ಎಂದು ಬಯಸಿದ್ದೆ. ಹಾಗಾಗಿ ಟಿವಿಕೆಗೆ ಮತ ಹಾಕಿದೆ ಎಂದು ಹೇಳಿದ್ದಾರೆ.

ಹಲವು ಕ್ಷೇತ್ರಗಳಲ್ಲಿ ಟಿವಿಕೆ ಸ್ಪರ್ಧಿಗೇ ಮತ ನೀಡಿ ಗೆಲ್ಲಿಸಿರುವ ಮತದಾರರು ಮಾಧ್ಯಮದವರು ಪ್ರಶ್ನೆ ಮಾಡಿದಾಗ, ತಮ್ಮ ಕ್ಷೇತ್ರದಲ್ಲಿ ತಾವು ಆಯ್ಕೆ ಮಾಡಿದ ಟಿವಿಕೆ ಪಕ್ಷದ ಅಭ್ಯರ್ಥಿಯ ಹೆಸರು ಹೇಳಲೇ ಆಗಲಿಲ್ಲ. ಕೆಲವು ಬೆಂಬಲಿಗರು ತಮ್ಮ ಕ್ಷೇತ್ರದಲ್ಲಿನ ಟಿವಿಕೆ ಅಭ್ಯರ್ಥಿ ತಮ್ಮ ವ್ಯಾಪ್ತಿಯಲ್ಲಿ ಪ್ರಚಾರ ಮಾಡಿರುವುದನ್ನು ತಾವೆಂದೂ ನೋಡಿಲ್ಲ. ನಟ ವಿಜಯ್ ಅಣ್ಣಾ ಅವರ ಪಕ್ಷದ ಅಭ್ಯರ್ಥಿ ಎಂಬ ಕಾರಣಕ್ಕೇ ಕಣ್ಣು ಮುಚ್ಚಿಕೊಂಡು 'ವಿಷಲ್' ಗುರುತಿಗೆ ಮತ ಚಲಾಯಿಸಿದ್ದೇವೆ ಎಂದರು.

ಪ.ಬಂ. ಮತ್ತೊಂದು ಗೆಲುವು: ಬಿಜೆಪಿ ಸದಸ್ಯ ಬಲ 207ಕ್ಕೇರಿಕೆ

ಕೋಲ್ಕತ್ತ: ವಂಗ ನಾಡಿನಲ್ಲಿ ಸೋಮವಾರ ಇತಿಹಾಸ ನಿರ್ಮಿಸಿರುವ ಬಿಜೆಪಿ, ಮಂಗಳವಾರ ಮತ್ತೊಂದು ಸ್ಥಾನ ಹೆಚ್ಚುವರಿಯಾಗಿ ಸಿಕ್ಕಿದೆ. ಆ ಮೂಲಕ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸದಸ್ಯ ಬಲ 207ಕ್ಕೆ ಏರಿಕೆಯಾಗಿದೆ.

ಪಶ್ಚಿಮ ಬಂಗಾಳದ 115ನೇ ವಿಧಾನಸಭಾ ಕ್ಷೇತ್ರ 'ರಾಜಹರ್ಹಾತ್ ನ್ಯೂ ಟೌನ್'ನಲ್ಲಿ ಬಿಜೆಪಿಯ ಪಿಯೂಶ್ ಕನೋದಿಯ ಅವರು 316 ಮತಗಳ ಅಂತರದಿಂದ ಜಯ ಶಾಲಿಯಾಗಿದ್ದಾರೆ. ಪಿಯೂಶ್ ಅವರಿಗೆ 1,06,564 ಮತಗಳು ಬಂದಿದ್ದರೆ, ತೃಣಮೂಲ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ತಾಪಾಸ್ ಚಟರ್ಜಿಗೆ 1,06,248 ಮತಗಳು ಸಿಕ್ಕಿವೆ. ಬಹಳ ಕಡಿಮೆ ಅಂತರದ ಫಲಿತಾಂಶವಾಗಿದ್ದರಿಂದ ಸೋಮವಾರ ಸಂಜೆ ಮರು ಎಣಿಕೆಗೆ ಕೋರಿಕೆ ಬಂದಿದೆ. ಹಾಗಾಗಿ ಮತ ಎಣಿಕೆ ಕೇಂದ್ರದ ಅಧಿಕಾರಿಗಳು ಮರಳಿ ಮತ್ತೊಮ್ಮೆ ಎಣಿಕೆ ಶುರು ಮಾಡಲಾಗಿದೆ. ಆ ಎಣಿಕೆ ಪ್ರಕ್ರಿಯೆ ಮಂಗಳವಾರ ಮಧ್ಯಾಹ್ನ 2 ಗಂಟೆವರೆಗೂ ನಡೆದಿದೆ. ಮಂಗಳವಾರ ಬೆಳಗ್ಗೆ 11.35ರ ವೇಳೆ 17ನೇ ಸುತ್ತಿನ ಮತ ಎಣಿಕೆ ನಡೆದಿದ್ದಾಗ ಟಿಎಂಸಿಯ ತಾಪಸ್ ಚಟರ್ಜಿ, 363 ಮತಗಳ ಅಂತರದಿಂದ ಮುನ್ನಡೆ ಕಾಯ್ದುಕೊಂಡಿದ್ದರು. ಆದರೆ, 18ನೇ ಸುತ್ತಿನ ಮತ ಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿಗೆ ಹೆಚ್ಚಿನ ಮತಗಳು ಬಂದವು. ಹಾವು ಏಣಿ ಆಟದಂತಿದ್ದ ಮತ ಎಣಿಕೆ ಪ್ರಕ್ರಿಯೆಲ್ಲಿ ಕಡೆಗೂ ಪಿಯೂಶ್ ಕನೋದಿಯ 316 ಮತಗಳ ಅಂತರದಲ್ಲಿ ಗೆಲುವಿನ ನಗೆ ಬೀರಿದರು.

ತಿರುಪ್ಪತ್ತೂರು: 1 ಮತದಿಂದ ಡಿಎಂಕೆ ಸಚಿವರ ಸೋಲಿಸಿದ ಸೀನಿವಾಸ ಸೇತುಪತಿ

ತಿರುಪತ್ತೂರು: ತಮಿಳುನಾಡಿನ ತಿರುಪ್ಪತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಡಿಎಂಕೆ ಅಭ್ಯರ್ಥಿಯಾಗಿದ್ದ ಸಚಿವ ಕೆ.ಆರ್. ಪೆರಿಯಕರುಪ್ಪನ್ ಕೇವಲ ಒಂದು ಮತದ ಅಂತರದಿಂದ ಸೋಲುಂಡಿದ್ದಾರೆ.

ಚಿತ್ರನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಅಭ್ಯರ್ಥಿ ಶ್ರೀನಿವಾಸ ಸೇತುಪತಿ, ದಶಕಗಳ ಕಾಲದ ರಾಜಕೀಯ ಅನುಭವವಿರುವ ಪೆರಿಯಕರುಪ್ಪನ್ ಅವರನ್ನು 1 ಮತದಿಂದ ಸೋಲಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 1 ಮತದ ಮಹತ್ವ ಎಷ್ಟು ಎಂಬುದನ್ನು ಈ ಫಲಿತಾಂಶ ಎತ್ತಿ ತೋರಿಸುತ್ತದೆ.

ಸೋಮವಾರ ಸಂಜೆವರೆಗೂ ನಡೆದ ಮತ ಎಣಿಕೆ ಪ್ರಕ್ರಿಯೆಯು ಎರಡೂ ಪಕ್ಷಗಳ ಅಭ್ಯರ್ಥಿಗಳು, ಏಜೆಂಟರು, ಕಾರ್ಯಕರ್ತರು ಉಸಿರು ಬಿಗಿಹಿಡಿದು ಕಾಯುವಂತೆ ಮಾಡಿತ್ತು.

ಪೆರಿಯಕುರಪ್ಪನ್-ಶ್ರೀನಿವಾಸ್ ಸೇತುಪತಿ

ಮತ ಎಣಿಕೆಯ ಪ್ರತಿ ಹಂತದಲ್ಲೂ ಪೆರಿಯಕರುಪ್ಪನ್ ಮತ್ತು ಸೀನಿವಾಸ ಸೇತುಪತಿ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಪ್ರತಿ ಸುತ್ತಿನಲ್ಲೂ ಮುನ್ನಡೆ-ಹಿನ್ನಡೆ ಕ್ಷಣಕ್ಷಣಕ್ಕೂ ಬದಲಾಗುತ್ತಿತ್ತು. ಅಂತಿಮ ಸುತ್ತಿನ ಎಣಿಕೆ ಮುಗಿದಾಗ ಇಬ್ಬರ ನಡುವಿನ ವ್ಯತ್ಯಾಸ ಕೇವಲ ಒಂದು ಮತವಾಗಿತ್ತು. ಶ್ರೀ

ಮರು ಎಣಿಕೆ ನಂತರವೂ ಮತಗಳ ಅಂತರದಲ್ಲಿ ಯಾವುದೇ ಬದಲಾವಣೆ ಆಗದ ಕಾರಣ ಶ್ರೀನಿವಾಸ ಸೇತುಪತಿ ಅವರನ್ನು ವಿಜೇತರು ಎಂದು ಘೋಷಿಸಲಾಯಿತು.

'ಒಮ್ಮೆ ಅವರು, ಮತ್ತೊಮ್ಮೆ ಇವರು' ಆಟ ಕೊನೆ, 3ನೇ ಶಕ್ತಿಯಾಗಿ ಅವತರಿಸಿದ ಟಿವಿಕೆ

ಚೆನ್ನೈ: ತಮಿಳುನಾಡು ರಾಜ್ಯದಲ್ಲಿ ಕೆಲವು ದಶಕಗಳ ಹಿಂದೆ ಒಂದೋ ಎಂ.ಕರುಣಾನಿಧಿ ನೇತೃತ್ವದ ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಅಧಿಕಾರ ಹಿಡಿಯಬೇಕು, ಇಲ್ಲವೇ ಎಂ.ಜಿ.ರಾಮಚಂದ್ರನ್ ಅವರು ಸ್ಥಾಪಿಸಿದ ಆಲ್ ಇಂಡಿಯ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ(ಎಐಎಡಿಎಂಕೆ) ಪಕ್ಷ ಅಧಿಕಾರಕ್ಕೇರಬೇಕು ಎಂಬುದು ಅಲಿಖಿತ ನಿಯಮದಂತಾಗಿತ್ತು. ಈ ಬಾರಿ ಡಿಎಂಕೆ ಗೆದ್ದರೆ, ಮುಂದಿನ ಬಾರಿ ಎಐಎಡಿಎಂಕೆ ಗೆದ್ದು ಅಧಿಕಾರಕ್ಕೇರುತ್ತಿತ್ತು.



ಎಂಜಿಆರ್ ನಿರ್ಗಮನ ನಂತರ ಕೆಲಕಾಲ ಪಕ್ಷದ ಚುಕ್ಕಾಣಿ ಹಿಡಿದವರು ಎಂಜಿಆರ್ ಪತ್ನಿ ಜಾನಕಿ, ನಂತರದಲ್ಲಿ ಜಯಲಲಿತಾ. ಆಗಲೂ ಎಂ.ಕರುಣಾನಿಧಿ ಮತ್ತು ಜಯಲಲಿತಾ ನಡುವಿನ ರಾಜಕೀಯ ಸಮರ ಜೋರಾಗಿತ್ತು. ಡಿಎಂಕೆ ಅಥವಾ ಎಐಎಡಿಎಂಕೆ ಎಂಬ ನಿಯಮವೇ ಮುಂದುವರಿದಿತ್ತು. ಒಮ್ಮೆ ಡಿಎಂಕೆ ಗೆದ್ದರೆ, ಮತ್ತೊಂದು ಚುನಾವಣೆಯಲ್ಲಿ ಎಐಎಡಿಎಂಕೆ ಗೆಲ್ಲುತ್ತಿತ್ತು.

ಆದರೆ, ಕರುಣಾನಿಧಿ ಮತ್ತು ಜಯಲಲಿತಾ ನಿರ್ಗಮನದ ನಂತರ ರಾಜ್ಯ ರಾಜಕಾರಣದಲ್ಲಿ ಭಾರೀ ಬದಲಾವಣೆಗಳಾದವು. ಕರುಣಾನಿಧಿ ಪುತ್ರ ಎಂ.ಕೆ. ಸ್ಟಾಲಿನ್ ನೇತೃತ್ವದಲ್ಲಿ ಡಿಎಂಕೆ ತಕ್ಕಮಟ್ಟಿಗೆ ಬಲಿಷ್ಠವಾಗಿ ಮುಂದುವರಿದರೆ, ಜಯಲಲಿತಾ ನಿರ್ಗಮನ ಬಳಿಕ ಎಐಎಡಿಎಂಕೆಗೆ ಸಮರ್ಥ ನಾಯಕತ್ವವಿಲ್ಲದಂತಾಯಿತು. ಎಡಪ್ಪಾಡಿ ಪಳನಿಸ್ವಾಮಿ, ಇ.ಪನ್ನೀರ್‌ಸೆಲ್ವಂ ಮಧ್ಯೆ ನಾಯಕತ್ವಕ್ಕಾಗಿ ಗುದ್ದಾಟ ನಡೆಯುತ್ತಾ ಹೋಗಿ ಎಐಎಡಿಎಂಕೆ ಪಕ್ಷ ಬಡವಾಯಿತು.

3ನೇ ಶಕ್ತಿ: ಕೇರಳದಲ್ಲಿರುವ ಯುಡಿಎಫ್ ಅಥವಾ ಎಲ್‌ಡಿಎಫ್ ಮಾದರಿಯಲ್ಲಿಯೇ ತಮಿಳುನಾಡಿನಲ್ಲಿಯೂ ಡಿಎಂಕೆ ಅಥವಾ ಎಐಎಡಿಎಂಕೆ ಎರಡರಲ್ಲೊಂದು ಪಕ್ಷ ಅಧಿಕಾರಕ್ಕೇರುತ್ತಿದ್ದವು. ಈಗ ಈ ಬಗೆಯ ಅಧಿಕಾರದ ಪಾಳಿ ಬದಲಾವಣೆ ರಾಜಕಾರಣದ ಕಾಲ ಮುಗಿದಿದೆ. ಈಗ ತೃತೀಯ ಶಕ್ತಿಯಾಗಿ ನಟ ವಿಜಯ್ ಅವರ ಟಿವಿಕೆ ಪಕ್ಷ ಜನ್ಮತಾಳಿದೆ. ನಾಯಕ ನಟ ವಿಜಯ್, ರಾಜಕೀಯದಲ್ಲೂ ನಾಯಕನಾಗಿ ಗುರುತಿಸಿಕೊಂಡಿದ್ದಾರೆ. ಜನರೂ ಸಹ ಮೊದಲ ಚುನಾವಣೆಯಲ್ಲಿಯೇ ನಟ ವಿಜಯ್ ಜೋಸೆಫ್‌ಗೆ ಸ್ಪಷ್ಟ ಬಹುಮತವನ್ನು ಕರುಣಿಸಿದ್ದಾರೆ.

ಎರಡು ಪಕ್ಷಗಳಷ್ಟೇ ತಮಿಳುನಾಡು ರಾಜಕಾರಣದಲ್ಲಿ ಮೇಲಾಟ ನಡೆಸಿದ್ದಾಗ ಮೂರನೇ ಆಯ್ಕೆಯಾಗಿ ಜನರಿಗೆ ಟಿವಿಕೆ ಪಕ್ಷವೇ ಇಷ್ಟವಾಗಿದೆ. ಕರೂರಿನ ಕಾಲ್ತುಳಿತ ದುರಂತ, 21 ಜೀವಗಳ ಬಲಿ, ಸಿಬಿಐ ವಿಚಾರಣೆ ಎಲ್ಲವನ್ನೂ ಬದಿಗಿರಿಸಿರುವ ತಮಿಳುನಾಡು ಮತದಾರರು, ನಟ ವಿಜಯ್ ಮತ್ತು ಅವರ ಪಕ್ಷಕ್ಕೆ ತಮಿಳು ಜನರು ಸ್ಪಷ್ಟ ಬಹುಮತ ನೀಡಿ ಇನ್ನೈದು ವರ್ಷ ರಾಜ್ಯಭಾರ ನಡೆಸಿ ಎಂದು ಆದೇಶಿಸಿದ್ದಾರೆ.

ಮನೆ ಕೆಲಸದಾಕೆ ಕಲಿತಾ ಮಾಝಿ ಈಗ ಪಶ್ಚಿಮ ಬಂಗಾಳದ ಶಾಸಕಿ

ಸಂದೇಶಖಾಲಿ ಹಿಂಸಾಚಾರ ಸಂತ್ರಸ್ತೆ ರೇಖಾ ಪಾತ್ರಾಗೆ ಒಲಿದ ಗೆಲುವು

ಸೇಡು ತೀರಿಸಿದ ಆರ್‌ಜಿಕರ್ ಆಸ್ಪತ್ರೆ ವೈದ್ಯೆ ಅತ್ಯಾಚಾರ ಸಂತ್ರಸ್ತೆ ತಾಯಿ

ಕೋಲ್ಕತ್ತ: ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆಯ ಫಲಿತಾಂಶದಲ್ಲಿ ಹಲವು ಅಚ್ಚರಿಯ ಸಂಗತಿಗಳಿವೆ. ಅದರಲ್ಲೊಂದು ಮನೆಗೆಲಸ ಮಾಡಿಯೇ ಹೊಟ್ಟೆ ಹೊರೆಯುತ್ತಿದ್ದ ಬಡ ಮಹಿಳೆ ಬಿಜೆಪಿ ಟಿಕೆಟ್ ಮೇಲೆ ಗೆದ್ದು ಶಾಸಕಿ ಆಗಿರುವುದು ಬಲು ರೋಚಕ ಸಂಗತಿಯಾಗಿದೆ.

ಆಸಾಗ್ರಾಮ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಮನೆಗೆಲಸದ ಮಹಿಳೆ ಗೆದ್ದು ಶಾಸಕಿ ಆಗಿದ್ದಾರೆ.

ಇನ್ನೊಂದೆಡೆ, ಕೋಲ್ಕತ್ತ ಸರಕಾರಿ ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಶ್ವಾಸಕೋಶ ಚಿಕಿತ್ಸಾ ವಿಭಾಗದಲ್ಲಿ ಕಿರಿಯ ವೈದ್ಯೆಯಾಗಿದ್ದು, ರಾತ್ರಿ ಪಾಳಿಯಲ್ಲಿ ರೋಗಿಗಳ ಸೇವೆ ಮಾಡುತ್ತಿದ್ದ ಯುವತಿ ಪೊಲೀಸ್ ಸಹಾಯಕನಿಂದಲೇ ಬರ್ಬರವಾಗಿ ಅತ್ಯಾಚಾರಕ್ಕೊಳಗಾಗಿ ಹತ್ಯೆಯಾಗಿದ್ದಳು. ಆ ಯುವತಿಯ ತಾಯಿಯೂ ಬಿಜೆಪಿ ಟಿಕೆಟ್ ಮೇಲೆ ಸ್ಪರ್ಧೆ ಮಾಡಿ ಸೋಮವಾರ ವಿಜಯ ಪತಾಕೆ ಹಾರಿಸಿದ್ದಾರೆ. ಇವೆರಡೂ ದೇಶಾದ್ಯಂತ ಜನರ ಗಮನ ಸೆಳೆದಿರುವ ಚುನಾವಣಾ ಸುದ್ದಿಗಳಾಗಿವೆ.

ಮನೆಗೆಲಸದಾಕೆ: 4-5 ಮನೆಗಳಲ್ಲಿ ಅಡುಗೆ, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ಕಸ ಗುಡಿಸಿ ನೆಲ ಸಾರಿಸುವ ಕೆಲಸ ಮಾಡುತ್ತ ಮಾಸಿಕ 2,500 ರು. ದುಡಿದು ಆ ಹಣದಲ್ಲೇ ಬದುಕು ಸಾಗಿಸುತ್ತಿದ್ದ 'ಕಲಿತಾ ಮಾಝಿ' ಅವರನ್ನು ಬಿಜೆಪಿ ಆಸಾಗ್ರಾಮ್ ಕ್ಷೇತ್ರದ ಅಭ್ಯರ್ಥಿಯಾಗಿ ಕಣಕ್ಕಿಳಿಸಿತು. ಗುಸ್ಕಾರ ಪುರಸಭೆ ನಿವಾಸಿಯಾದ ಕಲಿತಾ ಮಾಝಿ ಈಗ ಶಾಸಕಿ ಆಗಿದ್ದಾರೆ.

ಕಲಿತಾ ಮಾಝಿ 1,07,692 ಮತಗಳನ್ನು ಪಡೆದು, ಸಮೀಪದ ಪ್ರತಿಸ್ಪರ್ಧಿ, ಟಿಎಂಸಿ ಪಕ್ಷದ ಶ್ಯಾಮ ಪ್ರಸನ್ನ ಲೋಹಾರ್‌ರನ್ನು 12,535 ಮತಗಳಷ್ಟು ದೊಡ್ಡ ಅಂತರದಿಂದ ಸೋಲಿಸಿದ್ದಾರೆ.

2021ರಲ್ಲಿಯೂ ಬಿಜೆಪಿಯಿಂದಲೇ ಚುನಾವಣೆಗೆ ಸ್ಪರ್ಧಿಸಿದ್ದ ಕಲಿತಾ, ತೃಣಮೂಲ ಕಾಂಗ್ರೆಸ್‌ನ ಅಭೇದಾನಂದ ಥಾಂಡರ್ ಎದುರು 11 ಸಾವಿರ ಮತಗಳಿಂದ ಸೋಲು ಕಂಡಿದ್ದರು. ಈಗ 2ನೇ ಯತ್ನದಲ್ಲಿ ಗೆದ್ದು ಶಾಸಕಿ ಆಗಿದ್ದಾರೆ.

ಕಲಿತಾ ಮಾಝಿ ಅವರು ಸ್ಥಳೀಯವಾಗಿ ಹೊಂದಿರುವ ಜನಸಂಪರ್ಕವೇ ಅವರ ಗೆಲುವಿಗೆ ಕಾರಣ ಎನ್ನಲಾಗಿದೆ.

ಸಂತ್ರಸ್ತೆಯ ತಾಯಿ: ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಅತ್ಯಾಚಾರಕ್ಕೊಳಗಾಗಿ ಹತ್ಯೆಯಾದ ಕಿರಿಯ ವೈದ್ಯೆಯ ತಾಯಿ ರತ್ನಾ ದೇಬನಾಥ್ ಅವರನ್ನು ಬಿಜೆಪಿ ಕರೆತಂದು ಬಿಜೆಪಿ ಅಭ್ಯರ್ಥಿಯಾಗಿ ಪಾನಿಹಾಟಿ ಕ್ಷೇತ್ರದಲ್ಲಿ ಕಣಕ್ಕಿಳಿಸಿತ್ತು. ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರೇ ಇವರ ಪರವಾಗಿ ಪ್ರಚಾರ ನಡೆಸಿದ್ದರು. ರತ್ನಾ ದೇಬನಾತ್ 28,836 ಮತಗಳಷ್ಟು ಅಂತರದಿಂದ ಭರ್ಜರಿ ಜಯ ಸಾಧಿಸಿದ್ದಾರೆ. ರತ್ನಾ ಅವರು 87,977 ಮತ ಪಡೆದಿದ್ದರೆ, ಪ್ರತಿಸ್ಪರ್ಧಿ ಘೋಷ್ 59,141 ಮತ ಪಡೆದಿದ್ದಾರೆ.

ರೇಖಾ ಪಾತ್ರಾ: ಸಂದೇಶಖಾಲಿಯಲ್ಲಿ ಟಿಎಂಸಿ ನಾಯಕ ಶೇಖ್ ಷಹಜಹಾನ್ ಹಿಂದೂಗಳ ಭೂಮಿ ಅತಿಕ್ರಮಣ ನಡೆಸುತ್ತಾ ಬಂದಿದ್ದ. ಅದನ್ನು ವಿರೋಧಿಸಿದ ಕುಟುಂಬಗಳ ಮಹಿಳೆಯರನ್ನು ಷಹಜಹಾನ್‌ನ ಅನುಚರ ಗೂಂಡಾಗಳು ಹೊತ್ತೊಯ್ದು ಅತ್ಯಾಚಾರ ನಡೆಸುತ್ತಿದ್ದರು. ಇದು 'ಸಂದೇಶಖಾಲಿ ಹಿಂಸಾಚಾರ' ಎಂದೇ ಕುಖ್ಯಾತವಾಗಿತ್ತು. ಈ ಹಿಂಸಾಚಾರದ ಸಂತ್ರಸ್ತ ಗೃಹಿಣಿ ರೇಖಾ ಪಾತ್ರಾ, ಹಿಂದೂ ಮಹಿಳೆಯರ ಮೇಲಾಗುತ್ತಿದ್ದ ಹಿಂಸಾ ಪ್ರಕರಣಗಳ ವಿರುದ್ಧ ಧ್ವನಿ ಎತ್ತಿ ಪುಟ್ಟ ಮಗಳನ್ನು ಎತ್ತಿಕೊಂಡೇ ಪ್ರತಿಭಟನೆ ನಡೆಸಿದ್ದರು. ಇವರೂ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿ 5,421 ಮತಗಳ ಅಂತರದಿಂದ ಗೆದ್ದು, ಶಾಸಕಿಯಾಗಿದ್ದಾರೆ. ರೇಖಾ 1,00,207 ಮತ ಪಡೆದರೆ, ಟಿಎಂಸಿ ಅಭ್ಯರ್ಥಿ ಸರ್ಕಾರ್ 94,786 ಮತ ಪಡೆದಿದ್ದಾರೆ.

ಸಮಾಚಾರ ಸಣ್ಣದಲ್ಲ

ಗುಂತಕಲ್-ವಾಡಿ ರೈಲು ಮಾರ್ಗಕ್ಕೆ ಒಪ್ಪಿಗೆ

ದೆಹಲಿ: ಗುಂತಕಲ್-ವಾಡಿ ನಡುವೆ 3 ಹಾಗೂ 4ನೇ ರೈಲು ಮಾರ್ಗ ನಿರ್ಮಾಣ ಸೇರಿದಂತೆ ಮೂರು ರೈಲ್ವೆ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿದೆ. ಮೂರು ಯೋಜನೆಗಳ ಕಾಮಗಾರಿಗಳಿಗೆ 23,437 ಕೋಟಿ ರು. ವೆಚ್ಚ ಆಗಲಿದೆ. ಈ ಮಾರ್ಗಗಳ ಕಾಮಗಾರಿ 2030-31ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಈ ಮಾರ್ಗಗಳು ಕರ್ನಾಟಕ, ಆಂಧ್ರ, ತೆಲಂಗಾಣ, ಉತ್ತರ ಪ್ರದೇಶ, ರಾಜಸ್ಥಾನ ಹಾಗೂ ಮಧ್ಯಪ್ರದೇಶಗಳ 19 ಜಿಲ್ಲೆಗಳ ಮೂಲಕ ಹಾದು ಹೋಗಲಿವೆ. ಇಂಡಿಯಾ ಸೆಮಿಕಂಡಕ್ಟರ್ ಮಿಷನ್ ಅಡಿಯಲ್ಲಿ ಮತ್ತೆರಡು ಸೆಮಿಕಂಡಕ್ಟರ್ ಯೋಜನೆಗಳಿಗೆ ಸಂಪುಟ ಅನುಮೋದನೆ ನೀಡಿದೆ. ಈ ಮೂಲಕ, ದೇಶದಲ್ಲಿ ಸೆಮಿಕಂಡಕ್ಟರ್ ಯೋಜನೆಗಳ ಸಂಖ್ಯೆ 12 ಆಗಲಿದೆ. ಹೊಸ ಯೋಜನೆಗಳೆರಡು ಗುಜರಾತ್‌ನಲ್ಲಿ ಸ್ಥಾಪನೆಯಾಗಲಿವೆ. 3,963 ಕೋಟಿ ರು. ಹೂಡಿಕೆಯ ಈ ಯೋಜನೆಗಳಿಂದ 2,230 ಉದ್ಯೋಗಗಳು ಸೃಷ್ಟಿಯಾಗಲಿವೆ.

ಟಿಎಂಸಿ ಕಚೇರಿಗಳ ಮೇಲೆ ದಾಳಿ

ಕೋಲ್ಕತ್ತ: ಬಿಜೆಪಿ ಕಾರ್ಯಕರ್ತರು ಸೋಮವಾರ ಪಶ್ಚಿಮ ಬಂಗಾಳದಾದ್ಯಂತ ಗೆಲುವಿನ ಸಂಭ್ರಮ ಆಚರಿಸಿದ ಸಂದರ್ಭದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಕಚೇರಿಗಳಿಗೆ ಬೆಂಕಿ ಹಚ್ಚಿದ ಮತ್ತು ಧ್ವಂಸಗೊಳಿಸಿದ ಘಟನೆಗಳು ವರದಿಯಾಗಿವೆ. ಕೋಲ್ಕತ್ತದ ಟಾಲಿಗಂಜ್ ಮತ್ತು ಕಸ್ಬಾ, ನಗರದ ಹೊರವಲಯದ ಬರುಯ್ಪುರ, ಕಮರ್ಹಾಟಿ, ಬಾರಾನಗರ್ ಮತ್ತು ಹೌರಾ ಹಾಗೂ ಬರಾಮ್ಪುರದಲ್ಲಿ ಟಿಎಂಸಿ ಕಚೇರಿಗಳ ಮೇಲೆ ಸೋಮವಾರ ಮಧ್ಯಾಹ್ನದ ಬಳಿಕ ದಾಳಿ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಚೇರಿ ಮೇಲಿನ ದಾಳಿಯ ಘಟನೆಗಳನ್ನು ಖಂಡಿಸಿರುವ ಟಿಎಂಸಿ, ಬಿಜೆಪಿಯು ಅಧಿಕಾರಕ್ಕೆ ಬಂದ ಕೂಡಲೇ ತನ್ನ ನಿಜ ಬಣ್ಣ ತೋರಿಸಿದೆ ಎಂದು ಟೀಕಿಸಿದೆ.

6 ರಾಜ್ಯಸಭೆ ಸಂಸದರ ಸದಸ್ಯತ್ವ ರದ್ದತಿಗೆ ಮನವಿ

ಚಂಡೀಗಢ: ಬಿಜೆಪಿಗೆ ಸೇರ್ಪಡೆಯಾಗಿರುವ ರಾಜ್ಯಸಭೆಯ ಆರು ಮಂದಿ ಎಎಪಿ ಸದಸ್ಯರ ಸದಸ್ಯತ್ವ ರದ್ದು ಮಾಡುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್

ಮಂಗಳವಾರ ಮನವಿ ಮಾಡಿದ್ದಾರೆ. ಅಲ್ಲದೇ, ಪಕ್ಷಾಂತರ ಮಾಡಿದ ಸದಸ್ಯರನ್ನು ಅಧಿಕಾರದಿಂದ ತೆಗೆದುಹಾಕುವುದಕ್ಕೆ ಸಂಬಂಧಿಸಿದ ಅವಕಾಶವನ್ನು ಸಂವಿಧಾನದಲ್ಲಿ ಸೇರಿಸುವಂತೆಯೂ ಅವರು ಒತ್ತಾಯಿಸಿದ್ದಾರೆ. ಆಮ್ ಆದ್ಮಿ ಪಕ್ಷದ(ಎಎಪಿ) ಶಾಸಕರೊಂದಿಗೆ ದೆಹಲಿಗೆ ತೆರಳಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ಈ ಕುರಿತು ಅವರು ಮನವಿ ಸಲ್ಲಿಸಿದ್ದಾರೆ. ರಾಜ್ಯಸಭೆಯಲ್ಲಿ ಎಎಪಿಯ 10 ಸದಸ್ಯರು ಇದ್ದರು. ಈ ಪೈಕಿ ರಾಘವ್ ಚಡ್ಡಾ, ಅಶೋಕ್ ಮಿತ್ತಲ್, ಹರಭಜನ್ ಸಿಂಗ್, ಸಂದೀಪ್ ಪಾಠಕ್, ರಾಜೇಂದ್ರ ಗುಪ್ತ, ವಿಕ್ರಮಿತ್ ಸಾಹ್ನಿ ಹಾಗೂ ಸ್ವಾತಿ ಮಾಲಿ ವಾಲ್ ಇತ್ತೀಚೆಗೆ ಎಎಪಿ ತೊರೆದು ಬಿಜೆಪಿ ಸೇರಿ ದ್ದಾರೆ. ಇವರಲ್ಲಿ 6 ಸಂಸದರು ಪಂಜಾಬ್‌ನಿಂದ ಆಯ್ಕೆಯಾದವರು.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 26 ಜನ ಸಾವು

ಬೀಜಿಂಗ್: ಚೀನಾದ ಹುನಾನ್ ಪ್ರಾಂತ್ಯದ ಲಿಯುಯಾಂಗ್ ನಗರದ ಪಟಾಕಿ ತಯಾರಿಕಾ ಕಾರ್ಖಾನೆಯೊಂದರಲ್ಲಿ ಸಂಭವಿಸಿದ ಭೀಕರ ಸ್ಫೋಟದಲ್ಲಿ 26 ಮಂದಿ ಮೃತಪಟ್ಟಿದ್ದು, 61ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಗುವಾಂಡು ಪಟ್ಟಣದಲ್ಲಿರುವ ಲಿಯುಯಾಂಗ್ ಹುವಾಶೆಂಗ್ ಪಟಾಕಿ ತಯಾರಿಕಾ ಘಟಕದಲ್ಲಿ ಸೋಮವಾರ ಸಂಜೆ 5 ಗಂಟೆ ಸುಮಾರಿಗೆ ಈ ಅವಘಡ ಸಂಭವಿಸಿದೆ. ಸ್ಫೋಟದ ತೀವ್ರತೆಗೆ ಕಾರ್ಖಾನೆಯ ಕಟ್ಟಡ ನೆಲಸಮವಾಗಿದ್ದು, ಇದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ಆತಂಕ ಸೃಷ್ಟಿಯಾಗಿತ್ತು. ವಿಷಯ ತಿಳಿಯುತ್ತಿದ್ದಂತೆಯೇ ಅಗ್ನಿಶಾಮಕ ದಳ ಮತ್ತು ತುರ್ತು ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿ ಕಾರ್ಯಾಚರಣೆ ನಡೆಸಿದವು. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ.

ಹಳೇ ವೈಷಮ್ಯ ಮೂವರ ಮೇಲೆ ತಲ್ವಾರ್ ದಾಳಿ

ಬೆಳಗಾವಿ: ಇಲ್ಲಿನ ಅಮನ್ ನಗರದಲ್ಲಿ ಮೂವರು ಯುವಕರ ಮೇಲೆ ದುಷ್ಕರ್ಮಿಗಳು ತಲ್ವಾರ್ ದಾಳಿ ನಡೆಸಿದ್ದಾರೆ. ಹಳೇ ವೈಷಮ್ಯ ಹಿನ್ನೆಲೆ ಈ ದಾಳಿ ನಡೆದಿದೆ ಎನ್ನಲಾಗಿದೆ. ದಾಳಿಗೊಳಗಾದವರನ್ನು ನಗರದ ವಲಿ ಶೇಖ್, ಇಮಾಮ್ ಶೇಖ್ ಮತ್ತು ಮಜೀದ್ ಶೇಖ್ ಎಂದು ಗುರುತಿಸಲಾಗಿದೆ. ಗಾಯಾಳುಗಳನ್ನು ಬೆಳಗಾವಿಯ ಬೀಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಮಾಳಮಾರುತಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಗಾಯಾಳುಗಳ ಕುಟುಂಬಸ್ಥರು ಆರೋಪಿಗಳ ಬಂಧನಕ್ಕೆ ಆಗ್ರಹಿಸಿದ್ದಾರೆ. ಮಾಳಮಾರುತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

{ **ಸಂತೋಷ್ ಲಾಡ್** } ಸಚಿವ

ಪಂಚರಾಜ್ಯ ಚುನಾವಣೆ ಫಲಿತಾಂಶದಲ್ಲಿ ಸರ್‌ಪ್ರೈಸ್ ಆಗಿರೋದು ತಮಿಳುನಾಡಿನಲ್ಲಿ ವಿಜಯ್ ಗೆಲುವು. 35% ಮತಗಳನ್ನು ಪಡೆದಿದ್ದಾರೆ. ವಿಜಯ್‌ಗೆ ಆಲ್ ದಿ ಬೆಸ್ಟ್. ಒಂದು ವರ್ಷದಲ್ಲಿ ಸಿಂಪಲ್ ಮೆಜಾರಿಟಿ ಬಂದಿದೆ. ಟಿವಿಕೆ ಜತೆ ಮೈತ್ರಿ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡುತ್ತದೆ.

ಜಮೀರ್, ರಿಜ್ವಾನ್, ಸಲೀಂಗೆ ಗೆಲವು, ಸೋಲಿನ ರೀತಿಯ ಬೇಸರದಲ್ಲಿ ಪಕ್ಷದ ಕಾರ್ಯಕರ್ತರು

ಕೈಜಾರಿದ ಅಲ್ಪಸಂಖ್ಯಾತರ ಮತ, ಕೈಗೆ ನೋವು

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯದಲ್ಲಿ ಸರಕಾರ ಮತ್ತು ಪಕ್ಷಕ್ಕೆ ತೀರಾ ಆತಂಕ ತಂದಿದ್ದ ದಾವಣಗೆರೆ ದಕ್ಷಿಣ ಉಪಚುನಾವಣೆಯಲ್ಲಿ ಕಾಂಗ್ರೆಸ್ ಜಯ ಸಾಧಿಸಿದ್ದರೂ ಅದರ ಸಂಭ್ರಮ ಮಾತ್ರ ಕಾಣುತ್ತಿಲ್ಲ. ಅಷ್ಟೇ ಏಕೆ, ಕೇರಳದಲ್ಲಿ ತನ್ನದೇ ನೇತೃತ್ವದ ಯುಡಿಎಫ್

ಜಯ ಸಾಧಿಸಿರುವುದಕ್ಕೆ ಇರುವ ಸಂಭ್ರಮ ಕೂಡ ರಾಜ್ಯದಲ್ಲಿನ ಉಪ ಸಮರದಲ್ಲಿ ಸಿಕ್ಕಿರುವ ಗೆಲುವಿಗೆ ಲಭಿಸುತ್ತಿಲ್ಲ. ಕಾರಣ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಸಿಕ್ಕಿದ ಪ್ರಯಾಸದ ಗೆಲುವು.

ಅಷ್ಟೇ ಅಲ್ಲ, ಕಳೆದ ಮೂರು ವರ್ಷಗಳ ಹಿಂದೆ ನಡೆದಿದ್ದ ಚುನಾವಣೆಗೆ ಹೋಲಿಸಿದರೆ ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಸುಮಾರು 25,000 ಮತಗಳನ್ನು ಕಳೆದುಕೊಂಡಿದೆ. ಕಳೆದ ಬಾರಿಗೆ ಹೋಲಿಸಿದರೆ ಸುಮಾರು 22,000 ಮತಗಳ ಲೀಡ್ ಅನ್ನು ಕಳೆದುಕೊಂಡಿದೆ. ಹೀಗಾಗಿ ಕಾಂಗ್ರೆಸ್ ಬರೀ ದಾಖಲೆಯಲ್ಲಿ ಗೆದ್ದಿದ್ದರೂ ವಾಸ್ತವದಲ್ಲಿ ಸೋತಷ್ಟೇ ಬೇಸರದಲ್ಲಿದೆ ಎಂದು ಹೇಳಲಾಗುತ್ತಿದೆ.

ಕಾಂಗ್ರೆಸ್ ಹಿರಿಯ ನಾಯಕರ ಪ್ರಕಾರ, ಎರಡೂ ಉಪ ಚುನಾವಣೆಗಳ ಪೈಕಿ ಬಾಗಲಕೋಟೆ ಉಪಚುನಾವಣೆಯಲ್ಲಿ ಲಭಿಸಿರುವ ಗೆಲುವಿಗೆ ಕೈ ಪಕ್ಷಕ್ಕೆ ಕೊಂಚ ಸಮಾಧಾನವಾದರೂ ಇದೆ. ಆದರೆ ದಾವಣಗೆರೆ ವಿಚಾರದಲ್ಲಿ ತೀರಾ ಬೇಸರ ಇರುವುದು ವ್ಯಕ್ತವಾಗಿದೆ. ಅಂದರೆ ಉಪಚುನಾವಣೆಯಲ್ಲಿ ಸಚಿವ ಜಮೀರ್ ಅಹಮ್ಮದ್ ಖಾನ್ ಅವರು ಭಾಗಶಃ ಜಯ ಸಾಧಿಸಿದ್ದು, ಶಾಸಕರಾದ ರಿಜ್ವಾನ್ ಅರ್ಷದ್ ಹಾಗೂ ಸಲೀಂ ಅಹಮ್ಮದ್ ಅವರು ಪಕ್ಷವನ್ನು ಸೋಲಿನ ದವಡೆಯಿಂದ ತಪ್ಪಿಸಿದ ರಕ್ಷಕರು ಎನಿಸಿಕೊಂಡಿದ್ದಾರೆ.

ಅಂದರೆ ಚುನಾವಣೆ ಸಂದರ್ಭದಲ್ಲಿ ನಡೆದಿದ್ದ ಟಿಕೆಟ್ ರಾಜಕಾರಣದಲ್ಲಿ ಸಚಿವ ಜಮೀರ್ ಅವರು ಟಿಕೆಟ್‌ಗಾಗಿ ದನಿ ಎತ್ತಿದ್ದು, ನಂತರ ಪ್ರಚಾರದಲ್ಲಿ ಅಷ್ಟಾಗಿ ಕಾಣಿಸಿಕೊಳ್ಳದಿರುವುದು, ನಂತರ ಜಮೀರ್ ವಿರುದ್ಧ ಶಾಸಕರಾದ ಸಲೀಂ ಅಹಮ್ಮದ್ ಹಾಗೂ ರಿಜ್ವಾನ್ ಅವರು ಪಕ್ಷದ ನಾಯಕರಿಗೆ ದೂರು ಸಲ್ಲಿಸಿದ್ದು, ನಂತರ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ಮತಗಳ ಹೊಣೆ ಹೊತ್ತಿದ್ದು ಸೇರಿದಂತೆ ಕ್ಷೇತ್ರದಲ್ಲಿ ಉಂಟಾಗಿದ್ದ ಗೊಂದಲ ಕಾಂಗ್ರೆಸ್‌ಗೆ ಸಾಕಷ್ಟು ಡ್ಯಾಮೇಜ್ ಮಾಡಿದೆ ಎಂದು ಪಕ್ಷ ನಾಯಕರೇ ಹೇಳಿದ್ದಾರೆ.

25,000 ಮತ ಯಾರಿಂದ ಕೈ ತಪ್ಪಿದೆ?

ದಾವಣಗೆರೆ ಉಪಚುನಾವಣೆಯಲ್ಲಿ ನಡೆದಿರುವ ಮತದಾನ ಪ್ರಮಾಣಗಳನ್ನು ಗಮನಿಸಿದರೆ, ಅಲ್ಪಸಂಖ್ಯಾತರು ಹೆಚ್ಚಾಗಿರುವ ನಗರ ಪ್ರದೇಶದಲ್ಲಿ ಮತದಾನ ಪ್ರಮಾಣ ಕಡಿಮೆಯಾಗಿದೆ. ಅಂದರೆ ಒಟ್ಟಾರೆ ಮತದಾನ ಶೇ.68ರಷ್ಟಿದ್ದರೆ, ನಗರ ಪ್ರದೇಶದಲ್ಲಿ ಶೇ.52ರಷ್ಟಿದೆ. ಅಂದರೆ ಸುಮಾರು ಶೇ.30ರಷ್ಟು ಮತದಾನ ಕಡಿಮೆಯಾಗಿದೆ. ಇದರ ಮಧ್ಯೆ, ಕಳೆದ ಚುನಾವಣೆಯಲ್ಲಿ ಕೇವಲ 1311 ಮತಗಳನ್ನು (ಶೇ.0.90) ಪಡೆದಿದ್ದ ಎಸ್ ಡಿಪಿಐ ಈ ಬಾರಿ 18,975 ಮತಗಳನ್ನು ಪಡೆದಿದೆ. ಅಂದರೆ 17,664 ಮತಗಳನ್ನು ಹೆಚ್ಚಾಗಿ ಗಳಿಸಿದೆ. ಅಷ್ಟಕ್ಕೂ ಈ ಪಕ್ಷದ ಅಭ್ಯರ್ಥಿ ದಾವಣಗೆರೆ ಮೂಲದವರಲ್ಲ. ತೀರಾ ಹಿಂದಿನಿಂದ ಕ್ಷೇತ್ರದಲ್ಲಿ ಕೆಲಸ ಮಾಡಿದವರೂ ಅಲ್ಲ ಎನ್ನಲಾಗಿದೆ.

ಇನ್ನು ಕಳೆದ ಬಾರಿ ಕಾಂಗ್ರೆಸ್‌ನ ಶ್ಯಾಮನೂರು ಶಿವಶಂಕರಪ್ಪ, 27,888 ಮತಗಳ ಅಂತರದಲ್ಲಿ ಜಯ ಸಾಧಿಸಿದ್ದರು. ಆದರೆ ಆ ಬಾರಿ ಕಾಂಗ್ರೆಸ್‌ನ ಸಮರ್ಥ್ ಕೇವಲ 5,708 ಮತಗಳ ಲೀಡ್‌ನಲ್ಲಿ ಪ್ರಯಾಸದ ಗೆಲುವು ಸಾಧಿಸಿದ್ದಾರೆ. ಅಂದರೆ ಕಳೆದ ಚುನಾವಣೆಗೆ ಹೋಲಿಸಿದರೆ, ಸುಮಾರು 22,180 ಮತಗಳನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಇನ್ನೊಂದು ಅಚ್ಚರಿ ಎಂದರೆ ಕ್ಷೇತ್ರದಲ್ಲಿ ಕಳೆದ ಬಾರಿಗಿಂತ ಬಿಜೆಪಿ ಈ ಬಾರಿ 17,664 ಮತಗಳನ್ನು ಹೆಚ್ಚಾಗಿ ಪಡೆದಿದ್ದು, ಇವು ಕಾಂಗ್ರೆಸ್ ಮತಗಳು ಎನ್ನಲಾಗಿದೆ. ಇವೆರಡನ್ನೂ ಕ್ರೂಢೀಕರಿಸಿದರೆ ಕಾಂಗ್ರೆಸ್ ಸುಮಾರು 25ಸಾವಿರಕ್ಕೂ ಹೆಚ್ಚು ಮತಗಳನ್ನು ಕಾಂಗ್ರೆಸ್ ಕಳೆದುಕೊಂಡಂತಾಗಿದೆ ಎಂದು ಕಾಂಗ್ರೆಸ್ ನಾಯಕರು ಲೆಕ್ಕಾಚಾರ ಹಾಕುತ್ತಿದ್ದಾರೆ.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಎಡವಟ್ಟಿನ ಎಫೆಕ್ಟ್

ಇದರ ಮಧ್ಯೆ, ಈ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸುಮಾರು 25000ಕ್ಕೂ ಹೆಚ್ಚಿನ ಮತಗಳು ಕೈ ತಪ್ಪಿದ್ದರೂ ಸಚಿವ ಮಲ್ಲಿಕಾರ್ಜುನ್ ಅವರು ಕಾಂಗ್ರೆಸ್‌ಗೆ ಅಲ್ಪಸಂಖ್ಯಾತರ ಮತಗಳು ಕಡಿಮೆಯಾಗಿಲ್ಲ. ಹೆಚ್ಚಾಗಿಯೇ ಬಂದಿವೆ ಎಂದು ಹೇಳಿರುವುದಕ್ಕೆ ಆ ಸಮುದಾಯದ ಸ್ಥಳೀಯ ಮುಖಂಡರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಮುಸಿಮುಸಿ ನಗುತ್ತಿದ್ದಾರೆ. ಏಕೆಂದರೆ, ಆರಂಭದಲ್ಲಿ ದಾವಣಗೆರೆ ರಾಜಕಾರಣದಲ್ಲಿ ಹಸ್ತಕ್ಷೇಪ ಮಾಡಲು ಜಮೀರ್ ಯಾರು ಎಂದಿದ್ದು ಮತ್ತು ಅವರು ಬಾರದಿದ್ದರೆ ಏನೂ ಆಗಲ್ಲ ಎನ್ನುವ ಧಾಟಿಯಲ್ಲಿ ಸಚಿವ ಜಮೀರ್ ಅವರನ್ನು ಟೀಕಿಸಿದ್ದು, ಅಲ್ಪಸಂಖ್ಯಾತರ ಸಮುದಾಯದಲ್ಲಿ ತೀರಾ ಬೇಸರಕ್ಕೆ ಕಾರಣವಾಗಿತ್ತು. ನಂತರದಲ್ಲಿ ಮಲ್ಲಿಕಾರ್ಜುನ್ ಭೋಜನಕೂಟದ ಮೂಲಕ ದೋಸ್ತಿ ಮೆರೆದಿದ್ದು ಅಷ್ಟಾಗಿ ಕೆಲಸ ಮಾಡಿಲ್ಲ ಎನ್ನಲಾಗಿದೆ. ಹೀಗಾಗಿ ಟಿಕೆಟ್ ರಾಜಕಾರಣ, ಅಲ್ಪಸಂಖ್ಯಾತರ ನಾಯಕತ್ವ ಪ್ರಯತ್ನ ಹಾಗೂ ಸಚಿವ ಮಲ್ಲಿಕಾರ್ಜುನ್ ಹೇಳಿಕೆಗಳ ಪರಿಣಾಮ ಚುನಾವಣಾ ಫಲಿತಾಂಶದಲ್ಲಿ ವ್ಯಕ್ತವಾಗಿದೆ ಎಂದು ಪಕ್ಷದ ನಾಯಕರು ವಿಶ್ಲೇಷಿಸುತ್ತಿದ್ದಾರೆ.

ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ಸುಪ್ರೀಂಕೋರ್ಟ್ ನ್ಯಾಯಾಧೀಶರ ಸಂಖ್ಯೆ 33ರ ಬದಲಿಗೆ 37ಕ್ಕೆ ಹೆಚ್ಚಳ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಹಲವಾರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಾಧೀಶರ ಸಂಖ್ಯೆಯಲ್ಲಿ ಹೆಚ್ಚಳಕ್ಕೆ ಸಂಪುಟ ಅನುಮೋದನೆ ನೀಡಿದ್ದು, ಸುಪ್ರೀಂಕೋರ್ಟ್ ಈಗ 33ರ ಬದಲಿಗೆ 37 ನ್ಯಾಯಾಧೀಶರನ್ನು ಹೊಂದಿರುತ್ತದೆ. ಸುಮಾರು ಆರು ವರ್ಷಗಳ ನಂತರ ಈ ನಿರ್ಧಾರ ಬಂದಿದೆ. 2019ರಲ್ಲಿ ಸಂಖ್ಯೆಯನ್ನು 31 ರಿಂದ 33ಕ್ಕೆ ಹೆಚ್ಚಿಸಲಾಯಿತು.

ಸರ್ವೋಚ್ಚ ನ್ಯಾಯಾಲಯವನ್ನು ಮತ್ತಷ್ಟು ಬಲಪಡಿಸುವುದು ಮತ್ತು ನ್ಯಾಯಾಂಗ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದು ಗುರಿಯಾಗಿದೆ ಎಂದು ಸರಕಾರ ಹೇಳಿದೆ. ವರದಿಗಳ ಪ್ರಕಾರ, ಪ್ರಸ್ತುತ ಸುಪ್ರೀಂಕೋರ್ಟ್‌ನಲ್ಲಿ 92,000ಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಉಳಿದಿವೆ. ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸಂಪುಟ ನಿರ್ಧಾರವನ್ನು ಪ್ರಕಟಿಸಿದರು. ಸುಪ್ರೀಂಕೋರ್ಟ್ ಪ್ರಸ್ತುತ 33 ನ್ಯಾಯಾಧೀಶರು ಮತ್ತು ಸಿಜೆಐ ಒಬ್ಬರನ್ನು ಹೊಂದಿದೆ.

ಸಂಪುಟ ಮಂಡಳಿಯ ಅನುಮೋದನೆಯ ನಂತರ, ಮುಂಬರುವ ಸಂಸತ್ತಿನ ಅಧಿವೇಶನದಲ್ಲಿ ಸಂಬಂಧಿತ ಮಸೂದೆಯನ್ನು ಪರಿಚಯಿಸಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಇದರ ಅಂಗೀಕಾರವು ನ್ಯಾಯಾಧೀಶರ ಸಂಖ್ಯೆಯನ್ನು 37ಕ್ಕೆ ಹೆಚ್ಚಿಸುತ್ತದೆ. ಈ ಸರಕಾರದ ನಿರ್ಧಾರವು ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳ ವಿಲೇವಾರಿಗೆ ಅನುಕೂಲವಾಗಲಿದೆ. ಸುಪ್ರೀಂಕೋರ್ಟ್ ಪ್ರಸ್ತುತ ದೊಡ್ಡ ಪ್ರಮಾಣದ ಪ್ರಕರಣಗಳನ್ನು ಎದುರಿಸುತ್ತಿದೆ. ಇದು ನ್ಯಾಯಾಂಗ ಪ್ರಕ್ರಿಯೆಯಲ್ಲಿ ವಿಳಂಬಕ್ಕೆ

ಕಾರಣವಾಗುತ್ತದೆ. ನ್ಯಾಯಾಧೀಶರ ಸಂಖ್ಯೆ ಕಾಯ್ದೆ, 1956 ಅನ್ನು ಮೂಲತಃ ಮುಖ್ಯ ನ್ಯಾಯಾಧೀಶರನ್ನು ಹೊರತುಪಡಿಸಿ 10 ನ್ಯಾಯಾಧೀಶರಿಗೆ ಒದಗಿಸ ಲಾಗಿತ್ತು ಎಂಬುದು ಗಮನಾರ್ಹ. 1960ರಲ್ಲಿ ಇದನ್ನು 13ಕ್ಕೆ ಹೆಚ್ಚಿಸಲಾಯಿತು, ನಂತರ 17ಕ್ಕೆ ಹೆಚ್ಚಿಸಲಾಯಿತು. 1986ರಲ್ಲಿ ನ್ಯಾಯಾಧೀಶರ ಸಂಖ್ಯೆಯನ್ನು 25ಕ್ಕೆ ಹೆಚ್ಚಿಸಲಾಯಿತು. 2009ರಲ್ಲಿ ಅದನ್ನು 30ಕ್ಕೆ ಹೆಚ್ಚಿಸಲಾಯಿತು. ನ್ಯಾಯಾಂಗ ವನ್ನು ಬಲಪಡಿಸುವ ನಿಟ್ಟಿನಲ್ಲಿ ಸಚಿವ ಸಂಪುಟದ ನಿರ್ಧಾರವು ಮಹತ್ವದ ಹೆಜ್ಜೆಯನ್ನು ಸೂಚಿಸುತ್ತದೆ.

ಸುಪ್ರೀಂಕೋರ್ಟ್‌ನಲ್ಲಿರುವ ಒಟ್ಟು ನ್ಯಾಯಾಧೀಶರ ಸಂಖ್ಯೆಯನ್ನು ಭಾರತೀಯ ಸಂವಿಧಾನದಲ್ಲಿ ನಿಗದಿಪಡಿಸಲಾಗಿಲ್ಲ ಎಂಬುದು ಗಮನಾರ್ಹ. ಸಂವಿಧಾನದ 124(1) ನೇ ವಿಧಿಯ ಅಡಿಯಲ್ಲಿ, ಮುಖ್ಯ ನ್ಯಾಯಾಧೀಶರನ್ನು ಹೊರತುಪಡಿಸಿ ನ್ಯಾಯಾಧೀಶರ ಸಂಖ್ಯೆಯನ್ನು ಸಂಸತ್ತು ನಿರ್ಧರಿಸುತ್ತದೆ. ಕಾಲಕಾಲಕ್ಕೆ ಹೆಚ್ಚುತ್ತಿರುವ ಪ್ರಕರಣಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, ಇದನ್ನು ಹಲವಾರು ಬಾರಿ ಬದಲಾಯಿಸಲಾಗಿದೆ.

ವೈದ್ಯ ಕ್ಷೇತ್ರದಲ್ಲಿ ಎಐನಿಂದ ಕ್ರಾಂತಿಕಾರಿ ಬದಲಾವಣೆ: ಡಾ. ಸುಜಾತ ರಾಥೋಡ್

ಬೆಂಗಳೂರು: ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಒಂದು ಕ್ರಾಂತಿಕಾರಿ ಬದಲಾವಣೆಯನ್ನು ತರುತ್ತಿದೆ. ಇದು ರೋಗನಿರ್ಣಯ, ಚಿಕಿತ್ಸೆ ಮತ್ತು ರೋಗಿಗಳ ಆರೈಕೆಯನ್ನು ಹೆಚ್ಚು ನಿಖರ ಮತ್ತು ಪರಿಣಾಮಕಾರಿಯನ್ನಾಗಿ ಮಾಡುತ್ತಿದೆ ಎಂದು ವೈದ್ಯಕೀಯ ನಿರ್ದೇಶನಾಲಯದ ನಿರ್ದೇಶಕಿ ಡಾ.ಬಿ.ಎಲ್.ಸುಜಾತ ರಾಥೋಡ್ ತಿಳಿಸಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಶುಶ್ರೂಷ ಕಾಲೇಜು ವತಿಯಿಂದ ಇನ್ಫೋಸಿಸ್ ಸಭಾಂಗಣದಲ್ಲಿ ಮಂಗಳವಾರ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಡಿಜಿಟಲ್ ವಲಯದಲ್ಲಿ ಕಲಿಕೆಗೆ ಅವಕಾಶಗಳಿವೆ. ಬದಲಾದ ತಾಂತ್ರಿಕ ಜಗತ್ತಿಗೆ ಅನುಗುಣವಾಗಿ ತಾಂತ್ರಿಕ ಜ್ಞಾನ ವೃದ್ಧಿ ಮಾಡಿಕೊಳ್ಳಬೇಕು. ವೈದ್ಯಕೀಯ ವಲಯದಲ್ಲಿ ಸಂಶೋಧನೆ, ಕಲಿಕೆಗೆ ಆದ್ಯತೆ ನೀಡುವ ಮೂಲಕ ಉತ್ತಮ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳಬಹುದಾಗಿದೆ ಎಂದರು.

ಶುಶ್ರೂಷಕ ವೃತ್ತಿ ಎಂದರೆ ತಾಯಿ ಮಗುವನ್ನು ಆರೈಕೆ ಮಾಡುವ ರೀತಿ. ರೋಗಿಗಳ ಆರೈಕೆ ಮತ್ತು ಚಿಕಿತ್ಸೆಯಲ್ಲಿ ಶುಶ್ರೂಷಕರ ಪಾತ್ರ ದೊಡ್ಡದು. ಅತಿ ಶ್ರೇಷ್ಠ ಸೇವೆಯಾದ ಶುಶ್ರೂಷಕ ಕಾಯಕವನ್ನು ಶ್ರದ್ಧೆಯಿಂದ ನಿರ್ವಹಿಸಿದರೆ ಅದುವೇ ನಿಜವಾದ ದೈವ ಪೂಜೆ. ವೃತ್ತಿಯನ್ನು ಬದ್ಧತೆ ಹಾಗೂ ನಿಷ್ಠೆಯಿಂದ ನಿರ್ವಹಿಸಬೇಕು. ರೋಗಿಗಳಿಗೆ ಪ್ರತಿಯೊಂದು ಚಿಕಿತ್ಸಾ ಹಂತದಲ್ಲೂ ಶುಶ್ರೂಷಕರ ಪಾತ್ರ ದೊಡ್ಡದು. ವೈದ್ಯಕೀಯ ಕ್ಷೇತ್ರದಲ್ಲಿ ಶುಶ್ರೂಶಕರಿಗೆ ಮಹತ್ವದ ಪಾತ್ರವಿದೆ. ರೋಗಿಗಳ ತ್ವರಿತ ಚೇತರಿಕೆಯಲ್ಲಿ ನರ್ಸ್‌ಗಳ ಪಾತ್ರ ಗಮನಾರ್ಹವಾಗಿದೆ ಎಂದು ತಿಳಿಸಿದರು.

ಸಂಜಯ್ ಗಾಂಧಿ ಆಸ್ಪತ್ರೆಯ ನಿರ್ದೇಶಕ ಡಾ.ಮದನ ಬಲ್ಲಾಳ್, ಯಾವುದೇ ಆಸ್ಪತ್ರೆ ಪ್ರಗತಿ ಹೊಂದಬೇಕಾದರೆ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಬೇಕು. ರೋಗಿಗಳ ಪ್ರತಿಯೊಂದು ಹಂತದಲ್ಲೂ ಶುಶ್ರೂಷಕರ ಪಾತ್ರ ಮಹತ್ವದ್ದು. ಶುಶ್ರೂಷಕ ವಲಯಕ್ಕೆ ಬೇಡಿಕೆ ಹೆಚ್ಚಿದೆ. ಈ ವೃತ್ತಿಯಲ್ಲಿ ಸವಾಲುಗಳು ಹೆಚ್ಚಾಗಿದ್ದರೂ ರೋಗಿಗಳಿಗೆ ನೀಡುವ ಆರೈಕೆ ಮೇಲೆ ಅವಲಂಬಿತವಾಗಿರುತ್ತದೆ ಎಂದು ತಿಳಿಸಿದರು.

ರೋಗಿಗಳ ಆರೈಕೆ ಮತ್ತು ಚಿಕಿತ್ಸೆಯಲ್ಲಿ ಕಿದ್ವಾಯಿ ಆಸ್ಪತ್ರೆ ಮುಂಚೂಣಿಯಲ್ಲಿದೆ. ನಮ್ಮ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ಶುಶ್ರೂಷಕರು ದೇಶ, ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾರ್ಥಿಗಳು ವೈದ್ಯಕೀಯ ವಲಯದಲ್ಲಿನ ಹೊಸ ಅಧ್ಯಯನಗಳತ್ತ ಗಮನ ಕೊಡಬೇಕು.

-ಡಾ.ಟಿ.ನವೀನ್, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಕರ್ನಾಟಕದಲ್ಲೂ ಚುನಾವಣೆ ಗೆಲ್ಲಲು ಸಂಚು: ಖರ್ಗೆ ಆರೋಪ

ಚು.ಆಯೋಗ ದುರ್ಬಳಕೆ ಹುನ್ನಾರ

ಬೆಂಗಳೂರು: ಚುನಾವಣಾ ಆಯೋಗವನ್ನು ದುರುಪಯೋಗಪಡಿಸಿಕೊಂಡು ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಗೆಲುವು ಸಾಧಿಸಿದಂತೆ ಮುಂದೆ ಕರ್ನಾಟಕದಲ್ಲಿಯೂ ಗೆಲ್ಲುವ ಹುನ್ನಾರವನ್ನು ಬಿಜೆಪಿ ನಡೆಸಲಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಚುನಾವಣಾ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ನಾಶ ಮಾಡಿದ್ದಾರೆ. ಆಯೋಗವನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡು ದುರುಪಯೋಗಪಡಿಸಿಕೊಂಡಿದ್ದಾರೆ. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಗೆಲುವಲ್ಲ, ಚುನಾವಣಾ ಆಯೋಗದ ಗೆಲುವು. ಮಹಾರಾಷ್ಟ್ರ, ಮಧ್ಯಪ್ರದೇಶ, ಹರಿಯಾಣದಂತೆ ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲೂ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಅಸ್ಸಾಂನಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಮೂಲಕ ಗೊಂದಲ ಮೂಡಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ ಹೆಸರಿನಲ್ಲಿ ಒಂದು ಕೋಟಿ ಮತದಾರರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ. ಅದರ ಪರಿಶೀಲನೆಗೆ ನ್ಯಾಯಾಧೀಕರಣ ರಚಿಸಲಾಗಿತ್ತು. 28 ಲಕ್ಷ ಜನ ಅರ್ಹರು ನ್ಯಾಯಾಧೀಕರಣಕ್ಕೆ ಮೇಲ್ಮನವಿ ಸಲ್ಲಿಸಿದರು, ಆದರೆ ಅವರ ವಾದವನ್ನೇ ಕೇಳಲಿಲ್ಲ ಎಂದು ಆರೋಪಿಸಿದರು.

91 ಲಕ್ಷ ಜನರು ಎಸ್‌ಐಆರ್‌ನಿಂದಾಗಿ ಮತದಾನದಿಂದ ವಂಚಿತರಾಗಿದ್ದಾರೆ. ಅವರ ಅಹವಾಲು ಕೇಳದಿದ್ದರೆ ಹೇಗೆ? ಅವರು ದೇಶದ ನಾಗರಿಕರಲ್ಲವೇ ? ಮತದಾರರಲ್ಲವೇ ? ಅವರು ಎಲ್ಲಿಗೆ ಹೋಗಬೇಕು? ಪಶ್ಚಿಮ ಬಂಗಾಳದಲ್ಲಿ ಶೇ.4ರಷ್ಟು ಮತಗಳ ವ್ಯತ್ಯಾಸದಿಂದ 80 ರಿಂದ 100 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿದೆ. ಇದರಲ್ಲಿ ಮುಚ್ಚುಮರೆ ಏನು ಇಲ್ಲ. ಈ ವಿಚಾರವನ್ನು ಕಾನೂನಾತ್ಮಕವಾಗಿ ಹೇಗೆ ಎದುರಿಸ ಬೇಕು ಎಂದು ಪರಿಶೀಲನೆ ನಡೆಯುತ್ತಿದೆ. ಇದೇ ಪ್ರವೃತ್ತಿ ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲೂ ನಡೆಯಬಹುದು ಎಂದು ಹೇಳಿದರು.

ತಮಿಳುನಾಡಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ನಿರೀಕ್ಷೆಗಿಂತ ಕಡಿಮೆ ಸ್ಥಾನಗಳು ಬಂದಿವೆ. ಆದರೆ ಜನರ ತೀರ್ಪಿಗೆ ತಲೆಬಾಗಲೇಬೇಕಿದೆ. ಸಂಪೂರ್ಣವಾಗಿ ಯಾರಿಗೂ ಬಹುಮತ ಬಂದಿಲ್ಲ. ಮುಂದಿನ ದಿನಗಳಲ್ಲಿ ಏನು ಮಾಡಬೇಕು ಎಂಬುದನ್ನು ಹೈಕಮಾಂಡ್ ನಾಯಕರ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತಾರೆ. ರಾಜ್ಯದ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಮತಗಳು ಬರಬೇಕಿತ್ತು. ಆದರೆ ಕಾಂಗ್ರೆಸ್‌ಗೆ ಗೆಲುವಾಗಿದೆ. ಒಂದು ಮತದಿಂದ ಗೆದ್ದರೂ ವಿಧಾನಸೌಧದಲ್ಲಿ ಶಾಸಕರಾಗಿರುತ್ತಾರೆ. ಲೀಡ್ ಕಡಿಮೆಯಾಗಿರುವುದಕ್ಕೆ ಪಕ್ಷದಲ್ಲಿ ಆಂತರಿಕವಾಗಿ ಚರ್ಚೆ ನಡೆಸಲಾಗುವುದು ಎಂದು ಹೇಳಿದರು.

ಸಂಪುಟ ಪುನಾರಚನೆಯಾಗುವುದಿಲ್ಲ ಎಂದು ಪಕ್ಷದ ಹಿರಿಯರು ಹೇಳಿಲ್ಲ. ವದಂತಿಗಳಿಗೆಲ್ಲ ಉತ್ತರ ನೀಡುವುದಿಲ್ಲ. ಮುಖ್ಯಮಂತ್ರಿ ಹುದ್ದೆ ಖಾಲಿಯಿಲ್ಲವೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳಿದ ಮೇಲೆ ಇನ್ಯಾರು ಹೇಳಬೇಕು. ಅದೇ ಸ್ಪಷ್ಟ ಉತ್ತರ ಅಲ್ಲವೇ ? ಅದರ ಬಳಿಕವೂ ನಾವೆಲ್ಲಾ ಮಾತನಾಡುವುದು ಅಪ್ರಸ್ತುತ.

-ಪ್ರಿಯಾಂಕ್ ಖರ್ಗೆ, ಸಚಿವ

ಇಂದಿನಿಂದ ಕೆಎಎಸ್ ವ್ಯಕ್ತಿತ್ವ ಪರೀಕ್ಷೆ

ಬೆಂಗಳೂರು: 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್-ಎ ಮತ್ತು ಬಿ ವೃಂದದ 384 ಹುದ್ದೆಗಳ ವ್ಯಕ್ತಿತ್ವ ಪರೀಕ್ಷೆಗೆ ಅರ್ಹತೆ ಪಡೆದ 1158 ಅಭ್ಯರ್ಥಿಗಳಿಗೆ ಮೇ6ರಿಂದ ಜೂನ್ 10ರವರೆಗೆ ವ್ಯಕ್ತಿತ್ವ ಪರೀಕ್ಷೆ ಹಾಗೂ ಮೂಲ ದಾಖಲೆಗಳ ಪರಿಶೀಲನೆ ನಡೆಸಲಾಗುವುದು ಎಂದು ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿ ಜ್ಯೋತಿ ಕೆ.ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಅರ್ಹ ಅಭ್ಯರ್ಥಿಗಳ ನೋಂದಣಿ ಸಂಖ್ಯೆ ಅವರಿಗೆ ನಿಗದಿಪಡಿಸಿದ ವ್ಯಕ್ತಿತ್ವ ಪರೀಕ್ಷೆಯ ನಿಖರ ದಿನಾಂಕ ಮತ್ತು ಸಮಯದ ವಿವರಗಳನ್ನು ಕೆಪಿಎಸ್‌ಸಿ ಅಧಿಕೃತ ವೆಬ್ ಸೈಟ್‌ನಲ್ಲಿ ಪ್ರಕಟಿಸಿದೆ. ಅಲ್ಲದೇ ಅರ್ಹ ಅಭ್ಯರ್ಥಿಗಳಿಗೆ ಸೂಚನಾ ಪತ್ರಗಳನ್ನು ರವಾನಿಸಲಾಗಿದೆ. ಅಭ್ಯರ್ಥಿಗಳು ಸದರಿ ಹುದ್ದೆಗಳಿಗೆ ಸಲ್ಲಿಸಿರುವ ಅರ್ಜಿಯಲ್ಲಿ ನಮೂದಿಸಿರುವ ವಿಳಾಸಗಳಿಗೆ ವ್ಯಕ್ತಿತ್ವ ಪರೀಕ್ಷೆಯ ಸೂಚನ ಪತ್ರಗಳನ್ನು ರವಾನಿಸಲಾಗಿದ್ದರು ಕೆಲವು ಅಭ್ಯರ್ಥಿಗಳ ಸೂಚನ ಪತ್ರಗಳು ಆಯೋಗಕ್ಕೆ ಹಿಂದಿರುಗಿರುತ್ತವೆ. ವ್ಯಕ್ತಿತ್ವ ಪರೀಕ್ಷೆಯ ಸೂಚನಾ ಪತ್ರಗಳು ತಲುಪದ ಅಭ್ಯರ್ಥಿಗಳು https://kpsc.kar.nic.in/GP24ptdt.pdf ಪ್ರಕಟಿಸಲಾಗಿರುವ ವೇಳಾಪಟ್ಟಿಯ ಮೂಲಕ ವ್ಯಕ್ತಿತ್ವ ಪರೀಕ್ಷೆ, ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತೆ ಸೂಚನೆ ನೀಡಲಾಗಿದೆ ಎಂದರು.

50 ವರ್ಷಗಳ ಬಳಿಕ ಮದ್ಯ ಉತ್ಪನ್ನಗಳ ತಯಾರಿ, ರಫ್ತಿಗೆ ಸರಕಾರದ ಅನುಮತಿ

ಸಾಲ ತೀರಿಸಲು ಮದ್ಯ ರಫ್ತಿಗಿಳಿದ ಪಾಕಿಸ್ತಾನ!

ದೆಹಲಿ: ಸಾಲದ ಸುಳಿಯಲ್ಲಿ ಸಿಲುಕಿರುವ ಪಾಕಿಸ್ತಾನವು ಬರೋಬ್ಬರಿ 50 ವರ್ಷಗಳ ವಿರಾಮದ ನಂತರ ಮತ್ತೆ ವಿದೇಶಗಳಿಗೆ ಮದ್ಯ ರಫ್ತು ಮಾಡಲು ಆರಂಭಿಸಿದೆ. ದೇಶದ ಏಕೈಕ ಸ್ಥಳೀಯ ಮದ್ಯ ತಯಾರಿಕಾ ಸಂಸ್ಥೆಯಾದ 'ಮರ್ರಿ ಬ್ರೂವರಿ' 2026ರ ಏಪ್ರಿಲ್‌ನಲ್ಲಿ ಬ್ರಿಟನ್, ಜಪಾನ್, ಪೋರ್ಚುಗಲ್ ಮತ್ತು ಥಾಯ್ಲೆಂಡ್‌ನಂತಹ ದೇಶಗಳಿಗೆ ಬಿಯರ್ ಮತ್ತು ಇತರ ಮದ್ಯದ ಉತ್ಪನ್ನಗಳನ್ನು ರಫ್ತು ಮಾಡಲು ಶುರು ಮಾಡಿದೆ. ಕಂಪನಿಯ ರಫ್ತು ವ್ಯವಸ್ಥಾಪಕ ರಮೀಜ್ ಶಾ ಅವರ ಪ್ರಕಾರ, ಸದ್ಯಕ್ಕೆ ವಿದೇಶಗಳಲ್ಲಿ ಮಾರುಕಟ್ಟೆ ಜಾಲವನ್ನು ಸೃಷ್ಟಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸುವ ಯೋಜನೆಯಿದೆ ಎಂದಿದ್ದಾರೆ.

ಆರ್ಥಿಕ ಸಂಕಷ್ಟದಿಂದ ನಿಯಮಕ್ಕೆ ವಿನಾಯಿತಿ: ಇಸ್ಲಾಮಿಕ್ ನಿಯಮಗಳನ್ನು ಉಲ್ಲೇಖಿಸಿ ಸುಮಾರು 50 ವರ್ಷಗಳ ಹಿಂದೆ ಪಾಕಿಸ್ತಾನದ ಮುಸ್ಲಿಂ ಜನಸಂಖ್ಯೆಗೆ ಮದ್ಯಪಾನವನ್ನು ನಿಷೇಧಿಸಲಾಗಿತ್ತು. ಅದರ ಬೆನ್ನಲ್ಲೇ ರಫ್ತು ಪ್ರಕ್ರಿಯೆಯನ್ನೂ ಸ್ಥಗಿತಗೊಳಿಸಲಾಗಿತ್ತು. ಆದರೆ, ಪಾಕಿಸ್ತಾನದಲ್ಲಿರುವ ಮುಸ್ಲಿಮೇತರರಿಗೆ ಕೆಲವು ವಿನಾಯಿತಿ ನೀಡಲಾಗಿತ್ತು. ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಪಾಕಿಸ್ತಾನವು 2025ರಲ್ಲಿ ಮದ್ಯ ರಫ್ತಿಗೆ ಅನುಮತಿ ನೀಡಿದ್ದು, ಇದೀಗ ಇಸ್ಲಾಮಿಕ್ ಸಹಕಾರ ಸಂಘಟನೆಯ ಭಾಗವಲ್ಲದ ದೇಶಗಳಿಗೆ ಪೂರೈಕೆ ಆರಂಭವಾಗಿದೆ.

138 ಬಿಲಿಯನ್ ಡಾಲರ್ ವಿದೇಶಿ ಸಾಲ: ಪಾಕಿಸ್ತಾನದ ಪ್ರಸ್ತುತ ಆರ್ಥಿಕ ಸ್ಥಿತಿ ಅತ್ಯಂತ ಶೋಚನೀಯವಾಗಿದ್ದು, ದೇಶವು 138 ಬಿಲಿಯನ್ ಡಾಲರ್ ವಿದೇಶಿ ಸಾಲ ಹೊಂದಿದೆ. ಸರಕಾರದ ಆದಾಯ ಮತ್ತು ವೆಚ್ಚದ ನಡುವೆ ಭಾರಿ ಅಂತರವಿದ್ದು, 2026ರ ಹಣಕಾಸು ವರ್ಷದಲ್ಲಿ ಸರಕಾರದ ಅಂದಾಜು ಆದಾಯ 11,072 ಬಿಲಿಯನ್ ಪಾಕಿಸ್ತಾನಿ ರುಪಾಯಿಗಳಾಗಿದ್ದರೆ (40 ಬಿಲಿಯನ್), ವೆಚ್ಚವು 16,286 ಬಿಲಿಯನ್ ರುಪಾಯಿಗಳಿಗೆ (58 ಬಿಲಿಯನ್) ತಲುಪಿದೆ. ಇದರಲ್ಲಿ ಸುಮಾರು 8,200 ಬಿಲಿಯನ್ ರುಪಾಯಿಗಳು (30 ಬಿಲಿಯನ್) ಕೇವಲ ಸಾಲದ ಬಡ್ಡಿ ಪಾವತಿಗೆ ವ್ಯಯವಾಗುತ್ತಿದೆ.

ಒಟ್ಟು 138 ಬಿಲಿಯನ್ ಡಾಲರ್ ಬಾಹ್ಯ ಸಾಲದಲ್ಲಿ ಸರಕಾರಿ ಸಾಲದ ಪಾಲು 92 ಬಿಲಿಯನ್ ಡಾಲರ್ ಆಗಿದ್ದರೆ, ಉಳಿದದ್ದು ಖಾಸಗಿ ವಲಯ ಮತ್ತು ಬ್ಯಾಂಕುಗಳ ಹೊಣೆಗಾರಿಕೆಯಾಗಿದೆ. ಕಳೆದ ಕೆಲವು ವರ್ಷಗಳಿಂದ ಮರ್ರಿ ಬ್ರೂವರಿ ಕೇವಲ ಪ್ಯಾಕೇಜ್ ಮಾಡಿದ ಜ್ಯೂಸ್, ಮಿನರಲ್ ವಾಟರ್ ಮತ್ತು ಫ್ರೂಟ್ ಫ್ಲೇವರ್ ಪಾನೀಯಗಳಂತಹ ಆಲ್ಕೊಹಾಲ್ ರಹಿತ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡುತ್ತಿತ್ತು. ಕಳೆದ ಹಣಕಾಸು ವರ್ಷದಲ್ಲಿ 100 ಮಿಲಿಯನ್ ಡಾಲರ್ ಆದಾಯ ಗಳಿಸಿದ್ದ ಈ ಸಂಸ್ಥೆಯ ಸಿಇಒ ಇಸ್ಫನ್ಯಾರ್ ಭಂಡಾರಾ ಅವರು ಮದ್ಯ ರಫ್ತು ಪರವಾನಗಿಗಾಗಿ ಅರ್ಜಿ ಸಲ್ಲಿಸಿದ್ದರು. ಇದಲ್ಲದೆ, 2021ರಲ್ಲಿ ಪಾಕಿಸ್ತಾನವು ಬಲೂಚಿಸ್ತಾನದಲ್ಲಿ ಕೆಲಸ ಮಾಡುತ್ತಿರುವ ಚೀನೀ ಪ್ರಜೆಗಳ ಅಗತ್ಯಕ್ಕಾಗಿ ಮದ್ಯ ತಯಾರಿಸಲು ಚೀನೀ ಕಂಪನಿಯೊಂದಕ್ಕೆ ಅನುಮತಿ ನೀಡಿತ್ತು. 70ರ ದಶಕದ ನಿಷೇಧಕ್ಕೂ ಮೊದಲು ಮರ್ರಿ ಬ್ರೂವರಿ ಭಾರತ, ಅಫ್ಘಾನಿಸ್ತಾನ ಮತ್ತು ಅಮೆರಿಕಕ್ಕೂ ಮದ್ಯ ರಫ್ತು ಮಾಡುತ್ತಿತ್ತು.

ಮದ್ಯ ಮಾರಾಟ ನಿಷೇಧಿಸಿದ್ದ ಭುಟ್ಟೋ: ಪಾಕಿಸ್ತಾನದಲ್ಲಿ ಮದ್ಯ ನಿಷೇಧದ ಇತಿಹಾಸವನ್ನು ಗಮನಿಸಿದರೆ, 1977ರ ಏಪ್ರಿಲ್‌ನಲ್ಲಿ ಅಂದಿನ ಪ್ರಧಾನಿ ಜುಲ್ಫಿಕರ್ ಅಲಿ ಭುಟ್ಟೋ ಅವರು ದೇಶದಲ್ಲಿ ಮದ್ಯ ಮಾರಾಟವನ್ನು ನಿಷೇಧಿಸಿದ್ದರು. ಅವರು 1977ರ ಚುನಾವಣೆಯಲ್ಲಿ ಅಕ್ರಮ ಎಸಗಿದ್ದಾರೆ ಹಾಗೂ 'ಪಾಶ್ಚಿಮಾತ್ಯ ಜೀವನಶೈಲಿ' ಅಳವಡಿಸಿಕೊಂಡಿದ್ದಾರೆ ಎಂಬ ಆರೋಪಗಳನ್ನು ಎದುರಿಸುತ್ತಿದ್ದರು. ವಿಪಕ್ಷದ ನಾಯಕರೊಂದಿಗೆ ಮಾತುಕತೆ ನಡೆಸುವಾಗ ಅವರು ನೈಟ್‌ಕ್ಲಬ್‌ಗಳು ಮತ್ತು ಬಾರ್‌ಗಳನ್ನು ಮುಚ್ಚಬೇಕು ಹಾಗೂ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಎಂಬ ಬೇಡಿಕೆ ಇಟ್ಟಿದ್ದರು. ಈ ಒತ್ತಡಕ್ಕೆ ಮಣಿದ ಭುಟ್ಟೋ ಸರಕಾರವು ಮೇ 1977ರಲ್ಲಿ ಕರಾಚಿಯಲ್ಲಿ ಉದ್ಘಾಟನೆಯಾಗಬೇಕಿದ್ದ ದೊಡ್ಡ ಕ್ಯಾಸಿನೋ ಯೋಜನೆಯನ್ನೂ ರದ್ದುಗೊಳಿಸಿದ್ದರು. ಉದ್ಯಮಿ ತುಫೈಲ್ ಶೇಖ್ ನಿರ್ಮಿಸುತ್ತಿದ್ದ ಈ ಕ್ಯಾಸಿನೊ ಕೊಲ್ಲಿ ರಾಷ್ಟ್ರಗಳು ಮತ್ತು ಯುರೋಪ್‌ನ ಪ್ರವಾಸಿಗರನ್ನು ಆಕರ್ಷಿಸುವ ಗುರಿ ಹೊಂದಿತ್ತು. ಈ ನಿರ್ಧಾರದಿಂದ ಶೇಖ್ ಅಸಮಾಧಾನಗೊಂಡಾಗ, ಭುಟ್ಟೋ ಅವರು ಇದು ತಾತ್ಕಾಲಿಕ ಕ್ರಮವಷ್ಟೇ ಎಂದು ಭರವಸೆ ನೀಡಿದ್ದರು.

ವಿಷಪೂರಿತ ಮದ್ಯ

ಮದ್ಯ ನಿಷೇಧದಿಂದಾಗಿ ಪಾಕಿಸ್ತಾನದ ಜನರು ಹೆಚ್ಚು ಅಪಾಯಕಾರಿಯಾದ ಹೆರಾಯಿನ್ ವ್ಯಸನಕ್ಕೆ ತಿರುಗಿದರು ಎನ್ನಲಾಗುತ್ತದೆ. 1985ರ ವೇಳೆಗೆ ಪಾಕಿಸ್ತಾನವು ವಿಶ್ವದ ಅತಿದೊಡ್ಡ ಹೆರಾಯಿನ್ ಗ್ರಾಹಕ ದೇಶಗಳಲ್ಲಿ ಒಂದಾಯಿತು. ಅಲ್ಲದೆ, ಅಕ್ರಮ ಮದ್ಯ ಮಾಫಿಯಾದಿಂದಾಗಿ ವಿಷಪೂರಿತ ಮದ್ಯ ಸೇವಿಸಿ ನೂರಾರು ಜನರು ಸಾವನ್ನಪ್ಪುತ್ತಿದ್ದಾರೆ ಎಂಬ ಆರೋಪವೂ ಇದೆ.

ಕ್ವಿಂಟಾಲ್‌ಗೆ 365 ರು. ಎಫ್‌ಆರ್‌ಪಿ ಹೆಚ್ಚಿಸಲು ಅನುಮೋದನೆ

ಕಬ್ಬು ಬೆಳೆಗಾರರ ನೆರವಿಗೆ ಕೇಂದ್ರ

ದೆಹಲಿ: ಕರ್ನಾಟಕದ ಸೂರ್ಯಕಾಂತಿ ಬೆಳೆಗಾರರ ಬೆಂಬಲಕ್ಕೆ ನಿಂತ ಬೆನ್ನಲ್ಲೇ ಕೇಂದ್ರ ಸರಕಾರ ಇದೀಗ ಕಬ್ಬು ಬೆಳೆಗಾರರಿಗೂ ಬೆಂಬಲ ಬೆಲೆ ಹೆಚ್ಚಿಸಿ ನೆರವಿಗೆ ಬಂದಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸಚಿವ ಸಂಪುಟ 2026-27ನೇ ಹಂಗಾಮಿಗೆ ಕಬ್ಬಿಗೆ ಶೇ.10.25 ಮೂಲ ರಿಕವರಿ ದರದ ಮೇಲೆ ಪ್ರತಿ ಕ್ವಿಂಟಲ್‌ಗೆ 365 ರು. ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆಯನ್ನು ಅನುಮೋದಿಸಿದೆ. ಇದರಿಂದ ಕರ್ನಾಟಕದ ಸುಮಾರು 8 ರಿಂದ 10 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ ಎಂದಿದ್ದಾರೆ.

ರಿಕವರಿ ಕಡಿಮೆ ಇದ್ರೂ ಬೆಂಬಲ ಬೆಲೆ: ಕಬ್ಬಿನ ರಿಕವರಿಯಲ್ಲಿ 0.1% ಏರಿಕೆಗೆ 3.56 ರು. ಪ್ರತಿ ಕ್ವಿಂಟಲ್ ಹೆಚ್ಚುವರಿ ಪ್ರೋತ್ಸಾಹಧನ ನೀಡುವುದರ ಜತೆಗೆ ರಿಕವರಿ 9.5% ಅಥವಾ ಅದಕ್ಕಿಂತ ಕಡಿಮೆ ಇದ್ದರೂ ಯಾವುದೇ ಕಡಿತವಿಲ್ಲದೆ ಪ್ರತಿ ಕ್ವಿಂಟಲ್‌ಗೆ 338.3 ರು. ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕೇಂದ್ರ ಸರಕಾರದ ಈ ಮಹತ್ವದ ನಿರ್ಧಾರದಿಂದ ದೇಶದ ಸುಮಾರು 5 ಕೋಟಿ ಕಬ್ಬು ಬೆಳೆಗಾರರು ಮತ್ತವರ ಕುಟುಂಬಗಳಿಗೆ ನೆರವಾಗಲಿದೆ. ಅದರಂತೆ ಕರ್ನಾಟಕದಲ್ಲೂ ಸುಮಾರು ಎಂಟ್ಟು ಲಕ್ಷ ರೈತರು ಈ ಎಫ್‌ಆರ್‌ಪಿ ದರದ ಲಾಭ ಪಡೆಯಲಿದ್ದಾರೆ ಎಂದಿದ್ದಾರೆ.

ಕೇಂದ್ರದ ಈ ನಿರ್ಣಯ ಕಬ್ಬು ಬೆಳೆಗಾರರು ಮಾತ್ರವಲ್ಲದೆ, ಸಕ್ಕರೆ ಕಾರ್ಖಾನೆಗಳು ಹಾಗೂ ಸಕ್ಕರೆ ಉದ್ಯಮದ 5

ಲಕ್ಷಕ್ಕೂ ಅಧಿಕ ಕಾರ್ಮಿಕರಿಗೂ ನೆರವಾಗಲಿದೆ. ಕಬ್ಬಿನ ಎಫ್‌ಆರ್‌ಪಿ ಹೆಚ್ಚಳ ಮೂಲಕ ಸಮಸ್ತ ಸಕ್ಕರೆ ಉದ್ಯಮ ಮತ್ತು ಕೃಷಿ ಕ್ಷೇತ್ರವನ್ನು ಮತ್ತಷ್ಟು ಸಶಕ್ತಗೊಳಿಸುವಲ್ಲಿ ಪ್ರಧಾನಿ ಮೋದಿ ಬದ್ಧತೆ ತೋರಿದ್ದಾರೆಂದು ಸಚಿವ ಜೋಶಿ ಪ್ರತಿಪಾದಿಸಿದ್ದಾರೆ.



ರಾಜ್ಯದ ಬೆಳಗಾವಿ, ಬಾಗಲಕೋಟೆ, ಮಂಡ್ಯ, ಮೈಸೂರು, ವಿಜಯಪುರ ಮತ್ತು ಬಳ್ಳಾರಿ, ದಾವಣಗೆರೆ, ಬೀದರ್ ಹೀಗೆ ವಿವಿಧ ಜಿಲ್ಲೆಗಳು ಕಬ್ಬು ಬೆಳೆಯುವಲ್ಲಿ ಮುಂಚೂಣಿ ಯಲ್ಲಿದ್ದು, ದೇಶದ ಒಟ್ಟು ಸಕ್ಕರೆ ಉತ್ಪಾದನೆಯ ಶೇ.16ರಷ್ಟು ಕರ್ನಾಟಕದ ಪಾಲಿದೆ. ಹೀಗಾಗಿ ಈ ಎಫ್‌ಆರ್‌ಪಿ ಹೆಚ್ಚಳವು ರಾಜ್ಯದ ಪಾಲಿಗೂ ಅನನ್ಯ ಕೊಡುಗೆಯಾಗಿದೆ.

-ಪ್ರಲ್ಹಾದ ಜೋಶಿ ಕೇಂದ್ರ ಸಚಿವ

ಎನ್‌ಪಿಎ ಸಂಬಳ ತಡೆ ವಿರೋಧಿಸಿ ಪ್ರತಿಭಟನೆ

ಬೆಂಗಳೂರು: ಪಶುವೈದ್ಯಕೀಯ ಬೋಧಕರಿಗೆ ನೀಡಲಾಗುತ್ತಿದ್ದ ನಾನ್-ಪ್ರಾಕ್ಟಿಸಿಂಗ್ ಅಲವೆನ್ಸ್ ಅನ್ನು ಸರಕಾರ ಸ್ಥಗಿತಗೊಳಿಸಿರುವ ಕ್ರಮಕ್ಕೆ ಹೆಬ್ಬಾಳ ಬಳಿಯಿರುವ ಪಶುವೈದ್ಯಕೀಯ ವಿಶ್ವವಿದ್ಯಾಲಯ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ಮಾಡಲಾಯಿತು.

ಈ ಕುರಿತು ಪ್ರಾಧ್ಯಾಪಕ ಡಾ.ಬಿ.ಎಂ.ವೀರೇಗೌಡ ಮಾತನಾಡಿ, ಕಳೆದ ಏಳು ವರ್ಷ ಗಳಿಂದ ನಿಯಮಾನುಸಾರವಾಗಿ ಪಾವತಿಯಾ ಗುತ್ತಿದ್ದ ಎನ್‌ಪಿಎ ಭತ್ಯೆಯನ್ನು ಏಕಾಏಕಿ ನಿಲ್ಲಿಸಿರುವುದು ಶಿಕ್ಷಕರ ಹಿತರಕ್ಷಣೆಗೆ ವಿರುದ್ಧವಾ ಗಿದೆ. ಎನ್‌ಪಿಎ ಭತ್ಯೆಯು ಪಶುವೈದ್ಯಕೀಯ ಬೋಧಕರು ಖಾಸಗಿ ಪ್ರಾಕ್ಟೀಸ್ ಮಾಡುವುದನ್ನು ತಡೆದು, ತಮ್ಮ ಸಂಪೂರ್ಣ ಸಮಯವನ್ನು ಬೋಧನೆ ಮತ್ತು ಸಂಶೋಧನೆಗೆ ಮೀಸಲಿಡುವ ಉದ್ದೇಶದಿಂದ ನೀಡಲಾಗುತ್ತದೆ. ಏಳನೇ ವೇತನ ಆಯೋಗದ ನಿಯಮಗಳಂತೆ ಮೂಲ ವೇತನದ ಶೇ. 20ರಷ್ಟು ಭತ್ಯೆ ನೀಡುವುದು ಕಾನೂನುಬ ದ್ಧವಾಗಿದ್ದು, ಬೋಧನಾ ಗುಣಮಟ್ಟ ಕಾಪಾಡಲು ಇದು ಅವಶ್ಯಕ ಎಂದರು.

2018-19ರಲ್ಲಿ ಸರಕಾರದ ನಿರ್ದೇಶನದ ಮೇರೆಗೆ ಎನ್‌ಪಿಎ ಅನುಷ್ಠಾನಗೊಳಿಸಲಾಗಿದ್ದು, ಹಣಕಾಸು ಇಲಾಖೆ ಹಾಗೂ ಸಂಬಂಧಿತ ಇಲಾಖೆಗಳ ಅನುಮೋದನೆಯೊಂದಿಗೆ ಜಾರಿಗೆ ತರಲಾಗಿದೆ. ಕೇಂದ್ರ ಸರಕಾರ, ಐಸಿಎಆರ್ ಹಾಗೂ ವೆಟರ್‌ನೆರಿ ಕೌನ್ಸಿಲ್ ಆಫ್ ಇಂಡಿಯಾ ನಿಯಮಗಳ ಪ್ರಕಾರವೂ ಈ ಭತ್ಯೆ ಮಾನ್ಯವಾಗಿದೆ. ಆದರೆ ಏ.21 ರಂದು ಸರಕಾರ ಹೊರಡಿಸಿದ ನಿರ್ದೇಶನದ ಮೂಲಕ ಎನ್‌ಪಿಎ ಸ್ಥಗಿತಗೊಳಿಸಿರುವುದನ್ನು ಹಿಂಪಡೆಯುವಂತೆ ಏ.27ರಂದು ಮನವಿ ಸಲ್ಲಿಸಲಾಗಿದ್ದರೂ ಇದುವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ, ಎನ್‌ಪಿಎ ಸಮೇತ ಬಾಕಿ ಇರುವ ಎರಡು ತಿಂಗಳ ಸಂಬಳವನ್ನು ಪಾವತಿಸುವವರೆಗೂ ಅನಿರ್ದಿಷ್ಟಾವಧಿ ವರೆಗೆ ವಿಶ್ವವಿದ್ಯಾಲಯದ ಎಲ್ಲಾ ಆವರಣಗಳಲ್ಲಿ ಹೋರಾಟ ಮಾಡಲಾಗುವುದು ಎಂದರು.

ಎನ್‌ಪಿಎ ಸಂಬಳ ತಡೆ ವಿರೋಧವಾಗಿ ಹೆಬ್ಬಾಳ ಬಳಿಯಿರುವ ಪಶುವೈದ್ಯಕೀಯ ವಿಶ್ವವಿದ್ಯಾಲಯ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ಏಳು ಪಶುವೈದ್ಯಕೀಯ ವಿಶ್ವವಿದ್ಯಾಲಯದ ಶಿಕ್ಷಕರಿಂದ ಕೆಲಸಕ್ಕೆ ಗೈರು ಹಾಜರಿ ಮೂಲಕ ಪ್ರತಿಭಟನೆ ಮಾಡಲಾಗುತ್ತಿದೆ. ಕಳೆದೆರಡು ತಿಂಗಳಿಂದ ಸಂಬಳ ಬಂದಿಲ್ಲ. ಎನ್‌ಪಿಎ ಸಂಬಳ ಬರೋವರಿಗೂ ನಮ್ಮ ಹೋರಾಟ ಮುಂದುವರಿಸಲಾಗುವುದು.

-ಡಾ.ಧನಲಕ್ಷ್ಮಿ, ಸಂಘಟನಾ ಕಾರ್ಯದರ್ಶಿ

ಸಮಾಚಾರ ಸಣ್ಣದಲ್ಲ

ಭಾರತೀಯ ಪತ್ರಕರ್ತರಿಗೆ ಪುಲಿಟ್ಜರ್ ಪ್ರಶಸ್ತಿ ಗೌರವ

ನ್ಯೂಯಾರ್ಕ್: ಭಾರತೀಯ ಪತ್ರಕರ್ತರಾದ ಆನಂದ್ ಆರ್‌ಕೆ ಮತ್ತು ಸುಪರ್ಣ ಶರ್ಮಾ ಅವರು ಡಿಜಿಟಲ್ ಕಣ್ಗಾವಲು ಮತ್ತು ಸೈಬರ್ ವಂಚನೆಯನ್ನು ಬೆಳಕಿಗೆ ತಂದಿದಕ್ಕಾಗಿ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಇಲ್ಲಸ್ಟ್ರೇಟೆಡ್ ರಿಪೋರ್ಟಿಂಗ್ ಮತ್ತು ಕಾಮೆಂಟರಿ ವಿಭಾಗದಲ್ಲಿ ಘೋಷಿಸಲಾದ ಈ ಪ್ರಶಸ್ತಿಯನ್ನು ಆನಂದ್ ಶರ್ಮಾ ಗೆದ್ದಿದ್ದಾರೆ. ಬ್ಲೂಮ್‌ಬರ್ಗ್‌ನ ನಟಾಲಿ ಒಬಿಕೊ ಪಿಯರ್ಸನ್ ಅವರೊಂದಿಗೆ ಅವರು ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. ಪುಲಿಟ್ಜರ್ ಬಹುಮಾನಗಳ ವೆಬ್‌ಸೈಟ್ ಪ್ರಕಾರ, ಬ್ಲೂಮ್‌ಬರ್ಗ್‌ಗಾಗಿ ನಿರ್ಮಿಸಲಾದ ಟ್ರ್ಯಾಪ್ಡ್ ಎಂಬ ಪ್ರಶಸ್ತಿ ವಿಜೇತ ಕೃತಿಯು, ಕಣ್ಗಾವಲು ಮತ್ತು ಡಿಜಿಟಲ್ ವಂಚನೆಗಳ ಬೆಳೆಯುತ್ತಿರುವ ಜಾಗತಿಕ ಸವಾಲುಗಳನ್ನು ಒತ್ತಿಹೇಳಲು ತನ್ನ ಫೋನ್‌ನಲ್ಲಿ ಡಿಜಿಟಲ್ ಹ್ಯಾಕಿಂಗ್ ಮೂಲಕ ಬಂಧಿಸಲ್ಪಟ್ಟ ಭಾರತದ ನರವಿಜ್ಞಾನಿಯೊಬ್ಬರ ಜೀವನ ಗಾಥೆಯನ್ನು ವಿವರಿಸುತ್ತದೆ. ಕೊಲಂಬಿಯಾ ವಿಶ್ವವಿದ್ಯಾಲಯವು ನಿರ್ವಹಿಸುವ ಪುಲಿಟ್ಜರ್ ಪ್ರಶಸ್ತಿಗಳನ್ನು ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಂಗೀತ ಸಂಯೋಜನೆಯಲ್ಲಿ ಅತ್ಯುನ್ನತ ಗೌರವಗಳಲ್ಲಿ ಒಂದೆಂದು ಪರಿಗಣಿಸಲಾಗಿದ್ದು, ವರದಿ ಮಾಡುವಿಕೆ ಮತ್ತು ಕಥೆ ಹೇಳುವಿಕೆಯಲ್ಲಿ ಶ್ರೇಷ್ಠತೆಯನ್ನು ಗುರುತಿಸುತ್ತದೆ.

ಮಲಯಾಳಂ ನಟ ಅಪಘಾತದಲ್ಲಿ ಸಾವು

ತಿರುವನಂತಪುರಂ: ಮಲಯಾಳಂನ ಹಿರಿಯ ನಟ ಸಂತೋಷ್ ಕೆ. ನಾಯರ್ ಮಂಗಳವಾರ ನಡೆದ ಭೀಕರ ರಸ್ತೆ ಅಪಘಾತದಲ್ಲಿ ನಿಧನರಾಗಿದ್ದಾರೆ. ಅವರು ಪ್ರಯಾಣಿಸುತ್ತಿದ್ದ ಕಾರು ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡಿದ್ದ ಅವರನ್ನು ಕೂಡಲೇ ಆಸ್ಪತ್ರೆ ದಾಖಲಿಸಿದರೂ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಅಪಘಾತದ ವೇಳೆ ಅವರೊಂದಿಗೆ ಪ್ರಯಾಣಿಸುತ್ತಿದ್ದ ಅವರ ಪತ್ನಿ ರಾಜಲಕ್ಷ್ಮೀ ಗಾಯಗೊಂಡಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಪತ್ತನಂತ್ತಿಟ್ಟ ಜಿಲ್ಲೆಯ ಅಡೂರ್ ಸಮೀಪ ನಿಯಂತ್ರಣ ತಪ್ಪಿ ಕಾರು ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತ ನಡೆದ ತಕ್ಷಣ ಸಂತೋಷ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ನಟ ಸಂತೋಷ್ ಅವರ ಸಾವಿಗೆ ಮಲಯಾಳಂ ಚಿತ್ರರಂಗದ ಪ್ರಮುಖರು ಆಘಾತ ವ್ಯಕ್ತಪಡಿಸಿದ್ದಾರೆ.

ಹೊರ್ಮುಜ್: ದ. ಕೊರಿಯ ನೌಕೆ ಮೇಲೆ ಡ್ರೋನ್ ದಾಳಿ

ಟೆಹರಾನ್: ಅಮೆರಿಕ-ಇರಾನ್ ನಡುವಿನ ಯುದ್ಧದಲ್ಲಿ ಹೆಚ್ಚು ಗಮನ ಸೆಳೆದಿದ್ದ ಹೊರ್ಮುಜ್ ಜಲಸಂಧಿಯಲ್ಲಿ ಈಗಲೂ ಸರಕು ಸಾಗಣೆ ಹಡಗುಗಳ ಸಂಚಾರಕ್ಕೆ ಸಂಚಕಾರ ಎದುರಾಗುತ್ತಿದೆ. ದಕ್ಷಿಣ ಕೊರಿಯದ ಸರಕು ಸಾಗಣೆ ನೌಕೆಯ ಮೇಲೆಯೂ ಮಂಗಳವಾರ ದಾಳಿ ನಡೆದಿದೆ. ದಕ್ಷಿಣ ಕೊರಿಯದ ವಿದೇಶಾಂಗ ಸಚಿವಾಲಯ ತನ್ನ 'ಎಚ್‌ಎಂಎಂ ನಾಮು' ಹೆಸರಿನ ಸರಕು ಸಾಗಣೆ ಹಡಗು ಹೊರ್ಮುಜ್ ಜಲಸಂಧಿಯಲ್ಲಿ ಸ್ಫೋಟಗೊಂಡು ಬೆಂಕಿ ಹೊತ್ತಿ ಉರಿದಿದೆ. ಆದರೆ, ಹಡಗಿನಲ್ಲಿದ್ದ ಎಲ್ಲಾ 24 ಸಿಬ್ಬಂದಿಗಳೂ (6 ದಕ್ಷಿಣ ಕೊರಿಯದವರು, 18 ವಿದೇಶಿ ಸಿಬ್ಬಂದಿ) ಪಾರಾಗಿದ್ದು, ಸುರಕ್ಷಿತವಾಗಿದ್ದಾರೆ. ಯಾರಿಗೂ ಯಾವುದೇ ಹಾನಿ ಆಗಿಲ್ಲ ಎಂದು ಅಧಿಕೃತ ಹೇಳಿಕೆ ಪ್ರಕಟಿಸಿದೆ. ದಕ್ಷಿಣ ಕೊರಿಯದ ಕಂಟೇನರ್ ಕಂಪನಿ ಎಚ್‌ಎಂಎಂನಿಂದ ನಿರ್ವಹಣೆ ಆಗುತ್ತಿದ್ದ ಹಡಗಿನಲ್ಲಿ ಪನಾಮ ದೇಶದ ಧ್ವಜವಿತ್ತು. ಹಡಗಿನಲ್ಲಿ ಸದ್ಯ 35,000 ಟನ್ ಭಾರತ ಕಂಟೇನರ್‌ಗಳಿವೆ. ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಸಮೀಪದ ಸಮುದ್ರದಲ್ಲಿದ್ದಾಗ ಕೊರಿಯಾ ಕಾಲಮಾನ ಸೋಮವಾರ ರಾತ್ರಿ 8.40ರ ವೇಳೆ ಹಡಗು ಸ್ಫೋಟಗೊಂಡಿದೆ. ಮೊದಲಿಗೆ ಇಂಜಿನ್ ಭಾಗದಲ್ಲಿ ಬೆಂಕಿ ಕಾಣಿಸಿತು. ಹಡಗಿನಲ್ಲಿದ್ದ ಸಿಬ್ಬಂದಿಗಳೇ ಗಂಟೆಗಳ ಕಾಲ ಶ್ರಮಿಸಿ ನಂದಿಸಿದರು. ಬಳಿಕ ಹಡಗನ್ನು ದುಬೈ ಬಂದರಿಗೆ ಕೊಂಡೊಯ್ಯಲಾಗಿದೆ ಎಂದು ವರದಿಯಾಗಿದೆ. ಡ್ರೋನ್ ಅಥವಾ ಕ್ಷಿಪಣಿ ದಾಳಿ ನಡೆದಿರುವುದರಿಂದಲೇ ಸ್ಫೋಟವಾಗಿರುವ ಸಾಧ್ಯತೆಯಿದೆ ಎಂದು ಗುಪ್ತಚರ ವರದಿಗಳು ಹೇಳಿವೆ.

{ಸುಕುಂತ ಮುಜುಂದಾರ್} ಕೇಂದ್ರ ಸಚಿವ

ಬಿಜೆಪಿಯು ಬಿಜೆಪಿಯಾಗಿಯೇ ಉಳಿಯಬೇಕು. ಅದು ಟಿಎಂಸಿ ಆಗಬಾರದು. ಜನರು ಟಿಎಂಸಿಯನ್ನು ತಿರಸ್ಕರಿಸಿದ್ದಾರೆ. ಆದ್ದರಿಂದ ಟಿಎಂಸಿಯಂತೆ ವರ್ತಿಸಬೇಡಿ. ನಿಮ್ಮೆಲ್ಲರ ಮೇಲೆ ಸತತ ದೌರ್ಜನ್ಯಗಳು ನಡೆದಿವೆ ಎಂಬುದು ನಮಗೆ ತಿಳಿದಿದೆ. ಆದರೆ ನೀವು ತಾಳ್ಮೆಯಿಂದಿರಬೇಕು. ಈ ಬಗ್ಗೆ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ.

ದೇವರನಾಡಲ್ಲಿ ಕಮಲ ಪಕ್ಷಕ್ಕೆ 3 ಸ್ಥಾನಗಳು | ಆರು ವಿಧಾನಸಭಾ ಕ್ಷೇತ್ರದಲ್ಲಿ 2ನೇ ಸ್ಥಾನಕ್ಕೆ ಜಿಗಿತ

ಕೇರಳದಲ್ಲಿ ಬಿಜೆಪಿ ಮತಗಳಿಕೆ ಗಣನೀಯ ಏರಿಕೆ

ತಿರುವನಂತಪುರಂ: ಕೇರಳ ವಿಧಾನಸಭಾ ಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ಗೆಲ್ಲುವ ಮೂಲಕ ತನ್ನ ರಾಜಕೀಯ ಬರಗಾಲವನ್ನು ಕೊನೆಗಾಣಿಸಿರುವ ಬಿಜೆಪಿ, ಇತರ ಆರು ಕ್ಷೇತ್ರಗಳಲ್ಲಿ 2ನೇ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ. ತಿರುವಲ್ಲಾ, ಪಾಲಕ್ಕಾಡ್, ಮಲಂಪುಳ, ಅಟ್ಟಿಂಗಲ್, ಕಾಸರಗೋಡು ಮತ್ತು ಮಂಜೇಶ್ವರ ಕ್ಷೇತ್ರಗಳಲ್ಲಿ ಬಿಜೆಪಿ ಎರಡನೇ ಸ್ಥಾನವನ್ನು ಅಲಂಕರಿಸಿದೆ.

ತಿರುವಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅನೂಪ್ ಆ್ಯಂಟನಿ 43,078 ಮತಗಳನ್ನು ಪಡೆಯುವ ಮೂಲಕ 2ನೇ ಸ್ಥಾನ ಗಳಿಸಿದ್ದಾರೆ. ಕೇರಳ ಕಾಂಗ್ರೆಸ್ (ಕೆಇಸಿ) ಅಭ್ಯರ್ಥಿ ಅಡ್ವೊಕೇಟ್ ವರ್ಗೀಸ್ ಮಾಮೆನ್ ವಿರುದ್ಧ ಅವರು 10,146 ಮತಗಳ ಅಂತರದಿಂದ ಸೋತರೂ, ಪಕ್ಷದ ಮತದಾನದ ಪಾಲನ್ನು ಗಣನೀಯವಾಗಿ ಹೆಚ್ಚಿಸಿದ್ದಾರೆ. 2021ರ ಚುನಾವಣೆಯಲ್ಲಿ ಶೇ. 16.25ರಷ್ಟು ಮತಗಳೊಂದಿಗೆ ಬಿಜೆಪಿ ಮೂರನೇ ಸ್ಥಾನ ಪಡೆದಿತ್ತು. ಈ ಬಾರಿ ಶೇ.30.61ರಷ್ಟು ಮತಗಳನ್ನು ಪಡೆಯುವ ಮೂಲಕ 2ನೇ ಸ್ಥಾನಕ್ಕೆ ಜಿಗಿತ ಕಂಡಿದೆ.

ಪಾಲಕ್ಕಾಡ್‌ನಲ್ಲಿ ತೀವ್ರ ಪೈಪೋಟಿ: ಬಿಜೆಪಿಯ ಪ್ರಬಲ ನಾಯಕಿ ಶೋಭಾ ಸುರೇಂದ್ರನ್ ಅವರು ಆರಂಭಿಕ ಸುತ್ತಿನ ಎಣಿಕೆಯಲ್ಲಿ ತೀವ್ರ ಪೈಪೋಟಿ ನೀಡಿದರೂ, ಅಂತಿಮವಾಗಿ ಯುಡಿಎಫ್‌ನ ರಮೇಶ್ ಪಿಶಾರಡಿ ವಿರುದ್ಧ ಪಾಲಕ್ಕಾಡ್‌ನಲ್ಲಿ 13,147 ಮತಗಳಿಂದ ಸೋಲೊಪ್ಪಿಕೊಂಡರು. ಶೋಭಾ ಸುರೇಂದ್ರನ್ 49,052 ಮತಗಳನ್ನು ಪಡೆದರೆ, ಪಿಶಾರಡಿ 62,199 ಮತಗಳನ್ನು ಗಳಿಸಿದರು. ಆದರೆ 2024ರ ಉಪಚುನಾವಣೆಗೆ ಹೋಲಿಸಿದರೆ ಇಲ್ಲಿಯೂ ಬಿಜೆಪಿ ತನ್ನ ಮತದಾನದ ಪಾಲನ್ನು ಶೇ. 28.80ರಿಂದ ಶೇ. 33.33ಕ್ಕೆ ಹೆಚ್ಚಿಸಿಕೊಂಡಿದೆ.

ತಿರುವನಂತಪುರದ ಅಟ್ಟಿಂಗಲ್ ಕ್ಷೇತ್ರದಲ್ಲಿ ಅಡ್ವೊಕೇಟ್ ಪಿ ಸುಧೀರ್ 45,788 ಮತಗಳನ್ನು ಪಡೆದು ಎರಡನೇ ಸ್ಥಾನ ಪಡೆದರು. ಸಿಪಿಐ(ಎಂ)ನ ಅಂಬಿಕಾ ಅವರ ವಿರುದ್ಧ 13,375 ಮತಗಳಿಂದ ಸೋತರೂ, ಸುಧೀರ್ ಮತದಾನದ ಪಾಲನ್ನು ಶೇ. 25.92ರಿಂದ ಶೇ. 30.54ಕ್ಕೆ ಏರಿಸಿದ್ದಾರೆ. ಮಲಂಪುಳದಲ್ಲಿ ಸಿ ಕೃಷ್ಣಕುಮಾರ್, ಕಾಸರಗೋಡಿನಲ್ಲಿ ಅಶ್ವಿನಿ ಎಂಎಲ್ ಮತ್ತು ಮಂಜೇಶ್ವರದಲ್ಲಿ ಕೆ ಸುರೇಂದ್ರನ್ ಅವರು ಸುಮಾರು 20,000 ಅಥವಾ ಅದಕ್ಕಿಂತ ಹೆಚ್ಚಿನ ಮತಗಳ ಅಂತರದಿಂದ ಸೋತು ಎರಡನೇ ಸ್ಥಾನ ಪಡೆದಿದ್ದಾರೆ. ಆದರೆ ಈ ಕ್ಷೇತ್ರಗಳಲ್ಲಿ 2021 ಕ್ಕೆ ಹೋಲಿಸಿದರೆ ಮತದಾನದ ಪಾಲನ್ನು ಹೆಚ್ಚಿಸಲು ಅವರಿಗೆ ಸಾಧ್ಯವಾಗಿಲ್ಲ.

ಬಿಜೆಪಿಯಲ್ಲಿ ಗೆಲುವು ಪಡೆದವರು

ಕೇರಳದ ಕೊಲ್ಲಂ ಜಿಲ್ಲೆಯ ಚಾತನ್ನೂರಿನಲ್ಲಿ ಬಿಜೆಪಿಯ ಗೋಪಕುಮಾರ್ ಗೆದ್ದರೆ, ಪಕ್ಷದ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ತಿರುವನಂತಪುರನ ನೇಮಂ ವಿಧಾನಸಭಾ ಕ್ಷೇತ್ರದಿಂದ ಮತ್ತು ಮಾಜಿ ಕೇಂದ್ರ ಸಚಿವ ಕೆ ಮುರಳೀಧರನ್ ಅವರು ಕಳಕೂಟ್ಟಂ ಕ್ಷೇತ್ರದಿಂದ ಗೆದ್ದು ಇದೇ ಮೊದಲ ಬಾರಿಗೆ ಕೇರಳದಲ್ಲಿ ಮೂರು ಕ್ಷೇತ್ರಗಳನ್ನು ಗೆಲ್ಲವಂತಾಯಿತು.

ಹೊಸ ಹುರುಪಿನತ್ತ ಬಿಜೆಪಿ

ಕೇರಳದಲ್ಲಿ ಬಿಜೆಪಿ ಕೇವಲ ಮೂರು ಸ್ಥಾನಗಳನ್ನು ಗೆದ್ದಿದ್ದರೂ, ಪ್ರಮುಖ ಕ್ಷೇತ್ರಗಳಲ್ಲಿ ಮತದಾನದ ಪಾಲನ್ನು ಹೆಚ್ಚಿಸಿಕೊಂಡು ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಎರಡನೇ ಸ್ಥಾನಕ್ಕೆ ಬಂದಿರುವುದು ಕೇರಳದಲ್ಲಿನ ಸಾಂಪ್ರದಾಯಿಕ ರಾಜಕಾರಣಕ್ಕೆ ಹೊಸ ಸವಾಲು ಒಡ್ಡಿದೆ. ಮುಂದಿನ ಚುನಾವಣೆಗಳಲ್ಲಿ ಪಕ್ಷವು ರಾಜ್ಯಾದ್ಯಂತ ಉತ್ತಮ ನೆಲೆ ಕಂಡುಕೊಳ್ಳುವ ನಿರೀಕ್ಷೆಯನ್ನು ವ್ಯಕ್ತಪಡಿಸಿದೆ.

ಚಿನ್ನದ ದರದಲ್ಲಿ ತುಸು ಇಳಿಕೆ

ಬೆಂಗಳೂರು: ಪಂಚ ವಿಧಾನಸಭಾ ಚುನಾವಣೆಯ ಫಲಿತಾಂಶ ಸೋಮವಾರ ಘೋಷಣೆಯಾದ ಬೆನ್ನಲ್ಲೇ ಆಭರಣಪ್ರಿಯರಿಗೆ ಸಿಹಿ ಸುದ್ದಿ ಸಿಕ್ಕಿದೆ.

ಮಂಗಳವಾರ ಚಿನ್ನದ ದರ ಇಳಿಕೆಯಾಗಿದೆ. ಮಂಗಳವಾರ ಬೆಂಗಳೂರಿನಲ್ಲಿ 22 ಕ್ಯಾರೆಟ್‌ನ 1 ಗ್ರಾಂ ಚಿನ್ನಕ್ಕೆ 40 ರುಪಾಯಿ ಕಡಿಮೆಯಾಗಿದ್ದು, ಆ ಮೂಲಕ 13,675 ರುಪಾಯಿಗೆ ಇಳಿದಿದೆ. 24 ಕ್ಯಾರೆಟ್‌ನ 1 ಗ್ರಾಂ ಚಿನ್ನ 44 ರುಪಾಯಿ ಅಗ್ಗವಾಗಿದ್ದು, 14,918 ರುಪಾಯಿಗೆ ಬಂದು ತಲುಪಿದೆ. 22 ಕ್ಯಾರೆಟ್‌ನ 8 ಗ್ರಾಂ ಚಿನ್ನದ ಬೆಲೆ 1,09,400 ರುಪಾಯಿ ಆಗಿದ್ದರೆ, 10 ಗ್ರಾಂಗೆ 1,36,750 ರುಪಾಯಿ ಹಾಗೂ 100 ಗ್ರಾಂಗೆ 13,67,500 ರುಪಾಯಿ ಆಗಿದೆ. 24 ಕ್ಯಾರೆಟ್ 8 ಗ್ರಾಂ ಚಿನ್ನದ ಬೆಲೆ 1,19,344 ರುಪಾಯಿ, 10 ಗ್ರಾಂಗೆ 1,49,180 ರುಪಾಯಿ ಹಾಗೂ 100 ಗ್ರಾಂಗೆ 14,91,800 ರುಪಾಯಿ ಇದೆ.

ಏ.24ರಂದು ಕೋಲ್ಕತ್ತಾದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅಮಿತ್ ಶಾ ಹೇಳಿಕೆ

ಅಂಗ, ಬಂಗ, ಕಳಿಂಗದ ಜಯ: ನಿಜವಾದ ಶಾ ಭವಿಷ್ಯ

ದೆಹಲಿ: ಅತ್ಯಂತ ಕ್ಲಿಷ್ಟಕರ ಚುನಾವಣಾ ಕಣ ಎಂದೆನಿಸಿದ್ದ ಪಶ್ಚಿಮ ಬಂಗಾಳ ದಲ್ಲಿ ಮೊದಲ ಬಾರಿಗೆ ಭಾರೀ ಬಹುಮತ ಪಡೆದು ಬಿಜೆಪಿ ಅಧಿಕಾರ ಗದ್ದುಗೆ ಹಿಡಿದಿರುವುದು ಚುನಾವಣಾ ಚಾಣಕ್ಯ ಅಮಿತ್ ಶಾ ಭವಿಷ್ಯ ವಾಣಿ ನುಡಿದಿದ್ದಕ್ಕೂ ಸಾಮ್ಯತೆ ಇದೆ.

ಶತಾಯಗತಾಯ ಪ. ಬಂಗಾಳವನ್ನು ಗೆಲ್ಲಲೇಬೇಕೆಂದು ವಿಶೇಷ ರಣತಂತ್ರ ರೂಪಿಸಿದ್ದ ಅಮಿತ್ ಶಾ ಅವರು, ಕಳೆದ ಆರು ತಿಂಗಳಿನಿಂದ ಸದ್ದಿಲ್ಲದ ದೀದಿ ಸಾಮ್ರಾಜ್ಯವನ್ನು ಕೆಡವಲು ತಮದೇ ಆದ ವಿಶೇಷವಾದ ರಣತಂತ್ರ ರೂಪಿಸಿ ದ್ದರು. ಅಮಿತ್ ಶಾ ಅವರು ಪ. ಬಂಗಾಳವನ್ನು ಬಿಜೆಪಿ ಗೆಲ್ಲಲಿದೆ ಎಂದು ಎಷ್ಟು ಕರಾರುವ ಕ್ಕಾಗಿ ನುಡಿದಿದ್ದರು ಎಂದರೆ, ಏ.24ರಂದು ಕೋಲ್ಕತ್ತಾದಲ್ಲಿ ನಡೆದ ಪತ್ರಿಕಾಗೋಷ್ಠಿ ಯಲ್ಲಿ ಅಂಗ, ಬಂಗ ಮತ್ತು ಕಳಿಂಗ ರಾಜ್ಯ ದಲ್ಲಿ ನಾವು ಅಧಿಕಾರ ಹಿಡಿದೇ ತೀರುತ್ತೇವೆ ಎಂದು ಅಚಲ ವಿಶ್ವಾಸ ವ್ಯಕ್ತಪಡಿಸಿದ್ದರು.

ಅವರು ಹೇಳಿದ್ದ ಒಂದೊಂದು ಮಾತುಗಳು ಕೂಡ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದು, ಅಮಿತ್ ಶಾ ನಡೆಗೆ ವ್ಯಾಪಕವಾದ ಪ್ರಶಂಸೆ ವ್ಯಕ್ತ ವಾಗಿದೆ. ಈ ಹಿಂದೆ ಬಿಹಾರದಲ್ಲೂ ಎನ್‌ಡಿಎ ಮೈತ್ರಿಕೂಟ ಸರಕಾರ ರಚನೆ ಮಾಡ ಲಿದೆ ಎಂದು ಹೇಳಿದ್ದರು, ಅವರು ನುಡಿ ದಂತೆಯೇ ರಾಜ್ಯದಲ್ಲಿ ಮೈತ್ರಿಕೂಟ ಭಾರೀ ಬಹುಮತ ಪಡೆದು ಅಧಿಕಾರಕ್ಕೆ ಬಂದಿತ್ತು. ಪ. ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯವರ 15 ವರ್ಷಗಳ ಆಳ್ವಿಕೆ ಕೊನೆಗೊಳಿಸಿ ಟಿಎಂಸಿ ಭದ್ರಕೋಟೆಯನ್ನು ಭೇದಿಸಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿ ಮುಖಂಡರ ಈ ಭವಿಷ್ಯವಾಣಿ ಕುರಿತ ವಿಡಿಯೋಗಳು ಫಲಿತಾಂಶ ಪ್ರಕಟಣೆಯ ಬೆನ್ನಲ್ಲೇ ಜಾಲತಾಣಗಳಲ್ಲಿ ವ್ಯಾಪಕವಾಗಿ ವೈರಲ್ ಆಗಿವೆ. ಅಂತೆಯೇ ಈ ಚುನಾವಣೆ ಮುಗಿದ ಬಳಿಕ ಬಿಜೆಪಿ ಆಡಳಿತ ಅಂಗ, ಬಂಗ ಮತ್ತು ಕಳಿಂಗ (ಬಿಹಾರ, ಬಂಗಾಳ, ಒಡಿಶಾ) ಪ್ರದೇಶ ಗಳಿಗೆ ವ್ಯಾಪಿ ಸಿರುತ್ತದೆ ಎಂದು ಅಮಿತ್ ಶಾ ಹೇಳಿದ್ದು ಇದೀಗ ನಿಜವಾಗಿದೆ.

ಎಎಪಿ ಕಿರುಕುಳ: ರಾಷ್ಟ್ರಪತಿಗೆ ಚಡ್ಡಾ ದೂರು



ರಾಷ್ಟ್ರಪತಿಗೆ ಎಎಪಿ ವಿರುದ್ಧ ದೂರು ನೀಡಿದ ನಿಯೋಗ.

ದೆಹಲಿ: ಆಮ್ ಆದ್ಮಿ ಪಕ್ಷ ತೊರೆದು 2 ವಾರಗಳ ಹಿಂದೆ ಬಿಜೆಪಿ ಸೇರಿದ 7 ಸಂಸದರಿಗೆ ಕಿರುಕುಳ ನೀಡಲಾಗುತ್ತಿದೆ ಎಂದು ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ನೇತೃತ್ವದಲ್ಲಿ 4 ಸಂಸದರ ತಂಡ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮಂಗಳವಾರ ದೂರು ನೀಡಿದೆ.ಪಂಜಾಬ್‌ನಲ್ಲಿರುವ ಎಎಪಿ ಸರಕಾರ 7 ಸಂಸದರ ವಿರುದ್ಧ ಪ್ರತೀಕಾರ ರಾಜಕೀಯ ನಡೆಸುತ್ತಿದೆ ಎಂದು ಆರೋಪಿಸಲಾಗಿದೆ. ಎಎಪಿ ತೊರೆದ ನಂತರ ಏಳೂ ಸಂಸದರಿಗೆ ಪಂಜಾಬ್ ಸರಕಾರ ರಾಜ್ಯ ಪೊಲೀಸರ ಮೂಲಕ ಎಫ್‌ಐಆರ್ ದಾಖಲಿಸುವುದು, ರಾಜ್ಯದ ಆಡಳಿತ ಸಂಸ್ಥೆಗಳ ಮೂಲಕ ಬೆದರಿಕೆ ಮತ್ತು ಒತ್ತಡ ಹಾಕುವುದೂ ಸೇರಿದಂತೆ ವಿವಿಧ ಬಗೆಯಲ್ಲಿ ಕಿರುಕುಳ ನೀಡುತ್ತಿದೆ. ಇದು ರಾಜಕೀಯ ಪ್ರೇರಿತ ಕ್ರಮವಾಗಿದೆ. ಈ ವಿಚಾರದಲ್ಲಿ ರಾಷ್ಟ್ರಪತಿ ಅವರು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಂಸದರ ತಂಡ ಮನವಿ ಸಲ್ಲಿಸಿದೆ.

ಪದ್ಮಶ್ರೀ ಪುರಸ್ಕೃತೆ ಅಪಹರಣ ಯತ್ನ: ಪೊಲೀಸರಿಂದ ರಕ್ಷಣೆ

ರಾಜನಂದಗಾಂವ್: ಭಾರತ ಸರಕಾರದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಫೂಲ್‌ಬಸನ್ ಬಾಯಿ ಯಾದವ್ ಅವರ ಅಪಹರಣಕ್ಕೆ ಯತ್ನ ನಡೆದಿದೆ. ಸುದೈವವಶಾತ್ ಸಕಾಲದಲ್ಲಿ ಪೊಲೀಸರು ಮಧ್ಯಪ್ರದೇಶಿಸಿ ಅಪಹರಣ ಯತ್ನವನ್ನು ವಿಫಲಗೊಳಿಸಿದ್ದಾರೆ. ಅಲ್ಲದೇ, ಅಪಹರಣಕ್ಕೆ ಯತ್ನಿಸಿದ ಮೂವರು ದುಷ್ಕರ್ಮಿಗಳನ್ನೂ ಬಂಧಿಸಿದ್ದಾರೆ.

ಸ್ವಸಹಾಯ ಗುಂಪು ಸಬಲೀಕರಣದಲ್ಲಿನ ಕೆಲಸಗಳಿಗಾಗಿ ಫೂಲ್‌ಬಸನ್ ಬಾಯಿ ಯಾದವ್ ಅವರಿಗೆ 2012ರಲ್ಲಿ ಪದ್ಮಶ್ರೀ ಪ್ರಶಸ್ತಿ ಸಂದಿದೆ. ಸೋಮವಾರ ಬೆಳಗ್ಗೆ ರಾಜನಂದಗಾಂವ್ ಜಿಲ್ಲೆಯಲ್ಲಿ ಫೂಲ್‌ಬಸನ್ ಬಾಯಿ ಅವರ ಅಪಹರಣಕ್ಕೆ ಯತ್ನ ನಡೆದಿದೆ.

ಛತ್ತೀಸ್‌ಗಢದ ಹೆಸರಾಂತ ಸಾಮಾಜಿಕ ಕಾರ್ಯಕರ್ತೆಯಾಗಿರುವ ಫೂಲ್‌ಬಸನ್ ಬಾಯಿ ಯಾದವ್ 'ಮಾ ಬಾಮಲೇಶ್ವರಿ ಜನಹಿತ್ ಕರೇ ಸಮಿತಿ'ಯ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣ, ಸ್ವಸಹಾಯ ಗುಂಪುಗಳ ರಚನೆ ಮತ್ತು ಮಕ್ಕಳ ಹಕ್ಕುಗಳಿಗಾಗಿ ಶ್ರಮಿಸುತ್ತಿದ್ದಾರೆ. ಈವರೆಗೆ 8 ಲಕ್ಷಕ್ಕೂ ಹೆಚ್ಚು ಮಹಿಳೆಯರ ಜೀವನದಲ್ಲಿ ಸುಧಾರಣೆಗೆ ಕಾರಣವಾಗಿದ್ದಾರೆ.

ಬೆಮೆತಾರಾ ಮೂಲದ ಖುಷ್ಬು ಸಾಹು ಎಂಬಾತ ಬೆಳಗ್ಗೆ 10.30ರ ವೇಳೆ ಫೂಲ್‌ಬಸನ್ ಬಾಯಿ ಅವರನ್ನು ಭೇಟಿ ಮಾಡಿದ್ದಾನೆ. ರಸ್ತೆಯಲ್ಲಿ ನಿಲ್ಲಿಸಿರುವ ಕಾರಿನಲ್ಲಿ ವಿಶೇಷಚೇತನ ಮಹಿಳೆಯೊಬ್ಬರಿದ್ದಾರೆ. ಅವರು ನಿಮ್ಮೊಂದಿಗೆ ಫೋಟೊ ತೆಗೆಸಿಕೊಳ್ಳಲು ಬಯಸಿದ್ದಾರೆ ಎಂದು ಸುಳ್ಳು ಹೇಳಿ ಕರೆದೊಯ್ದಿದ್ದಾನೆ. ಫೂಲ್‌ಬಸನ್ ಅವರು ಮನೆಯಿಂದ ಹೊರ ಬಂದು ಕಾರಿನ ಬಳಿ ತೆರಳಿದಾಗ, ಎಳೆದು ಕಾರಿನೊಳಕ್ಕೆ ನೂಕಿದ ಸಾಹು, ಬಳಿಕ ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿದ್ದಾನೆ. ದುಷ್ಕರ್ಮಿಗಳು ಫೂಲ್‌ಬಸನ್ ಅವರ ಕೈಗಳನ್ನು ಕಟ್ಟಿ ಬಟ್ಟೆಯಿಂದ ಬಾಯಿ ಮುಚ್ಚಿದ್ದಾರೆ. ಅದೇ ಮಾರ್ಗದಲ್ಲಿ ವಾಹನ ತಪಾಸಣೆ ನಡೆಸಿದ್ದ ಪೊಲೀಸರು ರಾಜನಂದ ಗಾಂವ್-ಖೈರಾಗರ್ ರಸ್ತೆಯ ಚಿಖ್ಲಿ ಪೊಲೀಸ್ ಔಟ್‌ಪೋಸ್ಟ್ ಬಳಿ ಕಾರನ್ನು ತಡೆದು ನಿಲ್ಲಿಸಿದ್ದು, ಫೂಲ್‌ಬಸನ್ ಅವರನ್ನು ರಕ್ಷಿಸಿದ್ದಾರೆ.

ಏ.30ರಿಂದ ಹಾರಾಟ ನಿಲ್ಲಿಸಿದ ಇಂಡಿಗೋ ಏರ್‌ಲೈನ್ಸ್ | ನೈಟ್ ಲ್ಯಾಂಡಿಂಗ್ ವ್ಯವಸ್ಥೆಯ ಕೊರತೆ

ಶಿವಮೊಗ್ಗ ವಿಮಾನ ನಿಲ್ದಾಣ ಸೇವೆ ಮೂರು ವರ್ಷಕ್ಕೇ ಸ್ಥಗಿತ?

ರೇಣುಕಾರಾಧ್ಯ, ಹೆಗ್ಗರೆ, ಶಿವಮೊಗ್ಗ

ಮಲೆನಾಡಿನ ಜನರ ಬಹುದಿನಗಳ ಕನಸಾಗಿದ್ದ ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ 3 ವರ್ಷಗಳ ಪೂರೈಸುವ ಮುನ್ನವೇ ಇಂಡಿಗೋ ಏರ್‌ಲೈನ್ಸ್ ಹಾರಾಟ ನಿಲ್ಲಿಸಿದೆ. ಇದರಿಂದ ಅದ್ದೂರಿಯಾಗಿ ಆರಂಭಗೊಂಡ ವಿಮಾನ ಸೇವೆಯೊಂದು ದಿಢೀರನೇ ಅಂತ್ಯ ಕಂಡು ಮುಂದೇನು ಎಂಬ ಪ್ರಶ್ನೆ ಹುಟ್ಟು ಹಾಕಿದೆ.

ಕಳೆದ 2023ರ ಆಗಸ್ಟ್ 31ರಂದು ಅದ್ದೂರಿಯಾಗಿ ಆರಂಭಗೊಂಡಿದ್ದ ಇಂಡಿಗೋ ಏರ್‌ಲೈನ್ಸ್ ಸೇವೆ ಬಲು ಬೇಗ ಸ್ಥಗಿತಗೊಂಡಿದ್ದು ಯಾಕೆ? ಎಂಬುದಕ್ಕೆ ಇದುವರೆಗೂ ಸರಕಾರದಿಂದಲೂ ನಿಖರವಾದ ಉತ್ತರ ಬಂದಿಲ್ಲ. ಆದರೆ, ವಿಮಾನ ಕಂಪನಿ ಹೇಳು ತ್ತಿರುವ ಕಾರಣಗಳನ್ನು ನಂಬುವಂತೆಯೇ ಇಲ್ಲ. ತಿಂಗಳಿಗೆ ನೂರಾರು ಜನರಿಗೆ ಸೇವೆ ಒದಗಿಸುತ್ತಿದ್ದ ವಿಮಾನ ನಿಂತು ಹೋಗಿರು ವುದು ಶಿವಮೊಗ್ಗದ ಜನರಿಗೆ ಬೇಸರ ತಂದಿದೆ.

ಈ ವಿಮಾನ ನಿಲ್ದಾಣ ಆರಂಭವಾದ ದಿನದಿಂದಲೂ ಲಕ್ಷಾಂತರ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಟ್ಟಿದೆ. ಶಿವಮೊಗ್ಗ ನಿಲ್ದಾಣದಿಂದ ಇದೂವರೆಗೆ 2,400ಕ್ಕೂ ಅಧಿಕ ವಿಮಾನಗಳು ಸಂಚರಿಸಿದ್ದು, ಒಂದು ಲಕ್ಷಕ್ಕೂ ಹೆಚ್ಚು ಜನರು ಇದರ ಲಾಭ ಪಡೆದಿದ್ದಾರೆ. ಕಳೆದ ಕೆಲವು ಸಮಯದಿಂದ ನೈಟ್ ಲ್ಯಾಂಡಿಂಗ್ ವ್ಯವಸ್ಥೆಯ ಕೊರತೆ ಹಾಗೂ ಪದೇ ಪದೇ ವಿಮಾನಗಳು ರದ್ದಾಗಿದ್ದವು.

ಕೈಗಾರಿಕೋದ್ಯಮಿಗಳಿಗೆ ಹೊಡೆತ?: ಏಪ್ರಿಲ್ 30 ರಂದು ಮಧ್ಯಾಹ್ನ 2:30ಕ್ಕೆ ಶಿವಮೊಗ್ಗದಿಂದ ಹೊರಡುವ ವಿಮಾನವೇ ಕೊನೆಯದಾಗಿದೆ. ಈ ಬೆಳವಣಿಗೆ ಜಿಲ್ಲೆಯ ಕೈಗಾರಿಕೋದ್ಯಮಿಗಳಿಗೆ ದೊಡ್ಡ ಹೊಡೆತವಾಗಿದೆ. ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ಹಾಗೂ ಇಂಡಿಗೋ ನಡುವಿನ ಒಪ್ಪಂದ 2025ರ ಆಗಸ್ಟ್‌ಗೆ ಕೊನೆಯಾಗಿದೆ ಎಂದು ವರದಿ ಆಗಿದೆ. ಅಕ್ಟೋಬರ್‌ವರೆಗೆ ಸೇವೆ ಸ್ಥಗಿತಗೊಳಿಸುತ್ತಿರುವುದಾಗಿ ಇಂಡಿಗೋ ಆಡಳಿತ ಮಂಡಳಿ ಅಧಿಕೃತವಾಗಿ ಕೆಎಸ್‌ಐಡಿಸಿಗೆ ಪತ್ರ ಬರೆದಿದೆ. ಅಕ್ಟೋಬರ್ ಬಳಿಕ ಮತ್ತೆ ಸೇವೆ ಆರಂಭಿಸಲಿದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಆದರೆ ಅಲ್ಲಿಯವರೆಗೆ ಮಾತ್ರ ಈ ವಿಮಾನ ಹಾರುವುದಿಲ್ಲ ಎಂಬುದು ನಿಶ್ಚಿತ. ಇಂಡಿಗೋ ದೇಶದೊಳಗೆ ಅನೇಕ ನಗರಗಳಿಗೆ ನೀಡುತ್ತಿದ್ದ ಸೇವೆಯನ್ನು ತಾತ್ಕಾಲಿಕವಾಗಿ ಹಿಂಪಡೆದಿದೆ. ಡಿಜಿಸಿಎ ವಿಧಿಸಿದ ಷರತ್ತು ಪೂರೈಸುವುದು ಹೊರೆಯಾಗಿರುವುದೇ ಇದಕ್ಕೆ ಕಾರಣ. ಮುಖ್ಯವಾಗಿ ಸಿಬ್ಬಂದಿ ವಿಚಾರದಲ್ಲಿನ ಷರತ್ತು ಆ ಸಂಸ್ಥೆಗೆ ಹೊರೆಯಾಗಿತ್ತು. ಷರತ್ತು ಪೂರೈಸಲು ಮುಂದಾದರೆ ಆರ್ಥಿಕ ಹೊರೆ ಉಂಟಾಗುತ್ತದೆ.

ಷರತ್ತು ಪೂರೈಸದಿದ್ದರೆ ದಂಡ ಪಾವತಿಸಬೇಕಾಗುತ್ತದೆ. ಒಂದು ರೀತಿ ಎರಡು ಅಲುಗಿನ ಕತ್ತಿಯಲ್ಲಿ ಇಂಡಿಗೋ ಸಿಲುಕಿಕೊಂಡಿತ್ತು. ಅದರಿಂದ ಹೊರಬರಲು ಸೇವೆ ಸ್ಥಗಿತದ ತೀರ್ಮಾನಕ್ಕೆ ಬಂದಿದೆ.

ಇಂಡಿಗೋ ವಿಮಾನ ಗುರುವಾರ ಶಿವಮೊಗ್ಗದಿಂದ ಬೆಂಗಳೂರಿಗೆ ಮರಳುತ್ತಿದ್ದಂತೆಯೇ ಇಂಡಿಗೋದ ಎಲ್ಲ ಸಿಬ್ಬಂದಿಯನ್ನು ಮಂಗಳೂರು, ಹುಬ್ಬಳ್ಳಿ ಗೆ ಸ್ಥಳಾಂತರಿಸಲಾಗಿದೆ. ಶಿವಮೊಗ್ಗ-ಬೆಂಗಳೂರು ನಡುವಿನ ಇಂಡಿಗೋ ವಿಮಾನ ಎಂದೂ ನಷ್ಟದ ಹಾದಿಗೆ ಹೋಗಿರಲಿಲ್ಲ. ಪ್ರತಿ ಟ್ರಿಪ್‌ನಲ್ಲೂ ಶೇ. 75-80ರಷ್ಟು ಪ್ರಯಾಣಿಕರು ಇರುತ್ತಿದ್ದರು. ಇಂಡಿಗೋ ಕಂಪನಿಯೇ ಸರ್ಕಾರಕ್ಕೆ ಆದಾಯ ನೀಡುತ್ತಿತ್ತು. ಏರ್‌ಪೋರ್ಟ್ ಬಳಕೆಯ ಶುಲ್ಕವಾಗಿ ಪ್ರತಿ ಪ್ರಯಾಣಿಕರ ಪಾಲು 750 ರೂ.ಅನ್ನು ಕೆಎಸ್‌ಐಡಿಸಿಗೆ ಇಂಡಿಗೋ ಪಾವತಿ ಮಾಡುತ್ತಿತ್ತು. ವಾರ್ಷಿಕ ಇದರ ಒಟ್ಟು ಮೌಲ್ಯ 1.50 ಕೋಟಿ ರು. ಆಗುತ್ತಿತ್ತು. ಸದ್ಯ ಶಿವಮೊಗ್ಗದಿಂದ ಬೆಂಗಳೂರಿನ ಜತೆಗೆ ಹೈದರಾಬಾದ್, ತಿರುಪತಿ, ಗೋವಾ ಹಾಗೂ ಚೆನ್ನೈಗೆ ಸಂಪರ್ಕವೂ ಇದೆ. ಶಿವಮೊಗ್ಗದಿಂದ ಇಂಡಿಗೋ, ಸ್ಟಾರ್ ಏರ್‌ಲೈನ್ಸ್ ಮತ್ತು ಸ್ಪೈಸ್ ಜೆಟ್ ವಿಮಾನಗಳು ಹಾರಾಟ ಮಾಡುತ್ತಿವೆ.

ಬೇರೆ ವಿಮಾನ ಸಂಸ್ಥೆಗಳೊಂದಿಗೂ ಮಾತುಕತೆ

ಶಿವಮೊಗ್ಗ-ಬೆಂಗಳೂರು ನಡುವಿನ ಇಂಡಿಗೋ ವಿಮಾನ ಸೇವೆ ಉಳಿಸಿ ಕೊಳ್ಳಲು ಎಲ್ಲ ರೀತಿ ಪ್ರಯತ್ನ ಮಾಡಿ ದರೂ ಅದು ಫಲ ನೀಡಿಲ್ಲ. ಆದರೆ ಆಶಾ ಭಾವನೆ ಕುಂದಿಲ್ಲ. ಪ್ರಯತ್ನ ಮುಂದುವರಿದಿದೆ. ಬೇರೆ ವಿಮಾನ ಸಂಸ್ಥೆಗಳೊಂದಿಗೂ ಮಾತು ಕತೆ ನಡೆಯುತ್ತಿದೆ. ಶೀಘ್ರದಲ್ಲೇ ಶುಭ ಸುದ್ದಿ ಬರಲಿದೆ ಎಂದು ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ ಭರವಸೆ ನೀಡಿದ್ದಾರೆಯಾ ದರೂ, ಪರಿಸ್ಥಿತಿ ಅನಿಶ್ಚಿತೆತೆ ಯಲ್ಲಿ ಇದೆ. ರಾಜ್ಯದೊಳಗೆ ಸಂಚರಿಸುವ ವಿಮಾನಗಳು ಉಡಾನ್ ವ್ಯಾಪ್ತಿಗೆ ಬರುವು ದಿಲ್ಲ. ಆದರೆ ಯಡಿಯೂರಪ್ಪ ಸಿಎಂ ಆಗಿದ್ದಾಗ ಶಿವಮೊಗ್ಗ-ಬೆಂಗಳೂರು ನಡುವಿನ ವಿಮಾನ ಹಾರಾಟಕ್ಕೆ ಪ್ರತಿ ಸೀಟಿಗೆ ಇಂಡಿಗೂ ಕಂಪನಿಗೆ 500 ರು. ರಾಜ್ಯ ಸರಕಾರದಿಂದ ನೀಡುತ್ತಿದ್ದರು. ಇದರಿಂದ ಪ್ರಯಾಣಿಕರಿಗೂ ಹೊರೆ ಯಾಗಲಿಲ್ಲ. ವಿಮಾನ ಕಂಪನಿಗೂ ನಷ್ಟವಾ ಗಲಿಲ್ಲ. ಆದರೆ ಈಗ ರಾಜ್ಯ ಸರಕಾರ ಹಣ ನೀಡಲು ಸಿದ್ಧವಿಲ್ಲ. ಜತೆಗೆ ಡಿಜಿಸಿಎ ನಿಯ ಮಾವಳಿ ಗಳನ್ನೂ ಭರಿಸುವ ಪೂರ್ಣ ಸಾಮರ್ಥ್ಯವೂ ಇಂಡಿಗೋ ಕಂಪನಿಗೆ ಇಲ್ಲ. ಹೀಗಾಗಿ ತಾತ್ಕಾಲಿಕವಾಗಿ ಸೇವೆ ಸ್ಥಗಿತಗೊಳಿ ಸುತ್ತಿದ್ದಾರೆ ಎಂದು ಸಂಸದರೇ ಹೇಳುತ್ತಿದ್ದಾರೆ.

ಜೂನ್‌ಗೆ ನೈಟ್ ಲ್ಯಾಂಡಿಂಗ್ ವರ್ಕ್ ಮುಗಿಯುವುದೇ?

ನಗರಕ್ಕೆ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ನಿಗಮ ಮಂಡಳಿಯ ಅಧ್ಯಕ್ಷರಾದ ನಂಜಯ್ಯ ಮಠ ರವರು ಭೇಟಿ ನೀಡಿ ಮೇ ಮೊದಲನೇ ವಾರದಲ್ಲಿಯೇ 7 ಮತ್ತು 8 ತಾರೀಖಿನಂದು ಮತ್ತೊಮ್ಮೆ ಆಗ ಮಿಸಲಿದ್ದು ಅದರೊಳಗಾಗಿ ನೈಟ್ ಲ್ಯಾಂಡಿಂಗ್ ಕಾಮಗಾರಿ ಪೂರ್ಣಗೊಳಿಸ ಬೇಕೆಂದು ಕಾಮಗಾರಿಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಗುತ್ತಿಗೆದಾರರನ್ನು ಕರೆಸಿ ತಿಳಿಸಿದರು. ಜೂನ್ ತಿಂಗಳ ಮೊದಲನೇ ವಾರದಲ್ಲಿ ನೈಟ್ ಲೈಟಿಂಗ್ ಕಾಮಗಾರಿ ಪೂರ್ಣಗೊಳ್ಳಲಿದೆ ಎಂಬ ಭರವಸೆಯನ್ನು ಅಧಿಕಾರಿಗಳು ನೀಡಿದರು. ಇದರ ಜೊತೆಗೆ ಇಂಡಿಗೋ ವಿಮಾನ ಸಂಸ್ಥೆ ಪ್ರಯಾಣವನ್ನು ನಿಲ್ಲಿಸಿರುವುದು ಈ ನೈಟ್ ಲ್ಯಾಂಡಿಂಗ್ ವಿಚಾರಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ, ನೈಟ್ ಲ್ಯಾಂಡಿಂಗ್ ಕಾಮಗಾರಿಗೆ ರಾಜ್ಯ ಸರಕಾರವೇ ಹಣವನ್ನು ನೀಡಿದ್ದು, ಇಂಡಿಗೋ ವಿಮಾನ ಕೇಂದ್ರ ಸರಕಾರದ ಅಸ್ತಿತ್ವದಲ್ಲಿರುವುದರಿಂದ ಪೈಲೆಟ್ ಗಳ ಕೊರತೆಯಿಂದ ಚಾಲನೆಯನ್ನು ನಿಲ್ಲಿಸಿರುತ್ತದೆ. ನೈಟ್ ಲ್ಯಾಂಡಿಂಗ್ ಚಾಲನೆಗೆ ವಿಮಾನ ಸಂಸ್ಥೆಗಳೊಂದಿಗೆ ಚರ್ಚಿಸಿ ವಿಮಾನದ ವ್ಯವಸ್ಥೆಯನ್ನು ಕಲ್ಪಿಸಿ ಕೊಡುವುದಾಗಿ ನಂಜಯ್ಯ ಮಠ ತಿಳಿಸಿದರು.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಒಳಗಿನ ಅಪಘಾತ ತಡೆಗೆ ಹೊಸ ವ್ಯವಸ್ಥೆ | ಎಐ ಕ್ಯಾಮೆರಾಗಳಿಂದ ನಿಗಾ ತಂತ್ರಜ್ಞಾನ

ಕೆಐಎಲ್‌ನಲ್ಲಿ ಅತ್ಯಾಧುನಿಕ ಸುರಕ್ಷತಾ ವ್ಯವಸ್ಥೆ

ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ದೇಶ, ವಿದೇಶಗಳಲ್ಲಿ ವಿಮಾನ ಅಪಘಾತಗಳು ಹೆಚ್ಚಾಗುತ್ತಿರುವ ಹೊತ್ತಿನಲ್ಲೇ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು (ಕೆಐಎ) ಪ್ರಯಾಣಿಕರ ಮತ್ತು ವಿಮಾನಗಳ ಸುರಕ್ಷತೆಗಾಗಿ ಹೊಸ ಹೆಜ್ಜೆ ಇರಿಸಿದೆ. ವಿಮಾನಗಳು ಓಡಾಡುವ ಜಾಗದಲ್ಲಿ (ಏರ್‌ಸೈಡ್) ಭದ್ರತೆ ಹೆಚ್ಚಿಸಲು 'ಸ್ಮಾರ್ಟ್ ಏರ್‌ಸೈಡ್ ಸೇಫ್ಟಿ ಸಿಸ್ಟಂ' ಎಂಬ ಹೊಸ ತಂತ್ರಜ್ಞಾನವನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು (ಬಿಐಎಎಲ್) ಜಾರಿಗೆ ತಂದಿದೆ.

ವಿಮಾನ ನಿಲ್ದಾಣದೊಳಗೆ ಕ್ರಾಸ್ ಸರ್ವಿಸ್ ರಸ್ತೆಗಳಿರುತ್ತವೆ. ಅಲ್ಲಿ ವಿಮಾನಗಳು ಮತ್ತು ಸಿಬ್ಬಂದಿಯ ವಾಹನಗಳು ಒಟ್ಟೊಟ್ಟಿಗೆ ಓಡಾಡುತ್ತಿರುತ್ತವೆ. ಹೀಗಾಗಿ ಅಲ್ಲಿ ಅಪಘಾತ ಆಗುವ ಸಾಧ್ಯತೆ ಇರುತ್ತದೆ. ಹಿಂದೆ ಅಲ್ಲಿ ವಾಹನಗಳನ್ನು ನಿಯಂತ್ರಿಸುವ ಲೈಟ್‌ಗಳನ್ನು ಸಿಬ್ಬಂದಿಗಳೇ ಖುದ್ದಾಗಿ ಆನ್/ಆಫ್ ಮಾಡುತ್ತಿದ್ದರು. ಅದರಲ್ಲಿ ಕೆಲವೊಮ್ಮೆ ತಪ್ಪುಗಳಾಗಿ, ವಿಮಾನಗಳ ಹಾರಾಟ ತಡವಾಗುವ ಘಟನೆಗಳೂ ನಡೆಯುತ್ತಿದ್ದವು. ಅದನ್ನು ತಪ್ಪಿಸಲು ಈಗ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಎಐ ಕ್ಯಾಮೆರಾಗಳಿಂದ ನಿಗಾ: ಹೊಸ ವ್ಯವಸ್ಥೆಯು ಸ್ಮಾರ್ಟ್ ಕ್ಯಾಮೆರಾಗಳು ಮತ್ತು ಎಐ ತಂತ್ರಜ್ಞಾನವನ್ನು ಒಳಗೊಂಡಿದ್ದು, ಅದು ರಸ್ತೆಯಲ್ಲಿ ಓಡಾಡುವ ವಾಹನಗಳನ್ನು ಗುರುತಿಸಿ, ಏನಾದರೂ ಅಪಾಯ ಎದುರಾದರೆ ತಕ್ಷಣವೇ ಎಚ್ಚರಿಕೆ ನೀಡುತ್ತದೆ. ಯಾರಾದರೂ ಟ್ರಾಫಿಕ್ ನಿಯಮ ಉಲ್ಲಂಘಿಸಿದರೆ ಕ್ಷಣಾರ್ಧದಲ್ಲಿ ಅಧಿಕಾರಿಗಳಿಗೆ ಮಾಹಿತಿ ರವಾನೆಯಾಗುತ್ತದೆ. ಅಲ್ಲದೆ ಪ್ರತಿಯೊಂದು ಸಣ್ಣ ಅಂಶವೂ ಕಂಪ್ಯೂಟರ್‌ನಲ್ಲಿ ಡಿಜಿಟಲ್ ರೂಪದಲ್ಲಿ ದಾಖಲಾಗುತ್ತದೆ. ಇದರಿಂದ ವಿಮಾನ ನಿಲ್ದಾಣದೊಳಗಿನ ಟ್ರಾಫಿಕ್ ನಿರ್ವಹಣೆಯಲ್ಲಿ ಪಾರದರ್ಶಕತೆ ಹೆಚ್ಚಾಗಲಿದೆ, ಜೊತೆಗೆ ಕಾರ್ಯಕ್ಷಮತೆ ಹೆಚ್ಚಾಗಲಿದ್ದು, ನಿಖರ ಕಾರ್ಯಾಚರಣೆಯೂ ಸಾಧ್ಯವಾಗಲಿದೆ. ಗ್ರಾಹಕರಿಗೆ ನೀಡುವ ಅತ್ಯುತ್ತಮ ಸೇವೆಗಾಗಿ ಜಾಗತಿಕ ಮಟ್ಟದ ಪ್ರತಿಷ್ಠಿತ ಎಸಿಐ 5-ಸ್ಟಾರ್ ಏರ್‌ಪೋರ್ಟ್ ರೇಟಿಂಗ್ ಅನ್ನು ಪಡೆದುಕೊಂಡಿರುವ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಹಣ್ಣು, ತರಕಾರಿಯಂತಹ ಬೇಗ ಕೊಳೆಯುವ ವಸ್ತುಗಳ ಸಾಗಣೆಯಲ್ಲಿ ಸತತ 4ನೇ ವರ್ಷವೂ ಭಾರತದ ನಂ. 1 ವಿಮಾನ ನಿಲ್ದಾಣವಾಗಿ ಗುರುತಿಸಿಕೊಂಡಿದೆ.

ಕತ್ತಲು, ಮಂಜಿನಲ್ಲೂ ವಿಮಾನ ನಿಲ್ದಾಣ ಸುರಕ್ಷಿತ

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಈ ಹೊಸ ತಂತ್ರಜ್ಞಾನವು ವಿಮಾನ ಹಾಗೂ ವಾಹನಗಳ ನಡುವೆ ಒಂದು ಸುರಕ್ಷಿತ ಅಂತರವನ್ನು ನಿರ್ವಹಿಸುತ್ತದೆ. ಇದರಿಂದ ರಾತ್ರಿ ವೇಳೆ ಅಥವಾ ಮಂಜು ಮುಸುಕಿ ಕಡಿಮೆ ಗೋಚರತೆ ಇದ್ದಾಗ ಮನುಷ್ಯರಿಂದ ನಡೆಯುವ ತಪ್ಪುಗಳು ತಪ್ಪಲಿವೆ. ಟ್ರಾಫಿಕ್ ಜಾಮ್ ಇಲ್ಲದೆ ವಿಮಾನಗಳು ಸರಿಯಾದ ಸಮಯಕ್ಕೆ ಹಾರಾಟ ನಡೆಸಲು ಇದು ಸಹಾಯ ಮಾಡಲಿದೆ. ಮುಂದಿನ ದಿನಗಳಲ್ಲಿ ಈ ಮಾಹಿತಿಯನ್ನು ಬಳಸಿಕೊಂಡು ವಿಮಾನ ನಿಲ್ದಾಣದ ಭದ್ರತೆಯನ್ನು ಮತ್ತಷ್ಟು ಹೆಚ್ಚಿಸಲೂ ಯೋಜನೆ ರೂಪಿಸಿಕೊಳ್ಳಬಹುದಾಗಿದೆ.



ದಾಖಲೆ ಸಂಖ್ಯೆಯ ಪ್ರಯಾಣಿಕರಿಗೆ ಸೇವೆ

2024-25ನೇ ವರ್ಷದಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು 4.18 ಕೋಟಿಗೂ ಹೆಚ್ಚು ಜನರಿಗೆ ಸೇವೆ ನೀಡಿದೆ. ದಕ್ಷಿಣ ಭಾರತದಲ್ಲಿ ಈ ಸಾಧನೆ ಮಾಡಿದ ಮೊದಲ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾರತದ 3ನೇ ಅತೀ ದೊಡ್ಡ ವಿಮಾನ ನಿಲ್ದಾಣವಾಗಿರುವ ಕೆಐಎ ಮೂಲಕ ಈವರೆಗೆ 35 ಕೋಟಿಗೂ ಹೆಚ್ಚು ಜನರು ಪ್ರಯಾಣಿಸಿದ್ದಾರೆ.

ವಿಶ್ವವಾಣಿ ಬೆಂಗಳೂರು 06-05-2026 ಬುಧವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿದ ಗ್ರೆಗರ್ ಮೆಂಡಲ್





ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ಒಂದು ಸಣ್ಣ ಮಠ. ಮಠದ ಹಿಂಭಾಗದಲ್ಲಿ ಒಂದು ತೋಟ. ಆ ತೋಟದಲ್ಲಿ ಸಾಮಾನ್ಯ ಬಟಾಣಿ ಗಿಡಗಳು. ಅವುಗಳಲ್ಲಿ ಕೆಲವಕ್ಕೆ ನೇರಳೆ ಹೂವು, ಕೆಲವಕ್ಕೆ ಬಿಳಿ ಹೂವು. ಕೆಲವಕ್ಕೆ ಉದ್ದ ಕಾಂಡ, ಕೆಲವಕ್ಕೆ ಗಿಡ್ಡ ಕಾಂಡ. ಕೆಲವು ಬೀಜಗಳ ಮೇಲ್ಮೈ ನುಣುಪು, ಕೆಲವು ಬೀಜಗಳ ಮೇಲ್ಮೈ ಮುದುಡಿಕೆ. ಜನ ಸಾಮಾನ್ಯರ ಕಣ್ಣಿಗೆ ಇದು ತೋಟಗಾರಿಕೆಯ ಒಂದು ಸಾಮಾನ್ಯ ವಿಷಯ ಮಾತ್ರ.

ಒಬ್ಬ ಶಾಂತ, ಹಠಮಾರಿ, ಲೆಕ್ಕಪ್ರಿಯ ಸನ್ಯಾಸಿಯ ಕಣ್ಣಿಗೆ, ಇದು ಸಾಮಾನ್ಯ ತೋಟಗಾರಿಕೆಯ ವಿಷಯವಾಗಿರಲಿಲ್ಲ, ಅದರಲ್ಲಿ ಅಡಗಿದ್ದ ಪ್ರಕೃತಿಯ ರಹಸ್ಯವನ್ನು ಭೇದಿಸುವ ಛಲವಿತ್ತು! ಆ ಸನ್ಯಾಸಿಯ ಹೆಸರು ಗ್ರೆಗರ್ ಜೋಹಾನ್ ಮೆಂಡಲ್ (1822-1884). ಅವರನ್ನು ಇಂದು ನಾವು 'ತಳಿವಿಜ್ಞಾನದ ಪಿತಾಮಹ' (ಫಾದರ್ ಆಫ್ ಜೆನೆಟಿಕ್ಸ್) ಎಂದು ಕರೆಯುತ್ತೇವೆ. ಆದರೆ ಅವರ ಬದುಕಿನ ಕಾಲದಲ್ಲಿ ಅವರನ್ನು ಅಷ್ಟಾಗಿ ಯಾರೂ ಗಮನಿಸಲಿಲ್ಲ. ಅವರು ದೊಡ್ಡ ವಿಶ್ವವಿದ್ಯಾಲಯದ ಪ್ರಸಿದ್ಧ ಪ್ರಾಧ್ಯಾಪಕರಾಗಿರಲಿಲ್ಲ. ರಾಜನ ಅರಮನೆಯ ವಿಜ್ಞಾನಿಯಲ್ಲ. ದೊಡ್ಡ ಪ್ರಯೋಗಾಲಯದ ಮುಖ್ಯಸ್ಥರಾಗಿರಲಿಲ್ಲ. ಅವರು ಕೇವಲ ಬ್ರುನೊ ನಗರದಲ್ಲಿದ್ದ ಆಗಸ್ಟಿನಿಯನ್ ಮಠದ ಸನ್ಯಾಸಿ; ತಮ್ಮ ತೋಟದಲ್ಲಿ ಬಟಾಣಿ ಗಿಡಗಳನ್ನು ಬೆಳೆಸಿ, ಅವುಗಳ ಸಂತತಿಯನ್ನು ಎಣಿಸುತ್ತಿದ್ದ ಅಪರೂಪದ, ವಿಚಿತ್ರ ಹವ್ಯಾಸದ ಒಬ್ಬ ಅಸಾಮಾನ್ಯ ಮಾನವ ಮಾತ್ರವಾಗಿದ್ದ.

ಜನನ: ಮೆಂಡಲ್ 1822 ಜುಲೈ 20ರಂದು ಇಂದಿನ ಚೆಕ್ ಗಣರಾಜ್ಯದ ಭಾಗವಾಗಿರುವ ಸಿಲೆಷಿಯಾದಲ್ಲಿ ಜನಿಸಿದರು; 1843ರಲ್ಲಿ ಬ್ರುನೊದ ಸೇಂಟ್ ಥಾಮಸ್ ಮಠಕ್ಕೆ ಸೇರಿದರು. ಮೆಂಡಲ್ ಹುಟ್ಟಿದ್ದು ರೈತ ಕುಟುಂಬದಲ್ಲಿ. ಬಾಲ್ಯದಿಂದಲೇ ಗಿಡಮರಗಳ ಜೀವನವನ್ನು ಗಮನಿಸುವ ಅಭ್ಯಾಸ ಇತ್ತು. ಮೆಂಡಲ್ ಮೊದಲಿನಿಂದಲೇ ವಿಜ್ಞಾನಿಯಾಗಿ ಗೌರವಿಸಲ್ಪಟ್ಟವರಲ್ಲ. ಅವರು ಶಿಕ್ಷಕರಾಗಲು ಪ್ರಯತ್ನಿಸಿದರು; ಆದರೆ ಶಿಕ್ಷಕ ಪ್ರಮಾಣಪತ್ರ ಪರೀಕ್ಷೆಯಲ್ಲಿ ವಿಫಲರಾದರು. 1850ರಲ್ಲಿ ಶಿಕ್ಷಕ ಅರ್ಹತಾ ಪರೀಕ್ಷೆಯಲ್ಲಿ ವಿಫಲರಾದ ನಂತರ, ಮಠದ ಮುಖ್ಯಸ್ಥರಾದ ಅಬ್ಬಾಟ್ ಸಿರಿಲ್ ನ್ಯಾಪ್ ಅವರು ಅವರನ್ನು ವಿಯನ್ನಾ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಅಧ್ಯಯನಕ್ಕಾಗಿ ಕಳುಹಿಸಿದರು. ಅಲ್ಲಿ ಮೆಂಡಲ್ ಗಣಿತ, ಭೌತಶಾಸ್ತ್ರ, ಸಸ್ಯಶಾಸ್ತ್ರ ಇತ್ಯಾದಿಗಳನ್ನು ಕಲಿತರು. ನಂತರ ಮತ್ತೆ ಮಠಕ್ಕೆ ಹಿಂದಿರುಗಿ ಬೋಧನೆಯಲ್ಲಿ ತೊಡಗಿದರು.

ವಿಫಲ: ಎಲ್ಲರೂ ಎಲ್ಲ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದಿರುವುದಿಲ್ಲ. ಹಾಗಾಗಿ ಒಬ್ಬರು ಒಂದು ವಿಷಯದಲ್ಲಿ ನಪಾಸು ಆದರೆಂದು, ಅವರನ್ನು ದಡ್ಡರ ಗುಂಪಿಗೆ ಸೇರಿಸುವ ಹಾಗಿರಲಿಲ್ಲ. ಅವರು ಮತ್ಯಾವುದೋ ಒಂದು ಕ್ಷೇತ್ರದಲ್ಲಿ ಮನುಕುಲದ ಕಣ್ಣನ್ನು ತೆರೆಸಬಲ್ಲ ಪ್ರತಿಭಾವಂತರಾಗಿರಬಹುದು. ಮೆಂಡಲ್ ಶಿಕ್ಷಕ ಪರೀಕ್ಷೆಯಲ್ಲಿ ಸೋತರು; ಆದರೆ ಪ್ರಕೃತಿಯ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಮಠದ ತೋಟದಲ್ಲಿ ಮೆಂಡಲ್ ಬಟಾಣಿ ಗಿಡಗಳನ್ನು ಆರಿಸಿಕೊಂಡದ್ದು ಯಾದೃಚ್ಛಿಕವಲ್ಲ. ಬಟಾಣಿ ಗಿಡದಲ್ಲಿ ಕೆಲವು ಗುಣಗಳು ಸ್ಪಷ್ಟವಾಗಿ ಕಾಣುತ್ತವೆ: ಹೂವು ನೇರಳೆ ಅಥವಾ ಬಿಳಿ; ಬೀಜ ಮೃದುವು ಅಥವಾ ಮುದುರು; ಬೀಜ ಹಳದಿ ಅಥವಾ ಹಸಿರು; ಗಿಡ ಉದ್ದ ಅಥವಾ ಕುಬ್ಜ. ಇವುಗಳನ್ನು ಎಣಿಸಲು ಸುಲಭ. ಬಟಾಣಿ ಗಿಡವನ್ನು ಸ್ವಯಂ ಪರಾಗಸ್ಪರ್ಶಗೊಳಿಸಬಹುದು; ಬೇಕಾದರೆ ಒಂದು ಗಿಡದ ಪುಷ್ಪರಜವನ್ನು ಮತ್ತೊಂದು ಗಿಡಕ್ಕೆ ಮಾನವನೇ ಹಾಕಬಹುದು. ಹೀಗಾಗಿ 'ತಂದೆ ಯಾರು, ತಾಯಿ ಯಾರು' ಎಂಬುದನ್ನು ನಿಯಂತ್ರಿಸಬಹುದು. ವಿಜ್ಞಾನದಲ್ಲಿ ನಿಯಂತ್ರಣವೇ ಪ್ರಯೋಗದ ಆತ್ಮ.

1856ರಿಂದ 1863ರವರೆಗೆ ಮೆಂಡಲ್ ಸಾವಿರಾರು ಬಟಾಣಿ ಗಿಡಗಳನ್ನು ಬೆಳೆಸಿ, ಅವುಗಳ ಸಂತತಿಯನ್ನು ಪರಿಶೀಲಿಸಿದರು. ಅನೇಕ ಮೂಲಗಳು ಅವರು ಸುಮಾರು 28,000 ಬಟಾಣಿ ಗಿಡಗಳನ್ನು ಪರೀಕ್ಷಿಸಿದರೆಂದು ಹೇಳುತ್ತವೆ. ಅವರು 1865ರಲ್ಲಿ ಬ್ರುನೊದ ಪ್ರಕೃತಿ ವಿಜ್ಞಾನ ಸಂಘದಲ್ಲಿ ತಮ್ಮ ಫಲಿತಾಂಶಗಳನ್ನು ಮಂಡಿಸಿದರು; 1866ರಲ್ಲಿ 'ಎಕ್ಸ್‌ಪೆರಿಮೆಂಟ್ಸ್ ಆನ್ ಪ್ಲಾಂಟ್ ಹೈಬ್ರಿಡ್ಸ್' ಎಂಬ ಪ್ರಸಿದ್ಧ ಪ್ರಬಂಧವನ್ನು ಪ್ರಕಟಿಸಿದರು.

ಇಲ್ಲಿ ಒಂದು ದೃಶ್ಯವನ್ನು ಮನಸ್ಸಿನಲ್ಲಿ ಕಟ್ಟಿಕೊಳ್ಳಿ. ಮಠದ ತೋಟದಲ್ಲಿ ಮೆಂಡಲ್ ಬೆಳಗಿನ ಮಂಜಿನಲ್ಲಿ ನಿಧಾನವಾಗಿ ನಡೆಯುತ್ತಿದ್ದಾರೆ. ಕೈಯಲ್ಲಿ ಕಾಗದ, ಪೆನ್ಸಿಲ್. ಪ್ರತಿಯೊಂದು ಗಿಡಕ್ಕೆ ಸಂಖ್ಯೆ. ಯಾವ ಗಿಡದ ಹೂವು ಯಾವ ಬಣ್ಣ? ಯಾವ ಗಿಡದಿಂದ ಯಾವ ಬೀಜ? ಯಾವ ಸಂತತಿಯಲ್ಲಿ ಯಾವ ಗುಣ? ಎಲ್ಲವನ್ನೂ ಎಣಿಕೆ. ಅವರು ಕೇವಲ ತೋಟಗಾರನಲ್ಲ; ಅವರು ಪ್ರಕೃತಿಯ ಲೆಕ್ಕಿಗ.

ಹಳದಿ ಬಟಾಣಿ ಮತ್ತು ಹಸಿರು ಬಟಾಣಿ ಗಿಡಗಳನ್ನು ಅಡ್ಡ ಹಾಯಿಸಿದಾಗ (ಕ್ರಾಸ್) ಮೊದಲ ತಲೆಮಾರಿನಲ್ಲಿ ಎಲ್ಲ ಗಿಡಗಳು ಹಳದಿಯ ಗಿಡಗಳೇ ಆಗಿದ್ದವು. ಹಸಿರು ಗುಣ ಮಾಯವಾದಂತಾಗಿತ್ತು. ಆದರೆ ಮೆಂಡಲ್ ಅಲ್ಲಿ ನಿಲ್ಲಲಿಲ್ಲ. ಅವರು ಮುಂದಿನ ತಲೆಮಾರನ್ನು ನೋಡಿದರು. ಆಗ ಹಸಿರು ಮತ್ತೆ ಕಾಣಿಸಿತು – ಸುಮಾರು 3:1 ಅನುಪಾತದಲ್ಲಿ. ಅಂದರೆ ಮೂರು ಹಳದಿ, ಒಂದು ಹಸಿರು. ಇದೇ ಅದ್ಭುತ. ಹಸಿರು ಗುಣವು ಮಾಯವಾಗಿರಲಿಲ್ಲ; ಅದು ಮರೆಮಾಡಲ್ಪಟ್ಟಿತ್ತು. ಹೀಗಾಗಿ ಮೆಂಡಲ್ 'ಪ್ರಬಲ' ಮತ್ತು 'ಅಪ್ರಬಲ' ಗುಣಗಳ ಕಲ್ಪನೆಯನ್ನು ರೂಪಿಸಿದರು. ಇಂದು ನಾವು ಅವನ್ನು ಡಾಮಿನಂಟ್ ಟ್ರೈಟ್ ಮತ್ತು ರಿಸೆಸಿವ್ ಟ್ರೈಟ್ಸ್ ಎಂದು ಕರೆಯುತ್ತೇವೆ.

ಈ ಪರಿಕಲ್ಪನೆಯನ್ನು ದೈನಂದಿನ ಉದಾಹರಣೆಗಳೊಂದಿಗೆ ಸರಳವಾಗಿ ವಿವರಿಸಬಹುದು. ಅಜ್ಜಿಗೆ ನಗುವಾಗ ಕೆನ್ನೆಯಲ್ಲಿ ಗುಳಿ ಬೀಳುತ್ತಿತ್ತು. ಮಗಳಲ್ಲಿ ಅಂತಹ ಗುಳಿಯು ಕಂಡು ಬರಲೇ ಇಲ್ಲ. ಆದರೆ ಮೊಮ್ಮಗಳಿಗೆ ಆ ಕೆನ್ನೆಗುಳಿ ಮತ್ತೆ ಕಾಣಿಸಿಕೊಂಡಿತು. ಆಗ ಊರಿನ ಜನರೆಲ್ಲ ಅಜ್ಜಿಯ ಗುಣ ಮೊಮ್ಮಗಳಿಗೆ ಬಂದಿದೆ ಎಂದರು. ಮೆಂಡಲ್ ಇದೇ ವಿಷಯವನ್ನು ವೈಜ್ಞಾನಿಕ ಪರಿಭಾಷೆಯಲ್ಲಿ ಹೇಳಿದರು. ಮನುಷ್ಯರಲ್ಲಿ ಮಾತ್ರವಲ್ಲ, ಎಲ್ಲ ಜೀವರಾಶಿಗಳಲ್ಲಿ ಕೆಲವು ಗುಣಗಳು ಕೆಲವು ತಲೆಮಾರುಗಳಲ್ಲಿ ಸುಪ್ತವಾಗಿ ಅಡಗಿರಬಹುದು; ಆದರೆ ಅವು ನಾಶವಾಗುವುದಿಲ್ಲ. ಸೂಕ್ತ ಅವಕಾಶ-ಅನುಕೂಲ ದೊರೆತಾಗ ಅವು ಮತ್ತೆ ಹೊರಬರುತ್ತವೆ.

19ನೆಯ ಶತಮಾನದಲ್ಲಿ ಮೆಂಡಲ್ ಅವರು ಬಹಳ ದೊಡ್ಡದಾದ, ಆದರೆ ನಂಬಲು ಅಸಾಧ್ಯವಾದ ಒಂದು ಹೇಳಿಕೆಯನ್ನು ನೀಡಿದರು. ಜೀವರಾಶಿಗಳಲ್ಲಿರುವ ಪ್ರತಿಯೊಂದು ಗುಣ-ಲಕ್ಷಣವನ್ನು ತಂದೆತಾಯಿಯರಿಂದ ಬರುವ ಅಂಶಗಳು ನಿರ್ಧರಿಸುತ್ತವೆ. ಈ ಅಂಶಗಳನ್ನು ಫ್ಯಾಕ್ಟರ್ಸ್ ಎಂದು ಕರೆಯಬಹುದು. ಅವರು 'ಜೀನ್' ಎಂಬ ಪದವನ್ನು ಬಳಸಲಿಲ್ಲ; ಆ ಪದ ನಂತರ ಬಂದಿತು. ಆದರೆ ಅವರು ರೂಪಿಸಿದ 'ಫ್ಯಾಕ್ಟರ್ಸ್' ಇಂದಿನ ಜೀನುಗಳ ಮೂಲಭಾವವೇ ಆಗಿತ್ತು. ಊಹಿಸಿಕೊಳ್ಳಿ. 19ನೆಯ ಶತಮಾನದಲ್ಲಿ, ವಿಜ್ಞಾನಿಯೇ ಅಲ್ಲದ ಓರ್ವ ಸಾಮಾನ್ಯ ಸನ್ಯಾಸಿಯು, ಕಣ್ಣಿಗೆ ಕಾಣದ ಅಂಶಗಳು ಜೀವಿಗಳ ಗುಣ-ಲಕ್ಷಣಗಳನ್ನು ನಿರ್ಧರಿಸುತ್ತವೆ ಎಂದು ದಿಟ್ಟವಾಗಿ ಘೋಷಿಸಿದ! ಹೀಗೆ ಹೇಳುವುದು ಒಂದು ದೊಡ್ಡ ಸಾಹಸವೇ ಆಗಿತ್ತು. ಸೂಕ್ಷ್ಮದರ್ಶಕದಡಿಯಲ್ಲಿ ಕ್ರೋಮೋಸೋಮುಗಳ ಸ್ವರೂಪವನ್ನು ಅರಿಯುವುದಕ್ಕೆ ಮೊದಲೇ, ಡಿಎನ್‌ಎಗಳ ಸ್ವರೂಪವನ್ನು ತಿಳಿಯುವ ಮೊದಲೇ, ಈ ಆ ಜೀನುಗಳು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಿದು ಬರುವ ನಿಯಮಗಳನ್ನು ಘೋಷಿಸಿದರು ಎಂದರೆ ಅದು ನಂಬುವುದಕ್ಕೆ ಕಷ್ಟವಾದ ವಿಷಯವಾಗಿತ್ತು.



ಮೈ ಟೈಮ್ ವಿಲ್ ಕಮ್: ಜಗತ್ತು ಕಿವುಡಾಗಿದ್ದ ಕ್ಷಣ. 1866ರಲ್ಲಿ ಮೆಂಡಲ್ ತಮ್ಮ ಸಂಶೋಧನಾ ಪ್ರಬಂಧವನ್ನು ಮಂಡಿಸಿದರು. ಆ ಸಭೆಯಲ್ಲಿದ್ದ ವಿಜ್ಞಾನಿಗಳಿಗೆ ಮೆಂಡಲ್ ಹೇಳುತ್ತಿರುವುದು ಏನೆಂದು ಅರ್ಥವೇ ಆಗಲಿಲ್ಲ! ಮೆಂಡಲ್ 'ಜೀವವಿಜ್ಞಾನದೊಳಗೆ ಗಣಿತ'ವನ್ನು ತಂದಿದ್ದರು. ಗಿಡಗಳ ಲಕ್ಷಣಕ್ಕೂ 3:1 ಅನುಪಾತಕ್ಕೂ ಏನು ಸಂಬಂಧ? ಎಂದು ಅವರು ಲೇವಡಿ ಮಾಡಿದರು. ಆ ಕಾಲದ ವಿಖ್ಯಾತ ವಿಜ್ಞಾನಿ ಕಾರ್ಲ್ ವಾನ್ ನಾಗಿಲಿ ಎಂಬುವವರಿಗೆ ಮೆಂಡಲ್ ಪತ್ರ ಬರೆದು ತಮ್ಮ ಸಂಶೋಧನೆ ವಿವರಿಸಿದರು. ಆದರೆ ನಾಗಿಲಿ ಅವರು ಇದು ಕೇವಲ ಬಟಾಣಿ ಗಿಡಗಳಿಗೆ ಸೀಮಿತವಾದ ಹವ್ಯಾಸವಷ್ಟೇ ಎಂದು ಅದನ್ನು ತಿರಸ್ಕರಿಸಿದರು.

ಮೆಂಡಲ್ ಅವರ ಸಂಶೋಧನೆ ಡಾರ್ವಿನ್ ಅವರ ಗಮನಕ್ಕೂ ಬರಲಿಲ್ಲ. ಒಂದು ವೇಳೆ ಡಾರ್ವಿನ್ ಮತ್ತು ಮೆಂಡಲ್ ಅಂದು ಒಂದಾಗಿದ್ದರೆ, ವಿಜ್ಞಾನದ ಇತಿಹಾಸವೇ ಬದಲಾಗುತ್ತಿತ್ತು. ಮೆಂಡಲ್ ಮಾತಿಗೆ ಕಿವಿಗೊಡದ ಜಗತ್ತಿನ ಬಗ್ಗೆ ನಿರಾಸೆ ಹೊಂದಲಿಲ್ಲ. ಅವರು ತಮ್ಮ ಸ್ನೇಹಿತನಿಗೆ ಹೇಳಿದ್ದರು: ನನ್ನ ಸಮಯ ಇನ್ನೂ ಬಂದಿಲ್ಲ, ಆದರೆ ನನ್ನ ಕಾಲ ಬಂದೇ ಬರುತ್ತದೆ. (ಮೈ ಟೈಮ್ ವಿಲ್ ಕಮ್)

ಸಾವಿನ ನಂತರದ ವಿಜಯ: 1884ರಲ್ಲಿ ಮೆಂಡಲ್ ಮರಣ ಹೊಂದಿದರು. ಅವರ ಸಾವಿನ ನಂತರ ಮಠದ ಹೊಸ ಮುಖ್ಯಸ್ಥರು ಮೆಂಡಲ್ ಅವರ ಎಲ್ಲಾ ಸಂಶೋಧನಾ ಡೈರಿಗಳನ್ನು ಸುಟ್ಟುಹಾಕಿದರು! ವೈಜ್ಞಾನಿಕ ಜಗತ್ತು ಅವರನ್ನು ಮರೆತೇ ಬಿಟ್ಟಿತು. ಆದರೆ ಮೆಂಡಲ್ ಹೇಳಿದ ಭವಿಷ್ಯ ಸುಳ್ಳಾಗಲಿಲ್ಲ.

ತ್ರಿಮೂರ್ತಿಗಳು: 1900ರಲ್ಲಿ, ಅಂದರೆ ಮೆಂಡಲ್ ಸತ್ತು 16 ವರ್ಷಗಳ ನಂತರ, ಮೂವರು ಬೇರೆ ಬೇರೆ ದೇಶದ ವಿಜ್ಞಾನಿಗಳು ಸ್ವತಂತ್ರವಾಗಿ ಪ್ರಯೋಗಗಳನ್ನು ಮಾಡಿದಾಗ ಅವರಿಗೆ ಮೆಂಡಲ್ ಅಂದು ಬರೆದಿದ್ದ ಸತ್ಯಗಳು ಗೋಚರಿಸಿದವು. ಹಳೆಯ ಗ್ರಂಥಾಲಯದ ಮೂಲೆಯಲ್ಲಿದ್ದ ಮೆಂಡಲ್ ಪ್ರಬಂಧಕ್ಕೆ ಆಗ ಬೆಲೆ ಬಂದಿತು. ಇಡೀ ಜಗತ್ತು ಬೆಚ್ಚಿಬಿದ್ದಿತು. ಒಬ್ಬ ಸನ್ಯಾಸಿ ಮಠದ ಗಾರ್ಡನ್‌ನಲ್ಲಿ ಕುಳಿತು ಆಧುನಿಕ ವೈದ್ಯಕೀಯ ವಿಜ್ಞಾನದ ಬಾಗಿಲನ್ನು ಆಗಲೇ ತೆರೆದಿದ್ದರು!

ಮಹತ್ವ: ಇಂದು ಮೆಂಡಲ್ ಅವರ ಸಂಶೋಧನೆಯಿಲ್ಲದೆ ನಾವು ಕ್ಯಾನ್ಸರ್ ಚಿಕಿತ್ಸೆ, ಅಂಗಾಂಗ ಕಸಿ, ಕೃಷಿಯಲ್ಲಿ ಸುಧಾರಿತ ತಳಿ ಅಥವಾ ಅಪರಾಧ ಪತ್ತೆಯ 'ಡಿಎನ್‌ಎ ಟೆಸ್ಟ್' ಬಗ್ಗೆ ಯೋಚಿಸಲೂ ಸಾಧ್ಯವಿಲ್ಲ. ಮೆಂಡಲ್ ಪ್ರತಿಪಾದಿಸಿದ ಅನುವಂಶೀಯತೆಯ ಮೂರು ಮಹಾನ್ ನಿಯಮಗಳು: ಮೆಂಡಲ್ ಅವರು ತಮ್ಮ ಎಂಟು ವರ್ಷಗಳ ಸುದೀರ್ಘ ಸಂಶೋಧನೆಯ ನಂತರ ಮೂರು ಮುಖ್ಯ ನಿಯಮಗಳನ್ನು ಜಗತ್ತಿಗೆ ನೀಡಿದರು. ಇವುಗಳನ್ನು ಇಂದಿಗೂ 'ಜೆನೆಟಿಕ್ಸ್‌ನ ಬೈಬಲ್' ಎಂದು ಪರಿಗಣಿಸಲಾಗುತ್ತದೆ.

1. ಪ್ರಬಲತೆಯ ನಿಯಮ (ಲಾ ಆಫ್ ಡಾಮಿನನ್ಸ್): ಮೆಂಡಲ್ ಗಮನಿಸಿದಂತೆ, ಒಂದು ಲಕ್ಷಣದ ಎರಡು ವಿರುದ್ಧ ರೂಪಗಳು (ಉದಾಹರಣೆಗೆ: ಎತ್ತರ ಮತ್ತು ಗಿಡ್ಡ) ಒಂದಾದಾಗ, ಮೊದಲ ತಲೆಮಾರಿನಲ್ಲಿ ಕೇವಲ ಒಂದು ಲಕ್ಷಣ ಮಾತ್ರ ವ್ಯಕ್ತವಾಗುತ್ತದೆ.

ಉದಾಹರಣೆ: ಶುದ್ಧ ಎತ್ತರದ ಗಿಡ ಮತ್ತು ಶುದ್ಧ ಗಿಡ್ಡ ಗಿಡದ ನಡುವೆ ಪರಾಗಸ್ಪರ್ಶ ಮಾಡಿದಾಗ, ಹುಟ್ಟುವ ಎಲ್ಲಾ ಗಿಡಗಳೂ ಎತ್ತರವಾಗಿಯೇ ಇರುತ್ತವೆ.

ಇಲ್ಲಿ ಎತ್ತರದ ಗುಣವು 'ಪ್ರಬಲ' ಮತ್ತು ಗಿಡ್ಡದ ಗುಣವು 'ಸುಪ್ತ' (ಖ್ಞಿಛಿಜಿಠಿಜಿಡಿಛಿ) ಆಗಿರುತ್ತದೆ. ಅಂದರೆ, ಸುಪ್ತ ಗುಣವು ಒಳಗಿದ್ದರೂ ಅದು ಹೊರಗೆ ಕಾಣಿಸಿಕೊಳ್ಳುವುದಿಲ್ಲ. ಇದು ನಮ್ಮ ಜೀವನದ ಅನೇಕ ಗುಣಗಳಿಗೂ ಅನ್ವಯಿಸುತ್ತದೆ.

2. ಪ್ರತ್ಯೇಕೀಕರಣದ ನಿಯಮ (ಲಾ ಆಫ್ ಸೆಗ್ರಿಗೇಶನ್): ಇದು ಮೆಂಡಲ್ ಅವರ ಅತ್ಯಂತ ಮಹತ್ವದ ಸಂಶೋಧನೆ. ಮೊದಲ ತಲೆಮಾರಿನಲ್ಲಿ ಗಿಡ್ಡ ಗಿಡದ ಗುಣ ಕಾಣಿಸದಿದ್ದರೂ, ಅದು ನಾಶವಾಗಿರುವುದಿಲ್ಲ ಎಂದು ಮೆಂಡಲ್ ವಾದಿಸಿದರು.

ಸಂತಾನೋತ್ಪತ್ತಿಯ ಸಮಯದಲ್ಲಿ ಈ ಗುಣಗಳು (ಫ್ಯಾಕ್ಟರ್ಸ್/ಜೀನ್ಸ್) ಒಂದಕ್ಕೊಂದು ಮಿಶ್ರಣವಾಗದೆ ಪ್ರತ್ಯೇಕವಾಗುತ್ತವೆ.

ಈ ಕಾರಣದಿಂದಲೇ, ಎರಡನೇ ತಲೆಮಾರಿನ ಗಿಡಗಳಲ್ಲಿ ಅಚ್ಚರಿಯ ರೀತಿಯಲ್ಲಿ ಮತ್ತೆ ಗಿಡ್ಡ ಗಿಡಗಳು (25% ಅನುಪಾತದಲ್ಲಿ) ಪ್ರತ್ಯೇಕವಾಗಿ ಹುಟ್ಟುತ್ತವೆ.

ಅಂದರೆ, ತಂದೆ-ತಾಯಿಯ ಲಕ್ಷಣಗಳು ಮಗುವಿನಲ್ಲಿ ಸೇರಿಕೊಂಡರೂ, ಅವು ತಮ್ಮ ಅನನ್ಯತೆಯನ್ನು ಕಳೆದುಕೊಳ್ಳುವುದಿಲ್ಲ.

3. ಸ್ವತಂತ್ರ ವಿಂಗಡಣೆಯ ನಿಯಮ (ಲಾ ಆಫ್ ಇಂಡಿಪೆಂಡೆಂಟ್ ಅಸಾರ್ಟ್ಮೆಂಟ್): ಒಂದು ಗಿಡದ ಬಣ್ಣ ಮತ್ತು ಅದರ ಎತ್ತರಕ್ಕೂ ಒಂದಕ್ಕೊಂದು ಸಂಬಂಧವಿಲ್ಲ ಎಂದು ಮೆಂಡಲ್ ಕಂಡುಕೊಂಡರು.

ಉದಾಹರಣೆ: ಹಳದಿ ಬಣ್ಣದ ಕಾಳುಗಳಿರುವ ಗಿಡ ಯಾವಾಗಲೂ ಎತ್ತರವಾಗಿಯೇ ಇರಬೇಕೆಂದಿಲ್ಲ. ಹಳದಿ ಕಾಳುಗಳು ಗಿಡ್ಡ ಗಿಡದಲ್ಲೂ ಇರಬಹುದು ಅಥವಾ ಹಸಿರು ಕಾಳುಗಳು ಎತ್ತರ ಗಿಡದಲ್ಲೂ ಇರಬಹುದು.

ಪ್ರತಿಯೊಂದು ಲಕ್ಷಣವೂ (ಬಣ್ಣ, ಎತ್ತರ, ಬೀಜದ ಆಕಾರ) ಇನ್ನೊಂದು ಲಕ್ಷಣದ ಹಸ್ತಕ್ಷೇಪವಿಲ್ಲದೆ ಸ್ವತಂತ್ರವಾಗಿ ಮುಂದಿನ ತಲೆಮಾರಿಗೆ ಸಾಗುತ್ತದೆ.

ಈ ನಿಯಮಗಳು ನಮಗೇಕೆ ಮುಖ್ಯ?

ಮೆಂಡಲ್ ಅವರ ಈ ನಿಯಮಗಳು ಕೇವಲ ಬಟಾಣಿ ಗಿಡಗಳಿಗೆ ಸೀಮಿತವಲ್ಲ. ಮನುಷ್ಯರಲ್ಲಿ ಕಣ್ಣಿನ ಬಣ್ಣ, ಕೂದಲಿನ ವಿನ್ಯಾಸ, ರಕ್ತದ ಗುಂಪುಗಳು ಮತ್ತು ಕೆಲವು ಅನುವಂಶೀಯ ಕಾಯಿಲೆಗಳು (ಉದಾಹರಣೆಗೆ ಹಿಮೋಫಿಲಿಯಾ ಅಥವಾ ವರ್ಣಾಂಧತೆ) ಹೇಗೆ ಹರಡುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಈ ನಿಯಮಗಳೇ ದಾರಿದೀಪ.

ದೊಡ್ಡ ಪಾಠಗಳು: ಮೆಂಡಲ್ ನಮಗೆ ಐದು ದೊಡ್ಡ ಪಾಠಗಳನ್ನು ಕೊಡುತ್ತಾರೆ.

1 ಸಣ್ಣ ವಸ್ತುವಿನಲ್ಲೂ ದೊಡ್ಡ ಸತ್ಯ ಇರಬಹುದು. ಬಟಾಣಿ ಬೀಜ ಚಿಕ್ಕದು. ಆದರೆ ಅದರಿಂದ ಜೀವವಿಜ್ಞಾನದ ಮಹಾಸಿದ್ಧಾಂತ ಹುಟ್ಟಿತು.

2 ಎಣಿಕೆಯು (ಗಣಿತ) ವಿಜ್ಞಾನಕ್ಕೆ ಆತ್ಮ. ಅವರು ಕೇವಲ 'ಹಳದಿ ಹೆಚ್ಚು, ಹಸಿರು ಕಡಿಮೆ' ಎಂದು ಹೇಳಲಿಲ್ಲ. ಅವರು ಅನುಪಾತ ಕಂಡರು – 3:1, 1:2:1. ಸಂಖ್ಯೆಗಳು ಪ್ರಕೃತಿಯ ಭಾಷೆ.

3 ಸಹನೆ ಇಲ್ಲದೆ ಸಂಶೋಧನೆ ಇಲ್ಲ. ಎಂಟು ವರ್ಷಗಳ ಕಾಲ ಗಿಡ ಬೆಳೆಸಿ, ತಲೆಮಾರು ನೋಡಿದರು. ಇಂದಿನ ತಕ್ಷಣದ ಫಲಿತಾಂಶ ಬಯಸುವ ಕಾಲದಲ್ಲಿ ಮೆಂಡಲ್ ನಮಗೆ ನಿಧಾನಶೀಲತೆಯ ಮಹತ್ವ ಕಲಿಸುತ್ತಾರೆ.

4 ಒಂದು ತಲೆಮಾರಿನ ವಿಜ್ಞಾನಿಗಳು ನಿಮ್ಮನ್ನು ಅರ್ಥಮಾಡಿಕೊಳ್ಳದಿದ್ದರೂ ಸತ್ಯ ನಾಶವಾಗುವುದಿಲ್ಲ. ಅವರ ಲೇಖನವು ಕಾಲನ ಮಣ್ಣಿನಡಿಯಲ್ಲಿ ಮಲಗಿದ ಬೀಜದಂತೆ ಇತ್ತು. 1900ರಲ್ಲಿ ಅದು ಮೊಳಕೆಯೊಡೆಯಿತು.

5 ವಿಜ್ಞಾನ ಮತ್ತು ಆಧ್ಯಾತ್ಮ ಶತ್ರುಗಳಾಗಬೇಕಿಲ್ಲ. ಮಠದ ಸನ್ಯಾಸಿಯೊಬ್ಬ ಪ್ರಕೃತಿಯನ್ನು ಗಮನಿಸಿ, ದೇವರ ಸೃಷ್ಟಿಯಲ್ಲಿರುವ ನಿಯಮವನ್ನು ಗಣಿತದ ರೂಪದಲ್ಲಿ ಕಂಡುಹಿಡಿದ. ಜ್ಞಾನಕ್ಕೆ ಗಡಿ ಇಲ್ಲ.

ಮೆಂಡಲ್ ಬದುಕಿನ ಕೊನೆಯ ಭಾಗ ಶಾಂತವಾಗಿತ್ತು; ಆದರೆ ಅವರ ಚಿಂತನೆ ಭವಿಷ್ಯದಲ್ಲಿ ಸ್ಫೋಟವಾಯಿತು. ಒಬ್ಬ ಸನ್ಯಾಸಿಯ ತೋಟದಿಂದ ಆರಂಭವಾದ ಪ್ರಯಾಣ ಇಂದು ಮಾನವ ಜೀನೋಮ್ ಯೋಜನೆ, ಜೀನ್ ಚಿಕಿತ್ಸೆ, ವೈಯಕ್ತಿಕ ವೈದ್ಯಕೀಯದವರೆಗೆ ಬಂದಿದೆ. ರೋಗದ ಅಪಾಯವನ್ನು ಮುಂಚಿತವಾಗಿ ತಿಳಿಯುವ ವೈದ್ಯಕೀಯ, ಕುಟುಂಬ ಸಲಹೆ, ಕೃಷಿಯಲ್ಲಿ ಉತ್ತಮ ತಳಿಗಳು, ಪಶುಸಂಗೋಪನೆಯಲ್ಲಿ ಆಯ್ಕೆ – ಇವೆಲ್ಲ ಮೆಂಡಲ್ ತೋರಿಸಿದ ದಾರಿಯ ಮುಂದಿನ ಮೈಲುಗಲ್ಲುಗಳು.

ಜೀವನ ಪ್ರೀತಿ ನೀಡಿದ ಗಣತಿ ಕಾರ್ಯದ ಅನುಭವ

● ಕೆ.ಟಿ ಮಲ್ಲಿಕಾರ್ಜುನಯ್ಯ, ಕಳ್ಳಿಪಾಳ್ಯ, ಶಿರಾ

ಎಲ್ಲಾ ಕಡೆ ಗಣತಿ ಕಾರ್ಯವನ್ನು ಶಿಕ್ಷಕರು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಗಣತಿ ಕಾರ್ಯದ ಮೊದಲನೆಯ ಹಂತವೇ ನಕ್ಷೆಯನ್ನು ತಯಾರಿಸುವುದು. ತಮಗೆ ನಿರ್ದೇಶಿತವಾದ ವ್ಯಾಪ್ತಿಯ ಮನೆಗಳ ಪಟ್ಟಿಯ ಜೊತೆಗೆ ಭೌಗೋಳಿಕ ನಕ್ಷೆಯನ್ನು ಯಾವ ಎಂಜಿನಿಯರಿಗೂ ಕಡಿಮೆ ಇಲ್ಲದಂತೆ ವಾಯುವ್ಯ ದಿಕ್ಕಿನಿಂದ ಪ್ರಾರಂಭಿಸಿ ಆಗ್ನೇಯ ದಿಕ್ಕಿಗೆ ಅಂತ್ಯಗೊಳ್ಳುವಂತೆ ಸಿದ್ಧಪಡಿಸಿಕೊಳ್ಳುವುದು. ತದನಂತರ ಪ್ರತಿ ಮನೆಯ ಗಣತಿಯನ್ನು ಪ್ರಾರಂಭಿಸುವುದು.

ಬೆಳಿಗ್ಗೆ ಬೇಗನೇ ಎದ್ದು ನಿತ್ಯ ಕರ್ಮಗಳನ್ನು ಮುಗಿಸಿ, ಬೈಕಿನ ಕುತ್ತಿಗೆಗೆ ಚಾವಿಯನ್ನು ಇಟ್ಟು ಹೊರಟರೆ ನಿಲ್ಲುತ್ತಿದ್ದುದು ಗಣತಿ ಕಾರ್ಯದ ಸ್ಥಳಕ್ಕೆ. ಸ್ವಲ್ಪ ತಡವಾದರೂ ಸೂರ್ಯ ನಡು ನೆತ್ತಿಗೆ ಕೂತುಬಿಡುತ್ತಿದ್ದ. ಮನೆಯ ಯಜಮಾನನ ಹೆಸರು, ಮನೆಯಲ್ಲಿರುವವರ ಒಟ್ಟು ಸಂಖ್ಯೆ, ಜಾತಿ, ಮನೆಯ ಭೌಗೋಳಿಕ ಸ್ಥಿತಿ, ಚರಂಡಿ ವ್ಯವಸ್ಥೆ... ಹೀಗೆ ಮುಂದುವರಿಯುತ್ತಾ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಒಂದು ಮನೆಯ ಗಣತಿಯನ್ನು ಪೂರ್ಣಗೊಳಿಸುವುದು. ನಮಗೆ ನೀಡಿರುವ ಅಷ್ಟೂ ಮನೆಗಳ ಮಾಹಿತಿಯನ್ನು ಈ ರೀತಿ ಮೊಬೈಲಿನಲ್ಲಿ ದಾಖಲಿಸುತ್ತಾ ಸಾಗುವುದು.

ಗಣತಿ ಮಾಡುವಾಗ ನನಗಾದ ಕೆಲ ಅನುಭವಗಳನ್ನು ಹೇಳಲೇಬೇಕು. ಆಕೆ ಸರಿಸುಮಾರು 65 ವರ್ಷದ ಮೇಲ್ಪಟ್ಟ ಹೆಂಗಸು, ಮನೆಯ ಮುಂದಿನ ಹಾಸುಗಲ್ಲಿನ ಮೇಲೆ ಬಟ್ಟೆಯನ್ನು ಒಗೆಯುತ್ತಿದ್ದಳು. ಗಂಡ, ತಮ್ಮ ಒಂದು ಕಾಲನ್ನು ಅನಾರೋಗ್ಯದ ನಿಮಿತ್ತ ಕಳೆದುಕೊಂಡು ಮಂಚದ ಮೇಲೆ ಮಲಗಿದ್ದರು. ಅವರು, ಕೆಮ್ಮುತ್ತಾ ಕ್ಷೀಣ ಧ್ವನಿಯಲ್ಲಿ ಯಾರು ಬಂದಿದ್ದು? ಮೇಷ್ಟ್ರೇ..? ಬನ್ನಿ ಕುಳಿತುಕೊಳ್ಳಿ ಎನ್ನುತ್ತಾ ಮಂಚದ ಬದಿಗೆ ಸರಿದು ನಮಗೆ ಕುಳಿತುಕೊಳ್ಳಲು ಜಾಗ ಮಾಡಿಕೊಟ್ಟರು. ಲೋಕಾಭಿರಾಮವಾಗಿ ಮಾತನಾಡುತ್ತಾ ತಮ್ಮಿಬ್ಬರಿಗೆ ಬರುತ್ತಿರುವ ವೃದ್ಧಾಪ್ಯ ವೇತನದ ಬಗ್ಗೆ ತಿಳಿಸಿದರು. ಅದರಲ್ಲಿಯೇ ಜೀವನ ನಡೆಸುತ್ತಿರುವುದಾಗಿಯೂ, ಬರುವ ವೃದ್ಧಾಪ್ಯ ವೇತನದ ಬಹುಭಾಗ ಕಾಯಿಲೆಗೆ ಖರ್ಚಾಗುತ್ತಿರುವುದನ್ನು ತಿಳಿಸಿದರು. ಮಕ್ಕಳಿಲ್ಲದ ಇವರು ತಮ್ಮ ಚಿಕಿತ್ಸೆಗೆ ಇರುವ ಒಂದು ಎಕರೆ ಜಮೀನನ್ನೇ ಮಾರಿದ್ದಾರೆ. ಅಯ್ಯೋ ದೇವರಿಟ್ಟ ಹಾಗೆ ಜೀವನ ನಡೆಯುತ್ತೆ ನಮ್ಮದು ಏನೂ ಇಲ್ಲ.. ಎನ್ನುವ ಇವರ ಮಾತಿನಲ್ಲಿ ಅಗಾಧ ಜೀವನ ಪಾಠವೇ ಅಡಗಿತ್ತು. ಅಷ್ಟರಲ್ಲಿ ಬಟ್ಟೆ ಒಗೆಯುತ್ತಿದ್ದ ಹಿರಿ ಜೀವ ಕುಡಿಯಲು ತಂಪಾದ ನೀರನ್ನು ತಂದು ಕೊಡುತ್ತಾ, ಮೇಷ್ಟ್ರೇ, ಮುದ್ದೆ ಮಾಡಿದ್ದೇವೆ ಊಟ ಮಾಡಿ, ಬೆಳಿಗ್ಗೆ ಎಷ್ಟು ಬೇಗ ಬಂದಿರೋ..? ಕೆಲಸ ಇದ್ದಿದ್ದೆ, ಮೊದಲು ಊಟ ಮಾಡಿ, ಎಂದ ಅವರ ಮಾತಿನಲ್ಲಿ ಹೃದಯಾಂತರಾಳದ ಪ್ರೀತಿಯಡಗಿತ್ತು.

ಮಧ್ಯಾಹ್ನದ ಹೊತ್ತಿಗೆ ಹೊಟ್ಟೆ ಚುರುಗುಡಲಾರಂಭಿಸಿತು. ಇನ್ನೊಂದೆರಡು ಮನೆಯ ಗಣತಿ ಮುಗಿಸಿ ಊಟಕ್ಕೆ ಮನೆಗೆ ಹೋಗುವುದು ಎಂದುಕೊಳ್ಳುತ್ತಾ ಮತ್ತೊಂದು ಮನೆಯ ಬಾಗಿಲನ್ನು ತಟ್ಟಿದ್ದಾಯಿತು. ಈ ಉರಿ ಬಿಸಿಲಿನಲ್ಲೂ ನಿಮಗೆ ಕೆಲಸ ಕೊಟ್ಟಿದ್ದಾರೋ.. ಎನ್ನುತ್ತಾ ಮುಗುಳುನಗೆಯೊಂದಿಗೆ ನಮ್ಮನ್ನು ಸ್ವಾಗತಿಸುತ್ತಾ, ಸ್ವಲ್ಪ ಹೊತ್ತು ಕೂತಿರಿ, ಸಾಂಬಾರಿದೆ ಅನ್ನ ಮಾಡುತ್ತೇನೆ, ಎಂದು ನಮ್ಮ ಪ್ರತಿಕ್ರಿಯೆಗೂ ಕಾಯದೆ ಅಡುಗೆ ಮನೆಗೆ ಹೋಗಿ ನಮಗೆ ಮಾಹಿತಿಯನ್ನು ಕೊಡುತ್ತಲೇ ಅನ್ನ ಸಾಂಬಾರು ತಂದೇ ಬಿಟ್ಟರು. ಜೊತೆಗೆ ಹಪ್ಪಳ ಉಪ್ಪಿನಕಾಯಿ. ಊಟ ಆದ ಮೇಲೆ ಹುರಿದ ಕಡಲೆ ಕಾಯಿಯನ್ನು ತಂದಿಟ್ಟರು. ಈ ತಾಯಿಯ ಪ್ರೀತಿಗೆ ಸರಿಸಾಟಿ ಏನಿದೆ?

ಮನೆಯ ಮುಂದೆ ಸ್ಕೂಟರ್, ಹೊಸದೊಂದು ಕಾರು, ಟ್ರ್ಯಾಕ್ಟರ್, ಗೇಟಿಗೆ ಕಟ್ಟಿ ಹಾಕಿದ ನಾಯಿ ಇರುವ ಮನೆಯ ಗಣತಿ ಕಾರ್ಯಕ್ಕೆ ಹೋದಾಗ, ಎಷ್ಟೇ ಕೂಗಿ ಕರೆದರೂ ಬಾಗಿಲು ತೆಗೆಯಲೇ ಇಲ್ಲ. ನಮ್ಮ ಕೂಗು ನಾಯಿಯ ಬೊಗಳುವಿಕೆಯಲ್ಲಿ ಕರಗಿ ಹೋಗುತ್ತಿತ್ತು. ಕೊನೆಗೆ ವಾಪಸ್ಸು ಹೊರಡುವಾಗ, ಕಿಟಕಿಯಿಂದಲೇ ಹೆಂಗಸರೊಬ್ಬರು ಇಣುಕಿ ನೋಡುತ್ತಾ, ಯಾರು, ಏನು, ಎಂದು ಪ್ರಶ್ನಿಸಿ, ಯಾವುದೇ ಮಾಹಿತಿಯನ್ನು ನಿಮಗೆ ಏಕೆ ಕೊಡಬೇಕು ಎಂದು ದಬಾಯಿಸಿ ಕಿಟಕಿ ಮುಚ್ಚಿದರು. ನಗರಗಳಲ್ಲಿ ಈ ಅನುಭವ ಬಹುತೇಕ ಶಿಕ್ಷಕರಿಗೆ ಆಗಿರುತ್ತದೆ. ಆದರೆ ನನಗೆ ಹಳ್ಳಿಯಲ್ಲಿಯೇ ಮುಖಕ್ಕೆ ಹೊಡೆದಂತಹ ಅನುಭವ ತುಂಬಾ ಮುಜುಗರವನ್ನುಂಟು ಮಾಡಿತು. ಅವರ ವರ್ತನೆಯ ಸರಿ ತಪ್ಪುಗಳ ಬಗ್ಗೆ ನಾನಿಲ್ಲಿ ಹೇಳುತ್ತಿಲ್ಲ. ಗಣತಿದಾರರ ಬಗ್ಗೆ ಕನಿಷ್ಠ ಸೌಜನ್ಯವೂ ಇಲ್ಲವಾಯಿತೆ ಎಂಬುದಷ್ಟೆ.

ಇವೆಲ್ಲವುದರ ಜೊತೆಗೆ ಗಣತಿ ಕಾರ್ಯವು ವಿಶಿಷ್ಟ ಅನುಭವ ಹಾಗೂ ಜೀವನ ಪ್ರೀತಿಯನ್ನು ದೊರಕಿಸಿ ಕೊಟ್ಟಿತು. ಬದುಕು ಎಲ್ಲರಿಗೂ ಏಕಮುಖವಾಗಿರುವುದಿಲ್ಲ. ಏರಿಳಿತಗಳು ಸಾಮಾನ್ಯ. ಅನಕ್ಷರಸ್ಥರಾಗಿದ್ದರೂ ಯಾವುದಕ್ಕೂ ಅತಿಯಾಸೆ ಪಡದೆ ತಂದೆ ತಾಯಿಯೊಂದಿಗೆ ಗೌರವದಿಂದ ಬಾಳುತ್ತಿರುವುದನ್ನು ನೋಡಿದೆ. ವಯಸ್ಸಾದ ಅಜ್ಜಿಯೊಂದು ಮನೆಯ ಹೊಸ್ತಿಲಲ್ಲೇ ಕೂತು ಸಹಾಯಕ್ಕಾಗಿ ಯಾಚಿಸುತ್ತಿರುವುದನ್ನು ಕಂಡೆ.

ದಿವಸದಿಂ ದಿವಸಕ್ಕೆ ನಿಮಿಷದಿಂ ನಿಮಿಷಕ್ಕೆ /
ಭವಿಷ್ಯವ ಚಿಂತಿಸದೇ ಬದುಕು ನೂಕುತಿರು //
ವಿವರಗಳ ಜೋಡಿಸುವ ಯಜಮಾನ ಬೇರಿಹನು /
ಸವೆಸು ನೀ ಜನುಮವನು ಮಂಕುತಿಮ್ಮ //

ಡಿವಿಜಿ ಅವರ ಈ ಮಾತುಗಳು ಮತ್ತೆ ಮತ್ತೆ ಜೀವನ ಪ್ರೀತಿಯನ್ನು ಗಟ್ಟಿಗೊಳಿಸುತ್ತವೆ.

● ಮಹಾದೇವ ಬಸರಕೋಡ, ಅಮೀನಗಡ

ನಮಗೆಲ್ಲ ಗೊತ್ತಿರುವ ಮಹಾಭಾರತದ ಕಥೆಯೇ ಇದು. ಕುಂತಿಗೆ ಐದೇ ಜನ ಮಕ್ಕಳಿದ್ದರೂ ಎಲ್ಲರೂ ಸುಗುಣಶೀಲರು. ಉತ್ತಮ ನೈತಿಕ ಮೌಲ್ಯಗಳನ್ನು ರೂಢಿಸಿಕೊಂಡವರು. ತಮ್ಮ ಬದುಕಿನುದ್ದಕ್ಕೂ ನ್ಯಾಯ, ನೀತಿ, ಧರ್ಮಗಳನ್ನು ಉಸಿರಾಗಿಸಿಕೊಂಡವರು. ಇದಕ್ಕೆ ವ್ಯತಿರಿಕ್ತವಾಗಿ ಗಾಂಧಾರಿಗೆ 100 ಗಂಡು ಮಕ್ಕಳಿದ್ದರೂ ಅವರೆಲ್ಲರೂ ಪಂಚ ಪಾಂಡವರ ವಿರುದ್ಧ ಗುಣಸ್ವಭಾವದವರು. ತಮ್ಮದೇ ಆದ ಸ್ವಾರ್ಥ, ಅನೀತಿ, ಅನ್ಯಾಯಗಳ ಬೆನ್ನತ್ತಿ ತಮ್ಮತನವನ್ನೆಲ್ಲ ಕಳೆದುಕೊಂಡ ವರು. ಗಾಂಧಾರಿ ಕೃಷ್ಣನಿಗೆ ಒಂದು ಬಾರಿ ಹೇ.. ಭಗವಂತ ಕುಂತಿಗೆ ಐದೇ ಮಕ್ಕಳಿದ್ದರೂ ಅವರೆಲ್ಲ ಉತ್ತಮ ನಡತೆಯುಳ್ಳವರು. ಆದರೆ ಅದೇನೋ ಗೊತ್ತಿಲ್ಲ, ನನಗೆ 100 ಜನ ಗಂಡು ಮಕ್ಕಳಿದ್ದರೂ ಎಲ್ಲರೂ ದುಷ್ಕೃತ್ಯಗ ಳಲ್ಲಿಯೇ ತಮ್ಮನ್ನು ತೊಡಗಿಸಿಕೊಂಡು ತಮ್ಮ ಅವನತಿಗೆ ತಾವೇ ಕಾರಣ ರಾದರು. ಇದು ಹೀಗೇಕೆ? ನನ್ನ ಯಾವ ಜನ್ಮದ ತಪ್ಪಿಗೆ ಇಂಥದೊಂದು ಘೋರ ಶಿಕ್ಷೆ? ಎಂದು ಪ್ರಶ್ನಿಸುತ್ತಾಳೆ. ಕೃಷ್ಣ ಹೇಳುತ್ತಾನೆ- ಯಾವುದೋ ಜನ್ಮದ ತಪ್ಪಿಗೆ ಶಿಕ್ಷೆ ಇದಲ್ಲ. ಕುಂತಿ ತನ್ನ ಗಂಡನನ್ನು ಕಳೆದುಕೊಂಡರೂ, ತನ್ನ ಮಕ್ಕಳಿಗೆ ಹೆಜ್ಜೆ ಹೆಜ್ಜೆಗೂ ಸರಿದಾರಿ ತೋರಿದಳು. ತನ್ನ ಮೈಯನ್ನೆಲ್ಲ ಕಣ್ಣಾಗಿಸಿಕೊಂಡು ಅವರ ತಪ್ಪುಗಳನ್ನು ತಿದ್ದಿ, ಬುದ್ಧಿ ಹೇಳಿದಳು. ಆದರೆ ನೀನು, ಗಂಡ ಕಾಣದ ಜಗತ್ತನ್ನು ನಾನು ನೋಡುವುದು ಬೇಡ ಎಂಬ ಒಂದು ನಿರ್ಧಾರಕ್ಕೆ ಬಂದು ನಿನ್ನ ಕಣ್ಣಿಗೂ ಪಟ್ಟಿ ಕಟ್ಟಿಕೊಂಡು ಬಿಟ್ಟೆ. ನಿನ್ನ ಮಕ್ಕಳು ಮಾಡುವ ತಪ್ಪುಗಳನ್ನು, ಸಲ್ಲದ ನಡೆಗಳನ್ನು ಒಂದು ದಿನವೂ ನೀನು ನೋಡಲೇ ಇಲ್ಲ. ಅವರಿಗೆ ಬುದ್ಧಿ ಹೇಳಲಿಲ್ಲ. ಇದರ ಪರಿಣಾಮವೇ ಇದು ಎಂದ. ಗಾಂಧಾರಿಗೆ ತನ್ನ ತಪ್ಪಿನ ಅರಿವಾಗಿತ್ತು. ಯಾವುದೋ ಒಂದು ಆದರ್ಶವನ್ನು ಬೆನ್ನತ್ತಿ ಅದನ್ನು ಅದನ್ನು ಅಪ್ಪಿಕೊಂಡು ಅದರಲ್ಲಿಯೇ ಮುನ್ನಡೆಯುವುದರ ಫಲವಿದು. ಯಾವುದೇ ಒಂದು ನಿರ್ಧಾರವನ್ನು

ಭ್ರಮೆಗಳ ಬೇಲಿ ದಾಟಿ ಬದುಕುವ ಬಗೆ

ತಗೆದುಕೊಳ್ಳುವ ಮುನ್ನ, ಅದನ್ನು ಬದುಕಿಗೆ ಅಳವಡಿಸಿಕೊಳ್ಳುವ ಮುನ್ನ ಬಹಳಷ್ಟು ತಾಳ್ಮೆಯಿಂದ, ವಿವೇಚನೆಯಿಂದ, ದೂರದೃಷ್ಟಿಯಿಂದ ಯೋಚಿಸಬೇಕು. ನಮ್ಮ ಆ ಕ್ಷಣದ ನಡೆಗಳು, ತಗೆದು ಕೊಳ್ಳುವ ನಿರ್ಧಾರಗಳು ಭವಿಷ್ಯ ಮೇಲೆ ಬೀರುವ ಪರಿಣಾಮಗಳನ್ನು ಕುರಿತು ಗಂಭೀರ ಅವಲೋಕನಕ್ಕೆ ಒಳಗು ಮಾಡಬೇಕು.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ದಟ್ಟವಾದ ಎಂದರ್ಥ (3)
4. ಬ್ರಹ್ಮ ಅಥವಾ ನಿಯಮ (2)
5. ಕ್ರಮೇಣ ಮಾಡಿದ ದಾಳಿ (4)
7. ಮಾಯವಾಗದ ಹುಟ್ಟುಗುಣ (4)
9. ತೋಟದ ಕೆಲಸ ಮಾಡುವವನು (2)
10. ನೇರವಾಗಿ ಕೆಲಸ ಮಾಡಿದರೆ ಪೂರ್ಣವಾಗು (4)
12. ವಾಕ್ಪಟು ಎಂಬರ್ಥ (4)
14. ನಮ್ಮ ರಾಷ್ಟ್ರೀಯ ಪ್ರಾಣಿಯಿದು (2)
15. ಕದಂಬ ರಾಜಮನೆತನದ ರಾಜಧಾನಿಯಾಗಿದ್ದ ಪ್ರದೇಶ (4)
18. ಅವನಿಗೆ ಅತಿಯಾದ ಕೀಳುದೆಸೆ (4)
20. ನಾವೇ ಏರಬೇಕಾದ ದೋಣಿ (2)
21. ಧಾನ್ಯ ಸಂಗ್ರಹಿಸುವ ಸ್ಥಳ (3)

ಮೇಲಿಂದ ಕೆಳಕ್ಕೆ

1. ನೇರವಲ್ಲದ್ದು, ಡೊಂಕು (2)
2. ಶಿವನ ಪ್ರಮಥರ ಸಮೂಹ (2)
3. ತಲೆಕೆಳಗಾಗಿ ಬಂದಿರುವ ಗ್ರೀಸ್ ದೇಶದವನು (3)
4. ಆಕಾಶ ಮಾರ್ಗದಲ್ಲಿ ಸಂಚರಿಸಲು ಬಳಸುವ ಲೋಹದ ಹಕ್ಕಿ (3)
5. ನಡುವೆ ಮತ್ತೊಂದು ಉಸಿರಿರುವ ಭರವಸೆ (4)
6. ಜೇನು ಎರಡಕ್ಷರದಲ್ಲಿದೆ (2)
7. ಇದೊಂದು ಜಾತಿಯ ಮುಳ್ಳಿನ ಮರ (2)
8. ಸೀತೆಯ ಮುಂದೆ ಮಾಯಾಜಿಂಕೆಯಾಗಿ ಬಂದ ರಾಕ್ಷಸ (3)
9. ವಿಕ್ರಯಿಸು ಎನ್ನುತ್ತಾ ಬಂದ ನಾಲ್ಕು ಮೊಳ (2)
11. ಆತನ ಸಂಬಳ (3)
12. ಸುಗ್ರೀವನ ಸಹೋದರ (2)
13. ಸಂಕಟ ಬಂದಾಗ ನೆನಪಾಗುವ ದೇವರು ನೆಲೆಸಿರುವ ಸ್ಥಳ (4)
14. ಎರಡೇ ಅಕ್ಷರದಲ್ಲಿ ಬಂದಿರುವ ಸುಳ್ಳು (2)
15. ಹುಲ್ಲಿನ ಮೆದೆ (3)
16. ಪುಸ್ತಕ/ಪತ್ರಿಕೆ ಓದುವವನು (3)
17. ವಜಾ ಮಾಡಿದ ವೇಗ (2)
18. ಆಡು ಎನ್ನುವ ಮತ್ತೊಂದು ಪದ (2)
19. ನಾಟಕ, ಚಲನಚಿತ್ರಗಳಲ್ಲಿ ಅಭಿನಯಿಸುವಾಕೆ (2)

ಸರಿಯುತ್ತರಗಳು

ರಾಮಚರಿತ ಮಾನಸ: ತಾಯಿ ಕೈಕೇಯಿಯ ಭೇಟಿ ಕ್ಷಮೆಯ ಪರಾಕಾಷ್ಠೆ



ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ರಾಮಚರಿತ ಮಾನಸದ ಉತ್ತರ ಕಾಂಡದಲ್ಲಿ ಬರುವ ರಾಮರಾಜ್ಯದ ವರ್ಣನೆ ಕೇವಲ ಸುಭಿಕ್ಷೆಯ ಕಥೆಯಲ್ಲ, ಅದು ಮನುಷ್ಯತ್ವದ ಉತ್ತುಂಗದ ಸ್ಥಿತಿ.

ಗಡಿಬಿಡಿಯ ನಡುವೆಯೂ ರಾಮನು ಮೊದಲು ಧಾವಿಸಿದ್ದು ತಾಯಿ ಕೈಕೇಯಿಯ ಭವನಕ್ಕೆ. ಅಯೋಧ್ಯೆಯ ಪ್ರಜೆಗಳು ಯಾರನ್ನು ದ್ವೇಷಿಸುತ್ತಿದ್ದರೋ, ಯಾರ ಕಡೆಗೆ ಬೆರಳು ಮಾಡಿ ತೋರಿಸುತ್ತಿದ್ದರೋ, ಆ ತಾಯಿಯ ಪಾದಗಳಿಗೆ ರಾಮನು ಪ್ರಣಾಮ ಮಾಡಿದನು. ಕೈಕೇಯಿ ಕಣ್ಣೀರು ಹಾಕುತ್ತಾ ಪಶ್ಚಾತ್ತಾಪದಿಂದ ನಡುಗುತ್ತಿದ್ದಾಗ, ರಾಮನು ಅವಳನ್ನು ಅಪ್ಪಿಕೊಂಡು ಹೇಳಿದನು, ತಾಯಿ, ನೀನು ಮಾಡಿದ್ದು ತಪ್ಪಲ್ಲ. ವಿಧಿಯ ಆಟದಲ್ಲಿ ನೀನು ನಿಮಿತ್ತಳಾದೆ ಅಷ್ಟೇ. ನಿನ್ನಿಂದಲೇ ನಾನು ಶಬರಿಯ ಭಕ್ತಿ ಕಂಡೆ, ಹನುಮಂತನ ಸ್ನೇಹ ಪಡೆದೆ, ರಾವಣನ ಸಂಹಾರ ಮಾಡಿದೆ. ನೀನು ನನಗೆ ಅನ್ಯಾಯ ಮಾಡಿಲ್ಲ, ಜಗತ್ತಿಗೆ ಧರ್ಮದ ಹಾದಿ ತೋರಿಸಿಕೊಟ್ಟೆ.

ಇಲ್ಲಿ ರಾಮನು ನಮಗೆ ಕಲಿಸುವುದು ದ್ವೇಷವನ್ನು ಪ್ರೀತಿಯಿಂದ ಗೆಲ್ಲುವ ದಾರಿಯನ್ನು. ಒಬ್ಬ ವ್ಯಕ್ತಿಯನ್ನು ಅವರ ತಪ್ಪುಗಳಿಗಾಗಿ ದಂಡಿಸುವುದಕ್ಕಿಂತ, ಅವರನ್ನು ಕ್ಷಮಿಸಿ ಅವರಲ್ಲಿರುವ ಒಳ್ಳೆಯತನವನ್ನು ಎಚ್ಚರಿಸುವುದೇ ಅತಿ ದೊಡ್ಡ ವಿಜಯ.

ರಾಮನು ಪಟ್ಟಾಭಿಷೇಕದ ನಂತರ ಅಯೋಧ್ಯೆಯ ಸ್ಥಿತಿ ಹೇಗಿತ್ತು ಎಂಬುದನ್ನು ತುಳಸೀದಾಸರು ತಮ್ಮ ಚೌಪದಿಯಲ್ಲಿ ಹೀಗೆ ಬಣ್ಣಿಸುತ್ತಾರೆ:

ದೈಹಿಕ ದೈವಿಕ ಭೌತಿಕ ತಾಪಾ ।
ರಾಮ ರಾಜ್ಯ ನಹಿಂ ಕಾಹುಹಿ ವ್ಯಾಪಾ ॥
ಸಬ ನರ ಕರಹಿಂ ಪರಸ್ಪರ ಪ್ರೀತಿ ।
ಚಲಹಿಂ ಸ್ವಧರ್ಮ ನಿರತ ಶ್ರುತಿ ರೀತಿ ॥

ಭಾವಾರ್ಥ: ರಾಮರಾಜ್ಯದಲ್ಲಿ ಯಾರಿಗೂ ದೈಹಿಕ ಕಾಯಿಲೆಗಳಾಗಲಿ, ದೈವಿಕ ಸಂಕಷ್ಟಗಳಾಗಲಿ ಅಥವಾ ಪ್ರಕೃತಿಯ ವಿಕೋಪಗಳಾಗಲಿ ಕಾಡುತ್ತಿರಲಿಲ್ಲ. ಪ್ರತಿಯೊಬ್ಬ ಮನುಷ್ಯನು ಇನ್ನೊಬ್ಬನನ್ನು ತನ್ನವನೆಂಬಂತೆ ಪ್ರೀತಿಸುತ್ತಿದ್ದನು. ಯಾರೂ ದಾರಿತಪ್ಪುತ್ತಿರಲಿಲ್ಲ, ಎಲ್ಲರೂ ತಮ್ಮ ಧರ್ಮ ಮತ್ತು ಕರ್ತವ್ಯದ ಹಾದಿಯಲ್ಲಿ ನಡೆಯುತ್ತಿದ್ದರು.

ರಾಮರಾಜ್ಯದಲ್ಲಿ ಸಿಂಹಾಸನವು ಕೇವಲ ಅಧಿಕಾರಕ್ಕಷ್ಟೇ ಸೀಮಿತವಾಗಿರಲಿಲ್ಲ. ರಾಮನು ಪ್ರತಿದಿನ ಸಂಜೆ ಪ್ರಜೆಗಳ ನಡುವೆ ಬಂದು ಕುಳಿತು ಅವರ ಕಷ್ಟ-ಸುಖಗಳನ್ನು ಆಲಿಸುತ್ತಿದ್ದನು. ಬಡವನೊಬ್ಬನ ಗುಡಿಸಲಿಗೆ ಹೋಗಿ ಅವನ ಜೊತೆ ಊಟ ಮಾಡುವುದಾಗಲಿ ಅಥವಾ ವೃದ್ಧರ ಆಶೀರ್ವಾದ ಪಡೆಯುವುದಾಗಲಿ ರಾಮನಿಗೆ ಸಣ್ಣ ಕೆಲಸವೆನಿಸಲಿಲ್ಲ.

ಒಮ್ಮೆ ಅಯೋಧ್ಯೆಯ ಪ್ರಜೆಯೊಬ್ಬ ತನ್ನ ಮಗನ ಅಕಾಲಿಕ ಮರಣದಿಂದ ದುಃಖಿತನಾಗಿ ಬಂದಾಗ, ರಾಮನು ಅವನ ಕಣ್ಣೀರನ್ನು ತನ್ನ ಕೈಯಿಂದ ಒರೆಸಿ, ಆ ಸಾವಿನ ಹಿಂದಿನ ಅಧರ್ಮದ ಕಾರಣವನ್ನು ಹುಡುಕಿ ಅದನ್ನು ಸರಿಪಡಿಸಿದನು. ರಾಮನಿಗೆ ರಾಜ್ಯದ ಸಂಪತ್ತಿಗಿಂತ ಪ್ರಜೆಗಳ ನಗುವೇ ದೊಡ್ಡದಾಗಿತ್ತು.

ಆಯೋಧ್ಯಾ ಎಂದರೆ ಮನಸ್ಸು. ಅಲ್ಲಿ ಕಾಮ, ಕ್ರೋಧಗಳ ಯುದ್ಧ ನಿಂತಾಗ ಮಾತ್ರ 'ರಾಮ' ಪಟ್ಟಾಭಿಷೇಕಗೊಳ್ಳುತ್ತಾನೆ. ನಮ್ಮ ನಾಲಿಗೆಯ ಮೇಲೆ 'ರಾಮ ನಾಮ'ದ ದೀಪವಿದ್ದರೆ, ಅದು ನಮ್ಮ ಒಳಗಿನ ಕತ್ತಲೆಯನ್ನು ಸರಿಸುವುದಲ್ಲದೆ, ಹೊರಗಿನ ಸಮಾಜಕ್ಕೂ ಬೆಳಕನ್ನು ನೀಡುತ್ತದೆ.

ರಾಮರಾಜ್ಯ ಎನ್ನುವುದು ಇತಿಹಾಸದ ಒಂದು ಕಾಲಘಟ್ಟ ಮಾತ್ರವಲ್ಲ, ಅದು ಪ್ರತಿಯೊಬ್ಬ ಮನುಷ್ಯನ ಕನಸಾಗಬೇಕು. ನಾವು ಸತ್ಯವನ್ನು ನುಡಿಯುತ್ತಾ, ಪರಸ್ಪರ ಪ್ರೀತಿಯಿಂದ ಬಾಳುತ್ತಾ, ಶತ್ರುಗಳನ್ನೂ ಮನ್ನಿಸುವ ವಿಶಾಲ ಹೃದಯವನ್ನು ಬೆಳೆಸಿಕೊಂಡಾಗ ಮಾತ್ರ ನಮ್ಮ ಜೀವನವು ಸಾರ್ಥಕವಾಗುತ್ತದೆ.

ರಾಮ ಪ್ರೇಮ ಬಿನು ಕುಶಲ ನ ಕೌಹೂಂ ।
ಸತ್ಯ ಕಹಉಂ ಸಬ ಪ್ರೀತಹಿ ಚಾಹೂಂ ॥

ರಾಮನ ಪ್ರೇಮವಿಲ್ಲದೆ ಈ ಜಗತ್ತಿನಲ್ಲಿ ಯಾರಿಗೂ ಕ್ಷೇಮವಿಲ್ಲ. ಸತ್ಯದ ದಾರಿಯಲ್ಲಿ ನಡೆಯುವವನಿಗೆ ರಾಮನು ಸದಾ ಜೊತೆಗಿರುತ್ತಾನೆ. ಈ ಮಹಾನ್ ಕಾವ್ಯವು ನಮಗೆ ನೀಡುವ ಸಂದೇಶವೆಂದರೆ- ಬದುಕು ಸವಾಲುಗಳಿಂದ ಕೂಡಿರಬಹುದು, ಆದರೆ ಧರ್ಮದ ಹಾದಿ ಹಿಡಿದರೆ ವಿಜಯ ಮತ್ತು ಶಾಂತಿ ಎರಡೂ ನಿಶ್ಚಿತ. ಜೈ ಶ್ರೀರಾಮ್.

ನಮ್ಮೊಳಗಿನ ಪ್ರಾಮಾಣಿಕತೆಯ, ಆತ್ಮಸಾಕ್ಷಿಯ ಪ್ರಜ್ಞೆ ಜಾಗೃತವಾದರೆ ನಾವು ಒಬ್ಬೊಬ್ಬರು ಕೂಡ ರಾಮ ರಾಜ್ಯದ ಪ್ರಜೆಗಳಂತೆ ಸಮಾಜದಲ್ಲಿ ಸಾಮರಸ್ಯ, ಬದುಕಿನಲ್ಲಿ ಏಳಿಗೆ , ಜೀವನದಲ್ಲಿ ನೆಮ್ಮದಿಯನ್ನು ಕಂಡುಕೊಳ್ಳುವ ಹಾದಿಯಲ್ಲಿ ನಡೆದಂತಾಗುತ್ತದೆ. ಇಂತಹ ಜಾಗೃತಿ ನಮ್ಮೆಲ್ಲರಲ್ಲೂ ಮೂಡಲಿ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಆರೆಂಜ್ ಕ್ಯಾಪ್: ಕೆ.ಎಲ್. ರಾಹುಲ್ ಡೆಲ್ಲಿ

ಪರ್ಪಲ್ ಕ್ಯಾಪ್: ಭುವನೇಶ್ವರ್ ಬೆಂಗಳೂರು

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	9	6	2	13
ಬೆಂಗಳೂರು	9	6	3	12
ಹೈದರಾಬಾದ್	10	6	4	12
ರಾಜಸ್ಥಾನ್	10	6	4	12
ಗುಜರಾತ್	10	6	4	12
ಚೆನ್ನೈ	10	5	5	10
ಡೆಲ್ಲಿ	10	4	6	8
ಕೋಲ್ಕತಾ	9	3	5	7
ಮುಂಬೈ	10	3	7	6
ಲಖನೌ	9	2	7	4

ಚೆನ್ನೈ ತಂಡವನ್ನು ಗೆಲ್ಲಿಸಿದ ಸಂಜು | ಗಾಯಕ್ವಾಡ್ ಪಡೆಯ ನಾಕೌಟ್ ಹಾದಿ ಇನ್ನೂ ಜೀವಂತ

ಡೆಲ್ಲಿಗೆ ಪ್ಲೇಆಫ್ ಹಾದಿ ಕಠಿಣ

ದೆಹಲಿ: ಸಂಜು ಸ್ಯಾಮ್ಸನ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ಬಲದಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಮಂಗಳವಾರ ನಡೆದ ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು 8 ವಿಕೆಟ್‌ಗಳ ಭರ್ಜರಿ ಗೆಲುವನ್ನು ದಾಖಲಿಸಿತು. ಈ ಮೂಲಕ 10 ಅಂಕಗಳನ್ನು ಗಳಿಸಿ ಆರನೇ ಸ್ಥಾನದಲ್ಲಿ ಉಳಿದರೂ ಟೂರ್ನಿಯ ಪ್ಲೇಆಫ್ಸ್‌ಗೆ ಹಾದಿಯನ್ನು ಜೀವಂತವಾಗಿರಿಸಿಕೊಂಡಿದೆ. ಆದರೆ ತವರು ಅಂಗಣದಲ್ಲಿ ಸೋಲು ಅನುಭವಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಕೌಟ್ ಹಾದಿ ಅತ್ಯಂತ ಕಠಿಣವಾಗಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ನೀಡಿದ್ದ 156 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಸಂಜು ಸ್ಯಾಮ್ಸನ್ (87) ಅವರ ಜವಾಬ್ದಾರಿಯುತ ಇನ್ನಿಂಗ್ಸ್ ನೆರವಿನಿಂದ 17.3 ಓವರ್‌ಗಳಲ್ಲಿ ಎರಡು ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿ ಟೂರ್ನಿಯಲ್ಲಿ ಐದನೇ ಗೆಲುವನ್ನು ಪಡೆಯಿತು.

ಚೆನ್ನೈ ಪರ ಇನ್ನಿಂಗ್ಸ್ ಆರಂಭಿಸಿದ ಸಂಜು ಸ್ಯಾಮ್ಸನ್ ಹಾಗೂ ಋತುರಾಜ್ ಗಾಯಕ್ವಾಡ್ ಜೋಡಿಯ ಪ್ರಥಮ ವಿಕೆಟ್ ಜತೆಯಾಟ 24 ರನ್‌ಗಳಿಗೆ ಸೀಮಿತವಾಯಿತು. ಕಳೆದ ಪಂದ್ಯದಲ್ಲಿ ಉತ್ತಮ ಇನ್ನಿಂಗ್ಸ್ ಆಡಿದ್ದ ಗಾಯಕ್ವಾಡ್, ಮಂಗಳವಾರದ ಪಂದ್ಯದಲ್ಲಿ ಬೇಗ ಔಟ್ ಆದರು. ತದನಂತರ ತಂಡದ ಜವಾಬ್ದಾರಿ ಹೊತ್ತು ಬ್ಯಾಟಿಂಗ್ ಮುಂದುವರಿಸಿದ ಸಂಜು ಸ್ಯಾಮ್ಸನ್, ಸಮಯೋಚಿತವಾಗಿ ಆಡಿದರು. ಅವರು 52 ಎಸೆತಗಳಲ್ಲಿ 6 ಸಿಕ್ಸರ್ ಹಾಗೂ 7 ಬೌಂಡರಿಗಳ ಮೂಲಕ ಅಜೇಯ 87 ರನ್ ಗಳಿಸಿ ಚೆನ್ನೈ ಗೆಲುವಿಗೆ ಕಾರಣಕರ್ತರಾದರು. ಮತ್ತೊಂದು ತುದಿಯಲ್ಲಿ ಕಾರ್ತಿಕ್ ಶರ್ಮಾ 31 ಎಸೆತಗಳಲ್ಲಿ ಅಜೇಯ 41ರನ್ ಗಳಿಸಿದರು. ಸಂಜು ಹಾಗೂ ಕಾರ್ತಿಕ್ ಮೂರನೇ ವಿಕೆಟ್‌ಗೆ 114 ರನ್‌ಗಳ ಜತೆಯಾಟವನ್ನು ಪ್ರದರ್ಶಿಸಿದರು.

ಸಂಜು ಸ್ಯಾಮ್ಸನ್ ಹಾಗೂ ಕಾರ್ತಿಕ್ ಶರ್ಮಾ ಅವರ ಅಮೋಘ ಆಟ.

155 ರನ್ ಕಲೆ ಹಾಕಿದ ಡೆಲ್ಲಿ: ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ನಿರೀಕ್ಷೆಯಂತೆ ಉತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರುವಲ್ಲಿ ವಿಫಲವಾಯಿತು. ನೂರ್ ಅಹ್ಮದ್ ಸೇರದಂತೆ ಚೆನ್ನೈ ಬೌಲರ್‌ಗಳ ಶಿಸ್ತುಬದ್ಧ ಬೌಲಿಂಗ್ ದಾಳಿಗೆ ನಲುಗಿ ತನ್ನ ಪಾಲಿನ 20 ಓವರ್‌ಗಳಿಗೆ 7 ವಿಕೆಟ್‌ಗಳ ನಷ್ಟಕ್ಕೆ ಕೇವಲ 155 ರನ್‌ಗಳನ್ನು ಕಲೆ ಹಾಕಿ ಚೆನ್ನೈ ಸೂಪರ್ ಕಿಂಗ್ಸ್‌ಗೆ 156 ರನ್‌ಗಳ ಸ್ಪರ್ಧಾತ್ಮಕ ಗುರಿಯನ್ನು ನೀಡಿತ್ತು.

ಅಗ್ರ ಐವರ ವೈಫಲ್ಯ: ಡೆಲ್ಲಿ ಕ್ಯಾಪಿಟಲ್ಸ್ ತಂಡದ ಅಗ್ರ ಐವರು ಬ್ಯಾಟ್ಸ್‌ಮನ್‌ಗಳು ವಿಫಲರಾದರು. ಪತುಂ ನಿಸ್ಸಾಂಕ (19), ಕೆಎಲ್ ರಾಹುಲ್ (12), ನಿತೀಶ್ ರಾಣಾ (15), ಕರುಣ್ ನಾಯರ್ (13) ಹಾಗೂ ನಾಯಕ ಅಕ್ಷರ್ ಪಟೇಲ್ (2) ಬಹುಬೇಗ ವಿಕೆಟ್ ಒಪ್ಪಿಸಿದರು. ಆದರೆ ಆರನೇ ವಿಕೆಟ್‌ಗೆ ಜತೆಯಾದ ಟ್ರಿಸ್ಟನ್ ಸ್ಟಬ್ಸ್ ಹಾಗೂ ಇಂಪ್ಯಾಕ್ಟ್ ಪ್ಲೇಯರ್ ಸಮೀರ್ ರಿಜ್ವಿ ಕೆಲ ಕಾಲ ಕ್ರೀಸ್‌ನಲ್ಲಿ ಚೆನ್ನೈ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದರು. ಈ ಜೋಡಿ 47 ಎಸೆತಗಳಲ್ಲಿ 65 ರನ್‌ಗಳ ಜತೆಯಾಟವನ್ನು ಪ್ರದರ್ಶಿಸಿ, ತಂಡದ ಮೊತ್ತವನ್ನು 130ರ ಗಡಿ ದಾಟಿಸಿದರು.

ಡೆಲ್ಲಿಗೆ ಸಮೀರ್ ರಿಜ್ವಿ ಆಸರೆ: ಸಮಯೋಚಿತ ಬ್ಯಾಟಿಂಗ್ ಮಾಡಿದ ಟ್ರಿಸ್ಟನ್ ಸ್ಟಬ್ಸ್ 31 ಎಸೆತಗಳಲ್ಲಿ 38 ರನ್‌ಗಳನ್ನು ಗಳಿಸಿ ಕೊನೆಯ ಹಂತದಲ್ಲಿ ಜೇಮಿ ಓವರ್ಟನ್‌ಗೆ ವಿಕೆಟ್ ಒಪ್ಪಿಸಿದರು. ಆದರೆ ಡೆತ್ ಓವರ್‌ಗಳಲ್ಲಿ ಅಬ್ಬರಿಸಿದ ಸಮೀರ್ 24 ಎಸೆತಗಳಲ್ಲಿ ಅಜೇಯ 40 ರನ್ ಗಳಿಸಿ ಡೆಲ್ಲಿ ಮೊತ್ತವನ್ನು 150ರ ಗಡಿ ದಾಟಿಸಿದರು. ಆಶುತೋಷ್ ಶರ್ಮಾ 5 ಎಸೆತಗಳಲ್ಲಿ 2 ಸಿಕ್ಸರ್ ಸೇರಿದಂತೆ 14 ರನ್ ಗಳಿಸಿದರು.

ಚೆನ್ನೈ ಪರ ನೂರ್ ಅಹ್ಮದ್ ಎರಡು ವಿಕೆಟ್ ಪಡೆದರೆ, ಗುರ್ಜಪ್ನೀತ್ ಸಿಂಗ್, ಜೇಮಿ ಓವರ್ಟನ್, ಮುಖೇಶ್ ಚೌಧರಿ ಹಾಗೂ ಅಕೀಲ್ ಹೊಸೈನ್ ತಲಾ ಒಂದೊಂದು ವಿಕೆಟ್ ಪಡೆದರು.

ಸ್ಕೋರ್ ಬೋರ್ಡ್

ಡೆಲ್ಲಿ 155/7 20 ಓವರ್

		ರನ್	ಎಸೆತ	4s	6s
ನಿಸ್ಸಾಂಕ	ಸಿ ಬ್ರೆವಿಸ್, ಬಿ ಮುಖೇಶ್	19	15	3	1
ರಾಹುಲ್	ಸಿ ಗಾಯಕ್ವಾಡ್, ಬಿ ಹೊಸೈನ್	12	13	2	0
ನಿತೀಶ್	ಸಿ ಶರ್ಮಾ, ಬಿ ಅಹ್ಮದ್	15	13	2	0
ಕರುಣ್	ಸಿ ಗುರ್ಜಪ್ನೀತ್, ಬಿ ಅಹ್ಮದ್	13	13	2	0
ಅಕ್ಷರ್	ಸಿ ಹೊಸೈನ್, ಬಿ ಗುರ್ಜಪ್ನೀತ್	2	6	0	0
ಸ್ಟಬ್ಸ್	ಸಿ ಚೌಧರಿ, ಬಿ ಓವರ್ಟನ್	38	31	1	2
ರಿಜ್ವಿ	ನಾಟೌಟ್	40	24	0	4
ಅಶುತೋಷ್	ರನ್ ಔಟ್	14	5	0	2
ಸ್ಟಾರ್ಕ್	ನಾಟ್ ಔಟ್	0	0	0	0

ಬೌಲಿಂಗ್ ಚೆನ್ನೈ

	ಓವರ್	ಮೇಡನ್	ರನ್	ವಿಕೆಟ್
ಹೊಸೈನ್	4	0	19	1
ಮುಖೇಶ್	4	0	31	1
ಕಾಂಬೋಜ್	4	0	49	0
ಅಹ್ಮದ್	3	0	22	2
ಗುರ್ಜಪ್ನೀತ್	4	0	29	1
ಓವರ್ಟನ್	1	0	5	1

ವಿಕೆಟ್ ಪತನ : 1/29, 2/36, 3/52, 4/61, 5/69, 6/134, 7/149

ಚೆನ್ನೈ 159/2 17.3 ಓವರ್

		ರನ್	ಎಸೆತ	4s	6s
ಸಂಜು	ನಾಟ್ ಔಟ್	87	52	7	6
ಗಾಯಕ್ವಾಡ್	ಸಿ ಶರ್ಮಾ, ಬಿ ಎನ್‌ಗಿಡಿ	6	13	1	0
ಉರ್ವಿಲ್	ಸ್ಟಂಪ್ಡ್ ರಾಹುಲ್, ಬಿ ಎನ್‌ಗಿಡಿ	17	9	0	2
ಕಾರ್ತಿಕ್	ನಾಟ್ ಔಟ್	41	31	4	2

ಬೌಲಿಂಗ್ ಡೆಲ್ಲಿ

	ಓವರ್	ಮೇಡನ್	ರನ್	ವಿಕೆಟ್
ಸ್ಟಾರ್ಕ್	4	0	30	0
ಅಕ್ಷರ್	4	0	25	1
ಎನ್‌ಗಿಡಿ	4	0	30	1
ಕುಲ್ದೀಪ್	3	0	34	0
ನಟರಾಜನ್	2.3	0	39	0

ವಿಕೆಟ್ ಪತನ : ವಿಕೆಟ್ ಪತನ: 1/24, 2/45

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ಸಂಜು (ಚೆನ್ನೈ)

ಸಮಾಚಾರ ಸಣ್ಣದಲ್ಲ

ಆರ್‌ಸಿಬಿಗೆ ಹೆಡ್ ಫಿಸಿಯೊ ವಿದಾಯ

ಬೆಂಗಳೂರು: ಆರ್‌ಸಿಬಿ ತಂಡದಲ್ಲಿ ದೀರ್ಘಕಾಲ ಹೆಡ್ ಫಿಸಿಯೊ ಇವನ್ ಸ್ಪೀಚ್ಲಿ ತಂಡಕ್ಕೆ ವಿದಾಯ ಹೇಳಿದ್ದಾರೆ. 2008ರಿಂದ 2025ರವರೆಗೆ 18 ವರ್ಷಗಳ ಕಾಲ ಅವರು ತಂಡದಲ್ಲಿ ಸೇವೆ ಸಲ್ಲಿಸಿದ್ದರು.



ಐಪಿಎಲ್‌ನ ಪ್ರತೀ ಆವೃತ್ತಿಗಳಲ್ಲಿ ಎಲೆಮರೆಯ ಕಾಯಿಯಂತೆ ಕಾರ್ಯ ನಿರ್ವಹಿಸಿದ್ದ ಸ್ಪೀಚ್ಲಿ, ವಿಶೇಷ ವಿದಾಯದ ಕಾರ್ಯಕ್ರಮಕ್ಕಾಗಿ ಬೆಂಗಳೂರಿಗೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ಆಟಗಾರರು ಹಾಗೂ ಸಹಾಯಕ ಸಿಬ್ಬಂದಿ ಒಂದೇ ವೇದಿಕೆಯಲ್ಲಿ ಸೇರಿ ಅವರ ಕೊಡುಗೆಗಳನ್ನು ಗೌರವಿಸಿದರು. ಇವನ್ ಅವರ ಜೊತೆಗೆ 18 ವರ್ಷ ಕಳೆದಿರುವ ವಿರಾಟ್ ಕೊಹ್ಲಿ ಈ ಸಂದರ್ಭದಲ್ಲಿ ಇವನ್ ಸ್ಪೀಚ್ಲಿ ಅವರಿಗೆ ಭಾವನಾತ್ಮಕ ಸಂದೇಶವನ್ನು ರವಾನಿಸಿದ್ದಾರೆ. 'ಆರ್‌ಸಿಬಿಯಲ್ಲಿ ನಾನು ಬಹುಶಃ ನಿಮ್ಮೊಂದಿಗೇ ಹೆಚ್ಚು ಸಮಯ ಕಳೆದಿದ್ದೇನೆ. ನೀವು ಈ ತಂಡದ ಮೂಲ ಸದಸ್ಯರಲ್ಲಿ ಒಬ್ಬರು. ನಿಮ್ಮ ಪರಿಶ್ರಮ ಮತ್ತು ವೃತ್ತಿಪರತೆಯ ಜತೆಗೆ, ನಿಮ್ಮ ದಯೆ, ಕಾಳಜಿ ಮತ್ತು ಪ್ರಾಮಾಣಿಕತೆಯೇ ಯಾವಾಗಲೂ ವಿಶೇಷವಾಗಿ ಗಮನ ಸೆಳೆದಿವೆ. ನೀವು ಈ ಕುಟುಂಬದ ಭಾಗವಾಗಿದ್ದೀರಿ, ಇದ್ದೀರಿ ಮತ್ತು ಮುಂದೆಯೂ ಇರುತ್ತೀರಿ ಎಂದು ಹೇಳಲು ಹೆಮ್ಮೆಯಾಗಿದೆ. ನಾವು ನಿಮ್ಮನ್ನು ಎಂದಿಗೂ ಮಮತೆಯಿಂದ ನೆನಪಿಸಿಕೊಳ್ಳುತ್ತೇವೆ' ಎಂದು ಕೊಹ್ಲಿ ಅವರು ಆರ್‌ಸಿಬಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ವಿಡಿಯೊದಲ್ಲಿ ಹೇಳಿದ್ದಾರೆ.

ಟಿ20 ರ‍್ಯಾಂಕಿಂಗ್ ಭಾರತಕ್ಕೆ ಅಗ್ರಸ್ಥಾನ

ದೆಹಲಿ: ಭಾರತ ಕ್ರಿಕೆಟ್ ತಂಡವು ಐಸಿಸಿ ಟಿ20 ತಂಡಗಳ ರ‍್ಯಾಂಕಿಂಗ್ ಪಟ್ಟದಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಮಂಗಳವಾರ ಟಿ20 ವಾರ್ಷಿಕ ಶ್ರೇಯಾಂಕ ಪಟ್ಟಿ ಬಿಡುಗಡೆಗೊಳಿಸಿದ್ದು ಸೂರ್ಯ ಕುಮಾರ್ ಯಾದವ್ ನೇತೃತ್ವದ ಭಾರತ ತಂಡ 275 ರೇಟಿಂಗ್ ಅಂಕಗಳೊಂದಿಗೆ ಮೊದಲನೇ ಸ್ಥಾನವನ್ನು ಲಂಕರಿಸಿದೆ. ಇಂಗ್ಲೆಂಡ್ 262 ರೇಟಿಂಗ್ ಅಂಕಗಳೊಂದಿಗೆ 2ನೇ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ ತಂಡ 258 ಪಾಯಿಂಟ್ಸ್ ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ. 240 ರೇಟಿಂಗ್ ಪಾಯಿಂಟ್‌ಗಳೊಂದಿಗೆ ಪಾಕಿಸ್ತಾನ ಆರನೇ ಸ್ಥಾನವನ್ನು ಉಳಿಸಿಕೊಂಡಿದೆ. ಆರು ರೇಟಿಂಗ್ ಪಾಯಿಂಟ್‌ಗಳನ್ನು ಕಳೆದುಕೊಂಡಿರುವ ಶ್ರೀಲಂಕಾ ತಂಡವು ಒಂದು ಸ್ಥಾನ ಕೆಳಕ್ಕೆ ಕುಸಿದು 9ನೇ ಸ್ಥಾನಕ್ಕೆ ತಲುಪಿದೆ.

ಕಮಿನ್ಸ್ ಬಳಗಕ್ಕೆ ಪ್ರತಿಷ್ಠೆಯ ಪಂದ್ಯ | ಶ್ರೇಯಸ್ ಪಡೆಗೆ ಅಗ್ರಸ್ಥಾನ ಉಳಿಸುವ ಸವಾಲು

ಇಂದು ಹೈದರಾಬಾದ್-ಪಂಜಾಬ್ ಸೆಣಸಾಟ

ಹೈದರಾಬಾದ್: ಇಂದು ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಸನ್ ರೈಸರ್ಸ್ ಹೈದರಾಬಾದ್ ತಂಡವು ಇದೀಗ ಐಪಿಎಲ್‌ನಲ್ಲಿ ಅಗ್ರಸ್ಥಾನದಲ್ಲಿರುವ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಈಗಾಗಲೇ 10 ಪಂದ್ಯಗಳನ್ನು ಆಡಿರುವ ಹೈದರಾಬಾದ್ 6 ಗೆಲುವುಗಳನ್ನು ಪಡೆದು 4ರಲ್ಲಿ ಸೋತು 12 ಅಂಕಗಳನ್ನು ಪಡೆದಿದೆ. 9 ಪಂದ್ಯಗಳನ್ನು ಆಡಿರುವ ಪಂಜಾಬ್ 6 ಪಂದ್ಯಗಳಲ್ಲಿ ಗೆದ್ದು 2ರಲ್ಲಿ ಸೋತು 13 ಅಂಕಗಳನ್ನು ಪಡೆಯುವ ಮೂಲಕ ಅಗ್ರಸ್ಥಾನದಲ್ಲಿದೆ.

ಈ ಐಪಿಎಲ್ ಋತುವಿನ ಮೊದಲ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಸೋತರೂ ಹೈದರಾಬಾದ್ ತಂಡವು ಆ ಬಳಿಕ ತಕ್ಷಣವೇ ಚೇತರಿಕೊಂಡು ನಂತರದ ಪಂದ್ಯದಲ್ಲಿ ಕೋಲ್ಕತ್ತಾ ವಿರುದ್ಧ ಗೆದ್ದಿತು. ನಂತರ ಲಖನೌ ಮತ್ತು ಪಂಜಾಬ್ ವಿರುದ್ಧ ಸೋತಿತ್ತು. ಬಳಿಕ ಅದು ಹಿಂತಿರುಗಿ ನೋಡದೆ ಚೆನ್ನೈ, ಡೆಲ್ಲಿ, ರಾಜಸ್ಥಾನ್, ಡೆಲ್ಲಿ ಮತ್ತು ರಾಜಸ್ಥಾನದ ವಿರುದ್ಧ 2 ಪಂದ್ಯಗಳನ್ನು ಗೆದ್ದುಕೊಂಡಿತು. ಮೇ.3ರಂದು ಆಡಿರುವ ಪಂದ್ಯದಲ್ಲಿ ಕೋಲ್ಕತ್ತಾ ವಿರುದ್ಧ ಸೋತರೂ ಮತ್ತೊಮ್ಮೆ ಪುಟಿದೇಳುವ ವಿಶ್ವಾಸವನ್ನೊಂದಿದೆ.

ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ವಿರುದ್ಧ ಗೆಲ್ಲುವ ಮೂಲಕ ಈ ಬಾರಿಯ ಐಪಿಎಲ್‌ನಲ್ಲಿ ಶುಭಾರಂಭ ಮಾಡಿದ್ದ ಪಂಜಾಬ್ ಕಿಂಗ್ಸ್ ತಂಡವು ಗುಜರಾತ್, ಚೆನ್ನೈ, ಹೈದರಾಬಾದ್, ಮುಂಬೈ, ಲಖನೌ, ಡೆಲ್ಲಿ, ರಾಜಸ್ಥಾನ್ ತಂಡದ ವಿರುದ್ಧವೂ ಗೆದ್ದಿದೆ. ಕೋಲ್ಕತ್ತಾ ವಿರುದ್ಧದ ಪಂದ್ಯವು ಮಳೆಯಿಂದ ರದ್ದಾದ ಕಾರಣ ಕೇವಲ ಒಂದು ಅಂಕ ಗಳಿಸಿತು.

ಇಂದು ತವರಿನಲ್ಲಿ ನಡೆಯಲಿರುವ ಪಂದ್ಯ ಹೈದರಾಬಾದ್‌ಗೆ ಪ್ರತಿಷ್ಠೆಯಾಗಿದೆ. ಅದೇ ರೀತಿ ಈ ಪಂದ್ಯದಲ್ಲಿ ಗೆದ್ದರೆ ತನ್ನ ಅಗ್ರಸ್ಥಾನವನ್ನು ಕಾಪಾಡಿಕೊಳ್ಳಬಹುದೆಂಬ ನಿರೀಕ್ಷೆಯೂ ಪಂಜಾಬ್ ತಂಡಕ್ಕಿದೆ.



ಇಂದಿನ ಪಂದ್ಯ

ಹೈದರಾಬಾದ್ vs ಪಂಜಾಬ್

ಸ್ಥಳ	: ರಾಜೀವ್ ಗಾಂಧಿ, ಸ್ಟೇಡಿಯಂ, ಹೈದರಾಬಾದ್
ಸಮಯ	: ರಾತ್ರಿ 7.30
ನೇರಪ್ರಸಾರ	: ಸ್ಟಾರ್ ಸ್ಪೋರ್ಟ್ಸ್
ಲೈವ್‌ಸ್ಟ್ರೀಮಿಂಗ್	: ಜಿಯೋ ಹಾಟ್‌ಸ್ಟಾರ್

ಟೆಸ್ಟ್‌ಗೆ ಸೀಮಿತವಾಗಿದ್ದೆ...

ದೆಹಲಿ: ತಮ್ಮ ವೃತ್ತಿಜೀವನದ ಆರಂಭಿಕ ವರ್ಷಗಳಲ್ಲಿ ತಾವು ಶಕ್ತಿ ಶಾಲಿ ಟಿ20 ಆಟಗಾರನಾಗಿ ಪರಿಗಣಿಸಲ್ಪಟ್ಟಿರಲಿಲ್ಲ ಎಂದು ಕನ್ನಡಿಗ, ಭಾರತ ತಂಡದ ಬ್ಯಾಟ್ಸ್‌ಮನ್ ಕೆಎಲ್ ರಾಹುಲ್ ಒಪ್ಪಿಕೊಂಡಿದ್ದಾರೆ.



ಟಿ20 ಕ್ರಿಕೆಟ್‌ನಲ್ಲಿ ತಮ್ಮ ಸ್ಟ್ರೈಕ್‌ರೇಟ್ ಮತ್ತು ಆಟದ ಶೈಲಿಯ ಕುರಿತು ವರ್ಷಗಳ ಕಾಲ ಟೀಕೆಗಳನ್ನು ಎದುರಿಸಿದ ಬಳಿಕ, ತಮ್ಮ ವೈಟ್ ಬಾಲ್ ಆಟದ ಬಗ್ಗೆ ಇದ್ದ ಅಭಿಪ್ರಾಯವನ್ನು ಬದಲಾಯಿಸಲು ಸಾಧ್ಯವಾಗಿರುವುದರಿಂದ ತನಗೆ ತುಂಬಾ ಖುಷಿ ಇದೆ ಎಂದು ಅವರು ಹೇಳಿದ್ದಾರೆ. ಜಿಯೊ ಸ್ಟಾರ್‌ನ ಸೂಪರ್ ಸ್ಟಾರ್ಸ್ ಶೋನಲ್ಲಿ ಮಾತನಾಡಿದ ಕೆಎಲ್ ರಾಹುಲ್, ತಮ್ಮ ವೈಟ್‌ಬಾಲ್ ಕ್ರಿಕೆಟ್‌ನಲ್ಲಿನ ಪಯಣದ ಬಗ್ಗೆ ವಿವರಿಸಿದ್ದಾರೆ.

'ಹತ್ತು ವರ್ಷಗಳ ಹಿಂದೆ, ಟಿ20 ತಂಡದ ಭಾಗವಾಗಲು ನಾನು ಏನೇ ಬೇಕಾದರೂ ಮಾಡುತ್ತಿದ್ದೆ. ಆಗ ನನ್ನನ್ನು ಟಿ20 ಆಟಗಾರನಾಗಿ ಮೌಲ್ಯಮಾಪನ ಮಾಡಲಾಗುತ್ತಿರಲಿಲ್ಲ ಅಥವಾ ಉತ್ತಮ ವೈಟ್ ಬಾಲ್ ಆಟಗಾರನೆಂದೂ ಪರಿಗಣಿಸಲಾಗುತ್ತಿರಲಿಲ್ಲ, ನನಗೆ ಟೆಸ್ಟ್ ಆಟಗಾರ ಎಂಬ ಮುದ್ರೆ ಬಿದ್ದಿತ್ತು' ಎಂದು ಕೆಎಲ್ ರಾಹುಲ್ ಹೇಳಿದ್ದಾರೆ. 'ಈ ಕಾರಣದಿಂದಾಗಿ ನಾನು ಹೊರಬಂದು ನನ್ನ ವೈಟ್‌ಬಾಲ್ ಆಟವನ್ನು ಅಭಿವೃದ್ಧಿಪಡಿಸಿ ಇಷ್ಟು ದೂರ ಬಂದಿರುವುದು ನನಗೆ ಬಹಳ ಹೆಮ್ಮೆಯ ವಿಷಯ. ಈ ಪ್ರಯಾಣದಲ್ಲಿ ನಾನು ತಪ್ಪುಗಳನ್ನೂ ಮಾಡಿದ್ದೇನೆ, ಇನ್ನಷ್ಟು ಚೆನ್ನಾಗಿ ಮಾಡಬಹುದಾಗಿದ್ದ ಕೆಲವು ಸಂಗತಿಗಳೂ ಇದ್ದವು' ಎಂದು ಅವರು ತಿಳಿಸಿದ್ದಾರೆ. ತಮ್ಮ ವೃತ್ತಿಜೀವನದಲ್ಲಿ ಏರಿಳಿತಗಳಿದ್ದರೂ, ಯಾವಾಗಲೂ ತಮ್ಮ ತಂಡವನ್ನು ಪ್ರತಿನಿಧಿಸಿದಾಗ ಅತ್ಯುತ್ತಮ ಪ್ರದರ್ಶನ ನೀಡಲು ಪ್ರಯತ್ನಿಸಿದ್ದೇನೆ ಎಂದು ರಾಹುಲ್ ಹೇಳಿದ್ದಾರೆ. 'ನನಗೆ ಹೆಮ್ಮೆಯ ವಿಷಯವೇನೆಂದರೆ, ನಾನು ಪ್ರತೀ ಬಾರಿ ಆಡಿದಾಗ ನನ್ನ ಶ್ರೇಷ್ಠ ಪ್ರಯತ್ನವನ್ನು ಹಾಕಿದ್ದೇನೆ ಮತ್ತು ಯಶಸ್ಸು ಸಾಧಿಸಲು ಸಾಧ್ಯವಾದಷ್ಟು ಉತ್ತಮವಾಗಿ ಸಿದ್ಧತೆ ಮಾಡಿಕೊಂಡಿದ್ದೇನೆ. ಇದೇ ಕ್ರೀಡೆ ಎಲ್ಲವೂ ಸದಾ ನಿಮ್ಮ ಪರ ವಾಗಿಯೇ ನಡೆಯುವುದಿಲ್ಲ' ಎಂದು ರಾಹುಲ್ ತಿಳಿಸಿದ್ದಾರೆ.

ರಿಷಭ್ ಪಂತ್ ವಿರುದ್ಧ ಮನೋಜ್ ತಿವಾರಿ ಕಿಡಿ

ಮುಂಬೈ: ಐಪಿಎಲ್ ಟೂರ್ನಿಯಲ್ಲಿ ಲಖನೌ ಸೂಪರ್ ಜಯಂಟ್ಸ್ ತಂಡದ ಹೀನಾಯ ಪ್ರದರ್ಶನ ಮುಂದುವರಿದಿದ್ದು, ನಾಯಕ ರಿಷಭ್ ಪಂತ್ ವಿರುದ್ಧ ಟೀಕೆಗಳು ತೀವ್ರಗೊಂಡಿವೆ.

ಭಾರತದ ಮಾಜಿ ಬ್ಯಾಟರ್ ಮನೋಜ್ ತಿವಾರಿ ಅವರು ಪಂತ್ ನಾಯಕತ್ವದ ಬಗ್ಗೆ ಕಠಿಣವಾಗಿ ಟೀಕಿಸಿ, ನಾಯಕತ್ವ ಎಂದರೆ ಕೇವಲ ಆಕ್ರಮಣಕಾರಿ ಮನೋಭಾವ ಅಲ್ಲ, ಅದನ್ನು ಸರಿಯಾಗಿ ಅನುಷ್ಠಾನಗೊಳಿಸುವ ಸಾಮರ್ಥ್ಯವೂ ಇರಬೇಕು ಎಂದು ಹೇಳಿದ್ದಾರೆ. ಈ ಮೂಲಕ ತಂಡದ ವೈಫಲ್ಯ ಹೆಚ್ಚುತ್ತಿದ್ದಂತೆ, ಪಂತ್ ಆಟಗಾರರಲ್ಲಿ ವಿಶ್ವಾಸ ಮೂಡಿಸಲು ಮತ್ತು ಅವರಿಂದ ಉತ್ತಮ ಪ್ರದರ್ಶನ ಪಡೆಯಲು ವಿಫಲವಾಗುತ್ತಿದ್ದಾರೆಯೇ ಎಂಬ ಪ್ರಶ್ನೆಗಳು ಉದ್ಭವಿಸಿವೆ.

ಇದೀಗ ಹೆಚ್ಚು ಚರ್ಚೆಗೆ ಕಾರಣವಾದ ವಿಷಯವೆಂದರೆ ಆಲ್‌ರೌಂಡರ್ ಅರ್ಜುನ್ ತೆಂಡೂಲ್ಕರ್‌ಗೆ ಇನ್ನೂ ಅವಕಾಶ ಸಿಗದಿರುವ ವಿಷಯವಾಗಿದೆ. ತಂಡದ ಭಾಗವಾಗಿದ್ದರೂ, ಈ ಆವೃತ್ತಿಯಲ್ಲಿ ಅವರಿಗೆ ಒಂದೂ ಪಂದ್ಯದಲ್ಲೂ ಅವಕಾಶ ಸಿಕ್ಕಿಲ್ಲ. ಇದಕ್ಕೆ ಪ್ರತಿಕ್ರಿಯಿಸಿದ ಮಾಜಿ ಭಾರತೀಯ ಬ್ಯಾಟರ್ ಮನೋಜ್ ತಿವಾರಿ, ಪಂತ್ ಹಾಗೂ ಲಖನೌ ತಂಡದ ನಿರ್ಧಾರವನ್ನು ಪ್ರಶ್ನಿಸಿದ್ದಾರೆ.

ವಿ ಟಾಕೀಸ್

ಜಗದೀಶ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ಧೃತಿ ಚಿತ್ರ ಈ ವಾರ ತೆರೆಗೆ ಬರಲಿದೆ. ಶೋಷಣೆಗೆ ಒಳಗಾದ ಹೆಣ್ಣು ಮಗಳೊಬ್ಬಳ ಸುತ್ತ ಧೃತಿ ಚಿತ್ರದ ಕಥೆ ಸಾಗುತ್ತದೆ. ಆದರೆ ನಾವು ಈ ಚಿತ್ರದಲ್ಲಿ ಶೋಷಣೆಯನ್ನು ವಿಜೃಂಭಿಸಿಲ್ಲ. ಸಮಸ್ಯೆಗೆ ಪರಿಹಾರವನ್ನು ಹೇಳಿದ್ದೇವೆ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚಿತ್ರ ಇದಾಗಲಿದೆ ಎನ್ನುತ್ತಾರೆ ನಿರ್ದೇಶಕ ಜಗದೀಶ್. ಆಂಚಲ್ ಗೌಡ ನಾಯಕಿಯಾಗಿ ನಟಿಸಿದ್ದು, ಸವಾಲನ್ನು ಮೆಟ್ಟಿನಿಂತು ಅಂದುಕೊಂಡಿದನ್ನು ಸಾಧಿಸುವ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರಶಾಂತ್ ಸೊಪ್ಪಿಮಠ ನಾಯಕನಾಗಿ ಅಭಿನಯಿಸಿದ್ದು, ಉಳಿದಂತೆ ಭಾವನಾ ರೆಡ್ಡಿ, ಮನೋಜ್ ಕುಮಾರ್, ಧನುಷ್, ಪ್ರದೀಪ್, ದೀಪಕ್, ಮಧು ಮಂದಗೆರೆ ಮುಂತಾದವರು ತಾರಾಗಣದಲ್ಲಿದ್ದಾರೆ. ನಿರ್ದೇಶಕ ಜಗದೀಶ್ ಚಿತ್ರ ನಿರ್ಮಾಣಕ್ಕೂ ಬಂಡ ವಾಳ ಹೂಡಿದ್ದಾರೆ. ಪ್ರಸನ್ನ ಕುಮಾರ್ ಸಂಗೀತ ನಿರ್ದೇಶನ ಹಾಗೂ ಶಶಾಂಕ್ ಮುರಳಿಧರನ್ ಸಂಕಲನ ಈ ಚಿತ್ರಕ್ಕಿದೆ.

ಆಗಸ್ಟ್‌ಗೆ ಜೈಲರ್ ಎಂಟ್ರಿ

ಈ ಹಿಂದೆ ತೆರೆಗೆ ಬಂದ ಜೈಲರ್ ಚಿತ್ರ, ಭರ್ಜರಿ ಯಶಸ್ಸು ಪಡೆದಿತ್ತು. ನೆಲ್ಸನ್ ದಿಲೀಪ್ ಕುಮಾರ್ ನಿರ್ದೇಶದ ಜೈಲರ್, ದಾಖಲೆ ಮೇಲೆ ದಾಖಲೆ ಬರೆಯಿತು. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್, ಮೋಹನ್ ಲಾಲ್ ಸೇರಿದಂತೆ ದೊಡ್ಡ ತಾರಾಬಳಗವೇ ಈ ಚಿತ್ರದಲ್ಲಿತ್ತು. ಈಗ ಇದೇ ಸೀಕ್ವೆಲ್ ಆಧರಿಸಿ ಜೈಲರ್ 2 ಮೂಡಿಬರುತ್ತಿದೆ. ಈ ಹಿಂದೆಯೇ ಸೆಟ್ಟೇರಿದ್ದ ಈ ಚಿತ್ರದ ಚಿತ್ರೀಕಣ ಭರದಿಂದ ಸಾಗಿದ್ದು ಬಹುತೇಕ ಮುಕ್ತಾಯವಾಗಿದೆ. ಆದಷ್ಟು ಬೇಗ ಸಿನಿಮಾವನ್ನು ತೆರೆಗೆ ತರಲು ಚಿತ್ರತಂಡ ತಯಾರಿ ನಡೆಸಿದೆ. ಜೈಲರ್ ಮೊದಲ ಭಾಗ ಆಗಸ್ಟ್‌ನಲ್ಲಿ ರಿಲೀಸ್ ಆಗಿತ್ತು. ಹಾಗಾಗಿ ಜೈಲರ್ 2 ಕೂಡ ಆಗಸ್ಟ್‌ನಲ್ಲಿಯೇ ಬಿಡುಗಡೆ ಮಾಡಲು ಚಿತ್ರತಂಡ ತಯಾರಿ ನಡೆಸಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಜೈಲರ್ 2 ಆಗಸ್ಟ್ 14ರಂದು ವಿಶ್ವಾದ್ಯಂತ ತೆರೆಗೆ ಬರಲಿದೆ. ಮತ್ತೊಮ್ಮೆ ಜೈಲರ್ ಅವತಾರದಲ್ಲಿ ರಜನಿಕಾಂತ್ ಅವರನ್ನು ಕಣ್ತುಂಬಿಕೊಳ್ಳ ಬಹುದಾಗಿದೆ. ಈ ಚಿತ್ರದಲ್ಲಿ ಶಿವಣ್ಣ ಅವರ ಪಾತ್ರ ಕೂಡ ಮುಂದು ವರಿಯಲಿದ್ದು, ನರಸಿಂಹನ ಅವತಾರ ದಲ್ಲಿ ಅಬ್ಬರಿಸಲಿದ್ದಾರೆ. ಶಿವಣ್ಣ ಈ ಭಾಗದಲ್ಲಿಯೂ ಸಿಂಪಲ್ ಲುಕ್‌ನಲ್ಲಿ ಕಂಗೊಳಿಸಲಿದ್ದಾರೆ. ಜೈಲರ್ 2 ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ತಮಿಳು, ಕನ್ನಡ, ತೆಲುಗು ಸೇರಿದಂತೆ ಪಂಚ ಭಾಷೆಗಳಲ್ಲಿ ರಿಲೀಸ್ ಆಗಲಿದೆ.

ಅದ್ಧೂರಿಯಾಗಿ ಬರಲಿದೆ ಕೆಡಿ 2

ಜೋಗಿ ಪ್ರೇಮ್ ನಿರ್ದೇಶನದ ಕೆಡಿ ಎಲ್ಲೆಡೆ ಭರ್ಜರಿ ಪ್ರದರ್ಶನ ಕಾಣುತ್ತಿದೆ. ಹಲವು ಚಿತ್ರಮಂದಿರಗಳು ಹೌಸ್‌ಫುಲ್ ಆಗಿದ್ದು, ಉತ್ತಮ ಗಳಿಕೆ ಕಾಣುತ್ತಿದೆ. ಈ ಹಿಂದಿನ ಸಿನಿಮಾಗಳಲ್ಲಿ ಸೋಲು ಕಂಡಿದ್ದ ಧ್ರುವ ಕೆಡಿ ಮೂಲಕ ಕಮಾಲ್ ಮಾಡಿದ್ದು ಗೆಲುವಿನ ಲಯಕ್ಕೆ ಮರಳಿದ್ದಾರೆ. ಮುಗ್ಧ ಕಾಳಿದಾಸನಾಗಿ, ಕತ್ತಿ ಹಿಡಿದು ಕೆಡಿಯಾಗಿ ಅಬ್ಬರಿಸುತ್ತಿದ್ದಾರೆ. ಧ್ರುವ ಅಭಿನಯ ಕಂಡು ಅಭಿಮಾನಿಗಳು ಬಹುಪರಾಕ್ ಎಂದಿದ್ದಾರೆ. ಕೆಡಿ ಸಿನಿಮಾದ ಕ್ಲೈಮ್ಯಾಕ್ಸ್ ಅದ್ಭುತವಾಗಿದ್ದು ಟ್ವಿಸ್ಟ್ ಮೇಲೆ ಟ್ವಿಸ್ಟ್ ಇದೆ. ಅದನ್ನು ನೋಡಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ಅಷ್ಟೇ ಅಲ್ಲ ಸಿನಿಮಾ ನೋಡದವರಿಗೆ ಸರ್ ಪ್ರೈಸ್ ಕೂಡ ಸಿಕ್ಕಿದೆ. ಅದು ಕೆಡಿ 2 ಬರಲಿದೆ ಅಂತ ತಿಳಿದು ಖುಷಿಯಿಂದ ಕುಣಿದಾಡಿದ್ದಾರೆ. ಹೌದು ಪ್ರೇಮ್, ಕೆಡಿ ಚಿತ್ರದ ಮುಂದಿನ ಭಾಗದ ಕಥೆಯನ್ನು ಸಿದ್ಧ ಮಾಡಿಕೊಂಡು ಮೊದಲ ಭಾಗವನ್ನು ಮುಗಿಸಿದ್ದಾರೆ. ಕೆಡಿ ಮೊದಲ ಭಾಗ ಟ್ರೇಲರ್ ಅನ್ನಬಹುದು. ಮುಂದಿನ ಭಾಗದಲ್ಲಿ ನಿಜವಾದ ಸಿನಿಮಾ ಇದೆ. ಕೆಡಿ 2 ಬಲು ರೋಚಕವಾಗಿ ಮೂಡಿಬರಲಿದೆ ಎಂದು ಹೇಳಿದ್ದು, ಕುತೂಹಲ ಹೆಚ್ಚುವಂತೆ ಮಾಡಿದ್ದಾರೆ. ಮುಂದಿನ ಭಾಗದಲ್ಲಿ ಧ್ರುವ ಕಾಳಿದಾಸನಾಗಿ ಆರ್ಭಟಿಸಲಿದ್ದಾರೆ. ಅವರ ಲುಕ್ ಕೂಡ ವಿಭಿನ್ನವಾಗಿದೆ. ಇನ್ನೂ ಮೊದಲ ಭಾಗದಲ್ಲಿ ಕಾಲನ ಭೈರವನಾಗಿ ಎಂಟ್ರಿಕೊಟ್ಟು ಮಿಂಚು ಹರಿಸಿದ ಕಿಚ್ಚ ಸುದೀಪ್ ಮುಂದಿನ ಭಾಗದಲ್ಲಿ ಚಿತ್ರದುದ್ದಕ್ಕೂ ಅಬ್ಬರಿಸಲಿದ್ದಾರೆ. ಅವರ ಜತೆಗೆ ಶಿಲ್ಪಾ ಶೆಟ್ಟಿಯ ಪಾತ್ರ ಕಥೆಗೆ ಟ್ವಿಸ್ಟ್ ಕೊಡುತ್ತಾ ಸಾಗಲಿದೆ. ಭೂಗತ ಲೋಕದ ಕೆಡಿಯ ಅಬ್ಬರ ಇಲ್ಲಿಗೆ ಮುಗಿದಿಲ್ಲ. ಕೆಡಿ ಮತ್ತೆ ಹೊಸ ಅವತಾರದಲ್ಲಿ ಪ್ರೇಕ್ಷಕರ ಮುಂದೆ ಪ್ರತ್ಯಕ್ಷವಾಗಲಿದ್ದಾನೆ.

ಲಾಕ್‌ಡೌನ್ ನೋವು ನಲಿವು

ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಲಾಕ್‌ಡೌನ್ ಚಿತ್ರ ತೆರೆಗೆ ಸಿದ್ಧವಾಗಿದೆ. ಈ ಚಿತ್ರದ ಟ್ರೈಲರ್ ಹಾಗೂ ಹಾಡುಗಳು ಬಿಡುಗಡೆಯಾಗಿವೆ. ಲಾಕ್ ಡೌನ್ ಸಂದರ್ಭದಲ್ಲಿ ಎದಿರಾದ ನೋವುಗಳು ಅದರ ಜತೆಗೆ ಪ್ರೇಮಕಥೆಯೂ ಸಿನಿಮಾದಲ್ಲಿ ಬೆರೆತಿದೆ. ಜಾವೇದ್ ತಿಪ್ಪನಹಟ್ಟಿ ಸಿನಿಮಾಕ್ಕೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ಹಾಡುಗಳಿಗೆ ಸಾಹಿತ್ಯ ಬರೆದು ಸಂಗೀತ ಸಂಯೋಜಿಸಿದ್ದಾರೆ. ಅಭಿನವ ಪ್ರೊಡಕ್ಷನ್ ನಲ್ಲಿ ಮಂಜು ಮುದ್ಗಲ್ ಚಿತ್ರ ನಿರ್ಮಾಣ ಮಾಡಿದ್ದಾರೆ. ಜತೆಗೆ ಪ್ರಮುಖ ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದಾರೆ.

ವಿಜಯ್ ವಿಘ್ನೇಶ್ ನಾಯಕನಾಗಿ ನಟಿಸಿದ್ದು, ವಾಣಿಶ್ರೀ ಶ್ರೀನಿವಾಸ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಇವರೊಂದಿಗೆ ಶ್ರಾವಣಿ, ಅಶ್ವಿನಿ ಮುದ್ಗಲ್, ಮಮತಾ ಮುಂತಾದವರು ತಾರಾಗಣದಲ್ಲಿದ್ದಾರೆ.

ವಿಶ್ವವೇ ನಲುಗಿದ ಲಾಕ್‌ಡೌನ್ ಸಂದರ್ಭದಲ್ಲಿ ಹಲವರಿಗೆ ನೋವು ತಂದರೆ ಕೆಲವರಿಗೆ ನಲಿವು ತಂದುಕೊಟ್ಟಿದೆ. ಆದಕ್ಕೆ ಟ್ಯಾಗ್ ಲೈನ್‌ನಲ್ಲಿ ವಿಷಾದ ಮತ್ತು ರಂಜನೆ ಎಂದು ಹೇಳಲಾಗಿದೆ. ಅದರಲ್ಲೂ ಬಳ್ಳಾರಿಯಲ್ಲಿ ನಡೆದ ಒಂದಷ್ಟು ಕಹಿ ಘಟನೆಗಳು ಚಿತ್ರದಲ್ಲಿ ಹೇಳಲಾಗಿದೆ. ಇದು ಕಾಲ್ಪನಿಕ ಕಥೆಯ ಸಿನಿಮಾವಾಗಿದ್ದು, ಉತ್ತರ ಕರ್ನಾಟಕದ ಸಂಭಾಷಣೆ ಇದೆ ಎಂದು ನಿರ್ದೇಶಕ ಜಾವೇದ್ ತಿಪ್ಪನಹಟ್ಟಿ ಹೇಳಿದರು. ನನಗೆ ನಟನಾಗಬೇಕು ಎಂಬ ಆಸೆಯಿತ್ತು.ಆದರೆ ಅವಕಾಶಗಳು ಸಿಗಲಿಲ್ಲ, ಹಾಗಾಗಿ ನಾನೇ ಸಿನಿಮಾ ನಿರ್ಮಾಣ ಮಾಡಲು ನಿರ್ಧರಿಸಿದೆ. ಅಂತೆಯೇ ಸಿನಿಮಾ ನಿರ್ಮಾಣ ಮಾಡಿದ್ದು, ಪ್ರಮುಖ ಪಾತ್ರದಲ್ಲಿಯೂ ಅಭಿನಯಿಸಿದ್ದೇನೆ ಎಂದು ನಿರ್ಮಾಪಕ ಮಂಜು ಮುದ್ಗಲ್ ತಿಳಿಸಿದರು. ಶರಣಪ್ಪ ಸುಗ್ಗನಹಳ್ಳಿ ಛಾಯಾಗ್ರಹಣ, ಶಿವರಾಜ್ ಮೆಹೂ ಸಂಕಲನ ಈ ಚಿತ್ರಕ್ಕಿದೆ. ಕೊಪ್ಪಳ, ಬೆಟಗೇರಿ ಸುತ್ತಮುತ್ತ ಹಳ್ಳಿಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಇದೇ ತಿಂಗಳು ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.